ಮಂಗಳೂರು
ಗುರುವಾರ, 26 ಫೆಬ್ರವರಿ 2026
ಸಂಪುಟ 47, ಸಂಚಿಕೆ 329, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಎಂಎಲ್ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ |೦೩ ಹುದ್ದೆ ಭರ್ತಿ ಶೀಘ್ರ: ಸಿಎಂ |೦೩ ಭಾರತ-ಇಸ್ರೇಲ್ ಸಂಬಂಧಕ್ಕೆ ಮತ್ತಷ್ಟು ಬಲ |೦೩

ಕಿರುಸುದ್ದಿ

ಕುಸುಮ ರೋಗಿಗಳಿಗೆ ಡಿಸಿಎಂ ಡಿಕೆಶಿ ಅಭಯ

ಬೆಂಗಳೂರು: ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆ ಸರ್ಕಾರ ನಿಲ್ಲಲಿದೆ. ರೋಗಿಗಳಿಗೆ ಶಾಶ್ವತ ಪರಿಹಾರ ಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.

• ಪುಟ ೩

ರಾಹುಲ್ ವಿದೇಶಿ ಶಕ್ತಿಗಳ ಕೈಗೊಂಬೆ: ಪಿಯೂಷ್

ಹೊಸದಿಲ್ಲಿ: ಪ್ರಧಾನಿ ಮೋದಿಯವರು ದೇಶಹಿತದ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಆದರೆ ರಾಹುಲ್ ಗಾಂಧಿ,ಅವರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಈಗ ದೇಶದಲ್ಲಿ ಕಾರ್ಯಾಚರಿಸುವ ಮೂಲಕ ದೇಶಹಿತದೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದೇ ವಾಸ್ತವ ಸಂಗತಿ ಎಂದು ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ತರಾಟೆಗೆತ್ತಿಕೊಂಡಿದ್ದಾರೆ.

• ಪುಟ ೭

ಎನ್‌ಸಿಇಆರ್‌ಟಿ ವಿವಾದಿತ ಅಧ್ಯಾಯಕ್ಕೆ ಶೀಘ್ರ ಕತ್ತರಿ?

• ಪುಟ ೭

ತುರ್ತು ಪರಿಸ್ಥಿತಿಯಂತೆ ಈ ಬಗ್ಗೆಯೂ ವಿಷಾದ ಖಂಡಿತ

• ಪುಟ ೭

ನಟಿ ರನ್ಯಾ ರಾವ್ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

• ಪುಟ ೫

ಉದ್ಯೋಗ ಭರ್ತಿಗೆ ಕ್ರಮ

• ಪುಟ ೫

ಮೈಕ್ ನಿಷೇಧಗೊಳಿಸುವಂತೆ ಪೊಲೀಸರಿಗೆ ದೂರು

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

ಚಿಕ್ಕಮಗಳೂರು: ದೇವಸ್ಥಾನದಲ್ಲಿ ಪೂಜೆ ವೇಳೆ ಗಂಟೆ, ಜಾಗಟೆ ಬಾರಿಸುವುದಕ್ಕೆ ಮುಸ್ಲಿಂ ವ್ಯಕ್ತಿಯೊಬ್ಬ ಆಕ್ಷೇಪಿಸಿದ್ದು, ಪೊಲೀಸರ ಎದುರೇ ವಾಗ್ವಾದ ನಡೆದ ಘಟನೆ ನಗರದ ಹಳೇ ಉಪ್ಪಳ್ಳಿ ಬಡಾವಣೆಯಲ್ಲಿ ನಡೆದಿದೆ.

ಪುರಾತನ ಕಾಲದ ಈಶ್ವರ ದೇವಾಲಯದ ನವೀಕರಣ ಕಾರ್ಯ ನಡೆಯುತ್ತಿದೆ. ದೇವಸ್ಥಾನದ ಅಕ್ಕಪಕ್ಕದಲ್ಲಿ ಹಿಂದುಗಳು ವಾಸವಿದ್ದಾರೆ. ಸ್ವಲ್ಪ ದೂರದಲ್ಲೇ ಫಾರೂಕ್ ಮನೆಯೂ ಇದೆ. ಈಶ್ವರ ದೇವಸ್ಥಾನದಲ್ಲಿ ಬೆಳಗ್ಗೆ, ಸಂಜೆ ಪೂಜೆ ಮಾಡುವಾಗ ಗಂಟೆ, ಜಾಗಟೆ ಬಾರಿಸುತ್ತಾರೆ, ದೊಡ್ಡದಾಗಿ ಭಜನೆ, ಹಾಡುಗಳನ್ನು ಹಾಕುತ್ತಾರೆ. ಇದರಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಫಾರೂಕ್ ತಕರಾರು ಎತ್ತಿದ್ದಾರೆ.ಬೆಳಗ್ಗೆ 6 ಗಂಟೆಗೆ ಗಂಟೆ, ಜಾಗಟೆ ಬಾರಿಸುವುದರಿಂದ ನಿದ್ದೆ ಹಾಳಾಗುತ್ತಿದೆ. ಮಕ್ಕಳು ಓದಿಕೊಳ್ಳಲು ಆಗುವುದಿಲ್ಲ ಎಂದು ಕ್ಯಾತೆ ತೆಗೆದಿದ್ದು, 112 ಪೊಲೀಸರಿಗೆ ಕರೆಮಾಡಿ ಧ್ವನಿವರ್ಧಕ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ದೇವಸ್ಥಾನದ ಅರ್ಚಕ ಜಗದೀಶ್ ಭಟ್ ಪ್ರತಿಕ್ರಿಯಿಸಿ, ನಮ್ಮ ಆರಾಧನೆಯಿಂದ ಇನ್ನೊಬ್ಬರಿಗೆ ತೊಂದರೆಯಾಗಲು ನಾವು ಅವಕಾಶ ಕೊಡುವುದಿಲ್ಲ. ಗಂಟೆ, ಜಾಗಟೆಯಿಂದ ಬೇರೆಯವರಿಗೆ ತೊಂದರೆ ಆಗುವಷ್ಟರಮಟ್ಟಿನ ಶಬ್ದ ಬರುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಬಸವನಹಳ್ಳಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದಾರೆ. ನಾವು ಧ್ವನಿವರ್ಧಕವನ್ನು ನಿಧಾನವಾಗಿ ಬಳಸುತ್ತೇವೆ. ಭಜನೆ ಮತ್ತು ಜಾಗಟೆ ದೇವಾಲಯದ ಭಕ್ತಿಯ ಭಾಗ. ಇದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಅರ್ಚಕ ಜಗದೀಶ್ ಭಟ್ ಪೊಲೀಸರಿಗೆ ತಿಳಿಸಿದ್ದಾರೆ. ಆದರೆ ಫಾರೂಕ್ ತಮ್ಮ ಮನೆಗೆ ಶಬ್ದ ಬರುತ್ತದೆ.

➡ಪುಟ ೪



ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

ಕೊಳ್ಳೇಗಾಲ: ಪಟ್ಟಣದ ಹೊರ ವಲಯದ ಪಾಪನಕೆರೆ ಬಳಿ ಕೆಎಸ್ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಕರಿಬ್ಬರು ಬಸ್ ನಿರ್ವಾಹಕನ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುವ ಘಟನೆ ಬುಧವಾರ ನಡೆದಿದೆ. ಕನಕಪುರ ತಾಲೂಕಿನ ದೊಡ್ಡಕಬ್ಬಳ್ಳಿ ಗ್ರಾಮದ ಬಸ್ ನಿರ್ವಾಹಕ ಮುನಿ ಮಾದಯ್ಯ (42) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಯಾಣಿಕರಾದ ಚಾ.ನಗರದ ಫಯಾಜ್ ಅಹಮ್ಮದ್(50), ಮಹಮ್ಮದ್ ಶಾರನ್ (25) ಎಂಬುವರು ಗಲಾಟೆ ಮಾಡಿದ್ದು, ಇವರು ಸಹ ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿದೆ.



➡ಪುಟ ೪

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

ಚಿತ್ರದುರ್ಗ: ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ಮಾಡಿ ಚಾಕು ಇರಿದಿರುವ ಘಟನೆ ಚಿತ್ರದುರ್ಗ ನಗರದ ಸಂತೆಹೊಂಡದ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಗಾಯಗೊಂಡ ಯುವಕನನ್ನು ಮೊಬೈಲ್ ಅಂಗಡಿ ಮಾಲೀಕ ವಿಕ್ರಮ್ ಚೌಧರಿ ಎಂದು ಗುರುತಿಸಲಾಗಿದೆ. ಹಲ್ಲೆ ನಡೆಸಿರುವ ಆರೋಪಿ ಮುಸ್ಲಿಂ ಸಮುದಾಯದವನು ವಿಕ್ರಮ್ ಚೌಧರಿ ಅವರ ಮೊಬೈಲ್ ಅಂಗಡಿಯಲ್ಲಿ ಕಳೆದ ಕೆಲ ದಿನಗಳ ಹಿಂದೆ ತನ್ನ ಮೊಬೈಲ್‌ಗೆ ಸ್ಕ್ರೀನ್ ಗಾರ್ಡ್ ಖರೀದಿಸಿದ್ದ. ಗುರುವಾರ ಮತ್ತೆ ಬಂದು ಬೇರೆ ಬ್ರ್ಯಾಂಡ್ ಮೊಬೈಲ್ ಸ್ಕ್ರೀನ್ ಗಾರ್ಡ್ ಹಾಕಿ ಕೊಡುವಂತೆ ವಿಕ್ರಮ್ ಚೌಧರಿ ಅವರನ್ನು ಕೇಳಿದ್ದ ಎನ್ನಲಾಗಿದೆ.

➡ಪುಟ ೪

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

ಭೋಪಾಲ್: ಉದ್ಯೋಗ ಆಮಿಷವೊಡ್ಡಿ ಹಿಂದು ಯುವತಿಯರಿಗೆ ಡ್ರಗ್ಸ್ ನೀಡಿ ಅತ್ಯಾಚಾರವೆಸಗಿ ಬಳಿಕ ಮತಾಂತರ ಮಾಡುತ್ತಿದ್ದ ಜಾಲವೊಂದನ್ನು ಮಧ್ಯಪ್ರದೇಶ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ ಮೂವರನ್ನು ಬಂಧಿಸಿದ್ದಾರೆ.

• ವಿವರ ಪುಟ ೩

ಮೋದಿ ಆಡಳಿತಕ್ಕೆ ಟ್ರಂಪ್ ಪರೋಕ್ಷ ಮೆಚ್ಚುಗೆ

ಯುದ್ಧದಲ್ಲಿ ಪಾಕ್ ಪಿಎಂ ಸಾವಾಗ್ತಿತ್ತು


ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ಯುದ್ಧ ಸಂಘರ್ಷದಲ್ಲಿ ತಾನು ಮಧ್ಯ ಪ್ರವೇಶಿಸದೆ ಇದ್ದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮೃತಪಡುತ್ತಿದ್ದರು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಭಾರತದ ಆಪರೇಷನ್ ಸಿಂದೂರ ತೀವ್ರತೆ ಬಹಿರಂಗವಾಗಿದೆ.

ಅಲ್ಲದೆ, ಭಾರತೀಯ ಸಶಸ್ತ್ರ ಪಡೆಗಳ ಯುದ್ಧ ಸಾಮರ್ಥ್ಯವನ್ನು ಟ್ರಂಪ್ ಜಗತ್ತಿಗೆ ಸಾರಿದ್ದಾರೆ.

ಅಮೆರಿಕ ಸಂಸತ್ತಿನ ಸ್ಟೇಟ್ ಆಫ್ ದಿ ಯೂನಿಯನ್ ಭಾಷಣದಲ್ಲಿ ಅಧ್ಯಕ್ಷ ಟ್ರಂಪ್, ಜಾಗತಿಕವಾಗಿ ಒಟ್ಟು 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಇದರಲ್ಲಿ ಭಾರತ ಮತ್ತು ಪಾಕ್ ಸಂಘರ್ಷ ಬಹಳ ಪ್ರಮುಖ ಮತ್ತು ಅತ್ಯಂತ ಅಪಾಯಕಾರಿ ಸಂಘರ್ಷ. ಇವರ ನಡುವಿನ ಪರಮಾಣು ಯುದ್ಧವನ್ನು ತಡೆದಿದ್ದೇನೆ. ಭಾರತ ಮತ್ತು ಪಾಕ್ ನಡುವಿನ ಸಂಘರ್ಷದಲ್ಲಿ ನಾನು ಮಧ್ಯಪ್ರವೇಶಿಸದಿದ್ದರೆ, ಪಾಕ್ ಪ್ರಧಾನಿ ಷರೀಫ್ ಮೃತಪಟ್ಟಿರುತ್ತಿದ್ದರು ಎನ್ನುವ ಮೂಲಕ ಸಿಂದೂರದ ಕಾರ್ಯಾಚರಣೆಯ ತೀವ್ರತೆಯನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.



11 ಫೈಟರ್ ಜೆಟ್ಸ್ ನಾಶ: 2025ರ ಮೇನಲ್ಲಿ ನಡೆದಿದ್ದ ಸಿಂದೂರ ಕಾರ್ಯಾಚರಣೆ ಕುರಿತು ಕೆಲವು ದಿನಗಳ ಹಿಂದಷ್ಟೇ ಮಾತನಾಡಿದ್ದ ಅಧ್ಯಕ್ಷ ಟ್ರಂಪ್, ಭಾರತ, ಪಾಕ್ ನಡುವಿನ ಸಂಘರ್ಷದಲ್ಲಿ 11 ಯುದ್ಧ ವಿಮಾನಗಳು ಉರುಳಿದ್ದವು. ಬಹಳ ದುಬಾರಿ ಯುದ್ಧ ವಿಮಾನಗಳು ಎಂದಿದ್ದರು. ಭಾರತ ನಡೆಸಿದ ಭಯೋತ್ಪಾದನಾ ವಿರೋಧಿ ಪ್ರತಿದಾಳಿ ವೇಳೆ ಇಷ್ಟೊಂದು ಹಾನಿಯಾಗಿದೆ ಎಂಬರ್ಥದಲ್ಲಿ ದಾಳಿ ತೀವ್ರತೆಯನ್ನು ಉಲ್ಲೇಖಿಸಿದ್ದರು. ಇದೀಗ ಪಾಕ್ ಪ್ರಧಾನಿ, 3.5 ಕೋಟಿ ಜನರ ರಕ್ಷಣೆಗೆ ಯುದ್ಧ ನಿಲ್ಲಿಸಲಾಗಿದೆ ಎಂಬ ಮಾತಿನಿಂದ ಭಾರತದ ದಾಳಿ ಸಾಮರ್ಥ್ಯ ಒಪ್ಪಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಟ್ರಂಪ್ ಪರೋಕ್ಷ ವಾಗಿ ಮೋದಿ ಆಡಳಿತ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



- ಯುದ್ಧ ನಿಲ್ಲಿಸಿದ್ದು ನಾನೇ ಎಂಬ ಟ್ರಂಪ್ ವರಸೆ ಬದಲು
- ಈಗ ಭಾರತಕ್ಕೆ ಹೊಗಳಿಕೆ
- ನಾನು ಮಧ್ಯ ಪ್ರವೇಶಿಸದಿದ್ದರೆ, ಮೃತಪಡುತ್ತಿದ್ದರು ಪಾಕಿಸ್ತಾನದ ಪ್ರಧಾನಿ
- ಪಾಕ್ ಪ್ರಧಾನಿ ಸ್ವಲ್ಪದರಲ್ಲೇ ಬಚಾವ್ ಆಗಿದ್ದಂತೆ?

ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್

OPERATION SINDOOR

ಕಳೆದ 10 ತಿಂಗಳಲ್ಲಿ 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಒಂದು ವೇಳೆ ಪಾಕಿಸ್ತಾನ ಮತ್ತು ಭಾರತ ಪರಮಾಣು ಯುದ್ಧ ನಡೆಸಿದ್ದರೆ, ಸುಮಾರು 35 ದಶಲಕ್ಷ (ಮೂರೂವರೆ ಕೋಟಿ) ಜನರು ಮೃತಪಡುತ್ತಿದ್ದರು. ನಾನು ಮಧ್ಯಪ್ರವೇಶಿಸದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಅವರೇ ಮೃತಪಡುತ್ತಿದ್ದರು ಎಂದು ಟ್ರಂಪ್ ಹೇಳಿದ್ದಾರೆ.

➡ಪುಟ ೪

ಕಿರುಸುದ್ದಿ

ಕುಡುಪು ಕ್ಷೇತ್ರದಲ್ಲಿ ವಿಶೇಷ ಶತರುದ್ರಾಭಿಷೇಕ

• **ಮಂಗಳೂರು:** ಪ್ರಸಿದ್ಧ ನಾಗಾರಾಧನಾ ಕ್ಷೇತ್ರ ಕುಡುಪು ಶ್ರೀ ಅನಂತಪದ್ಮನಾಭ ದೇವಾಲಯದಲ್ಲಿ ಶ್ರೀ ಅನಂತ ಪದ್ಮನಾಭ ದೇವರಿಗೆ ಬ್ರಹ್ಮ ಕಲಶ ದಿನಾಚರಣೆಯ ಪ್ರಯುಕ್ತ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ವಿಶೇಷವಾದ ಶತರುದ್ರಾಭಿಷೇಕವು ಭಕ್ತಿಯಿಂದ ಅರ್ಪಣೆಗೊಂ ಡಿತು. ಪ್ರಧಾನ ಶ್ರೀ ಅನಂತಪದ್ಮನಾಭ ದೇವರಿಗೆ ವಿಶೇಷ ಸೀಯಾಳ ಅಭಿಷೇಕ, ವಿಶೇಷ ಪಂಚಾ ಮೃತ ಅಭಿಷೇಕ, ಮಹಾ ಕಲಶಾಭಿಷೇಕ ರುದ್ರ ಪಾರಾಯಣದೊಂದಿಗೆ



ದೇವರಿಗೆ ಮಹಾಶತರುದ್ರಾಭಿಷೇಕ ನೆರವೇರಿತು. ಮಧ್ಯಾಹ್ನ ವಿಶೇಷ ಹರಿವಾಣ ನೈವೇದ್ಯದೊಂ ದಿಗೆ ಮಹಾ ನೈವೇದ್ಯ ಸಮರ್ಪಣೆಗೊಂಡು ಮಹಾ ಪೂಜೆ ನಡೆಯಿತು. ಮಧ್ಯಾಹ್ನ ಸಹಸ್ರಾರು ಭಕ್ತರು ಶ್ರೀ ದೇವರ ಅನ್ನಪ್ರಸಾದ ಸ್ವೀಕರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಹನುಮಗಿರಿ ಮೇಳದವರಿಂದ 'ವರ್ಣ ಪಲ್ಲಟ' ಆಖ್ಯಾನದ ಕಥಾ ಭಾಗದ ಯಕ್ಷಗಾನ ಬಯಲಾಟ ನಡೆಯಿತು.

ಸಿಎಸ್ ಪರೀಕ್ಷೆಯಲ್ಲಿ ಕೆನರಾ ಸಂಧ್ಯಾ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

• **ಮಂಗಳೂರು:** ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ (ಐಸಿಎಸ್ಐ) ಡಿಸೆಂಬರ್ 2025ರಲ್ಲಿ ನಡೆಸಿದ ಸಿಎಸ್ ಅಂತಿಮ ಪರೀಕ್ಷೆಯಲ್ಲಿ ಕೆನರಾ ಸಂಧ್ಯಾ ಕಾಲೇಜಿನ ಪೂರ್ವ ವಿದ್ಯಾರ್ಥಿಗಳಾದ ಅಚಲ್ ಪ್ರವೀಣ್ ಉಳ್ಳಾಲ್ ಹಾಗೂ ಕೆ.ಕಾರ್ತಿಕ್ ಕಾಮತ್ ಉತ್ತೀರ್ಣರಾಗಿದ್ದಾರೆಂದು ಕಾಲೇಜಿನ ಪ್ರಕಟಣೆ ತಿಳಿಸಿದೆ. ಸಾಧಕ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿ, ಪ್ರಾಂಶುಪಾಲರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.



ಜೆ.ಇ.ಇ. ಮೈನ್ ಪರೀಕ್ಷೆ : ಇಂದ್ರಪ್ರಸ್ಥ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



• **ಉಪ್ಪಿನಂಗಡಿ:** ರಾಷ್ಟ್ರ ಮಟ್ಟದ ಜೆ.ಇ.ಇ. ಮೈನ್ ಬಿ.ಆರ್ಕ್. ಪರೀಕ್ಷೆಯಲ್ಲಿ ಇಂದ್ರಪ್ರಸ್ಥ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಉಪ್ಪಿನಂಗಡಿಯ ಅನ್ವಿತ್ 96.67 ಪರ್ಸಂಟೈಲ್, ಕಡೆಶಿವಾಲಯದ ರುಚಿಕಾ 95.66 ಪರ್ಸಂಟೈಲ್, ಜೆ.ಇ.ಇ. ಪೇಪರ್-1 ಪರೀಕ್ಷೆಯಲ್ಲಿ ಉಪ್ಪಿನಂ ಗಡಿಯ ಕೆ. ವೃದ್ಧಿ ಪ್ರಭು 86.63 ಪರ್ಸಂಟೈಲ್ ಗಳಿಸಿದ್ದಾರೆ ಎಂದು ಸಂಸ್ಥೆಯ ಪ್ರಾಂಶುಪಾಲ ಎಚ್.ಕೆ. ಪ್ರಕಾಶ್ ತಿಳಿಸಿದ್ದಾರೆ.

ಹಳೇ ಆರೋಪಿ ಸೆರೆ

• **ವಿಟ್ಲ:** ಕರೋಪಾಡಿ ಪಾದೆಕಲ್ಲು ಎಂಬಲ್ಲಿ 2019ರಲ್ಲಿ ನಡೆದ ಪ್ರಕರಣವೊಂದರ ಆರೋಪಿ ಸುಮಾರು ಎರಡು ವರ್ಷಗಳಿಂದ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ವಿದೇಶದಲ್ಲಿ ತಲೆಮರೆಸಿಕೊಂಡಿದ್ದಾತನನ್ನು ವಿದೇಶದಿಂದ ಹಿಂತಿರುಗುತ್ತಿದ್ದಾಗ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ಕನ್ಯಾನ ನಿವಾಸಿ ಇಬ್ರಾಹಿಂ ಬಾತೀಸ್ ಎಂಬಾತ ಫೆ. 24ರಂದು ವಿದೇಶದಿಂದ ಮರಳುತ್ತಿರುವ ಸಂದರ್ಭ ಮಂಗಳೂರು ವಿಮಾನ ನಿಲ್ದಾಣದ ಇಮಿಗ್ರೇಶನ್ ವಿಭಾಗದ ಸಹಕಾರದಿಂದ ಮಂಗಳೂರು ವಿಮಾನ ನಿಲ್ದಾಣದಲ್ಲಿ ವಿಟ್ಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದು, ಮಾ.7ರವರೆಗೆ ನ್ಯಾಯಾಂಗ ಬಂಧನ ವಿಧಿಸಿದ್ದಾರೆ.



ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

• **ಬಂಟ್ವಾಳ :** ಪ್ರಕರಣವೊಂದಕ್ಕೆ ಸಂಬಂಧಿಸಿ ಕಳೆದ 12 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ಯೋರ್ವನನ್ನು ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಉಡುಪಿ ನಿವಾಸಿ ತಾಜ್ ಮೊಹಮ್ಮದ್ ಯೂಸುಫ್ (59) ಬಂಧಿತ ಆರೋಪಿಯಾಗಿದ್ದಾನೆ. ಕಾರ್ಕಳದಲ್ಲಿ ಬಂಟ್ವಾಳ ಗ್ರಾಮಾಂತರ ಠಾಣೆಯ ಎಸ್ಐ ಮತ್ತವರ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.



ಕಿನ್ನಿಗೋಳಿ ಯುಗಪುರುಷದಲ್ಲಿ ಸಾಹಿತ್ಯಾವಲೋಕನ

• **ಕಿನ್ನಿಗೋಳಿ:** ಯುಗಪುರುಷ ಕಿನ್ನಿಗೋಳಿ ಹಾಗೂ ಕಥಾಬಿಂದು ಪ್ರಕಾಶನ ಇವರ ಆಶ್ರಯದಲ್ಲಿ ಸಾಹಿತ್ಯಾವಲೋಕನ ಕಾರ್ಯಕ್ರಮವು ಫೆ. 27ರಂದು ಕಿನ್ನಿಗೋಳಿಯ ಯುಗಪುರುಷ ಸಭಾಭವನದಲ್ಲಿ ಜರಗಲಿದೆ. ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ವಹಿಸಲಿರುವರು. ಕಾರ್ಯಕ್ರಮವನ್ನು ಯುಗಪುರುಷದ ಪ್ರಧಾನ ಸಂಪಾದಕ ಕೊಡೆತ್ತೂರು ಭುವನಾಬಿರಾಮ ಉಡುಪರು ಉದ್ಘಾಟಿಸಲಿರುವರು. ಡಾ. ಕೊಳ್ಚಪ್ಪೆ ಗೋವಿಂದ ಭಟ್, ಕೆ.ವಿ.ಲಕ್ಷ್ಮಣಮೂರ್ತಿ, ಜಯಾನಂದ ಪೆರಾಜೆ, ಪಿ. ವಿ. ಪ್ರದೀಪಕುಮಾರ್ ಉಪಸ್ಥಿತರಿರುವರು. ಸುನೀತಾ ಪ್ರದೀಪಕುಮಾರ್ ರಚಿತ 'ಶ್ರೀ ಮಾತಾ ವೈಷ್ಣೋ ದೇವಿ', ಜಾನಕಿದೇವಿ ರಚಿತ 'ಬೃಂದಾವನ', ಡಾ. ಪ್ರೇಮ ಪಿ. ವೈ. ಕೆ. ಮೋಳೆ ರಚಿತ 'ನೀಲಿರಾಗ', ನಾ. ಭಾ. ಕೆಂಪರಾಜ್ ಶಾಂತಲ ರಚಿತ 'ನಾ ಕಂಡಂತೆ ರಾಜ' ಈ ನಾಲ್ಕು ಕೃತಿಗಳನ್ನು ಮೂಡುಬಿದ್ರೆಯ ಶ್ರೀಪತಿ ಭಟ್ ಬಿಡುಗಡೆಗೊಳಿಸಲಿರುವರು. ಈ ಸಂದರ್ಭದಲ್ಲಿ 20 ಕವಿಗಳಿಂದ ಕವಿಗೋಷ್ಠಿ ಜರಗಲಿದೆ. ಸಾಹಿತಿ ಪ್ರವೀಣ್ ಪ್ಲಿ. ಕುಲಜರ್ಣಿ, ಪ್ರಕಾಶ ಸುವರ್ಣ ಕಟಪಾಡಿ, ಅನಿತಾ ಶೆಣೈ ಅವರನ್ನು ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ವಂಡ್ಸೆ ಗ್ರಾಮ ಪಂಚಾಯತ್ ವ್ಯಾಪ್ತಿಯ ವಂಡ್ಸೆ-ಬಗ್ವಾಡಿ ಮುಖ್ಯರಸ್ತೆಯಿಂದ ವಾಲಿಕೆರೆಗೆ ಹೋಗುವ ರಸ್ತೆ ಕಾಂಕ್ರೀಟಿಕರಣಕ್ಕೆ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಗುರುರಾಜ ಶೆಟ್ಟಿ ಗಂಟಿಹೊಳೆ ಅವರು 10 ಲಕ್ಷ ರೂ. ಅನುದಾನ ಒದಗಿಸಿದ್ದು ಕಾಮಗಾರಿಗೆ ಗುದ್ದಲಿ ಪೂಜೆ ಭಾನುವಾರ ನಡೆಯಿತು. ಪುರೋಹಿತರಾದ ಸುರೇಶ ಐತಾಳ್, ಗ್ರಾ.ಪಂ. ಮಾಜಿ ಅಧ್ಯಕ್ಷ ವಿ.ಕೆ. ಶಿವರಾಮ ಶೆಟ್ಟಿ, ಬಿಜೆಪಿ ಮುಖಂಡರಾದ ದೀಪಕಕುಮಾರ್ ಶೆಟ್ಟಿ, ವೆಂಕಟೇಶ ಶೆಟ್ಟಿ ಅಬ್ಬಿ, ನಿರ್ಮಲ ವಂಡ್ಸೆ, ನಿತಿನ್ ಶೆಟ್ಟಿ, ಡಾ.ಕುಸುಮಾಕರ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಫೆ.28ರಂದು ಮಟ್ಟಾರಿನಲ್ಲಿ ಹದಿಮೂರನೇ ವರ್ಷದ ಸಾರ್ವಜನಿಕ ಶ್ರೀಶನೀಶ್ವರ ಪೂಜೆ

• **ಶಿರ್ವ:** ವಿಶ್ವಹಿಂದೂ ಪರಿಷದ್, ಬಜರಂಗದಳ, ಮಾತೃಶಕ್ತಿ, ದುರ್ಗಾವಾಹಿನಿ ಮಟ್ಟಾರು ಘಟಕದ ವತಿ ಯಿಂದ ಫೆ.28ರಂದು ಅಪರಾಹ್ನ ಗಂಟೆ 3ರಿಂದ ಶಿರ್ವ ಮಟ್ಟಾರಿನಲ್ಲಿ ಮಾಣಿಬೆಟ್ಟು ಶ್ರೀವಿಷ್ಣುಮೂರ್ತಿ ಉಪಾಧ್ಯಾ ಯರ ನೇತೃತ್ವದಲ್ಲಿ '13ನೇ ವರ್ಷದ ಸಾರ್ವಜನಿಕ ಶ್ರೀಶನೀಶ್ವರ ಪೂಜೆ' ಮತ್ತು ಸಂಜೆ ಗಂಟೆ 6ರಿಂದ ಮಹಾಪೂಜೆ, ಎಳ್ಳುಗಂಟು, ದೀಪೋತ್ಸವ, ಪ್ರಸಾದ ವಿತರಣೆ ಜರುಗಲಿದೆ.

ಸಂಜೆ 6.30ರಿಂದ ಹಿಂದೂ ಸಮ್ಮೇಳನದ ಸಭಾ ಕಾರ್ಯಕ್ರಮದಲ್ಲಿ ಮಾಣಿಬೆಟ್ಟು ಗರಡಿಮನೆ ಆನಂದ ಪೂಜಾರಿ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮವನ್ನು ಮಟ್ಟಾರು ಶ್ರೀಬಬ್ಬರ್ಯ ದೈವಸ್ಥಾನದ ಆಡಳಿತ ಮೊಕ್ತೇಸರ ಹಾಗೂ ಸಾರ್ವಜನಿಕ ಶ್ರೀಗಣೇಶೋತ್ಸವ ಸಮಿತಿಯ ಅಧ್ಯಕ್ಷ ಮಟ್ಟಾರು ರತ್ನಾಕರ ಹೆಗ್ಡೆ ಕಾರ್ಯಕ್ರಮ ಉದ್ಘಾಟಿಸುವರು. ಮಂಗಳೂರು ಗುರುಪುರ ವಜ್ರದೇಹಿ ಮಠದ ಯತಿವರ್ಯರಾದ ಶ್ರೀ ರಾಜಶೇಖರಾನಂದ ಸ್ವಾಮೀಜಿ ದಿಕ್ಸೂಚಿ ಸಂದೇಶ ನೀಡುವರು.



ಉಡುಪಿ ಜಿಲ್ಲಾ ವಿಶ್ವಹಿಂದೂ ಪರಿಷದ್ ಅಧ್ಯಕ್ಷ ಪಿ.ವಿಷ್ಣು ಮೂರ್ತಿ ಆಚಾರ್ಯ, ಜಿಲ್ಲಾ ಕಾರ್ಯದರ್ಶಿ ದಿನೇಶ್ ಮೆಂಡನ್, ಕಾಪು ತಾಲೂಕು ಅಧ್ಯಕ್ಷ ಪ್ರಸನ್ನ ಭಟ್, ಮಾಣಿ ಬೆಟ್ಟು ಶ್ರೀವಿಷ್ಣುಮೂರ್ತಿ ಉಪಾಧ್ಯಾಯ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಶಿರ್ವ ಮಹಿಳಾ ಮಂಡಲ ಅಧ್ಯಕ್ಷೆ ಡಾ. ಸ್ಫೂರ್ತಿ ಶೆಟ್ಟಿ, ಪೆರ್ನಂಕಿಲ ಶಂಕರ ಪ್ರತಿಷ್ಠಾನದ ಅಧ್ಯಕ್ಷ ಪೆರ್ನಂಕಿಲ ಶ್ರೀಶ ನಾಯಕ್, ಚತ್ರಬೆಟ್ಟು ಶ್ರೀಸತ್ಯ ನವೋದಯ ಸ್ವಸಹಾಯ ಸಂಘದ ಅಧ್ಯಕ್ಷೆ ಸಾವಿತ್ರಿ ಪೂಜಾರಿ, ಅಶೋಕ ಕೊರಗ ಪದವು ಶಿರ್ವ ವೇದಿಕೆಯಲ್ಲಿರುವರು. ರಾತ್ರಿ 7.30ರಿಂದ ಸ್ಥಳೀಯ ಪ್ರತಿಭೆಗಳು ಹಾಗೂ ಕಲಾವಿದರಿಂದ ಸಾಂಸ್ಕೃತಿಕ ವೈವಿಧ್ಯ. 8.30 ರಿಂದ ಅನ್ನಸಂತರ್ಪಣೆ, 9ರಿಂದ ಮಟ್ಟಾರು ಕಲಾವಿದರು ಅಭಿನಯಿಸುವ ಹಾಸ್ಯಮಯ ತುಳು ಸಾಂಸಾರಿಕ ನಾಟಕ 'ಪಿರ ಬರುವೊಲಾ....?' ಪ್ರದರ್ಶನ ಗೊಳ್ಳಲಿದೆ ಎಂದು ಸಂಘಟಕರ ಪ್ರಕಟಣೆ ತಿಳಿಸಿದೆ.

ಬೆಳೆಗಾರರ ಮುಖದಲ್ಲಿ ಮಂದಹಾಸ | ಫಸಲಿಗೆ ಪೂರಕವಾದ ಸೆಕೆ

ಕೇಜಿ ಗೇರುಬೀಜ ₹150!

• **ಪುತ್ತೂರು:** ಈ ವರ್ಷವೂ ಗೇರು ಮರಗಳು ಹೂ ಬಿಟ್ಟು ಫಸಲು ತುಂಬಿಕೊಳ್ಳಲು ತಡವಾಗಿದ್ದರೂ ಹವಾಮಾನ ಗುಣಾತ್ಮಕವಾಗಿರುವುದರಿಂದ ಫಸಲು ತುಂಬಿಕೊಂಡಿದೆ. ಸದ್ಯ ಕೆ.ಜಿ. ಗೇರುಬೀಜದ ಬೆಲೆ ರೂ. 155ಕ್ಕೆ ತಲುಪಿರುವುದು ಗೇರು ಬೆಳೆಗಾರರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಸಾಮಾನ್ಯವಾಗಿ ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಹೂ ಬಿಟ್ಟು ಜನವರಿ ಅಂತ್ಯದಲ್ಲಿ ಫಸಲು ತುಂಬಿಕೊಳ್ಳುವ ಗೇರು ಹಣ್ಣಿನ ಮರಗಳು ಈ ಬಾರಿ ಹೂಬಿಟ್ಟು ಈಗ ನಿಧಾನವಾಗಿ ಫಸಲು ತುಂಬಿಕೊಳ್ಳುತ್ತಿವೆ. ಗೇರು ಕೃಷಿಯು ಚಳಿಗಾಲ ಹಾಗೂ ಮಳೆಗಾಲದ ಮಧ್ಯೆ ಫಲ ನೀಡುತ್ತದೆ. ಮೇ ತಿಂಗಳ ಅಂತ್ಯದಲ್ಲಿ ಹತ್ತನಾವಧಿಯ ಸಮಯಕ್ಕೆ ಗೇರು ಫಸಲು ಮುಗಿಯುವುದು ಕ್ರಮ. ಗೇರು ಕೃಷಿಯ ಲಾಭ-ನಷ್ಟ ಮಳೆಯನ್ನು ಅವಲಂಭಿಸಿರುವುದರಿಂದ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಮಳೆ ಬಿರುಸು ಪಡೆದುಕೊಳ್ಳಲಿದ್ದರೆ ನಿರೀಕ್ಷಿತ ಗೇರು ಬೀಜ ಫಸಲು ಕೈಗೆ ಸಿಗುವ ಹಾಗೂ ಉತ್ತಮ ದರ ಲಭಿಸುವ ನಿರೀಕ್ಷೆಯಲ್ಲಿ ಗೇರು ಕೃಷಿಕರಿದ್ದಾರೆ.

ಸೆಕೆಯ ವಾತಾವರಣ ಗೇರು ಫಸಲಿಗೆ ಪೂರಕ

ಆರಂಭದಲ್ಲಿ ಚಳಿ, ಅನಂತರದಲ್ಲಿ ಸೆಕೆಯ ವಾತಾವರಣ ಗೇರು ಫಸಲಿಗೆ ಪೂರಕ. ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ವಾತಾವರಣ ಬಿಸಿ ಏರಿದಂತೆ ಗೇರು ಫಸಲು ಕುದುರಿಕೊಳ್ಳುತ್ತದೆ. ಸದ್ಯಕ್ಕೆ ಸೆಕೆಯ ವಾತಾವರಣವಿರುವುದರಿಂದ ಗೇರು ಫಸಲು ತುಂಬಿಕೊಳ್ಳಲು ಪೂರಕವಾಗಿದೆ. ಆದರೆ, ಆಗಾಗ ಕಾಣಿಸಿಕೊಳ್ಳುತ್ತಿರುವ ಮೋಡ, ಮಳೆಯ ವಾತಾವರಣ ಒಂದಷ್ಟು ಆತಂಕವನ್ನೂ ಉಳಿಸಿಕೊಂಡಿದೆ ಗೇರು ಕೃಷಿ ತಜ್ಞರ ಅಭಿಪ್ರಾಯ.



ಗಡಿಭಾಗದಲ್ಲಿ ಬೆಲೆ

ಗೇರು ಕೃಷಿಗೆ ಕರ್ನಾಟಕ-ಕೇರಳ ಗಡಿ ಭಾಗದಲ್ಲಿ ಉಳಿದ ಭಾಗಗಳಿಂದ ಹೆಚ್ಚಿನ ದರ ಲಭಿಸುತ್ತದೆ. ಸುಳ್ಯ, ಕೌಡಿಚ್ಚಾರು, ಈಶ್ವರಮಂಗಲಗಳ ಸ್ಥಳೀಯ ಮಾರುಕಟ್ಟೆ ಗಳಲ್ಲಿ ಖರೀದಿ ಪ್ರಮಾಣ ಹೆಚ್ಚಿದೆ. ನೆರೆಯ ಕೇರಳ ರಾಜ್ಯದ ಫ್ಯಾಕ್ಟರಿಗಳಿಗೆ ಈ ಭಾಗದಿಂದ ಹೆಚ್ಚು ಗೇರುಬೀಜ ರಫ್ತಾಗುವುದರಿಂದ ಕೇರಳ ಮಾರುಕಟ್ಟೆ ಲಾಬಿಯೂ ಇದೆ.

ಏರಿಳಿಕೆಯ ಬೆಲೆ

2015ನೇ ಸಾಲಿನಲ್ಲಿ ಕೆ.ಜಿ.ಗೆ ರೂ.80ರಿಂದ 90ಕ್ಕೆ ಖರೀದಿಯಾಗುತ್ತಿದ್ದ ಗೇರುಬೀಜ 2016ನೇ ಸಾಲಿನಲ್ಲಿ ಗರಿಷ್ಠ ರೂ.120-130ಕ್ಕೆ ಖರೀದಿಯಾಗಿತ್ತು. 2017ರಿಂದ ಅನಂತರದ ಸಾಲಿನಲ್ಲಿ ರೂ.110-140 ತನಕ ಮಾರುಕಟ್ಟೆಯಲ್ಲಿ ಖರೀದಿಯಾಗಿತ್ತು ಮತ್ತು ಧಾರಣೆಯಲ್ಲಿ ಸ್ಥಿರತೆಯನ್ನೂ ಉಳಿಸಿಕೊಂಡಿತ್ತು. ಬೇಡಿಕೆ ಏರುತ್ತಿರುವುದು ಮತ್ತು ಇಳುವರಿಯಲ್ಲಿ ಇಳಿಕೆಯಾಗುತ್ತಿರುವ ಮಧ್ಯೆ ಕಳೆದ ಮೂರು ವರ್ಷಗಳಲ್ಲಿ ಸರಾಸರಿ ರೂ.110 ಮಾರುಕಟ್ಟೆ ದರ ಲಭಿಸುತ್ತಿತ್ತು. ಈ ಬಾರಿ ಆರಂಭಿಕ ರೂ.155 ತನಕ ಮಾರುಕಟ್ಟೆ ದರವಿದೆ. ಗೇರು ಮರ ಹೂಬಿಟ್ಟ ಬಳಿಕ ಅಂದರೆ ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಒಂದೆರಡು ಸಾಮಾನ್ಯ ಮಳೆಯಾದರೆ ಗೇರು ಬೀಜ ಫಸಲು ಹೆಚ್ಚಾಗುತ್ತದೆ. ಆದರೆ, ನಿರಂತರ ಮಳೆ ಸುರಿದರೆ ಅಥವಾ ಮಂಜಿನ ವಾತಾವರಣ ಹೆಚ್ಚಿದ್ದರೆ ಫಸಲು ಕರಟುವ ಜತೆಗೆ ಒದ್ದೆಯಾದ ಗೇರು ಬೀಜಕ್ಕೆ ಬೆಲೆಯೂ ಕಡಿಮೆಯಾಗುತ್ತದೆ.

ವಿದೇಶದಿಂದ ಆಮದು

ಕರ್ನಾಟಕದಲ್ಲಿ ಗೇರು ಬೀಜ ಉತ್ಪಾದನೆ ಆಗುವುದು ಕೇವಲ 40 ಸಾವಿರ ಟನ್ ಮಾತ್ರ. ಆದರೆ, ರಾಜ್ಯದ ಉದ್ಯಮ ಕೇಂದ್ರಗಳಿಗೆ ಬೇಡಿಕೆ ಇರುವುದು ಸರಿಸುಮಾರು ಮೂರು ಲಕ್ಷ ಟನ್ ಗೇರು ಬೀಜಗಳು. ಈ ಕಾರಣದಿಂದ ಹೆಚ್ಚಿನ ಗೇರು ಬೀಜ ಬರುವುದು ವಿದೇಶಗಳಿಂದಲೇ. ಆಫ್ರಿಕಾ ಸೇರಿದಂತೆ ಇತರ ದೇಶಗಳು ನಮ್ಮ ದೇಶದ ಗೇರು ಉದ್ಯಮಕ್ಕೆ ಗೇರು ಪೂರೈಕೆದಾರರಾಗಿದ್ದಾರೆ.

ಕೆಪಿಎಸ್ ಕೋಟೇಶ್ವರ ಮತ್ತೊಂದು ಸಾಧನೆ

ಮಿಷನ್ ಪ್ರಕೃತಿಯಲ್ಲಿ ರಾಜ್ಯಮಟ್ಟದ ಪ್ರಶಸ್ತಿ



• **ಕುಂದಾಪುರ:** ಸಮಗ್ರ ಶಿಕ್ಷಣ ಕರ್ನಾ ಟಕ ಹಾಗೂ ಡಬ್ಲ್ಯೂ ಡಬ್ಲ್ಯೂಎಫ್ ಇಂಡಿಯಾ ಸಹಯೋಗದೊಂದಿಗೆ ರಾಜ್ಯದ 5000 ಶಾಲೆಗಳಲ್ಲಿ ಮಿಷನ್ ಪ್ರಕೃತಿ ಚಟುವಟಿಕೆಯನ್ನು ಆಯೋಜಿಸಲಾಗಿದ್ದು, ಆ ಪೈಕಿ ಅಗ್ರ 10 ಸ್ಥಾನಗಳಲ್ಲಿ ಕೋಟೇಶ್ವರದ ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢಶಾಲಾ ವಿಭಾಗ) ಸ್ಥಾನ ಪಡೆದುಕೊಂಡಿದೆ.

ಬೆಂಗಳೂರಿನ ವಿಕಾಸ ಸೌಧದಲ್ಲಿ ನಡೆದ ಸಮಾರಂಭದಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಸಾಧನೆಗೈದ ವಿದ್ಯಾರ್ಥಿ ಗಳೊಂ ದಿಗೆ ಉಪ ಪ್ರಾಂಶುಪಾಲ ಚಂದ್ರಶೇಖರ್ ಶೆಟ್ಟಿ ಪ್ರಶಸ್ತಿಯನ್ನು ಸ್ವೀಕರಿಸಿದರು.

ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದರು

ಈ ಹಿಂದೆ ರಾಷ್ಟ್ರ ಮಟ್ಟದ ಅಟಲ್ ಮ್ಯಾರಥಾನ್‌ನಲ್ಲಿ 6ನೇ ಸ್ಥಾನ ಹಾಗೂ ಸಮಗ್ರ ಶಿಕ್ಷಣ ಇಲಾಖೆ ನಡೆಸಿದ ಕಲೋತ್ಸವದ ಕಥೆ ಹೇಳುವ ವಿಭಾಗದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆ. ಈ ವರ್ಷ ಕಲೋತ್ಸವದಲ್ಲಿ ಭರತನಾಟ್ಯ ವಿಭಾಗದಲ್ಲಿ ರಾಜ್ಯ ಮಟ್ಟದಲ್ಲಿ ಚತುರ್ಥ ಸ್ಥಾನ ಪಡೆದುಕೊಂಡಿತ್ತು. ವಿಜ್ಞಾನ ಶಿಕ್ಷಕ ಶ್ರೀಕಾಂತ್ ವಿ. ಮತ್ತು ಸಂಧ್ಯಾ ಮಾರ್ಗದರ್ಶನ ಮಾಡಿದ್ದರು.

ಸ್ಫೋಟಕ ಬಳಸಿ ಗಣಿಗಾರಿಕೆ: ವಾಹನ ತಡೆದು ಗ್ರಾಮಸ್ಥರಿಂದ ಪ್ರತಿಭಟನೆ

• **ಬಂಟ್ವಾಳ:** ಸ್ಫೋಟಕ ವಸ್ತುಗಳನ್ನು ಬಳಸಿ ಅಕ್ರಮವಾಗಿ ಕಪ್ಪುಕಲ್ಲಿನ ಕೋರೆಯ ವಿರುದ್ಧ ಗ್ರಾಮಸ್ಥರು ಮಂಗಳವಾರ ರಾತ್ರಿ ಹಠಾತ್ ಪ್ರತಿಭಟನೆ ನಡೆಸಿದರು. ರಾಯಿ ಗ್ರಾಮದ ಲಕ್ಷ್ಮಿ ಕೋಡಿ ಎಂಬಲ್ಲಿ ಸ್ಫೋಟಕ ಬಳಸಿ ನಡೆಸಲಾಗುತ್ತಿರುವ ಕಪ್ಪುಕಲ್ಲಿನ ಗಣಿಗಾರಿಕೆಯಿಂದಾಗಿ ಹಾಗೂ ಘನ ವಾಹನಗಳ ಸಂಚಾರದಿಂದ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗುತ್ತಿದೆ ಎಂದು ಆರೋಪಿಸಿ ಕೋರೆಗೆ ಬರುವಂತಹ ವಾಹನಗಳನ್ನು ಗ್ರಾಮಸ್ಥರು ರಸ್ತೆ ಮಧ್ಯೆ ತಡೆದು ನಿಲ್ಲಿಸಿ ಪ್ರತಿಭಟಿಸಿದ್ದಾರೆ.



ಲಕ್ಷ್ಮಿ ಕೋಡಿಯಲ್ಲಿ ಕೃಷಿ ಭೂಮಿ ಯಲ್ಲಿದ್ದ ಬಂಡೆಕಲ್ಲನ್ನು ತೆರವುಗೊಳಿಸುವ ನೆಪದಲ್ಲಿ ಕಪ್ಪುಕಲ್ಲಿನ ಗಣಿಗಾರಿಕೆ ನಡೆಸಲು ನೀಡಿದ್ದ ಷರತ್ತುಗಳನ್ನು ಉಲ್ಲಂ ಘಿಸಿ ಸ್ಫೋಟಕಗಳನ್ನು ಬಳಸಲಾಗು ತ್ತಿರುವುದರಿಂದ ಜನಸಾಮಾನ್ಯರಿಗೆ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯನ್ನುಂಟು ಮಾಡಿದೆ. ಕೊಯಿಲ- ಹೋರಂಗಳ ಕಿರಿದಾದ ರಸ್ತೆಯು ಸಂಪೂರ್ಣ ಕೆಟ್ಟು ಹೋಗಿದೆ ಎಂದು ಆರೋಪಿಸಲಾಗಿದೆ

ಹತ್ತು ದಿನಗಳ ಹಿಂದೆಯಷ್ಟೆ ಈ ರಸ್ತೆಯಲ್ಲಿ ಘನವಾಹನ ಸಂಚರಿಸದಂತೆ ಬಂಟ್ವಾಳ ಪೊಲೀಸರು ಸೂಚಿಸಿದ್ದರೂ ಮಂಗಳವಾರ ರಾತ್ರಿ ಮೂರು ಟ್ರಕ್ ಗಳು ಸಂಚರಿಸಿದ್ದು, ಪರಿಣಾಮ ಇತರ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಇದರಿಂದ ಆಕ್ರೋಶಿತ ರಾದ ಗ್ರಾಮಸ್ಥರು ಹಠಾತ್ ಪ್ರತಿಭಟನೆ ನಡೆಸಿ ಟ್ರಕ್‌ಗಳ ಸಂಚಾರಕ್ಕೆ ತಡೆ ಒಡ್ಡಿದರು. ಸುದ್ದಿ ತಿಳಿದ ಬಂಟ್ವಾಳ ಗ್ರಾಮಾಂತರ ಠಾಣೆಯ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಟ್ರಕ್‌ಗಳನ್ನು ವಶಕ್ಕೆ ಪಡೆಕೊಂಡು ಪ್ರಕರಣ ದಾಖಲಿಸಿದ್ದಾರೆ.

ಬಳಿಕ ಗ್ರಾಮಸ್ಥರು ತಮ್ಮ ಪ್ರತಿಭಟನೆ ಯನ್ನು ವಾಪಸ್ ಪಡೆದಿದ್ದಾರೆ. ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುತ್ತಿ ರುವುದರಿಂದ ಸ್ಥಳೀಯವಾಗಿ ಜನ ಸಾಮಾನ್ಯರು ಹಾಗೂ ಕೃಷಿಗೆ ಬಹಳ ತೊಂದರೆಯಾಗಿದೆ. ರಸ್ತೆಗಳಲ್ಲಿ ಹೊಂಡ, ಗುಂಡಿಗಳಿಂದಾಗಿ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಹಾಗಾಗಿ ಗಣಿಗಾರಿಕೆಯ ಅನುಮತಿ ಯನ್ನು ರದ್ದು ಗೊಳಿಸಿ, ತಕ್ಷಣ ಹದಗೆಟ್ಟ ರಸ್ತೆಯನ್ನು ದುರಸ್ತಿಪಡಿಸು ವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಲಿಕೆ, ವಿಚಾರಗಳಲ್ಲಿ ಹೊಸತನ ಇದ್ದರೆ ಮಾತ್ರ ಯಶಸ್ಸು ಸಾಧ್ಯ: ಶಾಸಕ ಸುನೀಲ್

• **ಕಾರ್ಕಳ :** ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರಥಮದರ್ಜೆ ಕಾಲೇಜು, ನಿಟ್ಟೆಯ ಸದಾನಂದ ಸಭಾಂಗಣದಲ್ಲಿ ರಾಜ್ಯ ಮಟ್ಟದ 'ರಾಗ್ನಾರಾಕ್ ಎನ್ ಇಗ್ನಾ 2026' ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯನ್ನು ಕಾರ್ಕಳ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ವಿ. ಸುನಿಲ್ ಕುಮಾರ್ ಅವರು ಉದ್ಘಾಟಿಸಿದರು.

ಉದ್ಘಾಟನೆಯ ಬಳಿಕ ವಿದ್ಯಾರ್ಥಿ ಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಉತ್ಕೃಷ್ಟವಾದ ಪೈಪೋಟಿ ಮತ್ತು ತಂತ್ರಜ್ಞಾನದ ವಿಕಾಸದ ಕಾಲಘಟ್ಟದಲ್ಲಿ ನಾವಿದ್ದು ಕಲಿಕೆ ಮತ್ತು ವಿಚಾರಗಳಲ್ಲಿ ಹೊಸತನವನ್ನು ಕಂಡುಕೊಂಡಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ, ಇಂತಹ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಹೊಸತನದ ಯೋಚನೆಗಳಿಗೆ ಸ್ಫೂರ್ತಿ ಯನ್ನು ತುಂಬುತ್ತವೆ, ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳ ಬೇಕು ಎಂದು ತಿಳಿಸಿದರು.

ಎಕ್ಸ್ಟ್ರಿ ಇಂಡಿಯಾ ಕಾರ್ಯನಿರ್ವಾಹಕ ಮುಖ್ಯಸ್ಥ ಸುಮಂತ್ ಪಡಿವಾಳ್ ಮಾತನಾಡಿ, ವಿದ್ಯಾರ್ಥಿಗಳು ಕಲಿಕೆ ಯನ್ನು ಅಕಾಡೆಮಿಕ್ ಕಲಿಕೆಗೆ ಸೀಮಿತ ಗೊಳಿಸಿಕೊಳ್ಳಬಾರದು, ಆಧುನಿಕ ಕಂಪೆನಿಗಳು ನೌಕರರಲ್ಲಿ ಅಂಕಗಳ ಜೊತೆಗೆ ತಂಡವಾಗಿ ಕೆಲಸ ನಿರ್ವಹಿಸುವ



ಅಪಾರ ಯುವಶಕ್ತಿ ಯನ್ನು ಹೊಂದಿರುವ ನಮ್ಮ ದೇಶ ಅದರ ಸದ್ಬಳಕೆಯಿಂದ ಅಭಿವೃದ್ಧಿಯನ್ನು ಸಾಧಿಸಲಿದ್ದು, ಅದಕ್ಕೆ ಯುವಜನತೆ ಕೈ ಜೋಡಿಸಬೇಕು.

■ **ವಿ. ಸುನಿಲ್ ಕುಮಾರ್ , ಶಾಸಕ**

ಕೌಶಲ್ಯತೆ, ಸಂವಹನ ಹಾಗೂ ಕುತೂಹಲ ಭರಿತ ಯುವಜನತೆಯನ್ನು ಅಪೇಕ್ಷಿ ಸುತ್ತಿದೆ, ಇಂತಹ ಮನಸ್ಥಿತಿಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಲು ಈ ರೀತಿಯ ಸ್ಪರ್ಧೆಗಳು ಅವಕಾಶ ನೀಡು ತ್ತವೆ ಅದನ್ನು ಸದುಪಯೋಗಪಡಿಸಿ ಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಆಫ್ ಕ್ಯಾಂಪಸ್‌ನ ನಿರ್ವಹಣೆ ಮತ್ತು ಅಭಿವೃದ್ಧಿ ವಿಭಾಗದ ನಿರ್ದೇಶಕ ಯೋಗಿಶ್ ಹೆಗ್ಡೆ ವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲೆ ಡಾ.ವೀಣಾ ಕುಮಾರಿ ಬಿ.ಕೆ. ಪ್ರಾಸ್ತಾವಿಕ ಮಾತು ಗಳೊಡನೆ ಸ್ವಾಗತಿಸಿದರು. ವಿದ್ಯಾರ್ಥಿ ಪರಿಷತ್ ಸಂಯೋಜಕಿ ರೇಖಾ ವಂದಿಸಿದರು. ವಿದ್ಯಾರ್ಥಿ ಪರಿಷತ್ ಕಾರ್ಯದರ್ಶಿ ಶ್ರೀವತ್ಸ.ವಿ. ಸ್ಪರ್ಧೆಯ ರೂಪುರೇಷಗಳನ್ನು ವಿವರಿಸಿದರು.

ವೇದಿಕೆಯಲ್ಲಿ ವಿದ್ಯಾರ್ಥಿ ಪರಿಷತ್ ಸಂಯೋಜಕಿ ಮಾಲಿನಿ ಜೆ.ರಾವ್ ಹಾಗೂ ಐಕ್ಯೂಎಸಿ ಸಂಯೋಜಕರ ಪ್ರಕಾಶ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ನಿಭಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬಿಎಂಎಸ್ ಪ್ರತಿಭಟನೆ | ಪ್ರಧಾನಿ, ಮುಖ್ಯಮಂತ್ರಿ, ಕಾರ್ಮಿಕ ಸಚಿವರಿಗೆ ಮನವಿ

ಕಾರ್ಮಿಕ ವಲಯದ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಪಟ್ಟು

• **ಮಂಗಳೂರು:** ಇಎಸ್ಐ, ಇಪಿಎಫ್ ವೇತನ ಮಿತಿ ಹೆಚ್ಚಳ, ಆಶಾ, ಅಂಗನವಾಡಿ, ಮಧ್ಯಾಹ್ನ ಊಟ ಹಾಗೂ ಎನ್‌ಎಚ್‌ಎಂ ಯೋಜನಾ ಕಾರ್ಮಿಕರ ಗೌರವಧನ ಹೆಚ್ಚಳ ಸೇರಿದಂತೆ ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಹಾಗೂ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿ ಮುಂಭಾಗ ಭಾರತೀಯ ಮಜ್ದೂರ್ ಸಂಘ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ದ.ಕ. ಜಿಲ್ಲಾಧಿಕಾರಿ ಮತ್ತು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿಯಲ್ಲಿ ಪ್ರಧಾನಮಂತ್ರಿ, ಕೇಂದ್ರ ಕಾರ್ಮಿಕ ಸಚಿವರು, ರಾಜ್ಯದ ಮುಖ್ಯಮಂತ್ರಿ, ರಾಜ್ಯ ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಕಾರ್ಮಿಕರ ದೀರ್ಘಕಾಲದ ಸಮಸ್ಯೆಗಳು ಹಾಗೂ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಬಿಎಂಎಸ್



ಜಿಲ್ಲಾ ಅಧ್ಯಕ್ಷ, ವಕೀಲ ಅನಿಲ್ ಕುಮಾರ್ ಯು. ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತೀವ್ರ ಆಕ್ರೋಶ

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಹೊಸ ಕಾರ್ಮಿಕ ಸಂಹಿತೆಗಳ ಕುರಿತು ಪ್ರತಿಭಟನೆಯಲ್ಲಿ ಸ್ವಾಗತ ವ್ಯಕ್ತಪಡಿಸಿದರೂ, ಹಲವು ಪ್ರಮುಖ ಕಾರ್ಮಿಕಸಮಸ್ಯೆಗಳು ಇಂದಿಗೂ ಬಾಕಿ ಉಳಿದಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಲಾಯಿತು.

ಇಪಿಎಸ್-95 ಕನಿಷ್ಠ ಪಿಂಚಣಿ 7,500 ರೂ. ಹೆಚ್ಚಳ ಮತ್ತು ದರ ಏರಿಕೆ ಭತ್ಯೆ ಜಾರಿ, ಇಎಸ್ಐ ಮತ್ತು ಇಪಿಎಫ್ ವೇತನ ಮಿತಿ ಹೆಚ್ಚಳ, ಆಶಾ, ಅಂಗನವಾಡಿ, ಮಧ್ಯಾಹ್ನ ಊಟ ಹಾಗೂ ಎನ್ ಎಚ್‌ಎಂ ಯೋಜನಾ ಕಾರ್ಮಿಕರ ಗೌರವಧನ ಹೆಚ್ಚಿಸಿ ನಿಯಮಿತಗೊಳಿಸುವುದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಐದು ದಿನಗಳ ಕೆಲಸದ ವ್ಯವಸ್ಥೆ ಜಾರಿ, ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬಾಕಿ ವೇತನ ಪಾವತಿ, ಕರ್ನಾಟಕ ರಸ್ತೆ ಸಾರಿಗೆ ನೌಕರರ 38 ತಿಂಗಳ ಬಾಕಿ ವೇತನ ತಕ್ಷಣ ಪಾವತಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿನ ಭ್ರಷ್ಟಾಚಾರ ಕುರಿತು ತನಿಖಾ ಸಮಿತಿ ರಚನೆ ಮುಂತಾದ ಬೇಡಿಕೆಗಳ ಈಡೇರಿಕೆಗೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯ ನಂತರ ಅಪರ ಜಿಲ್ಲಾಧಿಕಾರಿ ರಾಜು ಕೆ. ಹಾಗೂ ಪ್ರಾದೇಶಿಕ ಭವಿಷ್ಯ ನಿಧಿ ಉಪ ಆಯುಕ್ತ ಅಂಕಿತ್ ಸಿಂಗ್ ಅವರಿಗೆ ಮನವಿ ನೀಡಲಾಯಿತು.

ಬಿಎಂಎಸ್ ಸಮಿತಿ ಪದಾಧಿಕಾರಿಗಳಾದ ಅನಿಲ್ ಕುಮಾರ್ ಯು., ಸತೀಶ್ ಶೆಟ್ಟಿ, ಜಯರಾಜ್ ಸಾಲ್ಯಾನ್, ವಿಜಯಲಕ್ಷ್ಮಿ, ಗೋಪಾಲಕೃಷ್ಣ ರೋಹಿತಾಕ್ಷ, ಉದಯ ಕುಮಾರ್, ವಿಘ್ನೇಶ್, ವೈ. ಸುಧೀಂದ್ರ, ನಿತ್ಯಾನಂದ ಪೈ, ರಂಜನ್, ಶಶಿಧರ್, ಉದಯ, ರವೀಂದ್ರ, ದಿಲಾಕ್ಷಿ,ಉಷಾ ರೂಪೇಶ್, ರಘುಪತಿ, ಹರೀಶ್ ಜಿ.ಕೆ. ಹಾಗೂ ವಿವಿಧ ವಲಯಗಳ ಕಾರ್ಮಿಕ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಹೋರಾಟದ ಎಚ್ಚರಿಕೆ

ಇಂಡಸ್ಟ್ರಿಯಲ್ ರಿಲೇಶನ್ಸ್ ಕೋಡ್ 2020, ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ, 2020 ಕಾಯ್ದೆಗಳ ಕುರಿತಾದ ಕಾರ್ಮಿಕರ ಆತಂಕಗಳನ್ನು ಪರಿಹರಿ ಸಲು ಒತ್ತಾಯಿಸಲಾಯಿತು. ಈ ಎಲ್ಲದರ ಬಗ್ಗೆ ಸರ್ಕಾರವು ತಕ್ಷಣ ಕ್ರಮ ಕೈಗೊಳ್ಳ ಬೇಕೆಂದು ಆಗ್ರಹಿಸಿದ್ದು, ಇಲ್ಲವಾದಲ್ಲಿ ಕಾರ್ಮಿಕರ ಹಿತಾಸಕ್ತಿಗಾಗಿ ಪ್ರಜಾಪ್ರಭುತ್ವ ಹಾಗೂ ಕಾನೂನು ಬದ್ಧ ಹೋರಾಟಗಳನ್ನು ತೀವ್ರಗೊಳಿಸಲಾ ಗುವುದು ಎಂದು ಎಚ್ಚರಿಸಲಾಯಿತು.

ಮಂಗಳೂರು

ಗುರುವಾರ, 26 ಫೆಬ್ರವರಿ 2026

ಸಂಪುಟ 47, ಸಂಚಿಕೆ 329 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಇಡಿ ದಾಳಿ ಸಂಚು ವಿಫಲ |೦೭

ಬಿಎಸ್ಸೆನ್ನೆಲ್: ಬನ್ಸಾಲ್‌ಗೆ ಕೇಂದ್ರ ಸರ್ಕಾರ ನೋಟಿಸ್ |೦೭

ಸೆಮಿ ನಿರ್ಧರಿಸುವ 2 ಪಂದ್ಯ ಇಂದು |೧೧

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೃಗಶಿರೆ

ದಿನದ ಮಾತು

ನಿಮ್ಮ ಮಕ್ಕಳು ಏನನ್ನು ಅನುಸರಿಸಬೇಕೆಂದು ಬಯಸುತ್ತಿರೋ ಅದನ್ನು ಆಚರಿಸಿ ತೋರಿಸಿ.

▲ಲೋಕೋಕ್ತಿ

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ

• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಮಾರ್ಚ್ 14ರಂದು ನೌಕಾಪಡೆಗೆ ತಾರಾಗಿರಿ



• **ಹೊಸದಿಲ್ಲಿ:** ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಸಾಗಿಸುವ ಸಾಮರ್ಥ್ಯವಿರುವ ಸ್ಟೆಲ್ತ್ ಫ್ರಿಗೇಟ್ ತಾರಾಗಿರಿಯನ್ನು ಮಾ.14 ರಂದು ಭಾರತೀಯ ನೌಕಾಪಡೆಗೆ ನಿಯೋಜಿಸಲಾಗುತ್ತಿದೆ. ಇದು ದೇಶದ ಕಡಲ ದಾಳಿ ಸಾಮರ್ಥ್ಯ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

• ಪುಟ ೦೭

ಯುದ್ಧಕ್ಕೆ ಕೊಟ್ಟ ಸಾಲ ವಾಪಸ್ ಕೊಡಿ!

• **ಭೋಪಾಲ್:** 'ಸೂರ್ಯ ಅಸ್ತಮಿಸದ ಸಾಮ್ರಾಜ್ಯ'ವೆಂದು ಹೆಮ್ಮೆಪಟ್ಟುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೂ ಒಮ್ಮೆ ಸ್ಥಳೀಯ ವ್ಯಾಪಾರಿಯ ನೆರವು ಬೇಕಾಗಿತ್ತು ಎಂಬ ಕುತೂಹಲಕಾರಿ ಸಂಗತಿ ಮಧ್ಯಪ್ರದೇಶದ ಸಿಹೋರ್ ಪಟ್ಟಣದಲ್ಲಿ ಮತ್ತೆ ಬೆಳಕಿಗೆ ಬಂದಿದೆ. 1917ರಲ್ಲಿ ಬ್ರಿಟಿಷ್ ಸರ್ಕಾರವು ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲ ಪಡೆದಿದ್ದು, ಇಂದಿಗೂ ಅದನ್ನು ವಾಪಸು ನೀಡಿಲ್ಲವೆಂದು ಅವರ ಕುಟುಂಬ ಆರೋಪಿಸಿದೆ.

• ಪುಟ ೦೭

ಏ.1ರಿಂದ ಆರ್‌ಒಎನ್ 95 ಇ20 ಪೆಟ್ರೋಲ್ ಕಡ್ಡಾಯ

• ಪುಟ ೦೭

ನೀರಿನ ಗುಣಮಟ್ಟಕ್ಕೆ ಆದ್ಯತೆ: ಪ್ರಿಯಾಂಕ್ ಖರ್ಗೆ

• ಪುಟ ೪

ಬೆಳಗಾವಿ ಪಾಲಿಕೆ: ನೀರಿಗಿಂತ ನಾಯಿ ವೆಚ್ಚವೇ ಹೆಚ್ಚು !

• ಪುಟ ೪



ಸ್ವಸ್ಥ ನಾರಿ ಅಭಿಯಾನ

• ಪುಟ ೦೭

ಸುದ್ದಿ ಸಮಗ್ರ

ಇಸ್ರೇಲ್‌ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಪರಿಣಾಮ

ಭಾರತ-ಇಸ್ರೇಲ್ ಬಂಧ





ಮೋದಿಗೆ ನೆಸೆಟ್ ಅತ್ಯುನ್ನತ ಪದಕ

ಇಸ್ರೇಲ್ ಸಂಸತ್ತು ನೆಸೆಟ್‌ನಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರಿಗೆ ಇಸ್ರೇಲ್ ಸಂಸತ್ತಿನ ಅತ್ಯುನ್ನತ ಗೌರವವಾದ ಸ್ಪೀಕರ್ ಆಫ್ ದಿ ನೆಸೆಟ್ ಪದಕವನ್ನು ನೀಡಿ ಗೌರವಿಸಲಾಯಿತು. ಭಾರತ ಮತ್ತು ಇಸ್ರೇಲ್ ನಡುವಿನ ಸ್ನೇಹ, ಪಾಲುದಾರಿಕೆ ಬಲವರ್ಧನೆಯಲ್ಲಿ ಮೋದಿಯವರ ವೈಯಕ್ತಿಕ ಕೊಡುಗೆಗಾಗಿ ಈ ಗೌರವ ಸಂದಿದೆ. ಮೋದಿ, ನೆಸೆಟ್ ಅತ್ಯುನ್ನತ ಪದಕ ಸ್ವೀಕರಿಸಿದ ಭಾರತದ ಮೊದಲ ಪ್ರಧಾನಿಯಾಗಿದ್ದಾರೆ.

• **ಜೆರುಸಲೇಂ:** ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತವು ಇಸ್ರೇಲ್‌ನೊಂದಿಗೆ ಸದಾ ನಿಲ್ಲುತ್ತದೆ. ಅಕ್ಟೋಬರ್ 7ರಂದು ಹಮಾಸ್ ನಡೆಸಿದ ಅನಾಗರಿಕ ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬರಿಗೂ ಭಾರತದ ಪ್ರತಿ ನಾಗರಿಕನ ಪರವಾಗಿ ನಾನು ಸಂತಾಪ ಸೂಚಿಸುತ್ತೇನೆ. ನಿಮ್ಮ ನೋವನ್ನು ನಾವು ಅನುಭವಿಸುತ್ತಿದ್ದೇವೆ. ನಿಮ್ಮ ದುಃಖವನ್ನು ನಾವು ಹಂಚಿಕೊಳ್ಳುತ್ತೇವೆ. ಭಾರತವು ಈ ಕ್ಷಣದಲ್ಲಿ ಮತ್ತು ಅದರಾಚೆಗೂ ದೃಢ ನಿಶ್ಚಯದಿಂದ ಇಸ್ರೇಲ್‌ನೊಂದಿಗೆ ನಿಲ್ಲುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.



ನೆಸೆಟ್ (ಇಸ್ರೇಲಿ ಸಂಸತ್ತು) ಉದ್ದೇಶಿಸಿ ಭಾಷಣ ಮಾಡಿದ ಮೋದಿ ಅವರು, ನಾಗರಿಕರ ಹತ್ಯೆಯನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲು ಸಾಧ್ಯವಿಲ್ಲ. ಯಾವುದೂ ಭಯೋತ್ಪಾದನೆಯನ್ನು ಸಮರ್ಥಿಸಲು ಸಾಧ್ಯವಿಲ್ಲ. ಭಾರತವು ಭಯೋತ್ಪಾದನೆಯ ನೋವನ್ನು ದೀರ್ಘಕಾಲದಿಂದ ಸಹಿಸಿಕೊಂಡಿದೆ. ನಾವು ಮುಂಬೈ ದಾಳಿ ಮತ್ತು ಇಸ್ರೇಲಿ ನಾಗರಿಕರು ಸೇರಿದಂತೆ ಪ್ರಾಣ ಕಳೆದುಕೊಂಡ ಅಮಾಯಕ ಜೀವಗಳನ್ನು ನೆನಪಿಸಿಕೊಳ್ಳುತ್ತೇವೆ ಎಂದು ಮೋದಿ ಹೇಳಿದರು.

ಸದಾ ಭಾರತದ ಬೆಂಬಲ: ಇಸ್ರೇಲ್‌ನಂತೆಯೇ, ಭಾರತವೂ ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಸ್ಥಿರ ಮತ್ತು ರಾಜಿಯಾಗದ ನೀತಿಯನ್ನು ಹೊಂದಿದ್ದು, ಯಾವುದೇ ದ್ವಂದ್ವ ಮಾನದಂಡಗಳಿಲ್ಲ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು. ➡ಪುಟ ೪

ಮೋದಿಗೆ ಅದ್ದೂರಿ ಸ್ವಾಗತ

ನೆಸೆಟ್‌ನಲ್ಲಿ ಪ್ರಧಾನಿ ಮೋದಿಯವರನ್ನು ಇಸ್ರೇಲಿ ಸಂಸದರು ಅದ್ದೂರಿಯಾಗಿ ಸ್ವಾಗತಿಸಿದ್ದಾರೆ. ಅಲ್ಲದೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಸಹೋದರ ಎಂದು ಕರೆದು, ಅವರ ನಡುವಿನ ವಿಶೇಷ ಸಂಬಂಧವನ್ನು ಶ್ಲಾಘಿಸಿದರು. ಇಸ್ರೇಲ್‌ನ ಶ್ರೇಷ್ಠ ಸ್ನೇಹಿತ, ಭಾರತ-ಇಸ್ರೇಲಿ ಮೈತ್ರಿಯ ಶ್ರೇಷ್ಠ ಚಾಂಪಿಯನ್ ಮತ್ತು ವಿಶ್ವ ವೇದಿಕೆಯ ಶ್ರೇಷ್ಠ ನಾಯಕನಾಗಿ ನೀವು ನಮ್ಮೊಂದಿಗೆ ಇಲ್ಲಿಗೆ ಭೇಟಿ ನೀಡಿದ್ದಕ್ಕಿಂತ ಹೆಚ್ಚು ನಾನು ಎಂದಿಗೂ ಪ್ರಭಾವಿತನಾಗಲಿಲ್ಲ ಎಂದು ನೆತನ್ಯಾಹು ಮೋದಿಗೆ ಹೇಳಿದರು. ಇಂದು ಎರಡೂ ದೇಶಗಳು ಹಿಂದೆಂದಿಗಿಂತಲೂ ಬಲಶಾಲಿಯಾಗಿವೆ. ಹಮಾಸ್ ದಾಳಿ ಬಳಿಕ ಕುಗ್ಗಿ ಹೋಗಿದ್ದ ಇಸ್ರೇಲ್‌ಗೆ ಭಾರತ ನೀಡಿದ ಬೆಂಬಲಕ್ಕಾಗಿ ಮೋದಿಗೆ ಧನ್ಯವಾದ ಅರ್ಪಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪ್ರಧಾನಿ ಮೋದಿ ಟೆಲ್ ಅವೀವ್‌ನಲ್ಲಿ ಬುಧವಾರ ಬಂದಿಳಿಯುತ್ತಿದ್ದಂತೆ ಅದ್ದೂರಿ ಕೆಂಪು ಹಾಸಿನ ಸ್ವಾಗತ ಪಡೆದರು. ಮೋದಿ ವಿಮಾನದಿಂದ ಇಳಿಯುತ್ತಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಅವರ ಪತ್ನಿ ಸಾರಾ ನೆತನ್ಯಾಹು ಎರಡೂ ಕೈಗಳನ್ನು ಜೋಡಿಸಿ ನಮಿಸುತ್ತಲೇ ಆತ್ಮೀಯವಾಗಿ ಸ್ವಾಗತಿಸಿದರು. ಮೋದಿ ಯವರ ಜಾಕೆಟ್‌ನ ಪಾಕೆಟ್ ಸ್ಕ್ವೇರ್ ಮತ್ತು ಸಾರಾ ಧರಿಸಿದ್ದ ಪ್ಯಾಂಟ್‌ಸೂಟ್ ಎರಡೂ ಒಂದೇ ಬಣ್ಣವೆಂದು ನೆತನ್ಯಾಹು ಹೇಳಿದರು. ➡ಪುಟ ೪



ಕಿಸಾನ್ ಸಭಾ ಟ್ರಸ್ಟ್ ವತಿಯಿಂದ ಕಾರ್ಕಳದ ಬಂಡಿಮಠದ ಬಳಿ ನಿರ್ಮಿಸಲಾದ ಕಿಸಾನ್ ಸಭಾ ಸಭಾಂಗಣವನ್ನು ಸಿಎಂ ಸಿದ್ದರಾಮಯ್ಯ ಅವರು ಬುಧವಾರ ಉದ್ಘಾಟಿಸಿದರು. ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ವಿಧಾನಪರಿಷತ್ ಸದಸ್ಯರಾದ ಐವನ್ ಡಿಸೋಜ, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ರಾಜೇಂದ್ರ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಹುದ್ದೆ ಭರ್ತಿ ಶೀಘ್ರ

• **ಮೈಸೂರು:** ಒಳಮೀಸಲಾತಿ ಗೊಂದಲದಿಂದ ಸರಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದ್ದರೂ, ಈಗ ಸಮಸ್ಯೆ ಇತ್ಯರ್ಥಗೊಂಡಿದ್ದು ಶೀಘ್ರದಲ್ಲೇ ನೇಮಕಾತಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಉದ್ಯೋಗ ನೇಮಕಾತಿ ಕುರಿತಾಗಿ ಬಜೆಟ್‌ನಲ್ಲಿ ಮಹತ್ವದ ಘೋಷಣೆ ಮಾಡುವ ಸುಳಿವು ನೀಡಿದರು. ಕಾಂಗ್ರೆಸ್ ಕೊಟ್ಟ ಮಾತಿಗೆ ತಪ್ಪಲ್ಲ. ಸರಕಾರಿ ಉದ್ಯೋಗ ನೇಮಕಾತಿ ಮಾಡೇ ಮಾಡ್ತೀವಿ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯವರು ಅಧಿಕಾರದಲ್ಲಿದ್ದ 4 ವರ್ಷಗಳಲ್ಲಿ ಒಂದೇ ಒಂದು ನೇಮಕಾತಿಯನ್ನೂ ಮಾಡಲಿಲ್ಲ. ಅಧಿಕಾರ ಕಳೆದುಕೊಂಡ ನಂತರ ಆಡಳಿತ ಪಕ್ಷದ ವಿರುದ್ಧ ಪ್ರತಿಭಟನೆ ನಡೆಸುವುದು ಬಿಜೆಪಿಗೆ ಚಾಳಿ ಆಗಿದೆ ಎಂದು ವ್ಯಂಗ್ಯವಾಡಿದರು. ಧಾರವಾಡದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಬಿಜೆಪಿ ನಾಯಕರನ್ನು ಸ್ಥಳದಿಂದ ಹೊರಹಾಕಿದ ಘಟನೆಗೆ ಇದೇ ಕಾರಣ ಎಂದರು. ➡ಪುಟ ೪

ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

• **ಕಾರ್ಕಳ(ದಕ್ಷಿಣ ಕನ್ನಡ):** ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ- ವನ್ಯಜೀವಿ ಸಂಘರ್ಷ ತಡೆಗೆ ಕಾಡಂಚಿನಲ್ಲಿ ಬೃಹತ್ ಪ್ರಮಾಣದ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದಲ್ಲಿ ಆನೆ, ಹುಲಿ, ಚಿರತೆಗಳು ಜನವಸತಿ ಪ್ರದೇಶಗಳಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಜೀವಹಾನಿಗೂ ಕಾರಣವಾಗಿವೆ. ಈ ವನ್ಯಜೀವಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜನವಸತಿ ಪ್ರದೇಶಗಳಲ್ಲೂ ಅವು ಸಂಚರಿಸುತ್ತಿವೆ. ಇದರಿಂದ ಮಾನವ ವನ್ಯಜೀವಿ ಸಂಘರ್ಷಗಳು ಹೆಚ್ಚುತ್ತಿವೆ. ➡ಪುಟ ೪

ಹಿಮೋಫಿಲಿಯಾ ರೋಗ ನಿರೋಧಕ, ಆಂಬುಲೆನ್ಸ್‌ಗೆ ಚಾಲನೆ

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

• **ಬೆಂಗಳೂರು:** ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆ ಸರ್ಕಾರ ನಿಲ್ಲಲಿದೆ. ರೋಗಿಗಳಿಗೆ ಶಾಶ್ವತ ಪರಿಹಾರ ಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.

ಬುಧವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೆಹರೂ ತಾರಾಲಯದಲ್ಲಿ ಆಯೋಜಿಸಿದ್ದ ಕುಸುಮ ಸಂಜೀವಿನಿ ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ, 108 ಆಂಬುಲೆನ್ಸ್ ಸೇವೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣ ಏಟುಗಳಾದರೂ ಜೀವಭಯದ ಪರಿಸ್ಥಿತಿ ಉಂಟಾಗುವ ಸ್ಥಿತಿ ಬದಲಾಗಬೇಕು. ಹೊಸ ರೋಗನಿರೋಧಕ ಚಿಕಿತ್ಸೆಯಿಂದ ರೋಗಿಗಳು ಸಾಮಾನ್ಯರಂತೆ ಸಕ್ರಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪



ಗ್ಯಾರಂಟಿಗಳಿಂದ ಉಂಟಾದ ಹಣದ ಕೊರತೆ ಕಾರಣ

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

• **ಬೆಂಗಳೂರು:** ಪಂಚ ಗ್ಯಾರಂಟಿಗಳನ್ನು ನಿರ್ವಹಣೆ ಮಾಡಲು ಹಣಕಾಸಿನ ಸಮಸ್ಯೆ ಕಾಡುತ್ತಿರುವುದರಿಂದ ಯಾವುದೇ ನೇಮಕಾತಿ ಮಾಡಲು ಕಾಂಗ್ರೆಸ್ಸಿನವರಿಗೆ ಮನಸ್ಸು ಬರುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು. ಬಿಜೆಪಿ



ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನೇಮಕಾತಿ ವಿಚಾರದಲ್ಲಿ ವಾಸ್ತವಿಕ ಸತ್ಯವನ್ನು ಬಿಚ್ಚಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಕೇಳಬೇಕು ಮತ್ತು ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳೇ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗುತ್ತಿದ್ದರೂ, ಇನ್ನೂ ಬಿಜೆಪಿ ಸರ್ಕಾರವನ್ನು ದೂರುವುದನ್ನು ಮುಂದುವರಿಸಿದ್ದೀರಾ? ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ 1 ವರ್ಷದಲ್ಲಿ ನೇಮಕಾತಿ ಭರವಸೆ ಕೊಟ್ಟಿದ್ದಿರಿ. ಈ ರೀತಿ ಸುಳ್ಳು ಹೇಳುವುದು, ಆರೋಪ ಬಿಟ್ಟು ಕೇವಲ ಪತ್ರಿಕಾ ಹೇಳಿಕೆಗೆ ಸೀಮಿತವಾಗದೆ ನೇಮಕಾತಿ ಕೂಡಲೇ ಪ್ರಾರಂಭಿಸಬೇಕು. ನೇಮಕಾತಿ ಪ್ರಕ್ರಿಯೆ ತಕ್ಷಣ ಪ್ರಾರಂಭಿಸದಿದ್ದರೆ ಬಿಜೆಪಿ ಹೋರಾಟಕ್ಕೆ ಇಳಿಯಲಿದೆ ಎಂದು ಎಚ್ಚರಿಸಿದರು. ➡ಪುಟ ೪

ಪರಿಗಣಿಸಲು ಎರಡು ವರ್ಷ ಬೇಕಾಯಿತೇ?

ಮುಖ್ಯಮಂತ್ರಿಗಳೇ, ಯುವಜನರ ಪ್ರತಿಭಟನೆ ಪ್ರಾರಂಭವಾಗಿ ಒಂದೂವರೆ, ಎರಡು ವರ್ಷವಾಗಿದೆ. ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎನ್ನಲು ಮುಖ್ಯಮಂತ್ರಿಗಳಿಗೆ 2 ವರ್ಷ ಬೇಕಾಯಿತೇ? ಯಾಕಿಷ್ಟು ದಿನ ನೀವು ಇದರ ಬಗ್ಗೆ ಚಕಾರ ಎತ್ತಿಲ್ಲ? ನಿರುದ್ಯೋಗಿಗಳ ಸಂಕಷ್ಟ ಅರ್ಥ ಮಾಡಿಕೊಳ್ಳಲು ನಿಮಗೆ ಇಷ್ಟು ದಿನ ಬೇಕಾಯಿತೇ ಎಂದು ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು

• **ಬೆಂಗಳೂರು:** ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ.



ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಕಳೆದ ವರ್ಷ ನ.8 ರಂದು ಮುಖ್ಯಮಂತ್ರಿಗಳು ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.

• ವಿವರ ಪುಟ ೫

ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ 3 ಸೆರೆ


ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

• **ಭೋಪಾಲ್:** ಉದ್ಯೋಗ ಆಮಿಷವೊಡ್ಡಿ ಹಿಂದು ಯುವತಿಯರಿಗೆ ಡ್ರಗ್ಸ್ ನೀಡಿ ಅತ್ಯಾಚಾರವೆಸಗಿ ಬಳಿಕ ಮತಾಂತರ ಮಾಡುತ್ತಿದ್ದ ಜಾಲವೊಂದನ್ನು ಮಧ್ಯಪ್ರದೇಶ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ ಮೂವರನ್ನು ಬಂಧಿಸಿದ್ದಾರೆ.

ಮುಸ್ಲಿಂ ಸಹೋದರಿಯರೇ ಈ ಜಾಲದ ಪ್ರಮುಖ ಸೂತ್ರಧಾರರಾಗಿದ್ದು, ಆರ್ಥಿಕವಾಗಿ ಹಿಂದುಳಿದ ಹಿಂದು

ಹಿಂದು ಯುವತಿಯರೇ ಟಾರ್ಗೆಟ್

ಯುವತಿಯರಿಗೆ ನೌಕರಿ ಆಮಿಷವೊಡ್ಡಿ ಬಲವಂತದ ಮತಾಂತರ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಉದ್ಯೋಗ ಆಮಿಷ, ಲೈಂಗಿಕ ಮತಾಂತರ ಜಾಲ(ಸೆಕ್ಸ್ ಟ್ರಾಫಿಕಿಂಗ್) ಡ್ರಗ್ಸ್ ಮತ್ತು ಬಲವಂತದ ಮತಾಂತರ ಜಾಲದ ಮಾಸ್ಟರ್ ಮೈಂಡ್ ಅಮ್ರೀನ್ ಖಾನ್, ಆಫ್ರೀನ್ ಖಾನ್ ಮತ್ತು ಚಂದನ್ ಯಾದವ್ ಬಂಧಿತ ಆರೋಪಿಗಳು. ಚಂದನ್ ಯಾದವ್ ಅಮ್ರೀನ್‌ಳ ಪ್ರಿಯಕರನೆಂಬುದು ಪೊಲೀಸ್ ವಿಚಾರಣೆ ವೇಳೆ ಗೊತ್ತಾಗಿದೆ. ➡ಪುಟ ೪



ಬುರ್ಖಾ ಧರಿಸಲು, ಮುಸ್ಲಿಂ ವ್ಯಕ್ತಿ ವರಿಸಲು ಒತ್ತಾಯ

ಸಂತ್ರಸ್ತೆಗೆ ಬುರ್ಖಾ ಧರಿಸಲು, ಇಸ್ಲಾಂ ಗ್ರಂಥಗಳನ್ನು ಪಠಿಸಲು ಹಾಗೂ ಮತಾಂತರ ಜಾಲದ ಸಂಪರ್ಕದಲ್ಲಿರುವ ಮುಸ್ಲಿಂ ವ್ಯಕ್ತಿಗಳೊಂದಿಗೆ ವಿವಾಹ ಆಗಬೇಕೆಂದೂ, ಮತಾಂತರ ಆಗಬೇಕೆಂದೂ ಒತ್ತಡ ಹಾಕುತ್ತಿದ್ದರು. ಜಾಲದ ಪ್ರಮುಖ ಉದ್ದೇಶ ಮತಾಂತರವೆಂಬುದು ಸ್ಪಷ್ಟವಾಗಿದೆ.

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

• **ಬೆಂಗಳೂರು:** ಸಚಿವ ಸ್ಥಾನಕ್ಕೆ ಒತ್ತಾಯಿಸಿ ಮೊದಲ ಬಾರಿ ಆಯ್ಕೆಯಾಗಿರುವ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದ ಬೆನ್ನಲ್ಲೇ ವಿಧಾನ ಪರಿಷತ್‌ನ ಸದಸ್ಯರು ಸಹ ಸಚಿವ ಸ್ಥಾನ ಬೇಡಿಕೆಯಿಟ್ಟು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ನಾಗರಾಜ್ ಯಾದವ್, ಬಲ್ಕಿಸ್ ಬಾನು, ಎಸ್.ಎಫ್. ಜಕ್ಕಪ್ಪನವರ್, ಶಿವಕುಮಾರ್ ಸೇರಿದಂತೆ



ಹಲವು ಸದಸ್ಯರ ನಿಯೋಗವು ಗುರುವಾರ ದಿಲ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಮನವಿ ಸಲ್ಲಿಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದಿಂದ ಒಂದಲ್ಲ ಒಂದು ಮನವಿ ಬರುತ್ತಿರುವುದರ ನಡುವೆಯೇ ಹೊಸ ಸಮಸ್ಯೆ ತಂದೊಡ್ಡಿದೆ. ವಿಧಾನಪರಿಷತ್‌ನ 24 ಸದಸ್ಯರು ಈ ಪತ್ರಕ್ಕೆ ಸಹಿ ಹಾಕಿದ್ದು, ಕನಿಷ್ಠ 5 ಸಚಿವ ಸ್ಥಾನಗಳನ್ನು ನೀಡಬೇಕು, ಇದರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಪದವೀಧರ ಕ್ಷೇತ್ರ ಅಥವಾ ಶಿಕ್ಷಕರ ಕ್ಷೇತ್ರ, ವಿಧಾನಸಭೆಯಿಂದ ನಾಮನಿರ್ದೇಶನಗೊಂಡ ತಲಾ ಒಬ್ಬರನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಲಾಗಿದೆ. ➡ಪುಟ ೪

ಪಾಲಿಕೆ ಬಜೆಟ್: ನೀರಿಗಿಂತ ನಾಯಿಗಳಿಗೇ ಹೆಚ್ಚು ವೆಚ್ಚ!


ಬೆಳಗಾವಿ: ಸ್ಮಾರ್ಟ್‌ಸಿಟಿಯಲ್ಲಿ ಕಳೆದೊಂದು ದಶಕಗಳಿಂದಲೂ ಬೀದಿನಾಯಿಗಳ ಕಾಟ ವಿಪರೀತವಾಗಿದೆ. ಸಾವಿರಾರು ಸಂಖ್ಯೆಯ ನಾಯಿಗಳು ಪ್ರತಿ ವರ್ಷವೂ ಹೆಚ್ಚುತ್ತಲೇ ಇವೆ. ಪ್ರಸಕ್ತ ಬಜೆಟ್‌ನಲ್ಲಿ ಕೂಡ ನಾಯಿಗಳ ಉಪಟಳ ನಿಯಂತ್ರಣ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ 2.10 ಕೋಟಿ ಅನುದಾನ ಮೀಸಲು ಇಡಲಾಗಿದೆ.

ಮಹಾನಗರ ಪಾಲಿಕೆಯ ಮೇಯರ್ ಮಂಗೇಶ ಪವಾರ್‌ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಸಭೆಯಲ್ಲಿ ಪಾಲಿಕೆಯ ತೆರಿಗೆ, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಷ್ಮಾ ಹೂಗಾರ ಅವರು, ನಗರದ ಅಭಿವೃದ್ಧಿಗೆ ದಿಕ್ಕು ತೋರಿಸುವ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಬುಧವಾರ ಮಹಾನಗರ ಪಾಲಿಕೆಯ ಸಭೆಯಲ್ಲಿ ಬೆಳಗಾವಿ ನಗರದಲ್ಲಿರುವ ಆಯಾ ಅಭಿವೃದ್ಧಿ ಕ್ಷೇತ್ರಗಳಿಗೆ ಬೇಕಾಗಿರುವ ಅನುದಾನವನ್ನು ಬಜೆಟ್‌ನಲ್ಲಿ ಮಂಡಿಸಲಾಯಿತು. ಆದರೆ, ಪಾಲಿಕೆಗೆ ದೊಡ್ಡ ತಲೆ ನೋವು ಆಗಿರುವು ಒಂದೇ ನೀರಿಗಿಂತ ಬೀದಿ ನಾಯಿಗಳ ಖರ್ಚು ಅಂತಿ ಹೆಚ್ಚು ಆಗಿರುವುದರಿಂದ ಪಾಲಿಕೆಯು ತಲೆ ಬಿಸಿ ಮಾಡಿಕೊಂಡಿದೆ.

2024-25ನೇ ಸಾಲಿನ ಹಾಗೂ 2025-26ನೇ ಸಾಲಿನ ಬಜೆಟ್‌ನಲ್ಲಿಯೂ ಅಂದಾಜು ರೂ.2 ಕೋಟಿ ಮೀಸಲು ಇಡಲಾಗಿತ್ತು. ಆದರೆ, ನಾಯಿಗಳ ಸಂತಾನ ಮಾತ್ರ ಕಡಿಮೆ ಆಗಿಲ್ಲ. ಅಚ್ಚರಿಯೆಂದರೆ ಕುಡಿಯುವ ನೀರಿಗಿಂತಲೂ ನಾಯಿಗಳೇ ಹೆಚ್ಚು ಹಣ ನುಂಗುತ್ತಿವೆ.

ಇದರಿಂದಾಗಿ ಮಹಾನಗರ ಪಾಲಿಕೆಗೆ ನಾಯಿಗಳ ಸಂತಾನವನ್ನು ಯಾವ ರೀತಿ ಕಡಿಮೆ ಮಾಡಬೇಕೆಂದು ತಲೆ ಬಿಸಿ ಮಾಡಿಕೊಂಡಿದ್ದಾರೆ. ನಾಯಿಗಳ ಖರ್ಚು ಹೆಚ್ಚಾಗಿರುವುದರಿಂದ ಸಾರ್ವಜನಿಕ ಜೇಬಿಗೆ ಕತ್ತರಿ ಬಿಳುವ ಸಾಧ್ಯತೆ ಹೆಚ್ಚಾಗಿದೆ. ನೀರಿನ ದರ, ಆಸ್ತಿ ತೆರಿಗೆ ಸೇರಿದಂತೆ ವಿವಿಧ ತೆರಿಗೆಗಳನ್ನು ಹೆಚ್ಚಿಗೆ ಮಾಡುವ ಸಾಧ್ಯತೆಗಳಿಗೆ ಎಂದು ಕೆಲ ಕಾರ್ಪೊರೇಟರ್‌ಗಳು ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ.

ರಾಮ ಬಾಣ



ಭಾರತ-ಇಸ್ರೇಲ್ ಬಂಧ

ಪುಟ ೩➡ ಭಯೋತ್ಪಾದನೆಯು ಸಮಾಜಗಳನ್ನು ಅಸ್ಥಿರಗೊಳಿಸುವ, ಅಭಿವೃದ್ಧಿಯನ್ನು ತಡೆಯುವ ಮತ್ತು ವಿಶ್ವಾಸವನ್ನು ಕುಗ್ಗಿಸುವ ಗುರಿಯನ್ನು ಹೊಂದಿದೆ. ಭಯೋತ್ಪಾದನೆಯನ್ನು ಎದುರಿಸಲು ಸುಸ್ಥಿರ ಮತ್ತು ಸಂಘಟಿತ ಜಾಗತಿಕ ಕ್ರಮದ ಅಗತ್ಯವಿದೆ. ಏಕೆಂದರೆ ಭಯೋತ್ಪಾದನೆಯು ಎಲ್ಲೆಡೆ ಶಾಂತಿಗೆ ಅಪಾಯವನ್ನುಂಟುಮಾಡುತ್ತದೆ. ಅದಕ್ಕಾಗಿಯೇ, ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಗೆ ಕೊಡುಗೆ ನೀಡುವ ಎಲ್ಲಾ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ ಎಂದು ಮೋದಿ ತಮ್ಮ ಭಾಷಣದಲ್ಲಿ ಹೇಳಿದರು.

ತಾನು ಜನಿಸಿದ ದಿನವೇ ಇಸ್ರೇಲ್‌ಗೆ ಔಪಚಾರಿಕ ಮಾನ್ಯತೆ: 1950ರ ಸೆಪ್ಟೆಂಬರ್ 17ರಂದು ಭಾರತವು ಇಸ್ರೇಲ್‌ಗೆ ಔಪಚಾರಿಕವಾಗಿ ಮಾನ್ಯತೆ ನೀಡಿದ ದಿನವೇ ತಾನು ಜನಿಸಿದ್ದರಿಂದ ತಾನು ಯಾವಾಗಲೂ ಇಸ್ರೇಲ್ ಕಡೆಗೆ ಆಕರ್ಷಿತನಾಗಿದ್ದೇನೆ ಎಂದು ಪ್ರಧಾನಿ ಮೋದಿ ಬುಧವಾರ ಇಸ್ರೇಲ್ ಸಂಸತ್ತಿಗೆ ತಿಳಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪುಟ ೩➡ ಅದು ಕೇಸರಿ ಬಣ್ಣ ಎಂದು ಮೋದಿ ನಕ್ಕರು.

ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ!: ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ, ನೆಸೆಟ್ ಮೇ ಆಪ್ ಕಾ ಸ್ವಾಗತ್ ಹೇ (ಜೆರುಸಲೇಂಗೆ ನಿಮಗೆ ಸ್ವಾಗತ, ಸಂಸತ್ತಿಗೆ ನಿಮಗೆ ಸ್ವಾಗತ) ಎಂದು ಇಸ್ರೇಲ್ ಸಂಸತ್ತಿನ ಸ್ಪೀಕರ್ ಆಮಿರ್ ಒಹಾನ ಹಿಂದಿಯಲ್ಲೇ ಪ್ರಧಾನಿ ಮೋದಿಯವರನ್ನು ಸ್ವಾಗತಿಸಿದರು.

ಮೋದಿ ಅಪ್ಪುಗೆ ಬಹಳ ವಿಶೇಷ!: ಪ್ರಧಾನಿ ಮೋದಿ ಅವರ ಅಪ್ಪುಗೆಯಲ್ಲಿ ಏನೋ ವಿಶೇಷತೆಯಿದೆ. ಅದನ್ನು ಮೋದಿ ಅಪ್ಪುಗೆಯೆಂದು ಕರೆಯಲಾಗುತ್ತದೆ. ವಿಶ್ವದೆಲ್ಲೆಡೆ ಮೋದಿ ಅಪ್ಪುಗೆ ಪ್ರಸಿದ್ಧಿ ಪಡೆದಿದೆ. ಬಹಳ ಆತ್ಮೀಯವಾಗಿ, ನಿಷ್ಕಲ್ಮಶವಾಗಿ ಯಾರನ್ನಾದರೂ ಅಪ್ಪುವಾಗ ನಟಿಸಬೇಕಿಲ್ಲ. ಈ ನಿಜವಾದ ಅಪ್ಪುಗೆಯನ್ನು ಎಲ್ಲಾ ನೆಸೆಟ್ ಸದಸ್ಯರಿಗೆ ಹಿಂದಿರುಗಿಸಲು ಬಯಸುತ್ತೇನೆ. ಇದು ವೈಯಕ್ತಿಕ ಗೆಳೆತನವಷ್ಟೇ ಅಲ್ಲ, ನಮ್ಮ ಜನರ ನಡುವಿನ ಸ್ನೇಹ ಸಂಬಂಧವೂ ಆಗಿದೆ ಎಂದು ನೆತನ್ಯಾಹು ನುಡಿದರು. ಪ್ರಧಾನಿ ಮೋದಿಯವರ ಭೇಟಿ ಹಿನ್ನೆಲೆ ಇಸ್ರೇಲ್‌ನ ಜೆರುಸಲೇಂ ಪೋಸ್ಟ್ ಪತ್ರಿಕೆಯು ತನ್ನ ಮುಖಪುಟದಲ್ಲಿ ನಮಸ್ತೇ, ಮೋದಿ ಶೀರ್ಷಿಕೆಯೊಂದಿಗೆ ಆತ್ಮೀಯ ಸ್ವಾಗತ ಕೋರಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಪಕ್ಷದ ಹೈಕಮಾಂಡ್ ಸೂಚಿಸಿದರೆ ಬೀದಿ ದಾಸಯ್ಯನೂ ಸಿಎಂ ಆಗಬಹುದು
- ಜಮೀರ್ ಅಹ್ಮದ್ ಖಾನ್

- ಅಂದರೆ ಯೋಗ್ಯತೆ, ಅರ್ಹತೆಯ ಆವಶ್ಯಕತೆ ಇಲ್ಲ, ಹೈಕಮಾಂಡ್ ಕೃಪಾಕಟಾಕ್ಷವೇ ಎಲ್ಲಾ!

ದಿನ ಭವಿಷ್ಯ

ಮೇಷ
ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಪರಿಣಾಮ ಬೀರಬಹುದು. ಕೆಲಸ ವಿಳಂಬಕ್ಕೆ ಅಸಹನೆ ಬೇಡ. ತಾಳ್ಮೆಯಿಂದ ಕಾಯಿರಿ.

ವೃಷಭ
ನಿಮ್ಮ ಪ್ರಯತ್ನದಿಂದ ಉದ್ದೇಶ ಸಾಧನೆ. ಧನ ಪ್ರಾಪ್ತಿ. ಅನಿರೀಕ್ಷಿತ ಲಾಭ ಖುಷಿ ತರಲಿದೆ. ಕೌಟುಂಬಿಕ ಅಸಹಕಾರ ನಿವಾರಣೆ, ನೆಮ್ಮದಿ.

ಮಿಥುನ
ಎಲ್ಲರ ದೃಷ್ಟಿ ನಿಮ್ಮ ಮೇಲೆ. ನಿರ್ವಹಣೆಯಲ್ಲಿ ಸೋಲಬೇಡಿ. ನಿಮ್ಮ ಸೋಲನ್ನೆ ಕೆಲವರು ಬಯಸುವರು. ಆಪ್ತ ಸಂಬಂಧದಲ್ಲಿ ಒಡಕು.

ಕಟಕ
ಎಂದಿನಂತೆ ಸಹಜ ದಿನವಾಗಿ ಕಂಡರೂ ಬಳಿಕ ಕೆಲವು ಪ್ರಮುಖ ಬೆಳವಣಿಗೆ ಆಗಲಿದೆ. ಅದಕ್ಕೆ ಹೊಂದಿಕೊಳ್ಳಿ. ವಿರೋಧಿಸಿದರೆ ತೊಡಕು.

ಸಿಂಹ
ವೃತ್ತಿಯಲ್ಲಿ ಏನೋ ಅಸಹಜ ಬೆಳವಣಿಗೆ ಸಂಭವಿಸಬಹುದು. ಆ ಬಗ್ಗೆ ಎಚ್ಚರದಿಂದಿರಿ. ಆರೋಗ್ಯ ಕಾಳಜಿ ವಹಿಸಿ.

ಕನ್ಯಾ
ಬಂಧುಗಳ ಭೇಟಿ ನಿಮ್ಮ ದಿನದ ಸಂತೋಷ ಹೆಚ್ಚಿಸಲಿದೆ. ಆರ್ಥಿಕ ಬೆಳವಣಿಗೆ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಫಲಿತಾಂಶ ಕಾಣುವಿರಿ.

ತುಲಾ
ಜವಾಬ್ದಾರಿ ಹೆಚ್ಚಳ. ಇಷ್ಟವಿಲ್ಲದಿದ್ದರೂ ಮಾಡಲೇ ಬೇಕು. ಆತ್ಮೀಯರ ಜತೆ ಭಾವನೆ ಹಂಚಿಕೊಳ್ಳಿ. ಹಿರಿಯರಿಗೆ ಆರೋಗ್ಯ ಸಮಸ್ಯೆ.

ವೃಶ್ಚಿಕ
ವೃತ್ತಿಯಲ್ಲಿ ಒತ್ತಡ. ಸಹನೆಯ ವರ್ತನೆ ನಿಮ್ಮ ನೆರವಿಗೆ ಬರಲಿದೆ. ಆರ್ಥಿಕ ಲಾಭ. ಆರೋಗ್ಯ ಸಮಸ್ಯೆ ಕಾಡಬಹುದು. ಮಿತಾಹಾರ ಒಳಿತು.

ಧನು
ಒತ್ತಡ ತುಂಬಿದ ದಿನ. ಕಾಲಮಿತಿಯಲ್ಲಿ ಕೆಲಸ ಪೂರೈಸಬೇಕು. ಆಪ್ತರ ಜತೆಗಿನ ಭಿನ್ನಮತ ನಿವಾರಿಸಿಕೊಳ್ಳಿ. ದೈಹಿಕ ಆಲಸ್ಯ ಕಾಡಬಹುದು.

ಮಕರ
ನಿಮ್ಮ ಪಾಲಿಗೆ ಉತ್ತಮ ದಿನ. ಆರ್ಥಿಕ ಅಭಿವೃದ್ಧಿ. ಮಹತ್ವದ ಉದ್ದೇಶ ಸಾಧಿಸುವಿರಿ. ವಿರೋಧಿಗಳು ಮೌನ. ಆಪ್ತರಿಂದ ಸಹಕಾರ.

ಕುಂಭ
ಎಲ್ಲವೂ ಕೃತಕ, ಭಾವನೆಗೆ ಬೆಲೆಯಿಲ್ಲ ಎಂಬಂತಹ ಅನಿಸಿಕೆ ಉಂಟಾದೀತು. ವಾಸ್ತವದ ಜತೆ ಹೊಂದಿಕೊಂಡು ಬಾಳುವುದೇ ಒಳಿತು.

ಮೀನ
ಸವಾಲಿನ ದಿನ. ಏಳು-ಬೀಳು ಎರಡನ್ನೂ ಎದುರಿಸುವಿರಿ. ಆಪ್ತರ ಜತೆ ಭಾವನೆ ಹಂಚಿಕೊಂಡು ಸಮಾಧಾನ ಪಡೆಯುವಿರಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 0,6,1,5

ರಾಜ್ಯ ಸರ್ಕಾರದಿಂದ 52 ಕೋಟಿ ರೂ. ವೆಚ್ಚ: ಪ್ರಿಯಾಂಕ್ ಖರ್ಗೆ

ನೀರಿನ ಗುಣಮಟ್ಟಕ್ಕೆ ಆದ್ಯತೆ

ಬೆಂಗಳೂರು: ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ನಿರ್ವಹಣೆ ಪ್ರಯೋಗಾಲಯಗಳ ಮೂಲಕ ನೀರಿನ ಗುಣಮಟ್ಟ ಪರೀಕ್ಷೆಗಳನ್ನು ಕೈಗೊಳ್ಳಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, 2024-25 ನೇ ಸಾಲಿನಲ್ಲಿ 23.52 ಕೋಟಿ ರೂ. ಮತ್ತು ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೂ 28.85 ಕೋಟಿ ರೂ. ವೆಚ್ಚ ಮಾಡಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ನೀರು ಸರಬರಾಜು ಮಾಡಲು ಕಾಲ-ಕಾಲಕ್ಕೆ ಇಲಾಖೆಯಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಿರುವುದರಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶ ಗಳಲ್ಲಿ ಕಲುಷಿತ ನೀರಿನಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯಾದ್ಯಂತ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳನ್ನು ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳ ಅನುಗುಣವಾಗಿ ಬಿಐಎಸ್ 10500-2012 ಗುಣಮಟ್ಟದಂತೆ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ, ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಪ್ರಯೋಗಾಲಯಗಳು ಮತ್ತು 47 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಪ್ರಯೋಗಾಲಯಗಳಲ್ಲಿ 2023-24ರಿಂದ ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ.

ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಸಿಇಒಗಳಿಗೆ ಮಾಹಿತಿ ನೀಡಲಾಗಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಈ ವರ್ಷ 2.46 ಲಕ್ಷ ನೀರಿನ ಮಾದರಿ ಸಂಗ್ರಹ

ರಾಜ್ಯದಲ್ಲಿ 2023-24ರಲ್ಲಿ ಲಕ್ಷ, 2025-25ರಲ್ಲಿ 3.90 ಲಕ್ಷ ಹಾಗೂ 2025-26ರಲ್ಲಿ 2.46 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಸಲಾಗಿದ್ದು, ಇವುಗಳಲ್ಲಿ 9.34 ಲಕ್ಷ ಮಾದರಿಗಳಲ್ಲಿ ರಾಸಾಯನಿಕಗಳು, 7,244 ಮಾದರಿಗಳಲ್ಲಿ ಬ್ಯಾಕ್ಟೀರಿಯಾ ಪತ್ತೆಯಾಗಿದ್ದವು. ಈ ಪೈಕಿ ಕಲುಷಿತ ನೀರು ಎಂದು ಕಂಡು ಬಂದ 49,309 ನೀರಿನ ಮಾದರಿಗಳಿಗೆ ಪರ್ಯಾಯ ಕ್ರಮಗಳನ್ನು ಕೈಗೊಂಡು ನೀರು ಪೂರೈಸಲಾಗಿದೆ ಸಚಿವರು ವಿವರ ನೀಡಿದ್ದಾರೆ.

ರಾಯಚೂರು ಕೃಷಿ ವಿವಿ ಜತೆ ಒಪ್ಪಂದ

ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಬರುವ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲು ರಾಯಚೂರು ಕೃಷಿ ವಿಶ್ವವಿದ್ಯಾಲಯದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಾಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

ಪುಟ ೩➡ ಒಬ್ಬ ರೋಗಿಗೆ ಚುಚ್ಚುಮದ್ದು ನೀಡಲು ವರ್ಷಕ್ಕೆ 5 ಲಕ್ಷ ರೂ. ವೆಚ್ಚವಾಗಲಿದೆ. ಹಿಮೋಫಿಲಿಯಾದಂತಹ ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಬದುಕಿನಲ್ಲಿ ಭರವಸೆ ಮೂಡಿಸಬೇಕು. ಪೋಷಕರು ಮತ್ತು ರೋಗಿಗಳು ಎದೆಗುಂದಬಾರದು ಎಂದರು.

ಪ್ರತಿ ವರ್ಷ 13,940 ಹೊಸ ವೈದ್ಯರು: ರಾಜ್ಯದಿಂದ ಪ್ರತಿ ವರ್ಷ 13,940 ವೈದ್ಯರು ತಯಾರಾಗುತ್ತಿದ್ದಾರೆ. 3 ಸಾವಿರ ವೈದ್ಯರು ಎಂಡಿ ಪದವಿ ಪಡೆಯುತ್ತಿದ್ದಾರೆ. 70 ಮೆಡಿಕಲ್ ಕಾಲೇಜು ಹೊಂದಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮೆಡಿಕಲ್ ಕಾಲೇಜುಗಳಿವೆ. ಸುಮಾರು 1 ಲಕ್ಷ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರತಿ ವರ್ಷ ಸೇವೆಗೆ ಸಜ್ಜಾಗುತ್ತಿದ್ದಾರೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ರಾಜ್ಯದಲ್ಲಿ ಒಟ್ಟು 2,621 ಹಿಮೋಫಿಲಿಯಾ ರೋಗಿಗಳಿದ್ದಾರೆ. ಇವರಿಗಾಗಿ ಸರ್ಕಾರ ಕುಸುಮ ಸಂಜೀವಿನಿ ಯೋಜನೆಯ ಮೂಲಕ ಚಿಕಿತ್ಸೆ ನೆರವು ನೀಡಲು ಸಜ್ಜಾಗಿದ್ದು, ಈ ಯೋಜನೆಗೆ 42.55 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಈ ಪೈಕಿ ಔಷಧ ಕ್ಕಾಗಿ 17 ಕೋಟಿ ರೂ. ಮೀಸಲಿಟ್ಟಿದ್ದು, ಕಡಿಮೆಯಾದಲ್ಲಿ ಇನ್ನೂ 50 ಕೋಟಿ ರೂ. ಮೀಸಲಿಡಲು ಸರ್ಕಾರ ಸಿದ್ಧವಿದೆ ಎಂದರು.

ಹಿಮೋಫಿಲಿಯಾ ಎ ರೋಗಿಗಳಿಗೆ ವಾರ್ಷಿಕವಾಗಿ ಸುಮಾರು 5 ಲಕ್ಷ ರೂ. ವೆಚ್ಚವಾಗುವ ಸಬ್ಕ್ಯುಟೇನಿಯಸ್ ಚುಚ್ಚುಮದ್ದನ್ನು ರಾಜ್ಯ ಸರ್ಕಾರ ಉಚಿತವಾಗಿ ಒದಗಿಸುತ್ತಿದೆ. ಈ ಮೊದಲು ಪದೇಪದೆ ರಕ್ತನಾಳದ ಮೂಲಕ ನೋವಿನ ಚುಚ್ಚುಮದ್ದನ್ನು ಪಡೆಯಬೇಕಾಗಿದ್ದ ರೋಗಿಗಳಿಗೆ ಈಗ ತಿಂಗಳಿಗೊಮ್ಮೆ ಚರ್ಮದ ಅಡಿಯಲ್ಲಿ ಸುಲಭವಾಗಿ ಪಡೆಯಬಹುದಾದ ಚಿಕಿತ್ಸೆ ಲಭ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ, ಹಿಮೋಫಿಲಿಯಾ ರೋಗಿಗಳಿಗಾಗಿ ತಮ್ಮ ವೃತ್ತಿ ಜೀವನ ಮುಡಿಪಾಗಿಟ್ಟು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಸುರೇಶ್ ಹನಗವಾಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೋಶ್ ಫಾರ್ಮಾ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜ್‌ವಿಂದರ್ (ರಾಜಿ) ಮೆಹ್ವಾನ್, ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಇದ್ದರು.

> **ರೋಗನಿರೋಧಕ ಚಿಕಿತ್ಸೆಗೆ ಆದ್ಯತೆ ನೀಡಿರುವುದು ರೋಗಿಗಳ ಜೀವನದಲ್ಲಿ ಪರಿವರ್ತನಾತ್ಮಕ ಹೆಜ್ಜೆಯಾಗಿದೆ. ಸಮಾಜ ಹಾಗೂ ಸರ್ಕಾರ ಹಿಮೋಫಿಲಿಯಾಪೀಡಿತರ ಬೆಳವಣಿಗೆ ಹಾಗೂ ಆರೋಗ್ಯಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು.**
> ■ **ಡಾ. ಸುರೇಶ್ ಹನಗವಾಡಿ, ವೈದ್ಯ**

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

ಪುಟ ೩➡ **ಅತ್ಯಾಚಾರವೆಸಗಲು ಪ್ರಿಯತಮೆಯಿಂದಲೇ ವೇದಿಕೆ!:** ಹಿಂದು ಯುವತಿಯರಿಗೆ ಮನೆಗೆಲಸದ ನೌಕರಿ ನೀಡುವುದಾಗಿ ನಂಬಿಸಿ ಮನೆಗೆ ಕರೆದೊಯ್ದು, ಮಾದಕವಸ್ತು ನೀಡಿ ತನ್ನ ಪ್ರಿಯಕರನಿಂದಲೇ ಅಮ್ರೀನ್ ಅತ್ಯಾಚಾರ ಮಾಡಿಸುತ್ತಿದ್ದಳು. ಮನೆಯಲ್ಲಿ ಪಾರ್ಟಿ ಇತ್ಯಾದಿ ವೇಳೆ ಬಲವಂತದಿಂದ ಅಮಲು ಪದಾರ್ಥ ನೀಡಿ ಅಶ್ಲೀಲ ನೃತ್ಯ ಮಾಡಿಸುತ್ತಿದ್ದರು. ತನ್ನ ಪ್ರಿಯಕರನಿಂದ ಅಥವಾ ಸಹಚರರಿಂದ ಅತ್ಯಾಚಾರ ನಡೆಸುತ್ತಿದ್ದ ಅಮ್ರೀನ್, ವಿಡಿಯೋ ಚಿತ್ರೀಕರಿಸಿ ಇಸ್ಲಾಂಗೆ ಮತಾಂತರ ಆಗುವಂತೆ ಹಿಂದು ಯುವತಿಯರನ್ನು ಬೆದರಿಸುತ್ತಿದ್ದಳು ಎಂದು ಸಂತ್ರಸ್ತ ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಸಂತ್ರಸ್ತೆ ದೂರು, ಎಫ್‌ಐಆರ್: ವಾರದ ಹಿಂದೆ ಛತ್ತೀಸಗಢದಲ್ಲಿ 21 ವರ್ಷದ ಸೌಂದರ್ಯತಜ್ಞೆ ಮತ್ತು 32 ವರ್ಷದ ಭೋಪಾಲ್ ನಿವಾಸಿ ಮಹಿಳೆಯರ ವಿರುದ್ಧ ಪೊಲೀಸರು ತನಿಖೆ ಆರಂಭಿಸಿದಾಗ ಬಲವಂತದ ಮತಾಂತರ ಜಾಲ ಬೆಳಕಿಗೆ ಬಂದಿದೆ. ಇಬ್ಬರೂ ಸಹೋದರಿಯರು ಬಲವಂತದ ಮತಾಂತರ ಜಾಲ ನಡೆಸುತ್ತಿದ್ದರೆಂಬ ವಿಷಯ ಬಯಲಾಗಿದೆ. ಇವರಿಬ್ಬರ ವಿರುದ್ಧ ಸಂತ್ರಸ್ತೆಯೊಬ್ಬರು ದೂರು ನೀಡಲು ಧೈರ್ಯ ತೋರಿಸಿದ್ದರಿಂದ ದೊಡ್ಡ ಜಾಲವೊಂದು ಪತ್ತೆಯಾಗಿದೆ. ಸಂತ್ರಸ್ತೆ ಯುವತಿಯ ದೂರಿನ ಆಧಾರದಲ್ಲಿ ಭೋಪಾಲ್ ಪೊಲೀಸರು, ಮುಸ್ಲಿಂ ಸಹೋದರಿಯರು, 6 ಮಂದಿಯ ವಿರುದ್ಧ ಮಧ್ಯಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಅನ್ವಯ ಧಾರ್ಮಿಕ ಮತಾಂತರ, ಅತ್ಯಾಚಾರ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ: ಪ್ರಕರಣದಲ್ಲಿ ಹಲವು ಆರೋಪಿಗಳಿದ್ದರೂ, ಅಮ್ರೀನ್ ಪ್ರಿಯಕರ ಚಂದನ್ ಮತ್ತು ಪ್ರಮುಖ ಸಹಚರರಾದ ಬಿಲಾಲ್ ಮತ್ತು ಯಾಸಿರ್ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಭೋಪಾಲ್ ನಿವಾಸಿ 21ರ ಹರೆಯದ ಸಂತ್ರಸ್ತೆ, ತನ್ನ ಮೇಲೆ ಅಮ್ರೀನ್ ಸಹಚರ ಯಾಸಿರ್ ಅತ್ಯಾಚಾರ ನಡೆಸಿದ್ದಾನೆ. ತನ್ನನ್ನು ಚಂದನ್ ಮನೆಗೆ ಕರೆದೊಯ್ದ ಅಮ್ರೀನ್ ಅತ್ಯಾಚಾರ ನಡೆಸಲು ಅವಕಾಶ ಮಾಡಿಕೊಟ್ಟಿದ್ದಳು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

ಪುಟ ೩➡ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತರಾದವರ ಹುದ್ದೆಗಳಿಗೆ ನೇಮಕಾತಿಗೆ ಸರ್ಕಾರದ ಅನುಮತಿ ಕೇಳಿದ್ದಾರೆ. ಸರ್ಕಾರ ಅನುಮತಿ ನೀಡಿದೆ; ಒಂದು ವರ್ಷ ಎಂಟು ತಿಂಗಳಾದರೂ ಸರ್ಕಾರ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ. ಪ್ರಕ್ರಿಯೆ ಮುಂದುವರೆಸಲು ಸಹಕಾರ ಕೊಡುತ್ತಿಲ್ಲ ಎಂದು ಟೀಕಿಸಿದರು. ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನಪರಿಷತ್ ಸದಸ್ಯ ಎಸ್.ವಿ. ಸಂಕನೂರು, ಮಾಜಿ ಸಂಸದ ಎಸ್.ಮುನಿಸ್ವಾಮಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಸುದ್ದಿಗೋಷ್ಠಿಯಲ್ಲಿದ್ದರು.



> **ಕಾಂಗ್ರೆಸ್ ಸರ್ಕಾರ ಹಗರಣರಹಿತವಾಗಿ ಖಾಲಿ ಹುದ್ದೆಗಳನ್ನು ತುಂಬಬೇಕು ಎಂದು ಕೆಲಸ ಮಾಡುತ್ತಿದೆ. ಯುವಕರೇ ಧೈರ್ಯವಾಗಿರಿ. ನಾವು ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ಸದ್ಯದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಶೀಘ್ರದಲ್ಲೇ ನಿಮಗೆ ಸಂದೇಶ ನೀಡುತ್ತೇವೆ.**
> ■ **ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ**

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

ಪುಟ ೩➡ ವಿಧಾನ ಪರಿಷತ್‌ನಿಂದ ಭೋಸರಾಜು ಅವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದ್ದು, ಸಂಪುಟ ಪುನರ್ ರಚನೆಯಲ್ಲಿ ಅವರನ್ನು ಉಳಿಸಿಕೊಂಡರೆ ಬೇರೆಯವರಿಗೆ ಅವಕಾಶ ಸಿಗುವುದು ಕಷ್ಟವಾಗಲಿದೆ. ಅಲ್ಲದೆ ಬಿ.ಕೆ. ಹರಿಪ್ರಸಾದ್ ಅವರು ಸಂಪುಟಕ್ಕೆ ಬರುವ ಸಾಧ್ಯತೆ ಇರುವುದರಿಂದ ಪರಿಷತ್ ಇತರ ಸದಸ್ಯರಿಗೆ ಅವಕಾಶ ಸಿಗುವುದು ಸಂದೇಹವಾಗಿದೆ. ವಿಧಾನಸಭೆಯಿಂದ ಆಯ್ಕೆಯಾದ ಶಾಸಕರಲ್ಲೇ ಸಚಿವ ಸ್ಥಾನಕ್ಕೆ ಭಾರೀ ಪೈಪೋಟಿ ನಡೆಯುತ್ತಿರುವಾಗ ಹೈಕಮಾಂಡ್ ಪರಿಷತ್ ಸದಸ್ಯರಿಗೆ ಮಣೆ ಹಾಕುವುದು ಕಷ್ಟವಾಗಲಿದೆ.

ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್

ಪುಟ ೧➡ ಪಾಕ್ ಪ್ರಧಾನಿ ಷರೀಫ್ ಮೃತಪಡುವಷ್ಟು ತೀವ್ರತೆಯ ದಾಳಿಯನ್ನು ಅಥವಾ ಆಪರೇಷನ್ ಸಿಂದೂರ ಭಾರತ ನಡೆಸಿತ್ತೆಂಬ ವಿಷಯವನ್ನು ಟ್ರಂಪ್ ಒಪ್ಪಿಕೊಂಡಿದ್ದಾರೆ.

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

ಪುಟ ೧➡ ಇದರಿಂದ ತೊಂದರೆಯಾಗುತ್ತಿದೆ ಎಂದು ಆಕ್ಷೇಪಿಸಿದ್ದಾರೆ. ಅಕ್ಕಪಕ್ಕದ ನಿವಾಸಿಗಳಿಗೆ ಶಬ್ದದಿಂದ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಅರ್ಚಕರಿಗೆ ಸೂಚನೆ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

ಪುಟ ೧➡ ಬಸ್ ಸಹಿತ ನಿರ್ವಾಹಕ ಕೊಳ್ಳೇಗಾಲಕ್ಕೆ ವಾಪಸ್ ಬಂದು ಪೊಲೀಸ್ ಠಾಣೆಗೆ ದೂರು ನೀಡಿ, ಆಸ್ಪತ್ರೆಗೆ ದಾಖಲಾಗಿದ್ದು, ಇಬ್ಬರು ಪ್ರಯಾಣಿಕರಾದ ಫಯಾಜ್ ಮತ್ತು ಮಹಮದ್ ಶಾರನ್ ನಮ್ಮ ಮೇಲೆ ಹಲ್ಲೆ ಮಾಡಿ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ದೂರು ನೀಡಿದ್ದಾರೆ. ಇದುವರೆಗೆ ಇವರ ವಿರುದ್ಧ ಪ್ರಕರಣ ದಾಖಲಾಗಿಲ್ಲ ಎಂಬ ಮಾಹಿತಿ ಇದೆ. ಈ ಇಬ್ಬರು ಪ್ರಯಾಣಿಕರು ಕಡ್ಲೆಕಾಯಿ ತಿಂದು ಸಿಪ್ಪೆಯನ್ನು ಬಸ್‌ನ ಒಳಗಡೆಯೇ ಇಡುತ್ತಿದ್ದರು ಎನ್ನಲಾಗಿದೆ. ಇದನ್ನು ನೋಡಿದ ನಿರ್ವಾಹಕ ಮುನಿಮಾದಯ್ಯ ಸಿಪ್ಪೆ ಹೊರಗಡೆ ಹಾಕಿ ಎಂದು ಹೇಳಿದ್ದಕ್ಕೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವ ಫೋಟೊಗಳು, ಪ್ರಯಾಣಿಕರು ನಿರ್ವಾಹಕನ ಕುತ್ತಿಗೆಗೆ ಕೈಹಾಕಿರುವುದು, ತಳ್ಳಾಟ, ನೂಕಾಟಗಳ ಕುರಿತು ವೈರಲ್ ಆಗಿವೆ.

ಘಟನೆ ವಿವರ: ಕೊಳ್ಳೇಗಾಲದಿಂದ ಕನಕಪುರ ಮಾರ್ಗವಾಗಿ ಬೆಂಗಳೂರು ಕಡೆಗೆ ಹೋಗುತ್ತಿರುವಾಗ ಇಲ್ಲಿನ ಹೊರವಲಯದ ಪಾಪನಕೆರೆ ಬಳಿ ಬಸ್ಸಿನಲ್ಲಿ ಕಡಲೆಕಾಯಿ ತಿಂದು ಸಿಪ್ಪೆಯನ್ನು ಬಸ್ಸಿನಲ್ಲಿ ಹಾಕುತ್ತಿದ್ದ ವೇಳೆ ಸಿಪ್ಪೆಯನ್ನು ಹೊರಗೆ ಹಾಕುವಂತೆ ಹೇಳಿದ್ದಕ್ಕೆ ಕಂಡಕ್ಟರ್ ಹಾಗೂ ಪ್ರಯಾಣಿಕರು ತಂದೆ ಮಗ ನಡುವೆ ಗಲಾಟೆ ಉಂಟಾಗಿದೆ. ಇದರಲ್ಲಿ ಕಂಡಕ್ಟರ್ ತಲೆಗೆ ಪೆಟ್ಟಾಗಿದೆ. ಫಯಾಜ್, ಅಹಮ್ಮದ್ ಹಾಗೂ ಮಹಮ್ಮದ್ ಶಾರನ್ ಸಹ ನಿರ್ವಾಹಕರು ಹಲ್ಲೆ ನಡೆಸಿದ್ದಾರೆಂದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

ಪುಟ ೧➡ ಇದಕ್ಕೆ ಹೆಚ್ಚುವರಿ 100 ರೂ. ನೀಡುವಂತೆ ವಿಕ್ರಮ್ ಚೌಧರಿ ಕೇಳಿದ್ದರು. ಇದರಿಂದ ಸಿಟ್ಟಿಗೆದ್ದ ಆರೋಪಿ ವಿಕ್ರಮ್ ಚೌಧರಿ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿದ್ದಾನೆ ಎಂದು ತಿಳಿದುಬಂದಿದೆ. ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಗಾಯಾಳು ವಿಕ್ರಮ್ ಚೌಧರಿ ಆರೋಗ್ಯ ವಿಚಾರಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸಿ ಶೀಘ್ರದಲ್ಲಿ ಆರೋಪಿಯನ್ನು ಬಂಧಿಸಲಾಗುವುದು. ಮಾದಕದ್ರವ್ಯ ಸೇವಿಸಿ ದಾಳಿ ನಡೆಸಿರುವ ಶಂಕೆ ವ್ಯಕ್ತವಾಗಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ತನಿಖೆಯ ನಂತರ ಸತ್ಯಾಂಶ ತಿಳಿಯಲಿದೆ ಎಂದು ಹೇಳಿದ್ದಾರೆ. ಘಟನೆಗೆ ಹಿಂದೂಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ವಿಷಯ ತಿಳಿಯುತ್ತಿದ್ದಂತೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಸ್ಪತ್ರೆಯ ಮುಂದೆ ಜಮಾಯಿಸಿದ್ದರು.

ಜಿಲ್ಲಾಸ್ಪತ್ರೆಯ ಮುಂದೆ ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಘಟನೆಯನ್ನು ಖಂಡಿಸಿ ರಸ್ತೆತಡೆ ನಡೆಸಿದರು. ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ಹೊರ ಹಾಕಿದರು. ಕೂಡಲೇ ಹಲ್ಲೆ ಆರೋಪಿಯನ್ನು ಬಂಧಿಸಬೇಕು. ತಪ್ಪಿದಲ್ಲಿ ಚಿತ್ರದುರ್ಗ ಬಂದ್ ಕರೆ ನೀಡುವುದಾಗಿ ಎಚ್ಚರಿಸಿದ್ದಾರೆ. ಪ್ರತಿಭಟನೆಯಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರಾದ ಕೇಶವ್, ರುದ್ರೇಶ್, ದೀಪಕ್‌ರಾಜ್, ಶ್ರೀನಾಥ್, ಮುರಳೀಧರ್, ಬಿಜೆಪಿ ಯುವ ಮುಖಂಡ ಅನಿತ್ ಕುಮಾರ್, ಬಿಜೆಪಿ ಮಂಡಲ ಅಧ್ಯಕ್ಷ ನಾಗರಾಜ್ ಹಾಗೂ ಶ್ರೀರಾಮಸೇನೆ ಮುಖ್ಯಸ್ಥ ಸುರೇಶ್‌ಬಾಬು ಭಾಗವಹಿಸಿದ್ದರು.

ಹಲ್ಲೆ ಆರೋಪಿ ಸೆರೆ: ನಗರದ ಸಂತೇಹೊಂಡದ ಬಳಿಯ ಚೌಧರಿ ಮೊಬೈಲ್ ಶಾಪ್ ಮಾಲೀಕ ವಿಕ್ರಮ್ ಚೌಧರಿ ಅವರ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ-ಮುಂಬೈ ನಡುವೆ ವಿಮಾನ ಹಾರಾಟ ಪುನರಾರಂಭ

ಬೆಳಗಾವಿ: ಬೆಳಗಾವಿ-ಮುಂಬೈ ನಡುವೆ ಇಂಡಿಗೋ ಸಂಸ್ಥೆಯು ನೂತನ ವಿಮಾನಯಾನ ಸೇವೆಯನ್ನು ಪ್ರಾರಂಭ ಮಾಡಲಿದೆ ಎಂದು ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಕೆಲವು ತಿಂಗಳ ಹಿಂದೆಯಷ್ಟೆ ಸ್ಟಾರ್ ಏರ್ ಸಂಸ್ಥೆಯು ಬೆಳಗಾವಿ-ಮುಂಬೈ ನಡುವೆ ವಿಮಾನಯಾನ ಸೇವೆಯನ್ನು ರದ್ದುಗೊಳಿಸಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಸದರು ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರನ್ನು ಬಜೆಟ್ ಅಧಿವೇಶನ ನಡೆದ ಸಮಯದಲ್ಲಿ ಭೇಟಿ ಮಾಡಿ ವಿನಂತಿಸಿದ್ದು ಇಲ್ಲಿ ಸ್ಮರಣೀಯ. ಅದಲ್ಲದೆ, ಇಂಡಿಗೋ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಹ ನವದೆಹಲಿಯಲ್ಲಿ ಸಭೆ ನಡೆಸಿ, ಬೆಳಗಾವಿಯಿಂದ ಮುಂಬೈ, ಚೆನ್ನೈ, ಹಾಗೂ ಪುಣೆ ಮಾರ್ಗದಲ್ಲಿ ವಿಮಾನಯಾನ ಸೇವೆಯನ್ನು ಒದಗಿಸಲು ಕೋರಿದ್ದರು. ಇದಕ್ಕನುಗುಣವಾಗಿ 29ನೇ ಮಾರ್ಚ್ 2026ರಿಂದ ಬೆಳಗಾವಿ-ನವಿಮುಂಬೈ ನಡುವೆ ಇಂಡಿಗೋ ವಿಮಾನ ಹಾರಾಟವನ್ನು ಪ್ರಾರಂಭಿಸಲಿದೆ. ಇದು ನವಿ ಮುಂಬೈಯನ್ನು ಬೆಳಗ್ಗೆ 10:20ಕ್ಕೆ ಬಿಟ್ಟು ಬೆಳಗಾವಿಯನ್ನು 11:35ಕ್ಕೆ ತಲುಪಿ, ನಂತರ ಬೆಳಗಾವಿಯನ್ನು ಸಂಜೆ 17:35ಕ್ಕೆ ಬಿಟ್ಟು ನವಿಮುಂಬೈಯನ್ನು 18.45ಕ್ಕೆ ತಲುಪುವುದು. ವಿಮಾನಯಾನ ಸೇವೆ ಪ್ರಾರಂಭಕ್ಕೆ ಸಹಕರಿಸಿದ ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರಿಗೆ ಮತ್ತು ಇಂಡಿಗೋ ಸಂಸ್ಥೆಯ ಅಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸುವುದಾಗಿ ಹೇಳಿದ್ದಾರೆ.



ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

ಪುಟ ೩➡ ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕಾಡಿನ ಅಂಚಿನಲ್ಲಿ ದೊಡ್ಡ ಪ್ರಮಾಣದಲ್ಲಿ ಬ್ಯಾರಿಕೇಡ್ ಅಳವಡಿಸುವ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕಾರ್ಕಳದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಗಾಂಜಾ ಮತ್ತು ಡ್ರಗ್ಸ್ ಹಾವಳಿ ಹೆಚ್ಚುತ್ತಿರುವ ಕುರಿತು ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಘಟನೆಗಳನ್ನು ಉಲ್ಲೇಖಿಸಿದರು. ಡ್ರಗ್ಸ್ ಸಮಸ್ಯೆಯನ್ನು ಸಂಪೂರ್ಣ ಶೂನ್ಯ ಮಟ್ಟಕ್ಕೆ ತರುವುದು ಸರ್ಕಾರದ ಗುರಿಯಾಗಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ಉಡುಪಿಯ ವಿಶ್ವವಿದ್ಯಾಲಯವೊಂದರಲ್ಲಿ ಎಬಿವಿಪಿ ಕಾರ್ಯಕರ್ತರಿಂದ ನಡೆದ ದಾಳಿ ಪ್ರಕರಣದ ಕುರಿತು ಮಾತನಾಡಿದ ಸಿಎಂ, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಲು ಅವಕಾಶ ನೀಡುವುದಿಲ್ಲ ಎಂದರು. ಎಬಿವಿಪಿ ಅಥವಾ ಬೇರೆ ಯಾವುದೇ ಸಂಘಟನೆಗಳಾದರೂ ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ವಿನಾಕಾರಣ ಗಲಾಟೆ ಸೃಷ್ಟಿಸುವವರನ್ನು ಸಹಿಸಲಾಗುವುದಿಲ್ಲ ಎಂದರು.

ಸುರಂಗ ಮಾರ್ಗ: ಆಗುಂಬೆ ಸುರಂಗ ಮಾರ್ಗ ಯೋಜನೆ ಕುರಿತು ಮಾತನಾಡಿದ ಸಿಎಂ, ಈ ಯೋಜನೆಯನ್ನು ಸರ್ಕಾರ ಜಾರಿಗೆ ತರುವುದಾಗಿ ತಿಳಿಸಿದರು. ಪರಿಸರವಾದಿಗಳ ಆತಂಕಗಳನ್ನು ಮನವರಿಕೆ ಮಾಡಿಕೊಂಡು ಅವರೊಂದಿಗೆ ಸಂವಾದ ನಡೆಸಲಾಗುವುದು. ಅವರ ವಿರೋಧದ ಕಾರಣಗಳನ್ನು ತಿಳಿದು ಸಮನ್ವಯದಿಂದ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿದರು. ಪರಶುರಾಮ ಥೀಮ್ ಪಾರ್ಕ್ ವಿವಾದಕ್ಕೆ ಸಂಬಂಧಿಸಿ, ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರಥಮ ಬಾರಿ ಶಾಸಕರಾದವರು ಮಂತ್ರಿಯಾಗಬೇಕು ಎನ್ನುವ ಆಸೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆಸೆ ವ್ಯಕ್ತಪಡಿಸುವುದು ತಪ್ಪಲ್ಲ. ಆದರೆ ಮೊದಲ ಬಾರಿ ಶಾಸಕರಿಗೆ ಮಂತ್ರಿ ಸ್ಥಾನ ನೀಡಬಾರದು ಎಂಬ ನಿರ್ಣಯ ಕೈಗೊಂಡಿದ್ದೇವೆ. ಹೈಕಮಾಂಡ್ ಸೂಚನೆಗಳನ್ನು ಪಾಲಿಸಲಾಗುವುದು ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ ಸಿಎಂ, ಯಾವುದೇ ಆಸ್ಪತ್ರೆಯಲ್ಲಿ ಸಮಸ್ಯೆ ಇಲ್ಲ ಎಂದರು. ಕಾರ್ಕಳ ನರ್ಸಿಂಗ್ ಕಾಲೇಜು ಅವಸ್ಥೆಯ ಬಗ್ಗೆ ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳ ಅಹವಾಲನ್ನು ಸ್ವೀಕರಿಸಿ, ಬಗೆಹರಿಸುವ ಬಗ್ಗೆ ಭರವಸೆ ನೀಡಿದರು.

ಗ್ಯಾರಂಟಿ ಭಾರವಾಗಿಲ್ಲ

ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿವೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ವರ್ಷಕ್ಕೆ ಸುಮಾರು 52 ಸಾವಿರ ಕೋಟಿಗೂ ಹೆಚ್ಚು ಹಣ ಬೇಕಾಗುತ್ತದೆ. ಅದನ್ನು ಭಾರವೆಂದು ಹೇಳಿರಬಹುದು. ಆದರೆ ಸರ್ಕಾರ ಅಭಿವೃದ್ಧಿ ಹಾಗೂ ಗ್ಯಾರಂಟಿ ಯೋಜನೆ ಎರಡನ್ನೂ ಸಮಾನವಾಗಿ ಮುಂದುವರಿಸುತ್ತಿದೆ ಎಂದು ಸ್ಪಷ್ಟಪಡಿಸಿದರು.

ಹುದ್ದೆ ಭರ್ತಿ ಶೀಘ್ರ

ಪುಟ ೩➡ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬರುವ ಮುನ್ನ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಆದರೆ,ಹನ್ನೊಂದು ವರ್ಷವಾದರೂ ಭರವಸೆ ಈಡೇರಿಲ್ಲ. ಈ ಹಿಂದೆ ಯುವಕರು ಉದ್ಯೋಗ ವಿಚಾರವಾಗಿ ಕೇಳಿದಾಗ 'ಸರಕಾರಿ ಉದ್ಯೋಗಕ್ಕಾಗಿ ಕಾಯಬೇಡಿ, ಸ್ವಂತ ಉದ್ಯೋಗ ಮಾಡಿ, ಪಕೋಡ ಮಾರಿರಿ' ಎಂದು ಹೇಳಿದ ಮಾತನ್ನೂ ನೆನಪಿಸಿ, ಕೇಂದ್ರ ಸರ್ಕಾರದ ವಿರುದ್ಧವೂ ತೀಕ್ಷ್ಣವಾಗಿ ಟೀಕಿಸಿದರು. ಒಂದು ದೊಡ್ಡ ಪ್ರಮಾಣದ ಉದ್ಯೋಗ ಭರ್ತಿ ಮಾಡದ ಬಿಜೆಪಿ, ನಮ್ಮನ್ನು ಪ್ರಶ್ನಿಸುವ ನೈತಿಕತೆ ಏನು ಎಂದು ತರಾಟೆಗೆ ತೆಗೆದುಕೊಂಡರು. ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿದೆ ಎಂದು ಕೆಲವರು ಪ್ರತಿಭಟನೆ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಸಮಸ್ಯೆಗೆ ಸ್ಪಂದಿಸುವುದೇ ಶಿಕ್ಷಣದ ಉದ್ದೇಶ: ಸಿಎಂ

ಕಾರ್ಕಳ: ವೈಚಾರಿಕ ಮತ್ತು ವೈಜ್ಞಾನಿಕತೆಯ ಶಿಕ್ಷಣ ಇಂದಿನ ಅಗತ್ಯವಾಗಿದ್ದು, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದೇ ಅದರ ಮೂಲ ಉದ್ದೇಶವಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಬುಧವಾರ ಇಲ್ಲಿ ಕಿಸಾನ್ ಸಭಾ ಸಭಾಂಗಣದ ಉದ್ಘಾಟಿಸಿ, ಟ್ರಸ್ಟ್ ನ ಮಹಾತ್ಮ ಗಾಂಧಿ ಪ್ರೌಢ ಶಾಲೆಯ35 ನೇ ವರ್ಷದ ಸಮಾರಂಭವನ್ನು ಉದ್ಘಾಟಿಸಿದ ನಂತರ ಮಾತನಾಡಿದರು. ಸಮಾನ ಅವಕಾಶಗಳನ್ನು ಕೊಡುವುದು ಶಿಕ್ಷಣ ಮೂಲ ಉದ್ದೇಶವಾಗಬೇಕು. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸಿಗದೆ, ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ತಿಳಿಸಿದ್ದರು ಎಂದರು.

ನಮ್ಮ ಸರ್ಕಾರ ನುಡಿದಂತೆ ನಡೆಯುತ್ತದೆ. ಕಾರ್ಕಾಳ ಜನತೆಯ ಬೇಡಿಕೆಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು. 2013ರಲ್ಲಿ ಮೊದಲ ಬಾರಿಗೆ ಸಿಎಂಯಾಗಿದ್ದಾಗ ನೀಡಲಾಗಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. 2023ರಲ್ಲಿ ಪುನ: ಅಧಿಕಾರಕ್ಕೆ ಬಂದು, 590 ಭರವಸೆಗಳನ್ನು ಕಳೆದ ಎರಡೂವರೆ ವರ್ಷದಲ್ಲಿ 243 ಭರವಸೆಗಳನ್ನು ಈಡೇರಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 52000 ಕೋ.ರೂ.ಗಳಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದ್ದು, ಎಲ್ಲ ಜಾತಿಧರ್ಮಗಳ ಬಡವರಿಗೆ ಗ್ಯಾರಂಟಿಯ ಸವಲತ್ತುಗಳನ್ನು ನೀಡಲಾಗುತ್ತಿದೆ. ಎಲ್ಲ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ, ಇದುವರೆಗೆ 1.20 ಲ.ಕೋ.ರೂ.ಗಳನ್ನು ಗ್ಯಾರಂಟಿಗಳಿಗೆ ನೀಡಲಾಗಿದೆ ಎಂದರು.

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು: ಸಚಿವ

ಬೆಂಗಳೂರು: ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಕಳೆದ ವರ್ಷ ನ.8ರಂದು ಸಿಎಂ ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ



ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆ ಆಧರಿಸಿ ಕಬ್ಬು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿ ದ್ದಾರೆ. ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರತಿ ಟನ್‌ಗೆ 50 ರೂ.ಗಳಂತೆ ಜಮಾ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ. 2025–26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆ ಗಳು ಕಬ್ಬು ನುರಿಸಿದ್ದು, 29 ಕಾರ್ಖಾನೆಗಳಲ್ಲಿ ಕಬ್ಬು ನುರಿಸುವಿಕೆ ಮುಕ್ತಾಯವಾಗಿದೆ. ಇದುವರೆಗೆ 521 ಲಕ್ಷ ಮೆಟ್ರಿಕ್ ಕಬ್ಬು ನುರಿಸಲಾಗಿದ್ದು, ಈ ಹಂಗಾಮಿನಲ್ಲಿ ಸುಮಾರು 600 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ನಿರೀಕ್ಷೆ ಇದೆ. ಮಾರ್ಚ್ ಮೊದಲ ವಾರದ ವೇಳೆಗೆ ಪ್ರಸಕ್ತ ಹಂಗಾಮಿನ ಕಬ್ಬು ನುರಿಸುವಿಕೆ ಅಂತ್ಯವಾಗಲಿದ್ದು, 600 ಲಕ್ಷ ಮೆಟ್ರಿಕ್ ಟನ್ ನುರಿಸುವ ಅಂದಾಜು ಆಧರಿಸಿ 300 ಕೋಟಿ ರೂ. ಆರ್ಥಿಕ ನೆರವು ಬಿಡುಗಡೆ ಮಾಡಲಾಗಿದೆ ಮಾಹಿತಿ ನೀಡಿದ್ದಾರೆ.

ಮಾರಿಕಾಂಬಾ ರಥೋತ್ಸವ



ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರೆ ಅಂಗವಾಗಿ ಬುಧವಾರ ಲಕ್ಷಾಂತರ ಭಕ್ತರ ಹರ್ಷೋದ್ಗಾರ, ಜೈಕಾರದೊಂದಿಗೆ ಅತ್ಯಂತ ಸಡಗರ ಸಂಭ್ರಮದಿಂದ ರಥೋತ್ಸವ ನಡೆಯಿತು.

ಬ್ರಿಕ್ಸ್ ರಾಷ್ಟ್ರಗಳು ಸಹಕರಿಸಲಿ

ಬೆಂಗಳೂರು: ಜಾಗತಿಕ ಅಭಿವೃದ್ಧಿಯನ್ನು ಮುನ್ನಡೆಸುವ ಪ್ರಮುಖ ಒಕ್ಕೂಟವಾಗಿರುವ ಬ್ರಿಕ್ಸ್ ರಾಷ್ಟ್ರಗಳು ಕ್ವಾಂಟಮ್ ತಂತ್ರಜ್ಞಾನದ ಅಭಿವೃದ್ಧಿಗೆ ಪರಸ್ಪರ ಸಹಕಾರಕ್ಕೆ



ಮುಂದಾಗಬೇಕು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಕರೆ ನೀಡಿದರು.

ವಿಧಾನಸೌಧದಲ್ಲಿ ಬ್ರೆಜಿಲ್‌ನ ಸಾರ್ವಜನಿಕ ಸೇವೆಗಳ ನಿರ್ವಹಣೆ ಮತ್ತು ನಾವೀನ್ಯತೆ ಸಚಿವೆ ಎಸ್ತರ್ ಡ್ವೆಕ್ ಅವರ ನೇತೃತ್ವದ ಬ್ರೆಜಿಲ್ ದೇಶದ ಉನ್ನತ ಮಟ್ಟದ ನಿಯೋಗದೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಆಸಿಯಾನ್ ನಂತಹ ಇತರ ಅಂತಾರಾಷ್ಟ್ರೀಯ ಒಕ್ಕೂಟಗಳು ಈಗಾಗಲೇ ಕ್ವಾಂಟಮ್ ಶೃಂಗಸಭೆಗಳನ್ನು ಆಯೋಜಿಸುತ್ತಿವೆ. ಬ್ರಿಕ್ಸ್ ಸದಸ್ಯರಾಗಿ ನಾವು ಕೃಷಿ, ಔಷಧ ಸಂಶೋಧನೆ ಜಲಸಂಪನ್ಮೂಲ ನಿರ್ವಹಣೆ, ಹವಾಮಾನ ಮುನ್ಸೂಚನೆ ಮತ್ತು ಪ್ರವಾಹ ನಿರ್ವಹಣೆಯನ್ನು ಸುಧಾರಿಸಲು ಕ್ವಾಂಟಮ್ ತಂತ್ರಜ್ಞಾನವನ್ನು ಬಳಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಬೇಕು. ಆ ಮೂಲಕ ನಮ್ಮ ಸಮಸ್ಯೆಗಳನ್ನು ಜಂಟಿಯಾಗಿ ಬಗೆಹರಿಸಿಕೊಂಡು ದೇಶದ ಅಭಿವೃದ್ಧಿಗೆ ಮುಂದಾಗಬೇಕಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದ ಪ್ರಮುಖ ಸಾಧನೆಗಳನ್ನು ವಿವರಿಸಿದ ಸಚಿವರು, ಕರ್ನಾಟಕ ರಾಜ್ಯ ಈಗಾಗಲೇ ದೇಶದ ಮೊಟ್ಟಮೊದಲ, ಸ್ಥಳೀಯವಾಗಿ ನಿರ್ಮಿಸಲಾದ ವಾಣಿಜ್ಯ ಕ್ವಾಂಟಮ್ ಕಂಪ್ಯೂಟರ್ ಹೊಂದಿದ್ದೇವೆ. ರಾಜ್ಯದ ಮಹತ್ವಾಕಾಂಕ್ಷೆಯ ಗುರಿಗಳನ್ನು ವಿವರಿಸಿದ ಅವರು, 100 ಮಿಲಿಯನ್ ಯುಎಸ್ ಡಾಲರ್ ಮೊತ್ತದ ಕ್ವಾಂಟಮ್ ಇನ್ನೋವೇಶನ್ ಫಂಡ್ ಘೋಷಣೆ ಮತ್ತು ಕ್ವಾಂಟಮ್ ಸಿಟಿ ಅಭಿವೃದ್ಧಿಯೊಂದಿಗೆ ಕರ್ನಾಟಕವು ದೇಶಕ್ಕೇ ಮಾದರಿಯಾಗಿದೆ ಎಂದರು. ಸೋಮವಾರವಷ್ಟೆ ಬೊಲಿವಿಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಉಪಸಚಿವ ಒಮರ್ ಅಲ್ಫೆಡ್ರೊ ವೆನಲೋಜಾ ಎಸ್ಕಲೇರಾ ಅವರ ನೇತೃತ್ವದ ನಿಯೋಗವು, ಕಾರ್ಯತಂತ್ರದ ಸಹಕಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಸಚಿವ ಎನ್.ಎಸ್.ಭೋಸರಾಜು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿತು.

ಕಿರುಸುದ್ದಿ

ಸಂಕೇತ್ ಕುಟುಂಬಕ್ಕೆ ಒಂದು ಕೋಟಿ ಪರಿಹಾರ ನೀಡಿ

ಶಿವಮೊಗ್ಗ: ಊರಗಡೂರಿನಲ್ಲಿ ಹತ್ಯೆಯಾದ ಬಾಲಕ ಸಂಕೇತ್ ನಿವಾಸಕ್ಕೆ ಸಂಸದ ಬಿ.ವೈ. ರಾಘವೇಂದ್ರ ಬುಧವಾರ ಭೇಟಿ ನೀಡಿ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ 1 ಲಕ್ಷ ರೂ. ನಗದು ನೀಡಿದರು. ನಂತರ ಮಾಧ್ಯಮದವರ ಜೊತೆ ಮಾತನಾಡಿದ ಸಂಸದ ರಾಘವೇಂದ್ರ, ಮೃತ ಕುಟುಂಬಕ್ಕೆ ಠೇವಣಿಯಾಗಿ ಒಂದು ಕೋಟಿ ರೂ. ನೀಡಬೇಕು. ಕುಟುಂಬ ಮತ್ತು ಜೀವನ ನಿರ್ವಹಣೆಗೂ ಆಧಾರವಾಗಬೇಕು. ಮೃತ ಸಂಕೇತ್ ಅವರ ಏರಿಯಾದಲ್ಲಿ ಭಯದ ವಾತಾವರಣವಿದೆ. ಮನೆ ಮುಂದೆ ರಂಗೋಲಿ ಹಾಕಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಸ್ಮಶಾನ ಮೌನವಾಗಿದೆ. ಎಲ್ಲೋ ಕುಳಿತುಕೊಂಡು ಸಾಂತ್ವನ ಹೇಳಿದರೆ ಸಾಲದು. ಸರ್ಕಾರ ಜವಾಬ್ದಾರಿತನ ಮೆರೆಯಬೇಕು. ಇಂತಹ ಘಟನೆಯನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು. ಮಕ್ಕಳ ನಡುವಿನ ಜಗಳ ಬಿಡಿಸಲು ಹೋದ ಬಾಲಕನ ಹತ್ಯೆಯಾಗಿದೆ. ಇನ್ನೂ ಎಷ್ಟು ಜನರ ಹಿಂದೂಗಳ ಹತ್ಯೆ ನಡೆಯಬೇಕು ಎಂದು ಪ್ರಶ್ನಿಸಿದರು. ಸಣ್ಣ ಹುಡುಗರನ್ನು ಮುಂದಿಟ್ಟುಕೊಂಡು ಹಿಂದು ಸಮಾಜದ ಮೇಲೆ ದಾಳಿ ನಡೆಯುತ್ತಿದೆಯಾ? ಎಂಬ ಅನುಮಾನ ಕಾಡುತ್ತಿದೆ. ಇತ್ತೀಚೆಗೆ ಸೂಳೆಬೈಲು–ಮತ್ತೂರು ರಸ್ತೆಯಲ್ಲಿ ಅಪ್ರಾಪ್ತ ಬಾಲಕರು ಬೈಕ್ ಚಲಾಯಿಸುವಾಗ ಕೋಲು ತೆಗೆದುಕೊಂಡು ಹೊಡೆದುಕೊಂಡು ಹೋಗಿದ್ದಾರೆ. ಈ ಪ್ರಕರಣ ಎಫ್‌ಐಆರ್ ದಾಖಲಾಗಿದೆ. ಶಿರಾಳಕೊಪ್ಪದಲ್ಲಿ ಹಿಂದೂ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿದೆ. ಹೀಗೆ ಅಪ್ರಾಪ್ತರನ್ನು ಮುಂದೆ ಇಟ್ಟುಕೊಂಡು ಹತ್ಯೆಗೆ ಮತಾಂಧರು ಮುಂದಾಗಿರಬಹುದೇ ಎಂಬ ಅನುಮಾನ ಇದೆ ಎಂದರು.

ಇಂದು ಹಿಂದುಗಳಿಂದ ಪ್ರತಿಭಟನೆ



ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ನಗರದ ಪಂಕಾ ಮಸೀದಿ ಬಳಿ ನಡೆದ ಕಲ್ಲು ತೂರಾಟ ಘಟನೆಯನ್ನು ಖಂಡಿಸಿ, ಘಟನೆ ನಡೆದ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರ ಮೇಲೆ ಪ್ರಕರಣ ದಾಖಲಿಸಬೇಕು. ಮಸೀದಿಯ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಹಮ್ಮಿಕೊಂಡಿರುವ ಹಿಂದುಗಳ ಹೋರಾಟವನ್ನು ಬಾಗಲಕೋಟೆಯ ಬದಲಾಗಿ ಫೆ.26ರಂದು ನವನಗರದ ಜಿಲ್ಲಾ ಆಡಳಿತ ಭವನದ ಎದುರಿಗೆ ಹಮ್ಮಿಕೊಳ್ಳಲಾಗಿದೆ. ಬಂದೋಬಸ್ತ್‌ಗಾಗಿ ಜಿಲ್ಲಾ ಪೊಲೀಸ್ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಎಸ್ಪಿ, ಹೆಚ್ಚುವರಿ ಎಸ್ಪಿ ಶ್ರೇಣಿಯ ಅಧಿಕಾರಿಗಳು, 12 ಡಿವೈಎಸ್‌ಪಿಗಳು, 32 ಸಿಪಿಐ, 75 ಪಿಎಸ್‌ಐ ಮತ್ತು 1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಹಳೆ ಬಾಗಲಕೋಟೆಯಲ್ಲಿ ಲಾಕ್‌ಡೌನ್ ವಾತಾವರಣ: ಹಿಂದು ಸಮಾಜದವರಿಂದ ಫೆ.26ರಂದು ನಗರದಲ್ಲಿ ಹೋರಾಟ ಹಮ್ಮಿಕೊಂಡಿದ್ದರ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು, ಕೆಲಸಕ್ಕೆ ವಾಹನಗಳನ್ನು ತೆಗೆದುಕೊಂಡು ಹೋಗುವವರಿಗೆ ಬ್ಯಾರಿಕೇಡ್ ರಸ್ತೆಯಲ್ಲಿ ಹಾಕಿ ಬಂದ್ ಮಾಡಿದ್ದರಿಂದ ತೊಂದರೆಯಾಗುತ್ತಿದ್ದಂತೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಒಂದೊಂದು ಬ್ಯಾರಿಕೇಡ್ ರಸ್ತೆಯ ಬಳಿ ಸರಿಸಿ ಜನರಿಗೆ ರಸ್ತೆ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಯ

ಉದ್ಯೋಗ ಭರ್ತಿಗೆ ಕ್ರಮ

ಬೆಂಗಳೂರು: ನೇಮಕಾತಿಗೆ ಸಂಬಂಧಿಸಿದಂತೆ ಕೆಪಿಎಸ್‌ಸಿ ಸೇರಿದಂತೆ ಬೇರೆ ಸಂಸ್ಥೆಗಳಿಗೆ ಹುದ್ದೆ ಭರ್ತಿಯ ಜವಾಬ್ದಾರಿ ನೀಡಿದ್ದೇವೆ. ಶಿಕ್ಷಕರ ಹುದ್ದೆ, ಆರೋಗ್ಯ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಒಳಮೀಸಲಾತಿ ವಿಚಾರಕ್ಕೆ



ಒಂದಷ್ಟು ಅಡಚಣೆಗಳು ಬರುತ್ತಿದೆ. ನಿರುದ್ಯೋಗಿ ಯುವಕರಿಗೆ ಶಕ್ತಿ ಬರಲಿ ಎಂದೇ ಯುವನಿಧಿ ಯೋಜನೆ ಜಾರಿಗೆ ತಂದಿದ್ದು, ಹುದ್ದೆಗಳನ್ನು ಭರ್ತಿ ಮಾಡಿ ದ್ದೇವೆ, ಮಾಡುತ್ತೇವೆ, ಇದಕ್ಕೆ ಬದ್ಧವಾಗಿದ್ದೇವೆ ಎಂದು ಡಿಸಿಎಂ ಶಿವಕುಮಾರ್ ಅಭಯ ನೀಡಿದರು.

ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಗಲಿಲ್ಲ. ಅವರ ಸಮಯದಲ್ಲಿ ಬಹಳಷ್ಟು ಹಗರಣಗಳಾದವು. ನಮಗೆ ಯುವಕರ ನೋವು ಅರ್ಥವಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಇದು ನಮ್ಮ ಆದ್ಯತೆ ಎಂದು ಹೇಳಿದರು.

ಮೆಟ್ರೋ ವಿಸ್ತರಣೆ ಸರ್ಕಾರದ ಉದ್ದೇಶಗಳಲ್ಲಿ ಒಂದು

ಮೆಟ್ರೋ ಜಾಲವನ್ನು 2027ರ ಹೊತ್ತಿಗೆ 175 ಕಿಲೋ ಮೀಟರ್‌ಗೆ ವಿಸ್ತರಿಸಲು ಸರ್ವೇ ಮಾಡಿಸುತ್ತಿದ್ದೇವೆ. ಮೆಟ್ರೋ ವಿಚಾರವಾಗಿ ನೀಡಿದ ಭರವಸೆಗಳನ್ನು ಈಡೇರಿಸುತ್ತೇವೆ. ಡಬಲ್ ಡೆಕ್ಕರ್ ವಿಚಾರದಲ್ಲಿ ಸಣ್ಣ ಸ್ಪಷ್ಟನೆ ಕೇಳುತ್ತಿರುವ ಕಾರಣಕ್ಕೆ ಸಧ್ಯದಲ್ಲೇ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ. ಮೆಟ್ರೋ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಬದ್ಧವಾಗಿದ್ದೇವೆ. ಇದು ನಮ್ಮ ಸರ್ಕಾರದ ಉದ್ದೇಶ ಎಂದು ಶಿವಕುಮಾರ್ ಹೇಳಿದರು.

ಗುತ್ತಿಗೆದಾರರ ಜತೆಗೆ ಮಾತುಕತೆ ಮಾಡುತ್ತೇನೆ

ಎಲ್ಲಾ ಇಲಾಖೆಗಳಲ್ಲಿ ಬಿಲ್ ಬಾಕಿ ಇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಡಿಯೂರಪ್ಪ ಅವರು ಹಾಗೂ ಬೊಮ್ಮಾಯಿ ಅವರ ಸರ್ಕಾರದಲ್ಲಿ ಯಾವುದೇ ಆರ್ಥಿಕ ಸ್ಥಿತಿಗತಿಯನ್ನು ನೋಡದೆ ಹೆಚ್ಚಿನ ಕಾಮಗಾರಿಗಳಿಗೆ ಅನುಮತಿ ನೀಡಲಾಯಿತು. ಈ ಕಾರಣಕ್ಕೆ ಈಗ ಸಮಸ್ಯೆ ಉಂಟಾಗಿದೆ. ನಾವು ಅನೇಕ ಗುತ್ತಿಗೆದಾರರಿಗೆ ಹಣ ಲಭ್ಯತೆ ಇಲ್ಲದೇ ಇರುವ ಕಾರಣಕ್ಕೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದ್ದರೂ, ಒಂದಷ್ಟು ಜನ ಕಾಮಗಾರಿಗಳನ್ನು ತೆಗೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು. ಸರ್ಕಾರದ ವಿರುದ್ಧ ಗುತ್ತಿಗೆದಾರರ ಪ್ರತಿಭಟನೆ ಬಗ್ಗೆ ಅವರ ಜತೆಗೆ ಚರ್ಚೆ ಮಾಡುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಟಿ ರನ್ಯಾ ರಾವ್ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ಇಡಿ

ಬೆಂಗಳೂರು: ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಸೇರಿದಂತೆ ಮೂವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಪಟ್ಟಿ ಸಲ್ಲಿಸಿದ್ದು, 2024ರ ಮಾರ್ಚ್



ನಿಂದ 2025ರ ಮಾರ್ಚ್ ಅವಧಿಯಲ್ಲಿ ಸುಮಾರು 102.55 ಕೋಟಿ ರೂ. ಮೌಲ್ಯದ 127.28 ಕೆ.ಜಿ ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ಸಾಗಿಸಲಾಗಿದೆ ಎನ್ನುವ ಅಂಶ ತನಿಖೆಯಿಂದ ಬಯಲಾಗಿದೆ.

ಹರ್ಷವರ್ದಿನಿ ರನ್ಯಾ ಅಲಿಯಾಸ್ ರನ್ಯಾ ರಾವ್, ತರುಣ್ ಕೊಂಡೂರು ಮತ್ತು ಸಾಹಿಲ್ ಸಕರಿಯಾ ಜೈನ್ ವಿರುದ್ಧ ದೊಡ್ಡ ಪ್ರಮಾಣದ ಚಿನ್ನದ ಕಳ್ಳಸಾಗಣೆ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದಡಿ ಬೆಂಗಳೂರಿನ ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದು, ಅಕ್ರಮ ಚಿನ್ನವನ್ನು ದೇಶೀಯ ಮಾರುಕಟ್ಟೆಯಲ್ಲಿ ವ್ಯವಸ್ಥಿತ ಜಾಲದ ಮೂಲಕ ಮಾರಾಟ ಮಾಡಿ, ಇದರಿಂದ ಬಂದ ಹಣವನ್ನು ಹವಾಲಾ ಮಾರ್ಗಗಳ ಮೂಲಕ ವಿದೇಶಕ್ಕೆ ರವಾನಿಸಲಾಗಿದೆ ಎಂದು ಆರೋಪಪಟ್ಟಿಯಲ್ಲಿ ದಾಖಲಿಸಲಾಗಿದೆ.

ಅಲ್ಲದೇ, ಈ ವ್ಯವಹಾರವು ಅತ್ಯಂತ ಸಂಘಟಿತ ರೀತಿಯಲ್ಲಿ ನಡೆದಿದ್ದು, ಅಕ್ರಮ ಹಣವನ್ನು ಕಾನೂನುಬದ್ಧ ವ್ಯಾಪಾರದ ಹಣವೆಂದು ತೋರಿಸಲು ಹತ್ತಾರು ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆ ಮಾಡಲಾಗಿತ್ತು ಎಂದು ಇ.ಡಿ. ಚಾರ್ಜ್‌ಶೀಟ್‌ನಲ್ಲಿ ಆರೋಪಿಸಿದೆ. ತನಿಖೆಯ ಭಾಗವಾಗಿ ಈಗಾಗಲೇ ರನ್ಯಾ ರಾವ್ ಅವರಿಗೆ ಸೇರಿದ 34 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ದೇಶದ ಹಣಕಾಸು ವ್ಯವಸ್ಥೆಗೆ ಧಕ್ಕೆ ತರುವ ಇಂತಹ ಕೃತ್ಯಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಇ.ಡಿ. ಹೇಳಿದೆ.

2025ರ ಮಾರ್ಚ್ 3 ರಂದು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಹರ್ಷವರ್ಧಿನಿ ರನ್ಯಾ (ರನ್ಯಾ ರಾವ್) ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ಈ ವೇಳೆ ಅವರ ಬಳಿಯಿದ್ದ ಸುಮಾರು 12.56 ಕೋಟಿ ರೂ. ಮೌಲ್ಯದ 14.2 ಕೆಜಿ ಚಿನ್ನದ ಬಿಸ್ಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಜೆಡಿಎಸ್ ವಿಪ್ ಉಲ್ಲಂಘನೆ: ನಗರಸಭೆ ಏಳು ಸದಸ್ಯರು ಅನರ್ಹ

ನೆಲಮಂಗಲ: ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದ ಜೆಡಿಎಸ್ ನ ಏಳು ಸದಸ್ಯರನ್ನು ವಿಪ್ ಉಲ್ಲಂಘನೆ ದೂರಿನ ಅನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಬಸವರಾಜು ಅವರು ಸದಸ್ಯಸ್ಥಾನದಿಂದ ಅನರ್ಹಗೊಳಿಸಿ ಆದೇಶ ಮಾಡಿದ್ದಾರೆ.

ಆನಂದ್.ಜಿ, ಶಾರದಉಮೇಶ್,ದಾಕ್ಷಾಯಣಿ ರವಿಕುಮಾರ್, ಬಿ.ಪದ್ಮನಾಭ, ಭಾರತಿಬಾಯಿ, ನರಸಿಂಹಮೂರ್ತಿ, ಲತಾಹೇಮಂತ್‌ಕುಮಾರ್ ಅನರ್ಹಗೊಂಡ ನಗರಸಭೆ ಸದಸ್ಯರು. ಇವರು ಜೆಡಿಎಸ್ ಬಿ.ಫಾರಂ ಪಡೆದು ಚುನಾವಣೆ ಗೆದಿದ್ದರು. ಅನಂತರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. 2025 ಫೆ.13ರಂದು ನಡೆದ ನೆಲಮಂಗಲ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ವಿಪ್ ಜಾರಿಯಾಗಿತ್ತು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪರ 18 ಮತಗಳು ಚಲಾವಣೆಯಾಗಿ ಗೆಲುವು ಪಡೆದರೆ ಜೆಡಿಎಸ್ ಅಭ್ಯರ್ಥಿ ಹತ್ತು ಮತ ಪಡೆದು ಪರಾಭವಗೊಂಡಿದ್ದರು.

ಕಾಂಗ್ರೆಸ್ ಅಭ್ಯರ್ಥಿಗೆ ಜೆಡಿಎಸ್‌ನಿಂದ ಗೆದ್ದ 7 ಸದಸ್ಯರು ಮತ ಚಲಾವಣೆ ಮಾಡಿದ ಹಿನ್ನೆಲೆಯಲ್ಲಿ ವಿಪ್ ಉಲ್ಲಂಘನೆಯಾಗಿ ಚುನಾವಣಾ ಅಕ್ರಮ ಮಾಡಿದ್ದಾರೆಂದು ಡಿಸಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಮುನೇಗೌಡ ದೂರು ಸಲ್ಲಿಸಿದ್ದರು. ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದ ಜಿಲ್ಲಾಧಿಕಾರಿಗಳು ಅರ್ಜಿದಾರರು ಹಾಗೂ ಎದುರುದಾರರನ್ನು ವಿಚಾರಣೆ ಮಾಡಿದ ಬಳಿಕ 7 ಸದಸ್ಯರನ್ನು ಅನರ್ಹಗೊಳಿಸುವ ಮೂಲಕ ಅಂತಿಮ ಆದೇಶ ನೀಡಿದ್ದಾರೆ.

> ಉಪಾಧ್ಯಕ್ಷನಾಗಲು ಕಾಂಗ್ರೆಸ್ ನನಗೆ ಅವಕಾಶ ಮಾಡಿಕೊಟ್ಟಿತ್ತು, ಈಗ ಜಿಲ್ಲಾಧಿಕಾರಿಗಳು ನಮ್ಮ ಏಳು ಸದಸ್ಯರನ್ನು ಅನರ್ಹಗಳಿಸಿದ್ದಾರೆ, ಕಾನೂನಿಗೆ ತಲೆಬಾಗುತ್ತೇವೆ. ಮುಂದಿನ ಕಾನೂನು ಹೋರಾಟ ಮಾಡುತ್ತೇವೆ.
> ■ **ಆನಂದ್,** ಅನರ್ಹಗೊಂಡ ನಗರಸಭೆ ಉಪಾಧ್ಯಕ್ಷ

ಸಮಬಲ: ನಗರಸಭೆಯ 7 ಸದಸ್ಯರು ಅನರ್ಹವಾದ ಹಿನ್ನಲೆ ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳ ಸದಸ್ಯ ಬಲ ಸಮಬಲವಾಗಿದೆ. ಮುಂದಿನ ರಾಜಕೀಯ ಲೆಕ್ಕಾಚಾರ ಬೂದಿ ಮುಚ್ಚಿದ ಕೆಂಡದಂತಾಗಿದೆ.

ಗ್ರಾಮಗಳಲ್ಲಿ ಕಾಡಾನೆ ಪ್ರತ್ಯಕ್ಷ: ಆತಂಕ

ಚಿಕ್ಕಮಗಳೂರು: ನಗರ ಸಮೀಪದ ಮೂಗ್ತಿಹಳ್ಳಿ ಮತ್ತು ಶಿರಗುಂದ ಗ್ರಾಮಗಳಲ್ಲಿ ಎರಡು ಆನೆಗಳು ಕಾಣಿಸಿಕೊಂಡು ಭೀತಿ ಮೂಡಿಸಿವೆ. ಅರಣ್ಯ ಇಲಾಖೆಯು ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ತಾಲ್ಲೂಕು ದಂಡಾಧಿಕಾರಿಗಳು ತಾಲೂಕಿನ 12 ಗ್ರಾಮಗಳಲ್ಲಿ ಮುಂಜಾಗ್ರತೆಯಾಗಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ತಾಲೂಕಿನ ಹುಣಸೇಹಳ್ಳಿ ಗ್ರಾಮದಲ್ಲಿ ಒಂದೇ ವಾರದ ಅಂತರದಲ್ಲಿ ಇಬ್ಬರನ್ನು ಕಾಡಾನೆ ಬಲಿ ಪಡೆದಿರುವ ಬೆನ್ನಲ್ಲೇ ನಗರ ಸಮೀಪದ ಗ್ರಾಮಗಳಲ್ಲಿ ಆನೆಗಳು ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಆನೆಗಳ ಹಾವಳಿಯಿಂದ ಸರಣಿ ಸಾವು–ನೋವು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಅರಣ್ಯ ಇಲಾಖೆ ಅನಾಹುತ ಸಂಭವಿಸುವ ಮುನ್ನವೇ ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಳ್ಳುತ್ತಿದೆ.

ರೋಸಿ–ಸಿಂಧು ಶ್ವಾನ ಜೋಡಿ ನೆರವು: ಕಾಫಿ ನಾಡಿನಲ್ಲಿ ಜೀವಭಯ ಮೂಡಿಸಿರುವ ಕಾಡಾನೆಗಳ ಜಾಡು ಪತ್ತೆ ಹಚ್ಚಿ ಅರಣ್ಯ ಇಲಾಖೆಗೆ ನೆರವಾಗಲು ರೋಸಿ ಮತ್ತು ಸಿಂಧು ಹೆಸರಿನ ಶ್ವಾನಗಳು ಸಜ್ಜಾಗಿವೆ.

ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ತಜ್ಞ ಪ್ರಶಸ್ತಿ ಹಾಗೂ 2024ನೇ ಸಾಲಿನ ಪುಸ್ತಕ ಬಹುಮಾನ ಪಟ್ಟಿ ಪ್ರಕಟಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 30 ಜನ ಕಲಾವಿದರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಯನ್ನು ಮತ್ತು ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿಯನ್ನು ಹಾಗೂ ಇಬ್ಬರು ಜಾನಪದ ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ಪ್ರದಾನ ಮಾಡಲಾಗುತ್ತಿದೆ. ಚಿಕ್ಕಮಗಳೂರು ರವಿ ಎಚ್.ಎಂ., ಚಾಮರಾಜನಗರದ ಬಸವರಾಜು, ದಕ್ಷಿಣ ಕನ್ನಡ ಜಿಲ್ಲೆ ಸುಮತಿ ಕೊರಗ, ಉಡುಪಿಯ ಗುಲಾಬಿ ಗೌಡ್ತಿ, ಕೊಡಗು ಜಿಲ್ಲೆಯ ಅಮ್ಮಣಿ, ಬೆಳಗಾವಿಯ ಭೀಮಪ್ಪ ಸಿದ್ದಪ್ಪ ಮುತ್ನಾಳ್, ಧಾರವಾಡದ ಪ್ರಕಾಶ ಮಲ್ಲಿಗವಾಡ, ವಿಜಯಪುರದ ಜ್ಯೋತಿರ್ಲಿಂಗ ಹೊನಕಟ್ಟಿ, ಬಾಗಲಕೋಟೆಯ ಚಂದ್ರಲಿಂಗಪ್ಪ ನಿಂಗಪ್ಪ ಬಸರಕೋಡ, ಉತ್ತರ ಕನ್ನಡ ಜಿಲ್ಲೆಯ ಗೌರಿ ನಾಗಪ್ಪ ನಾಯ್ಕ, ಹಾವೇರಿಯ ಭಿಕ್ಷಾಪತಿ ಸುಂಕಪ್ಪ ಮೋತಿ, ಗದಗದ ಕಾಶೀಮಸಾಬ ಹುಸೇನಸಾಬ ಮುಜಾವರ ಅವರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಕಲಬುರ್ಗಿಯ ಭಾಗಪ್ಪ, ಬೀದರದ ಇಂದ್ರಮ್ಮ, ರಾಯಚೂರಿನ ಯಂಕನಗೌಡ, ಕೊಪ್ಪಳದ ರಾಮಣ್ಣ, ವಿಜಯನಗರದ ಕಿಂಡ್ರಿ ಲಕ್ಷ್ಮೀಪತಿ ಹಾಗೂ ಯಾದಗಿರಿಯ ಹಣಮಂತ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ತಜ್ಞ ಪ್ರಶಸ್ತಿ: ತುಮಕೂರು ಜಿಲ್ಲೆ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಅವರಿಗೆ ಡಾ.ಜೀ.ಶಂ.ಪ ತಜ್ಞ ಪ್ರಶಸ್ತಿ ಕಲಬುರ್ಗಿ ಜಿಲ್ಲೆಯ ಡಾ. ಎಚ್. ಟಿ. ಪೋತೆ ಅವರಿಗೆ ಡಾ.ಬಿ.ಎಸ್.ಗದ್ದಗೀಮಠ ತಜ್ಞ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಫೆ.27ರಂದು ಪ್ರಶಸ್ತಿ ಪ್ರದಾನ
ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಫೆ.27 ರಂದು ಬೆಳಿಗ್ಗೆ 11.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಸಚಿವ ಶಿವರಾಜ ಎಸ್. ತಂಗಡಗಿ ಕಾರ್ಯಕ್ರಮದ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕ ಉದಯ್ ಬಿ.ಗರುಡಾಚಾರ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್, ಡಾ.ಆರ್. ಸುನಂದಮ್ಮ ಭಾಗವಹಿಸಲಿದ್ದಾರೆ.

ಗಡಿನಾಡು ಕನ್ನಡಿಗರ ಸಮಸ್ಯೆಗೆ ಪರಿಹಾರ ನೀಡಿ

ಬೆಂಗಳೂರು/ಜತ್ತ: ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಕನ್ನಡಿಗರ ದಶಕಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಜತ್ ತಾಲೂಕಿನ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್ ಅವರು ರಾಜ್ಯ ಸರ್ಕಾರದ ಕಾನೂನು ಮತ್ತು ಗಡಿ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ನಗರದಲ್ಲಿ ಸಚಿವರನ್ನು ಭೇಟಿ ಮಾಡಿದ ವಿಕ್ರಮಸಿಂಹ ಸಾವಂತ್ ಅವರು, ಮಹಾರಾಷ್ಟ್ರದ ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಮಂಗಳವೇಢಾ, ಕೊಲ್ಹಾಪುರ ಮತ್ತು ಉಮರ್ಗಾ ಭಾಗದ ಕನ್ನಡಿ ಗರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಗಡಿಭಾಗದ ಕನ್ನಡಿಗರು ಶಿಕ್ಷಣ, ಕುಡಿಯುವ ನೀರು, ನೀರಾವರಿ, ಆರೋಗ್ಯ, ಉದ್ಯೋಗದಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಇವರಿಗೆ ಸರ್ಕಾರಿ ಯೋಜನೆಗಳು ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ಗಡಿನಾಡು–ಹೊರನಾಡು ಕನ್ನಡಿಗರಿಗೆ ಸಮಾನ ಸ್ಥಾನಮಾನ ನೀಡಬೇಕು ಎಂದು ಸಾವಂತ್ ಒತ್ತಾಯಿಸಿದರು.

ಪ್ರಮುಖ ಬೇಡಿಕೆ
- ಗಡಿಭಾಗದ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಲು ಕ್ರಮ ವಹಿಸುವುದು.
- ಗಡಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಜಂಟಿ ಕ್ರಿಯಾ ಯೋಜನೆ ರೂಪಿಸುವುದು.

ಪ್ರತ್ಯೇಕ ಪ್ರಕರಣ: ತಹಶೀಲ್ದಾರ್ ರೂಪಗೆ ದಂಡ

ಬೆಂಗಳೂರು: ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಸಕಾಲದಲ್ಲಿ ಮಾಹಿತಿ ನೀಡದ ಮಾಲೂರು ತಾಲೂಕು ತಹಶೀಲ್ದಾರ್ ರೂಪಾ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ಪೀಠ ಸಂಖ್ಯೆ–5ರಲ್ಲಿ ಪ್ರತ್ಯೇಕ ಮೂರು ಪ್ರಕರಣಗಳಿಂದ ಒಟ್ಟು 60 ಸಾವಿರ ರೂ. ದಂಡ ವಿಧಿಸಲಾಗಿದೆ.

ಎರಡು ಪ್ರಕರಣಗಳಲ್ಲಿ ತಲಾ 25 ಸಾವಿರ ರೂ. ಹಾಗೂ ಒಂದು ಪ್ರಕರಣದಲ್ಲಿ 10 ಸಾವಿರ ರೂ.ಗಳ ದಂಡ ವಿಧಿಸಿ ಕರ್ನಾಟಕ ಮಾಹಿತಿ ಆಯೋಗದ ಪೀಠ –5 ರ ರಾಜ್ಯ ಮಾಹಿತಿ ಆಯುಕ್ತರಾದ ರಾಜಶೇಖರ ಎಸ್. ಅವರು ಆದೇಶ ಮಾಡಿದ್ದಾರೆ.

ಮಾಹಿತಿ ಆಯೋಗದ ಆದೇಶ ಇದ್ದರೂ ಸಹ ಮಾಹಿತಿ ನೀಡದೇ ನಿರ್ಲಕ್ಷ್ಯ ತೋರಿಸಿರುವುದು ಹಾಗೂ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ದಂಡ ವಿಧಿಸಿದ್ದು, ವೇತನದಲ್ಲಿ ಒಂದೇ ಬಾರಿಗೆ ಕಟಾವು ಮಾಡಿ ಆಯೋಗದ ಖಾತೆಗೆ ತುಂಬುವಂತೆ ಕೋಲಾರ ಸಹಾಯಕ ಆಯುಕ್ತರು ಹಾಗೂ ಕೋಲಾರ ಜಿಲ್ಲಾಧಿಕಾರಿ ಅವರಿಗೆ ನಿರ್ದೇಶನ ನೀಡಿದ್ದಾರೆ.

ರೈಲು ಪ್ರಯಾಣದಲ್ಲಿ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಪತ್ತೆಹಚ್ಚಿ, ಸೂಕ್ತ ಪರಿಶೀಲನೆ ಮಾಡುವ ಕಾಯಕ

ಆರ್‌ಪಿಎಫ್ ಸಿಬ್ಬಂದಿಯಿಂದ ಆಪರೇಷನ್ ಅಮಾನತ್

ಅನುಷಾ ಕೆ.

ಬೆಂಗಳೂರು: ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್, ವಿಶ್ರಾಂತಿ ಕೊಠಡಿ, ರೈಲಿನಲ್ಲಿ ಮುಂತಾದ ಕಡೆಗಳಲ್ಲಿ ಕೆಲ ಪ್ರಯಾಣಿಕರು ತಮ್ಮ ಲಗೇಜು, ಮೊಬೈಲ್, ಪರ್ಸ್ ಸೇರಿದಂತೆ ಹಲವು ಬೆಲೆಬಾಳುವ ವಸ್ತುಗಳನ್ನು ಮರೆತು ಹೋಗುತ್ತಾರೆ. ಅಂತಹ ಲಗೇಜು, ವಸ್ತುಗಳನ್ನು ಹುಡುಕಿ, ಅದನ್ನು ಜೋಪಾನವಾಗಿ ಇಟ್ಟುಕೊಂಡು ಪ್ರಯಾಣಿಕರಿಗೆ ಮರಳಿ ನೀಡುವ ಕಾರ್ಯವನ್ನು ನೈರುತ್ಯ ರೈಲ್ವೆ ಇಲಾಖೆ ಮಾಡುತ್ತಿದೆ.

ಪ್ರಯಾಣಿಕರ ಲಗೇಜುಗಳನ್ನು ಸುರಕ್ಷಿತವಾಗಿ ಮರಳಿ ನೀಡಬೇಕೆನ್ನುವ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ವತಿಯಿಂದ ಆರ್‌ಪಿಎಫ್ ಸಿಬ್ಬಂದಿಗಳು ಆಪರೇಷನ್ ಅಮಾನತ್ ಎನ್ನುವ ವಿಶೇಷ ಕಾರ್ಯಚರಣೆ ನಡೆಸುತ್ತಾರೆ. ಇದರಿಂದ ಪ್ರಯಾಣಿಕರು ರೈಲು ಪ್ರಯಾಣದ ಸಂದರ್ಭದಲ್ಲಿ ಪ್ರಯಾಣಿಕರು ಮರೆತು ಹೋದ ಅಥವಾ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಮತ್ತು ಲಗೇಜ್‌ಗಳನ್ನು ಪತ್ತೆಹಚ್ಚಿ, ಸೂಕ್ತ ಪರಿಶೀಲನೆಯ ನಂತರ ಮರಳಿ ಮಾಲೀಕರಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ.

ಅದರಲ್ಲೂ 2023 ರಿಂದ 2026 ಫೆ.22 ರವರೆಗೆ 2,239 ಪ್ರಯಾಣಿಕರು ರೈಲು ಹಾಗೂ ರೈಲ್ವೆ ನಿಲ್ದಾಣದಲ್ಲಿ ಸುಮಾರು



68,588,794 ಮೌಲ್ಯದ ಸಾಮಗ್ರಿಗಳನ್ನು ಮರೆತು ಹೋಗಿದ್ದರು. ಅವುಗಳನ್ನು ಪ್ರಯಾಣಿಕರಿಗೆ ಹಿಂತಿರುಗಿಸುವಲ್ಲಿ ಆರ್‌ಪಿಎಫ್ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಪ್ರಯಾಣಿಕರೊಬ್ಬರು ರೈಲಿನಲ್ಲಿನ ಕಳೆದುಕೊಂಡಿದ್ದ 80,000 ರೂ.ಮೌಲ್ಯದ ಚಿನ್ನದ ಉಂಗುರ ಹಾಗೂ ಪ್ರಯಾಣಿಕರೊಬ್ಬರು ಇತ್ತೀಚೆಗೆ ಯಲಹಂಕ ರೈಲ್ವೆ ನಿಲ್ದಾಣದಲ್ಲಿ ಪ್ರಯಾಕರೊಬ್ಬರು ಕಳೆದುಕೊಂಡಿದ್ದ 17 ಲಕ್ಷ ರೂ. ಮೌಲ್ಯದ 100 ಗ್ರಾಂ ಚಿನ್ನಾಭರಣ ಮತ್ತು 2 ಲಕ್ಷ ರೂ.ನಗದು, ಹೀಗೆ ಹಲವು ಪ್ರಯಾಣಿಕರ ಬೆಲೆ ಬಾಳುವ ಸಾಮಾಗ್ರಿಗಳನ್ನು ಆರ್‌ಪಿಎಫ್ ಸಿಬ್ಬಂದಿ ಮರಳಿಸಿದ್ದಾರೆ.

ಹಿಂತಿರುಗಿಸಲಾದ ಲಗೇಜು, ಮೌಲ್ಯದ(ರೂ.ಗಳಲ್ಲಿ) ವಿವರ

	2023		2024		2025		2026 ಫೆ.22 ರವರೆಗೆ	
ವಿಭಾಗ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ
ಮೈಸೂರು	219	56,26,728	194	50,36,716	266	89,93,732	35	10,62,479
ಬೆಂಗಳೂರು	228	77,42,549	239	84,29,324	256	88,29,605	32	40,32,448
ಹುಬ್ಬಳ್ಳಿ	259	56,39,502	233	61,90,518	233	59,29,594	45	10,75,599
ಒಟ್ಟು ಪ್ರಕರಣ/ಮೊತ್ತ	706	1,90,08,779	666	1,96,56,558	755	2,37,52,931	112	61,70,526

ಕಳೆದುಹೋದ ಲಗೇಜುಗಳನ್ನು ಹೇಗೆ ಪಡೆಯಬಹುದು?

ಪ್ರಯಾಣಿಕರು ರೈಲು ಅಥವಾ ರೈಲ್ವೆ ನಿಲ್ದಾಣದಲ್ಲಿ ಮರೆತು ಹೋದ ತಮ್ಮ ಲಗೇಜುಗಳನ್ನು ಮರಳಿ ಪಡೆಯಲು ಎರಡು ವಿಧಾನವನ್ನು ಹೊಂದಿದೆ. ಅದರಲ್ಲಿ ಮೊದಲನೇಯದಾಗಿ ಪ್ರಯಾಣಿಕರು ಯಾವ ಬೋಗಿಯ ಯಾವ ಬರ್ತ್‌ನಲ್ಲಿ ಲಗೇಜ್ ಬಿಡಲಾಗಿದೆ ಎನ್ನುವ ವಿಚಾರವನ್ನು ರೈಲ್ವೆ ಮದದ್ ದೂರವಾಣಿ ಸಂಖ್ಯೆ 139 ಅಥವಾ ailmadad.indianrailways.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಬೇಕು. ಆಗ ಆರ್‌ಪಿಎಫ್ ಸೆಕ್ಯೂರಿಟಿ ಕಂಟ್ರೋಲ್ ರೂಮ್‌ಗೆ ಬರುವ ಮಾಹಿತಿ ಆಧರಿಸಿ ರೈಲಿನ ಮುಂದಿನ ನಿಲ್ದಾಣ ಅಥವಾ ಸನಿಹದ ನಿಲ್ದಾಣಕ್ಕೆ ರವಾನೆ ಆಗುತ್ತದೆ. ತಕ್ಷಣ ಸಿಬ್ಬಂದಿ ಅಲ್ಲಿಗೆ ತೆರಳಿ ಪ್ರಯಾಣಿಕರನ್ನು ಸಂಪರ್ಕಿಸಿ, ವಸ್ತುವಿನ (ಬಣ್ಣ, ವಸ್ತು) ಮಾಹಿತಿ ಪಡೆದು ಸಂಗ್ರಹಿಸುತ್ತಾರೆ. ಠಾಣೆಗೆ ತಂದು ಪ್ರಯಾಣಿಕರನ್ನು ಕರೆಸಿ ಅವರಿಂದ ಸೂಕ್ತ ದಾಖಲೆ ಪಡೆದು ವಸ್ತು ಹಿಂದಿರುಗಿಸುತ್ತಾರೆ.

ಎಚ್‌ಡಿಕೆ ವಿರುದ್ಧ ಭೂ ಒತ್ತುವರಿ ಆರೋಪ

ಕಲಬುರಗಿ: ಕೇತನಗಾನಹಳ್ಳಿ ಗ್ರಾಮದ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಭೂ ಒತ್ತುವರಿ



ಆರೋಪ ಕೇಳಿಬಂದಿದೆ. ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆ ಮಾಡಿದ್ದು, ತಹಶೀಲ್ದಾರ್ ಮೂಲಕ ನೋಟಿಸ್ ಜಾರಿಗೊಳಿಸಲಾಗಿದೆ. ತಹಶೀಲ್ದಾರರು ನೀಡಿದ ನೋಟಿಸ್‌ನ್ನು ಪ್ರಶ್ನಿಸಿ ಹಾಗೂ ಅದಕ್ಕೆ ತಡೆ ಕೋರಿ ಕುಮಾರಸ್ವಾಮಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ಹಿನ್ನೆಲೆ ಪ್ರಕರಣದ ವಿಚಾರಣೆ ಕಲಬುರಗಿ ವಿಭಾಗೀಯ ಹೈ ಕೋರ್ಟ್ ಪೀಠದಲ್ಲಿ ನಡೆಯಿತು. ಕಲಬುರಗಿ ವಿಭಾಗೀಯ ಹೈಕೋರ್ಟ್ ಹಾಲ್ ನಂಬರ್ 04ರಲ್ಲಿ ನ್ಯಾಯಮೂರ್ತಿ ಇಂದಿರೇಶ್ ಅವರ ಎದುರು ವಿಚಾರಣೆ ನಡೆದಿದ್ದು, ಪ್ರಕರಣದ ಕುರಿತು ಮುಂದಿನ ವಿಚಾರಣೆ ಮಾರ್ಚ್ 10ಕ್ಕೆ ಮುಂದೂಡಲಾಗಿದೆ.

ಸಂಪಾದಕೀಯ

ಭಯೋತ್ಪಾದನೆಗೆ 'ಪ್ರಹಾರ'

ಭಾರತವು ಕೆಲವು ದಶಕಗಳಿಂದ ಭಯೋತ್ಪಾದನೆಗೆ ತುತ್ತಾಗುತ್ತಲೇ ಬಂದಿದೆ. ಒಂದೆಡೆಯಿಂದ ನೆರೆ ರಾಷ್ಟ್ರಗಳು ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿದ್ದರೆ, ಇನ್ನೊಂದೆಡೆಯಿಂದ ದೇಶದಲ್ಲಿರುವ ಆಂತರಿಕ ದುಷ್ಟಶಕ್ತಿಗಳು ಕೂಡಾ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿವೆ. ನಕ್ಸಲೀಯರ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಸರಕಾರವು ಬಹಳಷ್ಟು ಸಫಲತೆ ಸಾಧಿಸಿದೆಯಾದರೂ, ಇಸ್ಲಾಮಿಕ್ ಭಯೋತ್ಪಾದನೆ ಇನ್ನೂ ವ್ರಣವಾಗಿ ಕಾಡುತ್ತಲೇ ಇದೆ. ಈಗಂತೂ ಭಯೋತ್ಪಾದಕರ ಕೈಗೆ ಆಧುನಿಕ ತಂತ್ರಜ್ಞಾನವೂ ಸಿಕ್ಕಿರುವುದರಿಂದ ಮತ್ತು ಭಯೋತ್ಪಾದನೆಯ ಆಯಾಮವೂ ವಿಸ್ತರಿಸಿರುವುದರಿಂದ ಅವರ ವಿರುದ್ಧ ಹೋರಾಡುವುದಕ್ಕೆ ಇನ್ನಷ್ಟು ಸುಸಜ್ಜಿತ ವ್ಯವಸ್ಥೆ ಹೊಂದುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರವು ಭಯೋತ್ಪಾದನೆ ವಿರುದ್ಧ ಹೋರಾಡುವುದಕ್ಕೆ ನೂತನ ನೀತಿಯೊಂದನ್ನು ರೂಪಿಸಿರುವುದು ಸಕಾಲಿಕವಾಗಿದೆ. 'ಪ್ರಹಾರ್' ಹೆಸರಿನ ಈ ಭಯೋತ್ಪಾದನಾ ನಿಗ್ರಹ ನೀತಿಯು ಈ ಪಿಡುಗಿನ ವಿರುದ್ಧ ವಿವಿಧ ಆಯಾಮಗಳಲ್ಲಿ ಹೋರಾಡುವ ಮತ್ತು ಭಯೋತ್ಪಾದನೆಯನ್ನು ಸಂಪೂರ್ಣ ನಿಗ್ರಹಿಸುವ ಗುರಿ ಹೊಂದಿದೆ.



ಈವರೆಗೆ ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟವು ಪ್ರತಿಕ್ರಿಯಾತ್ಮಕವಾಗಿದ್ದರೆ ಇನ್ನು ಮುಂದೆ ಭಯೋತ್ಪಾದನೆಯು ತಲೆ ಎತ್ತದಂತೆ ಮಾಡುವಂತಹ ಉಪಕ್ರಮಗಳನ್ನು ತೆಗೆದುಕೊಳ್ಳುವ ಕುರಿತಂತೆ ಕೂಡಾ ಆದ್ಯತೆ ವಹಿಸಿದೆ. ಭಾರತವನ್ನು ಕಾಡುತ್ತಿರುವ ಎಲ್ಲಾ ಬಗೆಯ ಭಯೋತ್ಪಾದನೆಗಳನ್ನು– ಗಡಿಯಾಚೆಗಿನ ಭಯೋತ್ಪಾದನೆ, ಡ್ರೋನ್ ಅತಿಕ್ರಮಣ, ಉಗ್ರವಾದಿ ಮನಸ್ಥಿತಿ, ಭಯೋತ್ಪಾದನೆಗೆ ಹಣಕಾಸು ನೆರವು, ವಿವಿಧ ಸ್ವರೂಪದಲ್ಲಿ (ರಾಸಾಯನಿಕ, ಜೈವಿಕ, ವಿಕಿರಣಕಾರಿ, ಪರಮಾಣು ಅಸ್ತ್ರ) ನಡೆಯಬಹುದಾದ ಭಯೋತ್ಪಾದನೆ– ಮುಂತಾದವನ್ನೆಲ್ಲ ನಿಗ್ರಹಿಸಲು ಸೂಕ್ತ ಕಾರ್ಯಸೂಚಿಯನ್ನು ಹೊಂದಿದೆ.

ಭಯೋತ್ಪಾದಕರನ್ನು ದಮನಿಸುವ ಜತೆಗೇ ಭಯೋತ್ಪಾದನೆಯ ಮೊಗ್ಗನ್ನೆ ಚಿವುಟಿ ಹಾಕುವುದಕ್ಕೂ ಹೊಸ ನೀತಿಯು ಆದ್ಯತೆ ನೀಡಿದೆ. ಜನರು ಭಯೋತ್ಪಾದನೆಯತ್ತ ಆಕರ್ಷಿತರಾಗದಂತೆ ತಡೆಯುವುದು, ಅವರಿಗೆ ಸೂಕ್ತ ಅರಿವು ಮೂಡಿಸುವುದು ಕೂಡಾ ಇದರಲ್ಲಿ ಸೇರಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಭಯೋತ್ಪಾದಕರು ತಮ್ಮ ಜಾಲ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಹಾರ್ ನೀತಿಯು ಅದನ್ನು ತಡೆಯಲು ತನ್ನ ಡಿಜಿಟಲ್ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜಿಸಿದೆ. ಬಂಧಿತ ಭಯೋತ್ಪಾದಕರು ಕಾನೂನಿನ ಬಲೆಯಿಂದ ತಪ್ಪಿಸಿಕೊಳ್ಳದಂತೆ ಮಾಡಲು ಎಫ್ಐಆರ್ ಸಲ್ಲಿಸುವುದರಿಂದ ಹಿಡಿದು ಕೋರ್ಟಿನಲ್ಲಿ ವಿಚಾರಣೆ ನಡೆಯುವ ತನಕ ಪರಿಣತ ಕಾನೂನು ತಜ್ಞರನ್ನು ಬಳಸಿಕೊಳ್ಳಲೂ ಯೋಜಿಸಲಾಗಿದೆ. ಒಟ್ಟಿನಲ್ಲಿ ನೂತನ ನೀತಿಯು ಭಯೋತ್ಪಾದನೆಗೆ ಮಾರಕ 'ಪ್ರಹಾರ' ನೀಡುವುದೆಂದು ಆಶಿಸಲಾಗಿದೆ.

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ಇತ್ತೀಚೆಗೆ ಇಡೀ ಜಗತ್ತೇ ಸಂಭ್ರಮಿಸಬಹುದಾದ ಅಥವಾ ಸಮಾಧಾನ ಮಾಡಿಕೊಳ್ಳಬಹುದಾದ ಘಟನೆಯೊಂದು ನಡೆಯಿತು. ಅದು ಬಲಿಷ್ಠ ಸಂವಿಧಾನ ಹೊಂದಿರುವ ಅಮೆರಿಕದ ಸುಪ್ರೀಂಕೋರ್ಟ್, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತನಗೆ ಇಷ್ಟ ಬಂದಂತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ವಿಧಿಸಿದ್ದ ಸುಂಕವನ್ನು ರದ್ದು ಮಾಡಿಬಿಟ್ಟಿತು. ಒಂದು ರೀತಿಯಲ್ಲಿ ಅಮೆರಿಕ ಸುಪ್ರೀಂಕೋರ್ಟ್‌ನ ಈ ತೀರ್ಪು ಟ್ರಂಪ್‌ಗೆ ತೀರಾ ಅವಮಾನಕರವಾದದ್ದು. ದುರಂತವೆಂದರೆ, ಈ ತೀರ್ಪಿನ ನಂತರದಲ್ಲಿ ಕಾಣಿಸಿದ ಟ್ರಂಪ್ ವರ್ತನೆ, ಮೊದಲನೆ ಮತ್ತು ಎರಡನೇ ಮಹಾಯುದ್ಧದಲ್ಲಿ ಕಾಣಿಸಿದ ಸರ್ವಾಧಿಕಾರಿಗಳ ಅಥವಾ ಭಾರತ ಈ ಹಿಂದೆ ನೋಡಿದ ಮೊಹಮ್ಮದ್ ಬಿನ್ ತುಘಲಕ್‌ರ ಆಡಳಿತಕ್ಕಿಂತ ಬೇರೆಯಾಗಿ ಏನೂ ಕಾಣಿಸಲಿಲ್ಲ.

ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಟ್ರಂಪ್ ಮತ್ತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ಶೇ.10 ಸುಂಕ ಹಾಕಿದ್ದಲ್ಲದೇ, ಮಾರನೇ ದಿನ ಇದನ್ನು ಶೇ.5 ಏರಿಸಿ, ಇದನ್ನು ಶೇ.15ರಷ್ಟಕ್ಕೆ ಮಾಡಿದರು. ಅವರ ಈ ನಡೆ ಸುಪ್ರೀಂಕೋರ್ಟ್ ತನ್ನ ಆಹಂಗೆ ನೀಡಿದ ಎಲ್ಲ ಪೆಟ್ಟುಗಳನ್ನೂ ಸಾಬೀತು ಮಾಡುತ್ತಿತ್ತು. ಹಾಗೆಯೇ, ಮುಂದೆಯೂ ಮಾತನಾಡಿ ಒಂದು ವೇಳೆ ಸುಪ್ರೀಂ ತೀರ್ಪನ್ನು ತಮಗೆ ಬೇಕಾದಂತೆ ಅರ್ಥ ಮಾಡಿಕೊಂಡು ಆಟವಾಡಿದರೆ, ತಕ್ಕ ಪಾಠವನ್ನೇ ಕಲಿಸುವುದಾಗಿ ಘೋಷಿಸಿಬಿಟ್ಟರು.

ನೋಡಿ, ಅಮೆರಿಕದ ಇಂದಿನ ಜಿಯೋಪಾಲಿಟಿಕಲ್ ನಾಟಕದಲ್ಲಿ ಒಂದೇ ವ್ಯಕ್ತಿ ಅತಿಯಾಗಿ ಬಣ್ಣ ಹಚ್ಚಿಸಿಕೊಂಡಿದ್ದಾನೆ ಅಂತ ಅನ್ನಿಸದೇ ಇರದು. ತಾನು ಭಯಪಡಿಸಿಯೇ ಜಗತ್ತು ಗೆಲ್ಲಬಹುದು, ಮಣಿಸಬಹುದು, ಕಟ್ಟಿ ಹಾಕಬಹುದು ಎಂಬ ಭ್ರಮಾಲೋಕದಲ್ಲಿ ನಡೆದಾಡುತ್ತಿರುವ ಡೊನಾಲ್ಡ್ ಟ್ರಂಪ್. ಯುದ್ಧದ ಗುಂಡು ಹಾರಿಸದೇ, ಅಣುಬಾಂಬ್ ಬಿಚ್ಚದೇ, ಕೇವಲ ಸುಂಕದ ಬೆದರಿಕೆ, ಕಠಿಣ ಪೋಸ್ಟ್‌ಗಳು, ಮಾರುಕಟ್ಟೆಗಳಿಗೆ ಸಂದೇಶ ಬಿಟ್ಟರೆ ಸಾಕು ಇಡೀ ಲೋಕವೂ ನಡುಗಿ "ಹೌದು ಸಾರ್" ಎನ್ನುತ್ತದೆ ಎಂಬ ಮನೋಭಾವ ಹೊಂದಿದ್ದಾರೆ.

ಟ್ರಂಪ್ ರಾಜಕಾರಣದ ಗರ್ಭದಲ್ಲಿ 'ಭಯ' ಮಾತ್ರವಲ್ಲ, 'ಅಪಮಾನಗೊಂಡ ಅಮೆರಿಕ' ಎಂಬ ಮಿಥ್ಯಾ ಕಥೆಯೂ ಇದೆ. ಜಗತ್ತು ಹಲವು ದಶಕಗಳಿಂದ ಅಮೆರಿಕವನ್ನು 'ಕದ್ದಿದೆ, ದುರುಪಯೋಗ ಮಾಡಿಕೊಂಡಿದೆ, ಮೋಸ ಮಾಡಿದೆ, ಸಮತೋಲನ ಕಳೆದುಹೋಗಿದೆ' ಎಂದು ಜನತೆಗೆ ನಿರಂತರವಾಗಿ ಬೋಧಿಸುವ ಮೂಲಕ, ಅವರು ತಮ್ಮನ್ನು ಪ್ರತೀಕಾರದ ವೀರನಾಗಿ ಕಟ್ಟಿಕೊಂಡಿದ್ದಾರೆ. ಆ ಪ್ರತೀಕಾರಕ್ಕೆ ಆಯ್ಕೆಯಾದ ಮುಖ್ಯ ಆಯುಧವೇ 'ಟ್ಯಾರಿಫ್'. ಯಾವ ದೇಶ ತಮಗೆ ಇಷ್ಟವಾದಂತೆ ವರ್ತಿಸದಿದ್ದರೂ, ಒಪ್ಪಂದದಲ್ಲಿ ಕಿರುಕುಳ ನೀಡಿದರಂತೆ ಭಾಸವಾದರೂ, ರಾಜತಾಂತ್ರಿಕ ಮಾತುಕತೆಯ, ಜಾಗತಿಕ ಒಪ್ಪಂದಗಳ, ಬಹುಪಕ್ಷೀಯ ವೇದಿಕೆಗಳ ದೀರ್ಘ ಪಥವನ್ನು ತಿರಸ್ಕರಿಸಿ, 'ನಾಳೆಯಿಂದ ನಿಮ್ಮ ವಸ್ತುಗಳಿಗೆ ಶೇ.15 ಹೆಚ್ಚುವರಿ ಸುಂಕ' ಎಂಬ ಒಂದು ಸಾಲಿನ ಘೋಷಣೆಯಿಂದಲೇ ಕಾರ್ಯಭಾರ ಮುಗಿಸಲು ಅವರು ಇಷ್ಟಪಡುವರು. ಇದು ಅವರ ಕಣ್ಣಿನಲ್ಲಿ ಆಡಳಿತ, ಇತರರ ಕಣ್ಣಿನಲ್ಲಿ ಅಸ್ಥಿರತೆ.

ಸುಪ್ರೀಂ ತೀರ್ಪು, ಅಮೆರಿಕ ಸಂವಿಧಾನದ ಮೂಲ ತತ್ವವನ್ನೇ ನೆನಪಿಸಿತು ಅಂದರೆ ತಪ್ಪಾಗಲಾರದು. ತೆರಿಗೆ ವಿಧಿಸುವ, ಸುಂಕ ಹಾಕುವ ಮೂಲ ಅಧಿಕಾರ ಕಾಂಗ್ರೆಸ್‌ಗೇ, ಅಧ್ಯಕ್ಷನ ವೈಯಕ್ತಿಕ ಆಸೆ ಆಕ್ರೋಶಗಳಿಗೆ ಅಲ್ಲ. ಅಂತಹ ನಿರ್ಣಯ ಬಂದ ಕೂಡಲೇ, 'ಸರಿ, ನಾವೂ ಸಂಸತ್ತಿನ ಜೊತೆ ಮಾತಾಡಿ, ನಿಯಮಬದ್ಧ ಮಾರ್ಗ ಹುಡುಕೋಣ' ಎನ್ನುವ ಜನತಾಂತ್ರಿಕ ಮನಸ್ಸು ಟ್ರಂಪ್ ಒಳಗೆ ಬೆಳೆಯಬೇಕಿತ್ತು. ಬದಲಿಗೆ, 'ಗರಿಷ್ಠ ಶೇ.10 ಹಾಕಿದ್ದೇನೆ, ಈಗ ಅದನ್ನು ಶೇ.15 ಮಾಡ್ತೀನಿ, ತೀರ್ಪನ್ನು ನೆಪ ಮಾಡಿಕೊಂಡು ಯಾವುದೇ ದೇಶ ಆಟವಾಡಿದರೆ, ನಿಮಗೇ ಇನ್ನೂ ಅಧಿಕ ಹೊಡೆತ' ಎಂಬ ಧಾಟಿಯ ಎಚ್ಚರಿಕೆ ಸಂವಿಧಾನ ಮತ್ತು ನ್ಯಾಯಾಂಗಕ್ಕಿಂತ ಅವರ ಸ್ವಕೇಂದ್ರಿತ ಅಧಿಕಾರಾಭಿಲಾಷೆಯನ್ನು ತೋರ್ಪಡಿಸುತ್ತದೆ. ಇದು ತಮ್ಮ ಕಾಲದಲ್ಲಿ 'ನಾನು ಹೇಳಿದುದೇ ಧರ್ಮ, ನನ್ನ ನಿರ್ಧಾರವೇ ಶ್ರೇಷ್ಠ' ಎಂದುಕೊಂಡ ಮಹಮದ್ ಬಿನ್ ತುಘಲಕ್ ಮನೋಭಾವಕ್ಕೆ ಅಚ್ಚರಿಯ ಹೋಲಿಕೆ ತರುತ್ತದೆ.

ತುಘಲಕ್ ಕಾಲದ ವಿಚಿತ್ರ ನಿರ್ಧಾರಗಳು ದೆಹಲಿಯಿಂದ ದೌಲತಾಬಾದ್‌ಗೇ ರಾಜಧಾನಿ ಕೆನೆದಂತೆ ಕದಲಿಸುವ ಹಠ, ಕುಶಲ ಎಂದೇನು, ಜನಜೀವನವೇನು ಎಂಬುದನ್ನು ಲೆಕ್ಕಿಸದೇ 'ಇದೇನು ಬೃಹತ್ ತಂತ್ರಜ್ಞಾನ' ಎಂದು ತಾನೇ ಮೆಚ್ಚಿಕೊಂಡ ಔದಾರ್ಯ ಇತಿಹಾಸದ ಗರ್ಭಕ್ಕೆ ಸೇರಿವೆ. ಟ್ರಂಪ್ ಕಾಲದಲ್ಲಿ ರಾಜಧಾನಿಯನ್ನು ಭೌಗೋಳಿಕವಾಗಿ ಕಳೆಯುವ ಅಗತ್ಯವಿಲ್ಲ; ಇಲ್ಲಿ ಟ್ರುಥ್‌ನ ಪೋಸ್ಟ್ ಒಂದೇ ಸಾಕು. ತುಘಲಕ್ ಚಿನ್ನ ಬೆಳ್ಳಿ ಬೆಲೆಯನ್ನು ಕಂಚಿನ ನಾಣ್ಯಕ್ಕೆ ಹೋಲಿಕೆ ತಂದಿದ್ದರೆ, ಟ್ರಂಪ್ ಡಾಲರ್ ಪ್ರಭಾವ, ವಿಶ್ವವ್ಯಾಪಾರ, ಸರಕು ಸರಪಳಿಗಳನ್ನು ಏಕ ಪೋಸ್ಟ್‌ನಲ್ಲೇ ತತ್ತರನಾಗುವಂತೆ ಮಾಡುತ್ತಾರೆ. ಇಬ್ಬರೂ ತಾವು ದೊಡ್ಡ ಶಕ್ತಿಶಾಲಿಗಳು ಎನ್ನುವ ಮೋಹದಲ್ಲಿ ಮುಳುಗಿ, ನೆಲದ ವಾಸ್ತವಿಕತೆಯನ್ನು, ಸಾಮಾನ್ಯ ಮನುಷ್ಯನ ಬದುಕನ್ನು ನಿರ್ಲಕ್ಷಿಸುವ ಒಂದು ಸಾಮ್ರಾಜ್ಯ ಮನೋಭಾವದ ಪ್ರತಿಫಲನವಾಗಿದೆ.

ಟ್ರಂಪ್ ನಿರ್ಧಾರದಲ್ಲಿ ಮಾರ್ಕೆಟ್‌ಗಳು ನಲುಗಿವೆ. 2018–20ರ ಮೊದಲ ಟ್ರಂಪ್ ಆಡಳಿತದಲ್ಲಿ ಟ್ಯಾರಿಫ್ ಯುದ್ಧಗಳ ಪರಿಣಾಮಗಳನ್ನು ಜಗತ್ತಿನ ಷೇರುಪೇಟೆಗಳು, ಅಂತಾರಾಷ್ಟ್ರೀಯ ಕಂಪನಿಗಳು ಚೆನ್ನಾಗಿ ಅನುಭವಿಸಿವೆ. ಆಗಿನ ಚೀನಾ–ಅಮೆರಿಕ ಜಗಳ, ಪೂರೈಕೆ ಸರಪಳಿಗೆ ಏಟು ನೀಡಿತ್ತು. ಆದರೆ, ಈಗ ಟ್ರಂಪ್ ಚೀನಾವೊಂದೇ ಅಲ್ಲ, ಜಗತ್ತಿನ ಯಾವುದೇ ದೇಶವನ್ನೂ ಬಿಡುತ್ತಿಲ್ಲ. ಸದ್ಯ ಅವರಿಗೆ ಮಿತ್ರರಿಗಿಂತ ಹೆಚ್ಚು ಶತ್ರುಗಳೇ ಆಗಿದ್ದಾರೆ. ಟ್ರಂಪ್ ನೀತಿಗಳಿಂದಾಗಿ ದೀರ್ಘಾವಧಿ ಯೋಜನೆಗಳೇ ಹಳ್ಳ ಹಿಡಿಯುತ್ತಿವೆ. ಯಾರೊಬ್ಬರೂ ಟ್ರಂಪ್ ನಂಬಿ ಹೊಸ ಯೋಜನೆಗಳತ್ತ ಕೈ ಹಾಕುತ್ತಲೇ ಇಲ್ಲ. ಏಕೆಂದರೆ, ಟ್ರಂಪ್ ಅವರ ಅಸ್ಥಿರ ನಿಲುವುಗಳು ತಮ್ಮ ಕಂಪನಿಗಳಿಗೆ ನಷ್ಟವುಂಟು ಮಾಡಿದರೆ ಕಷ್ಟ ಎಂಬುದೇ ಅವುಗಳ ನಿಲುವಾಗಿದೆ.

ಇಂತಹ ಸಂದರ್ಭದಲ್ಲಿ ಜಗ್ಲೋಬಲ್ ಸೌತ್ ದೇಶಗಳು, ವಿಶೇಷವಾಗಿ ಭಾರತದಂಥ ದೇಶದ ಪಾತ್ರ ಬಹುಮಟ್ಟಿಗೆ ಸಂಕೀರ್ಣ. ಒಂದು ಕಡೆ, ಟ್ರಂಪ್‌ಚೀನಾ ಯುದ್ಧದ ನಡುವೆ 'ಚೀನಾಕ್ಕೆ ಬದಲಿಗೆ ಭಾರತ' ಎಂಬ ಚರ್ಚೆಗಳು ತಲೆದೋರುತ್ತವೆ. ಜಾಗತಿಕ ಕಂಪನಿಗಳು ಪೂರೈಕೆ ಸರಪಳಿಯನ್ನು ವೈವಿಧ್ಯೀಕರಣ ಮಾಡಲು ಯತ್ನಿಸಿದಾಗ, ಭಾರತಕ್ಕೆ ಕೆಲ ಉದ್ಯೋಗ ಮತ್ತು ಹೂಡಿಕೆ ಬರಬಹುದು. ಸದ್ಯ ಆಗುತ್ತಿರುವುದು ಇದೇ ಆಗಿದ್ದು, ಭಾರತ ಅಮೆರಿಕದ ಜತೆ ಜತೆಗೆ 35ಕ್ಕೂ ಹೆಚ್ಚು ದೇಶಗಳ ನಡುವೆ ಎಫ್‌ಟಿಎ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ.

ಇಂಥ ಹೊತ್ತಲ್ಲಿ ಜಗತ್ತು ಏನು ಮಾಡಬಹುದು ಎಂಬುದು ಇಂದಿಗೂ ಯಾರಿಗೂ ನಿಲುಕಿಲ್ಲ. ಈ ಹಿಂದೆ ಭಾರತದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಹೇಳಿದಂತೆ ಟ್ರಂಪ್ ಅವರ ಅಧಿಕಾರಾವಧಿ ಮುಗಿಯುವವರೆಗೆ ತಾಳ್ಮೆಯಿಂದ ಹೆಜ್ಜೆ ಇಟ್ಟು ನಂತರದಲ್ಲಿ ಒಂದು ಗಟ್ಟಿಯಾದ ಬಾಂಧವ್ಯದತ್ತ ಹೋಗಬಹುದು. ಆದರೆ, ಆಗ ಅಮೆರಿಕದಲ್ಲಿ ಯಾರು ಅಧಿಕಾರಕ್ಕೇರುತ್ತಾರೆ ಎಂಬುದು ಮುಖ್ಯವಾಗುತ್ತದೆ. ಇನ್ನು ಅಮೆರಿಕವನ್ನೇ ಬದಿಗಿರಿಸಿ, ಡಾಲರ್‌ಗೆ ಈಗ ನೀಡಿರುವ ಅಂತಾರಾಷ್ಟ್ರೀಯ ವಹಿವಾಟು ಕರೆನ್ಸಿಯ ಸ್ಥಾನಮಾನವನ್ನು ನಿರಾಕರಿಸಿ, ಬೇರೆ ರೀತಿಯಲ್ಲಿ ಅಥವಾ ಬೇರೆ ಕರೆನ್ಸಿಯಲ್ಲಿ ವಹಿವಾಟು ನಡೆಸಿದರೆ, ಟ್ರಂಪ್ ಅವರ ಈ ನಡೆಗೆ ಪೆಟ್ಟು ನೀಡಬಹುದು.

ಇದನ್ನು ಮಾಡಬೇಕಾದರೆ, ಇಡೀ ಜಗತ್ತು ಒಂದಾಗಬೇಕು. ಆಗ ಅಮೆರಿಕದ ಮೇಲಿನ ಎಲ್ಲರ ನಿಲುವು ಒಂದೇ ಆಗಬೇಕಾಗುತ್ತದೆ. ಇದು ದೊಡ್ಡ ಸವಾಲು ಆಗಿದ್ದು, ಅಮೆರಿಕದ ಜಾಲದಲ್ಲಿ ಬೀಳಲು ಪಾಕಿಸ್ತಾನದಂಥ ದೇಶಗಳು ತುದಿಗಾಲಲ್ಲೇ ನಿಂತಿರುತ್ತವೆ. ಜತೆಗೆ ಈ ಹಿಂದೆ ಬ್ರಿಟಿಷರು ಒಡೆದು ಆಳುವ ರೀತಿಯಲ್ಲಿ ಅಮೆರಿಕವೂ ಈಗ ಜಗತ್ತಿನ ಬೇರೆ ಬೇರೆ ದೇಶಗಳ ಜತೆ ವರ್ತಿಸುತ್ತಿದೆ. ಇದನ್ನು ಯಶಸ್ವಿಯಾಗಿ ಸೋಲಿಸಿ ಮುಂದಕ್ಕೆ ನಡೆಯುವುದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ.

ಈ ದೊಡ್ಡ ಚಿತ್ರದಲ್ಲಿ, 'ಟ್ರಂಪ್ ಹಾದಿಯನ್ನು ಕಠಿಣ ಮಾಡುವವರು ಯಾರು?' ಎಂಬ ಪ್ರಶ್ನೆಗೆ ಒಂದೇ ಉತ್ತರ ಇರಲ್ಲ. ಮೊದಲ ಹಂತ ಅಮೆರಿಕ ಮತದಾರರು. ಅವರಿಗೇ ತಾನೇ ಅವರು ತಮ್ಮ ಭವಿಷ್ಯವನ್ನು ಯಾವ ನಾಯಕನ ಕೈಗೆ ಒಪ್ಪಿಸುತ್ತಿದ್ದಾರೆ ಎಂದು ಮರು ಚಿಂತಿಸಬೇಕಿದೆ. ಎರಡನೇ ಹಂತ ಜಗತ್ತಿನ ಇತರ ನಾಯಕರು, ಸರ್ಕಾರಗಳು. 'ಟ್ರಂಪ್ ಜೊತೆ ಸೌಹಾರ್ದ ಹಾದಿ' ಮತ್ತು 'ಟ್ರಂಪ್ ನೀತಿಯ ವಿರೋಧ' ಒಂದೇ ಅಲ್ಲ. ಕೆಲವು ವಿಷಯಗಳಲ್ಲಿ ಅಮೆರಿಕದ ಜೊತೆ ಒಪ್ಪಿಕೊಳ್ಳುತ್ತ, ಇನ್ನು ಕೆಲವು ವಿಷಯಗಳಲ್ಲಿ ಪ್ರಾಮಾಣಿಕವಾಗಿ ವಿರೋಧ ಪಟ್ಟ ಅಭಿಪ್ರಾಯವನ್ನು ಹೇಳುವ ಸಾಮರ್ಥ್ಯ ಹೊಂದಿರುವ ನಾಯಕರು, ಟ್ರಂಪ್ ಸರ್ವಾಧಿಕಾರಿ ಮನೋಭಾವಕ್ಕೆ ಮಿತಿಯನ್ನು ತೋರಿಸಬಹುದು. ಮೂರನೇ ಹಂತ ಜಗತ್ತಿನ ಬಹುಜನರು.

ಇಂದಿನ ಕಾಲದಲ್ಲಿ ಒಂದು ದೇಶದ ರಾಜಕಾರಣವು, ಮತ್ತೊಂದು ದೇಶದ ಸಾಮಾನ್ಯ ಮನುಷ್ಯನ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತಿದೆ. ಅಮೆರಿಕ ಸುಂಕ ಯುದ್ಧವು ಭಾರತದಲ್ಲಿ ಕಾರ್ಖಾನೆ ಮುಚ್ಚುವಂತೆ ಮಾಡಬಹುದು, ಚೀನಾದಲ್ಲಿ ಕಾರ್ಮಿಕರಿಗೆ ವೇತನ ಕಡಿತ ತರಬಹುದು, ಯುರೋಪಿನ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಉತ್ಪಾದನಾ ನಷ್ಟ ತರಬಹುದು. ಇಂಥ ಪರಸ್ಪರ ಅವಲಂಬಿತ ಯುಗದಲ್ಲಿ 'ಇದು ಅವರ ದೇಶದ ಒಳಗಿನ ರಾಜಕಾರಣ' ಎಂಬ ಭಾವನೆಯಲ್ಲಿ ಕುಳಿತಿರಲು ನಮಗೆ ಐಶ್ವರ್ಯವಿಲ್ಲ. ಜಾಗತಿಕ ಜನತಂತ್ರವು, ಜಾಗತಿಕ ಬಹುಜನದ ಒಂದೇ ಧ್ವನಿಯೇ ಆಗಿರಬೇಕಾಗಿದೆ. ಆಗ 'ನಾವು ಎಲ್ಲರೂ ಒಂದೇ ಸಂಕಷ್ಟದೊಳಗಿದ್ದೇವೆ, ಪರಿಹಾರದ ಹಾದಿ ನಮ್ಮ ವಿವೇಕದಲ್ಲಿದೆ' ಎಂಬ ಶಾಂತ ಧ್ವನಿ ಬೇಕಾಗಿದೆ.

ವೇಷವನ್ನು ನಂಬಬಾರದು

ವೇಷಂ ನ ವಿಶ್ವಸೇತ್ ಪ್ರಾಜ್ಞೋ ವೇಷೋ ದೋಷಾಯ ಜಾಯತೇ ।
ರಾವಣೋ ಭಿಕ್ಷುರೂಪೇಣ ಜಹಾರ ಜನಕಾತ್ಮಜಾಮ್ ॥

ಬುದ್ಧಿವಂತನು ವೇಷವನ್ನು ನಂಬಬಾರದು. ಏಕೆಂದರೆ ವೇಷವು ದೋಷಗಳಿಗೆ ಕಾರಣವಾಗುತ್ತದೆ. ಸನ್ಯಾಸಿ ವೇಷವನ್ನು ಧರಿಸಿದ ರಾವಣನು ಜಾನಕಿಯನ್ನು ಅಪಹರಿಸಿದ –ಎಂಬುದು ಶ್ಲೋಕಾರ್ಥ.

ಎಲ್ಲರನ್ನೂ ಕಾಡುವ ಸಾಮಾನ್ಯ ಪ್ರಶ್ನೆ ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬುದಾಗಿ. ಆಮೇಲೆ ಎಷ್ಟು ನಂಬಬೇಕು, ಎಷ್ಟು ನಂಬಬಾರದು ಎಂಬುದಾಗಿ.

ಮೋಸಗೊಳಿಸುವವರು, ಬಣ್ಣದ ಮಾತನ್ನಾಡುವವರು, ವೇಷ ಮರೆತು ಮೋಸ ಗೊಳಿಸುವವರು ಹೆಚ್ಚಾದ ಕಾರಣ ಈ ಸಮಸ್ಯೆ ಉದ್ಭವಿಸಿದೆ. ನಾವಿರಿಸಿದ ವಿಶ್ವಾಸವೇ ಕೆಲವೊಮ್ಮೆ ನಮಗೆ ಮುಳು ವಾಗುತ್ತದೆ. ಆದ್ದರಿಂದಲೇ ಸೂಕ್ತಿಯೊಂದು 'ವಿಶ್ವಾಸೋ ನೈವ ಕರ್ತವ್ಯಃ" ಎಂದಿದೆ. ನಮ್ಮ ಬುದ್ಧಿವಂತಿಕೆ, ಬಲ(ಪ್ರಯತ್ನ)ಗಳ ಮೇಲೆ ಮಾತ್ರ ವಿಶ್ವಾಸವಿರಿಸಬೇಕು. ಕೆಲವೊಮ್ಮೆ ಇದು ಕೈಕೊಡುತ್ತದೆ. ಹೀಗಿರುವಾಗ ಇತರರನ್ನು ಹೇಗೆ ನಂಬುವುದು? ಇಂದಿನ ಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, ಗಂಡ ಹೆಂಡತಿಯನ್ನು ನಂಬಲಾರ; ಹೆಂಡತಿ ಗಂಡನನ್ನು ನಂಬಲಾರಳು. ಇವರಿಬ್ಬರೂ ಮಕ್ಕಳನ್ನು ನಂಬುವಂತಿಲ್ಲ. ಮಕ್ಕಳು ಹೆತ್ತವರನ್ನೇ ನಂಬರು.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್



ನಮ್ಮವರನ್ನೇ ನಂಬಲಾರದ ಸ್ಥಿತಿಗೆ ಬಂದಾಗ ವೇಷ ತೊಟ್ಟು ಬಂದವರನೆಂತು ನಂಬುವುದು? ತುಂಬಾ ಆತ್ಮೀಯರಂತೆ ನಟಿಸಿ ವಂಚಿಸುವವರಿದ್ದಾರೆ. ಮನೆ ಬಾಗಿಲಿಗೆ ಬೇಡುವುದಕ್ಕೆ ಬಂದವರಿಗೆ ಕೊಡದೇ ಇರುವ ಸಂಸ್ಕೃತಿ ನಮ್ಮದಲ್ಲ. ಆದರೆ ಇಂದು ಬೇಡುವ ನೆಪದಲ್ಲಿ ವಂಚಿಸುವವರಿದ್ದಾರೆ.

ಬುದ್ಧಿವಂತನಾದವನು ಯೋಚಿಸಿ, ವಿಮರ್ಶಿಸಿ ನಿರ್ಣಯ ತೆಗೆದುಕೊಳ್ಳಬೇಕು. ವೇಷದವರನ್ನು ಯಾವಾಗಲೂ ಎಚ್ಚರದಿಂದಲೇ ಅವಲೋಕಿಸಬೇಕು. ವೇಷವೇ ಅನೇಕ ದೋಷಗಳನ್ನುಂಟು ಮಾಡುತ್ತದೆ. ವಂಚಿಸುವುದಕ್ಕೆ ಕೇವಲ ಬಾಹ್ಯ ವೇಷವೇ ಬೇಕಿಲ್ಲ. ಸಭ್ಯರಂತೆ ಮುಖವಾಡ ಧರಿಸಿ ವಂಚಿಸುವವರು ಹೆಚ್ಚಿದ್ದಾರೆ. ಸೇವೆ, ಆರೋಗ್ಯ, ಶಿಕ್ಷಣ, ಬಡತನ ನಿವಾರಣೆಯ ಮುಖವಾಡ ತೊಟ್ಟು ವಂಚಿಸಿ ಮೋಸ ಮಾಡುತ್ತಾರೆ.

ಪ್ರೀತಿ ಪ್ರೇಮದ ಹೆಸರಿನಲ್ಲಿ ವಂಚಿಸುವವರಿದ್ದಾರೆ. ಇಂದು ಈ ಸಮಸ್ಯೆ ಬೃಹತ್ ಆಗಿ ಬೆಳೆಯುತ್ತಿದೆ. ಇದರ ಮುಂದೆ ದ್ವೇಷ ಮರೆಸಿ ಮಾಡುವ ವಂಚನೆ ಅಷ್ಟು ದೊಡ್ಡದಲ್ಲ. ಆದರೂ ಅದು ಮೋಸದ ಪ್ರಧಾನ ಭಾಗವೇ ಆಗಿದೆ. ರಾವಣನು ತನ್ನನ್ನು ಮರೆಮಾಚಿ ಸನ್ಯಾಸಿ ವೇಷಧರಿಸಿ ಸೀತೆಯನ್ನು ಅಪಹರಿಸಿದ.

ಒಳ್ಳೆಯದನ್ನು ಮಾಡುವುದಕ್ಕೂ, ಆಗುವುದಕ್ಕೂ ವೇಷವನ್ನು ಧರಿಸುವುದಿದೆ. ಪರಶಿವನು ಕಿರಾತ ವೇಷ ಧರಿಸಿ ಅರ್ಜುನನಿಗೆ ಪಾಶುಪತಾಸ್ತ್ರಾದಿ ಆಯುಧಗಳನ್ನಿತ್ತು ಅನುಗ್ರಹಿಸಿದ. ಪಾಂಡವರು ವೇಷ ಮರೆಸಿ ಅಜ್ಞಾತ ವಾಸವನ್ನು ಸಾಂಗಗೊಳಿಸಿದರು. ಒಳ್ಳೆಯ ಕೆಲಸಕ್ಕಿಂತಲೂ ಕೆಟ್ಟ ಕೆಲಸಕ್ಕಾಗಿಯೇ ವೇಷಧರಿಸಿ ವ್ಯವಹರಿಸುವವರು ಹೆಚ್ಚಿರುವುದರಿಂದ ಎಚ್ಚರ ವಹಿಸಬೇಕಾದುದು ಎಲ್ಲರ ಕರ್ತವ್ಯ.

ಕುಂದನಲ್ಲದೆ ಲೇಸ ಕಾಣದವರು

ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಸ್ವಭಾವ ಅನೇಕರಲ್ಲಿರುತ್ತದೆ. ಆದರೆ ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕನ್ನಡದ ಕವಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' (ಹರಿಶ್ಚಂದ್ರ ಚಾರಿತ್ರ) ದಲ್ಲಿ ಒಂದು ಸನ್ನಿವೇಶ ಇದೆ. ಅಮರಾವತಿಯಲ್ಲಿ ದೇವೇಂದ್ರನ ಸಭೆ. ಆ ಸಭೆಯಲ್ಲಿ ಘನತೆವೆತ್ತ ಸುರರು, ಋಷಿಗಳೇ ಮುಂತಾದ ಮಹನೀಯರು ಮಂಡಿಸಿದ್ದಾರೆ. ಆಗ ದೇವೇಂದ್ರನಲ್ಲಿ ಒಂದು ಜಿಜ್ಞಾಸೆ ಉಂಟಾಗುತ್ತದೆ. ಸೂರ್ಯವಂಶದ ಮಹಾರಾಜರಲ್ಲಿ ಅಪ್ರತಿಮ ಸತ್ಯವಾದಿ ಯಾರು? ಇದನ್ನು ತಿಳಿಯುವುದಕ್ಕಾಗಿ ವಸಿಷ್ಠನಲ್ಲಿ ಈ ಪ್ರಶ್ನೆಯನ್ನು ಮುಂದಿಡುತ್ತಾನೆ. "ಇಕ್ಷ್ವಾಕು ವಂಶೀಯರಲ್ಲಿ ಮನ ವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ?" ಈ ಪ್ರಶ್ನೆಗೆ ವಸಿಷ್ಠ, ಅಂತಹ ಸತ್ಯವಾದಿ ವಸುಧಾಧಿಪತಿ ಹರಿಶ್ಚಂದ್ರ ಎಂದು ಉತ್ತರಿಸುತ್ತಾನೆ. ಅದಿಲ್ಲಿ ಪ್ರಧಾನವಲ್ಲ. ಆದರೆ ಆ ಸಭೆಯಲ್ಲಿ ವಸಿಷ್ಠನ ಸಾಲಿನಲ್ಲಿ ಕುಳಿತಿದ್ದ ವಿಶ್ವಾಮಿತ್ರನು ಇದರಿಂದ ಕೆರಳುತ್ತಾನೆ.

ಯಾಕೆ ಕೆರಳಿದ ಎಂಬುದಕ್ಕೆ ಕವಿಯು ಕಾರಣವನ್ನು ಮುಂದಿಡುತ್ತಾನೆ. ವಿಶ್ವಾಮಿತ್ರನ ಸ್ವಭಾವವೇನು ಎಂಬುದನ್ನು ವಿವರಿಸುತ್ತ, ಒಂದು ವಿಶಿಷ್ಟ ಗುಣವನ್ನು (ಅಥವಾ ದುರ್ಗುಣ ಅನ್ನಿ) ತಿಳಿಸುತ್ತಾನೆ.



'ಅಖಿಳ ಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ' ವಿಶ್ವಾಮಿತ್ರನದಾಗಿತ್ತು ಎನ್ನುತ್ತಾನೆ ರಾಘವಾಂಕ. ಹಾಗೆಂದರೇನು? ಸೃಷ್ಟಿಯಲ್ಲಿ ಅನೇಕ ಸಹಸ್ರ, ಲಕ್ಷ ಸಂಖ್ಯೆಯ ಜೀವ ರಾಶಿಗಳಿವೆ. ಅವುಗಳನ್ನು ಪರಿಶೀಲನೆ ಮಾಡುವ ಸಂದರ್ಭ ಬಂದರೆ ಈ ವಿಶ್ವಾಮಿತ್ರನ ಕಣ್ಣಿಗೆ ಲೋಪಗಳಲ್ಲದೆ ಒಳ್ಳೆಯದು ಯಾವುದೂ ಕಾಣಿಸದು ಎಂದು ಇದರ ಅರ್ಥ. ವಿಚಿತ್ರ ನೋಡಿ, ಅವನ ಹೆಸರು ವಿಶ್ವಾಮಿತ್ರ. ಆದರೆ ಮೈತ್ರೀಭಾವವು ಅವನಲ್ಲಿ ವಿಶಿಷ್ಟವಾಗಿ ಇರಬೇಕಿತ್ತು, ಆದರೆ ಇರಲಿಲ್ಲ. ಕುಂದನ್ನೇ ಕಾಣುವ ವಿಶ್ವಾಮಿತ್ರನ ಸ್ವಭಾವದಿಂದಾಗಿ ಹರಿಶ್ಚಂದ್ರನ ಜೀವನವು ಬಿರುಗಾಳಿಗೆ ಸಿಕ್ಕಿದ ಎಲೆಯಂತೆ ತತ್ತರಿಸಿಹೋಯಿತು. ಅವನು ತನ್ನ ಸತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಾನಾ ಸಂಕಷ್ಟಗಳಿಗೆ ಈಡಾಗಬೇಕಾಯಿತು.

ಇರಲಿ, ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಇಂತಹ ಸ್ವಭಾವ ಅನೇಕರಲ್ಲಿರುತ್ತದೆ. ಅವರಿಗೆ ಛಿದ್ರಾನ್ವೇಷಿಗಳು ಅಂತ ಹೇಳುವ ಕ್ರಮವೂ ಉಂಟು. ಯಾವುದರಲ್ಲಾದರೂ, ಛಿದ್ರ ಅಂದರೆ ಒಡಕನ್ನು ಕಾಣುವುದು (ಅಥವಾ ಹುಡುಕುವುದು) ಅವರಿಗೆ ಅಂಟಿದ ಗುಣ. ಹಾಗಾಗಿ ನೀವು ಏನೇ ವಿಷಯವನ್ನು ಅವರಲ್ಲಿ ಪ್ರಸ್ತಾಪಿಸಿ. ಆ ವಿಷಯದಲ್ಲಿ ಒಂದಲ್ಲ ಒಂದು ದೋಷ ಅವರಿಗೆ ಸಿಕ್ಕಿಯೇ ಸಿಗುತ್ತದೆ. ಉದಾಹರಣೆಗ ನೋಡಿ. ಒಬ್ಬರು ಗೃಹಸ್ಥರಿದ್ದಾರೆ. ಅವರ ಮನೆಯಾಕೆ ಹೇಗೇ ಅಡುಗೆ ಮಾಡಿ ಬಡಿಸಿದರೂ ಅದರಲ್ಲಿ ಕುಂದು ಹುಡುಕಿ ಹಿಡಿಯದೇ ಬಿಡಲಾರರು. ಊಟಕ್ಕೆ ಏನೋ ಒಂದು ವ್ಯಂಜನ ಮಾಡಿದ್ದಾರೆ ಎಂದು ಭಾವಿಸಿ. ಉದಾಹರಣೆಗೆ ಒಂದು ಪಾಯಸ ಮಾಡಿದರು ಎಂದಿಟ್ಟುಕೊಳ್ಳುವ. ಯಜಮಾನರು ಊಟದ ಎಲೆಯ ಎದುರು ಕುಳಿತ ಕೂಡಲೇ ದುಸುಮುಸು ಪ್ರಾರಂಭ. "ಈಗ ಯಾವ ಕರ್ಮಕ್ಕೆ ಪಾಯಸ? ಸುಮ್ಮನೆ ಒಂದು ಅನ್ನ ಸಾರು, ಪಲ್ಯ ಸಾಕಾಗುವುದಿಲ್ವ?" ಎನ್ನುತ್ತಾರೆ. ಸರಿ, ಅವರು ಹೇಳಿದರಲ್ಲ ಅಂತ ಸರಳವಾದ ಅಡುಗೆ ಮಾಡಿದ ದಿನ, "ನಿತ್ಯವೂ ಇಷ್ಟೇ ತಿನ್ನಬೇಕೋ? ಅಪರೂಪಕ್ಕೆ ಒಂದು ದಿನವಾದರೂ ವಿಶೇಷ ಮಾಡಬಾರದೆ?" ಎಂದು ಗೊಣಗುತ್ತಾರೆ. ಏನೋ ಆಕಸ್ಮಿಕವಾಗಿ ಅವರು ವಿಶೇಷ ಅಡುಗೆಯನ್ನು ಮಾಡಿದ ದಿನವೂ, ಇವರಿಗೆ ವಿಶೇಷವು ಬೇಕಾದ ದಿನವೂ ಒಂದೇ ಆಯಿತು ಅನ್ನಿ. ಆಗಲಾದರೂ ಸಮಾಧಾನವೆ ಅಂದರೆ, ಅದೇನೂ ಇಲ್ಲ. "ಹೇಗೂ ಮಾಡುವಾಗ ಸ್ವಲ್ಪ ಸಿಹಿಯಾಗಿ ಮಾಡುವುದಲ್ವ? ನನಗೇನು ಮಧುಮೇಹ ಬಂದಿದೆಯ?" ಅಂದಾರು. ಸಿಹಿ ಹೆಚ್ಚು ಅನಿಸಿದರೆ, "ಇದೇನಿಷ್ಟು ಬೆಲ್ಲ ಸುರುವಿದ್ದಿ? ನಾನು ಸಿಹಿಮೂತ್ರ ಬಂದು ಸಾಯಬೇಕೇ?" ಅನ್ನುತ್ತಾರೆ. ಹೋಗಲಿ, ಎಲ್ಲವೂ ಸರಿಯಾದ ಪ್ರಮಾಣದಲ್ಲಿ ಸೇರಿ, ರುಚಿಕಟ್ಟಾಗಿದೆ ಅಂದುಕೊಳ್ಳಿ. ಆಗಲೂ ಸಮಾಧಾನವಿಲ್ಲ.

"ಹೀಗೆ ದಿನಾ ರುಚಿಯಾಗಿ ಮಾಡಿ ಹಾಕಿದರೆ ತಿಂದೂ ತಿಂದೂ ನನ್ನ ತೂಕ ಒಂದು ತಿಂಗಳಲ್ಲೇ ಡಬಲ್ ಆದೀತು" ಎಂದು ಗೊಣಗದೇ ಇರಲಾರರು. ಹೋಗಬೇಕಾಗಿರುವ ಬಸ್ಸು ತಡವಾದರೂ ಆಕ್ಷೇಪ, ಬೇಗ ಬಂದರೂ ಆಕ್ಷೇಪ, ಸಮಯಕ್ಕೆ ಸರಿಯಾಗಿ ಬಂದರೂ ದೋಷವೇ ಇವರಿಗೆ. ಹೆಚ್ಚು, ಕಡಿಮೆ, ಸರಿ ಹೀಗೆ ಯಾವುದಾದರೂ ಅದು ಒಪ್ಪಿಗೆಯಾಗುವುದಿಲ್ಲ. ಇದು ಒಂದು ಮನೋಧರ್ಮ. ಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರು ಈ ಬಗೆಯ ಸ್ವಭಾವವುಳ್ಳವರನ್ನೇ

'ಚಳಿಗಾಲ ಬಂದಾಗ 'ಎಷ್ಟು ಚಳಿ?' ಎಂದರು
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆಂದರು;
ಮಳೆ ಬಿತ್ತೊ, 'ಬಿಡದ ಶನಿ!' ಎಂಬ ಟೀಕೆ:
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!'
ಎಂದು ಹೇಳಿದ್ದು.

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಯಕ್ಷಗಾನ ತಾಳಮದ್ದಲೆಯ ಕುರಿತು, ವಿಸ್ತೃತ ಲೇಖನವೊಂದು ಪ್ರಕಟವಾಯಿತು. ಈ ರಂಗಭೂಮಿಯ ಗುಣ ದೋಷಗಳ ವಿಮರ್ಶೆ ಅದು. ಒಟ್ಟಾಗಿ ಈ ರಂಗಭೂಮಿ ತನ್ನ ಮಟ್ಟವನ್ನು ಉಳಿಸಿಕೊಂಡಿಲ್ಲ ಎನ್ನುವುದು ಲೇಖನದ ಸಾರಾಂಶ. ಬರೆದವರ ಅಭಿಪ್ರಾಯ ಸರಿಯೋ ತಪ್ಪೋ ಎಂಬುದು ಸದ್ಯದ ವಿವಕ್ಷೆ ಅಲ್ಲ. ಈ ಲೇಖನ ಬಂದುದೇ ತಡ, ಇದು ಕೆಲವು ವಾಟ್ಸಪ್ ಬಳಗಗಳಲ್ಲಿಯೂ ಪ್ರತಿಫಲಿಸಿತು. ಹಲವರು ಇದನ್ನು ಹಂಚಿಕೊಂಡರು. ಅಲ್ಲಿಯೂ ಚರ್ಚೆಗಳಾದವು. ಬಳಗವೊಂದರಲ್ಲಿ, ಪತ್ರಿಕೆಯ ನಿರ್ದಿಷ್ಟ ಲೇಖನವನ್ನು ಬೆಂಬಲಿಸಿ, ಈಗಿನ ಕಾರ್ಯಕ್ರಮಗಳು ಕಳಪೆ, ಗುಣಮಟ್ಟ ಇಲ್ಲದವು ಎಂದು ಕೆಲವರು ಬರೆದರು. ಇದರಲ್ಲಿ ವಿಶೇಷವೇನಿಲ್ಲ. ಯಾವುದೇ ಕ್ಷೇತ್ರದಲ್ಲಿ ಇಂತಹ ಸಂವಾದಗಳು, ಚರ್ಚೆಗಳು ನಡೆಯುವುದು ಸಹಜ ಪ್ರಕ್ರಿಯೆ. ಇರಲಿ, ಮುಂದೇನಾಯಿತು ನೋಡಿ.

ಕೆಲವು ದಿನಗಳಲ್ಲಿ ಅದೇ ಪತ್ರಿಕೆಯಲ್ಲಿ, ತಾಳಮದ್ದಲೆಯ ಕೆಲವು ಉತ್ತಮ ಕಲಾವಿದರು ಹಾಗೂ ಗುಣಮಟ್ಟವುಳ್ಳ ಪ್ರದರ್ಶನಗಳ ಕುರಿತು ಇನ್ನೊಂದು ಲೇಖನ ಪ್ರಕಟವಾಯಿತು. ಈ ಕ್ಷೇತ್ರದ ಎಲ್ಲವೂ ಕೆಟ್ಟಿಲ್ಲ ಎನ್ನುವ, ಉತ್ತಮಿಕೆಯನ್ನು ಗುರುತಿಸುವ ಈ ಲೇಖನವನ್ನು ಅನೇಕರು ಗಮನಿಸದವರಂತೆ ಇದ್ದು ಬಿಟ್ಟರು. ಈ ಮೊದಲಿನ ಲೇಖನವನ್ನು ಬೆಂಬಲಿಸಿ, ಅದನ್ನು ಬಳಗಗಳಲ್ಲಿ ಪ್ರಸಾರ ಮಾಡಿದವರೆಲ್ಲ ಹೊಸ ಲೇಖನದ ಕುರಿತು ಮೌನವಾಗಿಬಿಟ್ಟರು. ಅದನ್ನು ಯಾವ ಬಳಗದಲ್ಲಿಯೂ ಪ್ರಸಾರ ಮಾಡುವವರಿಲ್ಲವಾಯಿತು. ಕುಂದನ್ನು ಆಡುವವರು ಲೇಸನ್ನು ಕಾಣಲೇ ಇಲ್ಲ. ಅಂದರೆ ಇದಕ್ಕೆ, 'ಕುಂದನಲ್ಲದೆ ಲೇಸ ಕಾಣದಿಹ ಗುಣ' ಕಾರಣ ಎನ್ನದೆ ಬೇರೇನು ಹೇಳೋಣ?

ಮಕ್ಕಳನ್ನು ಹೆತ್ತವರು ಅಥವಾ ಪೋಷಕರು ಈ ದಿಕ್ಕಿನಲ್ಲಿ ಚಿಂತಿಸಬೇಕಾದ ಸಂಗತಿಯೊಂದಿದೆ. ಮಕ್ಕಳಲ್ಲಿ ಕೆಟ್ಟ ಅಂದರೆ ಸಮಾಜಕ್ಕೆ ಒಪ್ಪಿತವಲ್ಲದ ವರ್ತನೆಯೂ ಇರುತ್ತದೆ. ಸಮಾಜಕ್ಕೆ ಒಪ್ಪಿಗೆಯಾಗುವ ಒಳ್ಳೆಯ ವರ್ತನೆಯೂ ಇರುತ್ತದೆ. ಕೆಟ್ಟ ವರ್ತನೆಗೆ ಶಿಕ್ಷೆ ಹಾಗೂ ಉತ್ತಮ ವರ್ತನೆಗೆ ಮೆಚ್ಚುಗೆ ಸಿಗುತ್ತದೆ. ಆದರೆ ಕೆಟ್ಟ ವರ್ತನೆಗೆ ಯಾವ ಪ್ರತಿಕ್ರಿಯೆಯನ್ನೂ ಕೊಡದೆ ಒಳ್ಳೆಯದಕ್ಕೆ ಮಾತ್ರ ಮೆಚ್ಚುಗೊಡಬೇಕು ಎನ್ನುತ್ತದೆ ಮನಃಶಾಸ್ತ್ರ.

ಯಾವುದಕ್ಕೆ ಪ್ರತಿಕ್ರಿಯೆ ಇಲ್ಲವೋ ಆ ವರ್ತನೆ ಬಿಟ್ಟುಹೋಗುತ್ತದೆ. ಮೆಚ್ಚುಗೆ ಸಿಕ್ಕಿದ್ದು ಬೆಳೆಯುತ್ತದೆ. ಮಕ್ಕಳ ವಿಷಯ ಮಾತ್ರವಲ್ಲ, ದೊಡ್ಡವರ ವಿಷಯವೂ ಅಷ್ಟೇ. ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಸಮುದಾಯದ ಆದರ್ಶ ವ್ಯಕ್ತಿಗಳು ಯಾರಾಗಬೇಕು?

▸ ಉದಯ್ ಮೆಹೂರ್‌ಕರ್

ದೇಶವೊಂದು ಶ್ರೇಷ್ಠವಾಗಿ ಬೆಳೆಯಬೇಕಾದರೆ ಸಮಾಜದ ಪ್ರತಿಯೊಂದು ವರ್ಗಕ್ಕೂ ಆದರ್ಶ ವ್ಯಕ್ತಿಗಳು (ರೋಲ್ ಮಾಡೆಲ್)ಇರಬೇಕು. ಭಾರತದಲ್ಲಿ ಪ್ರತಿಯೊಂದು ಸಮುದಾಯ ಕೂಡಾ ತನ್ನದೇ ಆದ ಆದರ್ಶ ವ್ಯಕ್ತಿಗಳನ್ನು ಹೊಂದಿದೆ. ಇಂತಹ ಆದರ್ಶ ವ್ಯಕ್ತಿಗಳನ್ನು ಆ ಸಮುದಾಯದವರಷ್ಟೇ ಅಲ್ಲದೇ ಎಲ್ಲಾ ಸಮುದಾಯದವರೂ ಗೌರವಿಸುತ್ತಾರೆ, ಆರಾಧಿಸುತ್ತಾರೆ. ಉದಾಹರಣೆಗೆ ಗುಜರಾತಿನ ಮೂವರು ದಲಿತ ಸಂತರನ್ನು ಮೇಲ್ವರ್ಗದ ಜನರು ಕೂಡಾ ಗೌರವಿಸುತ್ತಾರೆ. ದಾಸಿ ಜೀವನ್, ತ್ರಿಕಾಮ ಸಾಹೇಬ್ ಮತ್ತು ಭಾನು ಸಾಹೇಬ್ ಎಂಬ ಈ ಮೂವರು ಸಂತರು ರಚಿಸಿದ ಭಜನೆ ಗಳನ್ನು ಗುಜರಾತಿನ ಪುಷ್ಟಿಮಾರ್ಗಿ ವೈಷ್ಣವ ದೇವಾಲಯಗಳಲ್ಲೂ ಹಾಡಲಾಗುತ್ತದೆ. ಮಹಾರಾಷ್ಟ್ರದಲ್ಲಿ ಕೂಡಾ ಪ್ರತಿಯೊಂದು ಸಮುದಾಯದಲ್ಲೂ ಸಂತವರೇಣ್ಯರು ಹುಟ್ಟಿಬಂದಿದ್ದಾರೆ. ಮಹಾರ್ ಜನಾಂಗದ ಚೋಕಮೇಳ ಅವರ ಅಭಂಗಗಳನ್ನು ಈಗಲೂ ಮಹಾರಾಷ್ಟ್ರದಲ್ಲಿ ಭಕ್ತಿಭಾವದಿಂದ ಹಾಡಲಾಗುತ್ತದೆ.

ಮಹಾರಾಷ್ಟ್ರದ 12ನೇ ಶತಮಾನದ ಶ್ರೇಷ್ಠ ಸಂತ ಚಕ್ರಧರ ಸ್ವಾಮಿ ಅಸ್ಪೃಶ್ಯತೆ ಆಚರಿಸುವುದರ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರು ತಮ್ಮ ಬೋಧನೆಗಳನ್ನು ಹೇಳುತ್ತಾ ಪೇಶಾವರ ತನಕ ಪಾದಯಾತ್ರೆ ನಡೆಸಿದ್ದರು. ಅವರು ಮಹಾರಾಷ್ಟ್ರೀಯರಿಗಷ್ಟೇ ಅಲ್ಲದೆ ಇನ್ನಿತರ ರಾಜ್ಯಗಳಲ್ಲೂ ಗೌರವಕ್ಕೆ ಅರ್ಹರಾಗಿದ್ದಾರೆ. ಗುಜರಾತಿನಲ್ಲಿ ಕ್ಷತ್ರಿಯ ವೀರ ಭಾತಿ ಮಹಾರಾಜ್ ಮುಸ್ಲಿಂ ಮತಾಂಧರು ಗೋಹತ್ಯೆ ನಡೆಸುವುದನ್ನು ತಡೆಯಲು ಹೋಗಿ ಜೀವ ತೆತ್ತಿದ್ದರು. ಅವರ ಹೆಸರನ್ನು ಈಗಲೂ ಗುಜರಾತ್ ಮತ್ತು ರಾಜಸ್ಥಾನದಲ್ಲಿ ಸ್ಮರಿಸಲಾಗುತ್ತದೆ.

ತೋಮರ್ ರಜಪುತ ದೊರೆ ರಾಜ ರಾಮದೇವ್ ಕೂಡಾ ಸಾಮಾಜಿಕ ಅನಿಷ್ಟಗಳ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರ ಜನ್ಮದಿನವನ್ನು ಹರ್ಯಾಣ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಆಚರಿಸಲಾಗುತ್ತದೆ.ಈ ರಾಜ್ಯಗಳಲ್ಲಿ ಅವರ ಕೆಲವು ದೇವಾಲಯಗಳನ್ನೂ ಕಾಣಬಹುದು. ಅವರ ಹಿಂಬಾಲಕರಲ್ಲಿ ಹೆಚ್ಚಿನವರು ದಲಿತರು. ಉತ್ತರ ಪ್ರದೇಶದಲ್ಲಿ 14ನೇ ಶತಮಾನದ ರಾಜ ತ್ರಿಲೋಕ್ ಚಂದಿ ಸ್ವತಂತ್ರ ಹಿಂದು ರಾಜ್ಯವನ್ನು ಕಟ್ಟಿದವನು. ಆತನನ್ನು ಪೂರ್ವ ಉತ್ತರ ಪ್ರದೇಶದಲ್ಲಿ ಈಗಲೂ ಸ್ಮರಿಸಲಾಗುತ್ತದೆ. ಒಡಿಸ್ಸಾದಲ್ಲಿ ಸೂರ್ಯವಂಶಂ ಸಾಮ್ರಾಜ್ಯ ಕಟ್ಟಿದ ರಾಜ ಕಪಿಲೇಂದ್ರ ಅಲ್ಲಿನ ಜನರಿಗೆ ಈಗಲೂ ಆರಾಧ್ಯಪುರುಷ.

ಇಂತಹ ನಿಜವಾದ ಹೀರೋಗಳು ಸಮಾಜದ ಉನ್ನತಿಗೆ ಕಾರಣರಾದರೆ, ನಕಲಿ ಹೀರೋಗಳು ಸಮಾಜವನ್ನು ಅವನತಿಗೆ ಕೊಂಡೊಯ್ಯಬಲ್ಲರು. ಉದಾಹರಣೆಗೆ ನಮ್ಮ ಬಾಲಿವುಡ್ ಹೀರೋಗಳು. ಭಾರತದ ಕೋಟ್ಯಂತರ ಯುವಕರು ಈ ಬಾಲಿವುಡ್ ಹೀರೋಗಳನ್ನೇ ತಮ್ಮ ರೋಲ್ ಮಾಡೆಲ್‌ಗಳೆಂದು ಆರಾಧಿಸುತ್ತಾರೆ. ಕೆಲವೊಮ್ಮೆ ಅವರನ್ನು ದೇವರಂತೆ ಕಾಣುವುದೂ ಇದೆ. ಆದರೆ ನಿಜ ಜೀವನದಲ್ಲಿ ಈ ಹೀರೋಗಳು ನಕಾರಾತ್ಮಕ ನಡೆ–ನುಡಿಗಳನ್ನು ಹೊಂದಿರುತ್ತಾರೆ. ತಾನು ಹಸುವಿನ ಮಾಂಸ ತಿನ್ನುವುದಾಗಿ ಬಹಿರಂಗವಾಗಿ ಘೋಷಿಸಿದ ಹಿಂದಿ ಚಿತ್ರನಟನೊಬ್ಬ ಈಗ ಶ್ರೀರಾಮಾಯಣ ಚಿತ್ರದಲ್ಲಿ ಶ್ರೀರಾಮನ ಪಾತ್ರ ವಹಿಸಲು ತಯಾರಾಗಿದ್ದಾನೆ. ಸಣ್ಣ ಮಕ್ಕಳು ಆತನನ್ನೇ ಶ್ರೀರಾಮನಂತೆ ಪರಿಗಣಿಸಲಾರಂಭಿಸಿದರೆ ಅದರ ಪರಿಣಾಮವು ಏನಾಗಬಹುದೆಂದು ಊಹಿಸಬಹುದು. ಅದು ನಮ್ಮ ಸಂಸ್ಕೃತಿಗೆ ಪ್ರತಿಕೂಲವಾಗಬಹುದು.

ಭಾರತದಲ್ಲಿ ಇದೀಗ 'ನಿಜವಾದ' ಆದರ್ಶ ವ್ಯಕ್ತಿಗಳು ಅತ್ಯಗತ್ಯವಾಗಿ ಬೇಕಾಗಿರುವ ಸಮುದಾಯವೆಂದರೆ ಮುಸ್ಲಿಂ ಸಮುದಾಯ. ಮುಸ್ಲಿಂ ಸಮುದಾಯದಲ್ಲಿ ನಿಜವಾದ ರೋಲ್ ಮಾಡೆಲ್‌ಗಳ ಕೊರತೆ ಇದೆ. ಉಗ್ರವಾದಿ ಮನಸ್ಥಿತಿಯವರನ್ನು, ಭಾರತದ ಮೇಲೆ ಆಕ್ರಮಣವೆಸಗಿದವರನ್ನು ಹೀರೋಗಳೆಂದು ಬಿಂಬಿಸಲಾಗುತ್ತಿದೆ. ಭಾರತದಲ್ಲಿ ವಹಾಬಿ ಆಂದೋಲನವು ಮಧ್ಯಯುಗದ ಉಗ್ರವಾದಿ ಮುಸ್ಲಿಂ ವ್ಯಕ್ತಿಗಳನ್ನೇ ತನ್ನ ಹೀರೋಗಳೆಂದು ಪ್ರತಿಬಿಂಬಿಸುತ್ತದೆ. (ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯಾನಂತರ ತನ್ನದೇ ಸ್ವಾರ್ಥ ಸಾಧನೆಗಾಗಿ ಈ ವಹಾಬಿ ಆಂದೋಲನವನ್ನು ಬೆಂಬಲಿಸುತ್ತಾ ಬಂದಿದೆ.) ಮಧ್ಯಯುಗದ ಈ 'ವಿಭಜನಾವಾದಿ ಹೀರೋಗಳು' ಭಾರತೀಯ ಮುಸ್ಲಿಮರು ಹಿಂದುಗಳ ವಿರುದ್ಧ ಜಿಹಾದ್ ಸಾರು ವಂತೆ ಬಹಿರಂಗವಾಗಿ ಕರೆ ನೀಡುತ್ತಾ ಬಂದವರು. ಇದಕ್ಕೊಂದು ಉದಾಹರಣೆ ಉಗ್ರವಾದಿ ಮುಸ್ಲಿಂ ಬೋಧಕ ಶಾ ವಲಿಲುಲ್ಲಾ. ಆತ 1766ರಲ್ಲಿ ಅಫಘಾನಿಸ್ತಾನದ ಆಕ್ರಮಣಕಾರ ಅಹಮ್ಮದ್ ಷಾ ಅಬ್ದಾಲಿಗೆ ಪತ್ರ ಬರೆದು ಭಾರತದ ಮೇಲೆ ದಂಡೆತ್ತಿ ಬರುವಂತೆ ಕೋರಿದ್ದ. ಭಾರತದಲ್ಲಿನ ಮರಾಠರನ್ನು ಸೋಲಿಸಿ ಹಿಂದುಸ್ಥಾನದಲ್ಲಿ ಇಸ್ಲಾಮಿಕ್ ಸಾಮ್ರಾಜ್ಯ ಸ್ಥಾಪಿಸುವಂತೆ ಆತ ತನ್ನ ಪತ್ರದಲ್ಲಿ ಬರೆದಿದ್ದ.



ಶಾ ವಲಿಲುಲ್ಲಾ

ದೇವಬಂದ ಮೌಲ್ವಿಗಳು ಮತ್ತೊಬ್ಬ ವ್ಯಕ್ತಿಯನ್ನು ಹೀರೋನನ್ನಾಗಿ ಬಿಂಬಿಸಿದ್ದಿದ್ದೆಂದರೆ 1831ರ ಬಾಲಾಕೋಟ್ ಯುದ್ಧದಲ್ಲಿ ಸಿಕ್ಖರ ವಿರುದ್ಧ ಜಿಹಾದ್ ಸಾರಿ ಮೃತಪಟ್ಟ ಸೈಯದ್ ಅಹಮದಾಬಾದ್ ಬರೇಲ್ವಿಯನ್ನು. ಬರೇಲ್ವಿಯ ಸೈದ್ಧಾಂತಿಕ ಅನುಯಾಯಿಯಾದ ಷಾ ಇಸ್ಮಾಯಿಲ್ ದಹಾಲ್ವಿ ಎಂಬಾತ ಕೂಡಾ ತನ್ನ ಪುಸ್ತಕದಲ್ಲಿ ಸೂಫಿ ಪಂಥ ಮತ್ತು ಹಿಂದು ಧರ್ಮವನ್ನು ಕಟುವಾಗಿ ಟೀಕಿಸಿದ್ದಾನೆ. ಆತನನ್ನು ದೇವಬಂದಿಗಳು ಹೀರೋ ಎಂಬಂತೆ ಪರಿಗಣಿಸುತ್ತಾರೆ.ಆತ ಕೂಡಾ ಬಾಲಾಕೋಟ್ ಯುದ್ಧ ದಲ್ಲಿ ಸಾವಿಗೀಡಾಗಿದ್ದ. ದುರಂತವೆಂದರೆ ಭಾರತದ ಪ್ರಥಮ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಂ ಆಜಾದ್ ಕೂಡಾ ಈತನನ್ನು ಶ್ಲಾಘಿಸಿದ್ದರು. ವಿಪರ್ಯಾಸವೆಂದರೆ ಅವರು ಉದಾರ ವಾದಿಯಾದ ಅಕ್ಬರ್‌ನನ್ನು ಟೀಕಿಸಿದ್ದರು. ಅವರಷ್ಟೇ ಅಲ್ಲ, ದೇವಬಂದಿ–ವಹಾಬಿ ಮದ್ರಸಾಗಳಲ್ಲಿ ಕೂಡಾ ಅಕ್ಬರ್‌ನನ್ನು ದ್ವೇಷಿಸಲಾಗುತ್ತದೆ.

ಮತಾಂತರಗೊಂಡ ಮುಸ್ಲಿಮರನ್ನು ಆರ್ಯ ಸಮಾಜವು ಮರಳಿ ಮಾತೃಧರ್ಮಕ್ಕೆ ಕರೆ ತರುವ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ವಹಾಬಿ ಮೌಲ್ವಿಗಳು ಇದನ್ನು ತಡೆಯಲೆಂದು ಮಹಾತ್ಮಾಗಾಂಧಿ ಮತ್ತು ಕಾಂಗ್ರೆಸ್ ಜತೆ 20ರ ಶತಮಾನದ ಆರಂಭದಲ್ಲಿ ಕೈಜೋಡಿಸಿದ್ದರು. ಹಿಂದುಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತರುವ ಕ್ರಮ ಜರುಗಿಸದಂತೆ ಕಾಂಗ್ರೆಸ್ ಮುಖಾಂತರವಾಗಿ ಆರ್ಯ ಸಮಾಜದ ಮೇಲೆ ಒತ್ತಡ ಹೇರಿದ್ದರು.

ದೇವಬಂದಿ ಮುಖಂಡರ ಒಂದು ಬಣವು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸಿನೊಂದಿಗೆ ಕೈಜೋಡಿಸಿತ್ತು. ಅದಕ್ಕೆ ಕಾರಣ ಬ್ರಿಟಿಷರು ಮುಸ್ಲಿಮರಿಗೆ ಕೂಡಾ ಸಮಾನ ವೈರಿಯಾಗಿದ್ದುದು. ಇವರಲ್ಲಿ ಜೆಯುಎಚ್ ಸ್ಥಾಪಕ ಮೌಲಾನಾ ಹುಸೇನ್ ಅಹ್ಮದ್ ಮದನಿ ಕೂಡಾ ಸೇರಿದ್ದಾರೆ. ಈ ಮದನಿ ಔರಂಗಜೇಬನನ್ನು ಹೊಗಳಿದ್ದವರು ಹಾಗೂ ಔರಂಗಜೇಬನ ಉದಾರವಾದಿ ಸೋದರ ಧಾರ ಶುಕೋನನ್ನು ಟೀಕಿಸಿದ್ದವರು.

ಜಿನ್ನಾ ತಮ್ಮ ಇಸ್ಲಾಂ ವಿಸ್ತರಣೆಯ ಕಾರ್ಯವನ್ನು ಪಾಕಿಸ್ತಾನ ನಿರ್ಮಾಣಕ್ಕಷ್ಟೇ ಸೀಮಿತಗೊಳಿಸಿದ್ದಕ್ಕಾಗಿಯೂ ಮದನಿಯವರು ಜಿನ್ನಾರನ್ನು ಟೀಕಿಸಿದ್ದರು. ಇಡೀ ಭಾರತವನ್ನೆ ಇಸ್ಲಾಮ್‌ನ ಅಡಿ ತರಬೇಕೆಂದು ಅವರು ಬಯಸಿದ್ದರು. ಈ ರೀತಿ ಕಾಂಗ್ರೆಸ್ ನೊಂದಿಗೆ ಸೇರಿದ್ದ ದೇವಬಂದಿ ಮುಖಂಡರು ಇಡೀ ಭಾರತವು ಇಸ್ಲಾಂ ಆಗಬೇಕೆಂದು ಬಯಸಿದ್ದರು ಹಾಗೂ ಜಿನ್ನಾನ ಪಾಕಿಸ್ತಾನ ಆಂದೋಲನವು ಈ ನಿಟ್ಟಿನಲ್ಲಿ ಒಂದು ಅಡ್ಡಿ ಎಂದು ಭಾವಿಸಿದ್ದರು.

ಸಮುದಾಯವೊಂದು ಗುಣಾತ್ಮಕ ವ್ಯಕ್ತಿಗಳನ್ನು ಆದರ್ಶ ವ್ಯಕ್ತಿಯನ್ನಾಗಿ ಸ್ವೀಕರಿಸಿದಾಗ ಅದು ರಾಷ್ಟ್ರದ ಉನ್ನತಿಗೂ ಸಹಕಾರಿಯಾಗುತ್ತದೆ.

ರಾಹುಲ್ ವಿರುದ್ಧ ಪಿಯೂಷ್ ಗೊಯಲ್ ಕಿಡಿ

ರಾಹುಲ್ ವಿದೇಶಿ ಶಕ್ತಿಗಳ ಕೈಗೊಂಬೆ

ಹೊಸದಿಲ್ಲಿ: ಪ್ರಧಾನಿ ಮೋದಿಯವರು ದೇಶಹಿತದ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳುವ ಪ್ರಶ್ನೇ ಇಲ್ಲ. ಆದರೆ ರಾಹುಲ್ ಗಾಂಧಿ,ಅವರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಈಗ ದೇಶದಲ್ಲಿ ಕಾರ್ಯಾಚರಿಸುವ ಮೂಲಕ ದೇಶಹಿತದೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದೇ ವಾಸ್ತವ ಸಂಗತಿ ಎಂದು ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ತರಾಟೆಗೆತ್ತಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿಯವರನ್ನು 'ರಾಜಿಮಾಡಿಕೊಂಡ ಪ್ರಧಾನಿ'ಎಂದಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ.

ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ರಾಹುಲ್ ಗಾಂಧಿ ಒಟ್ಟಾರೆಯಾಗಿ ಟೀಕಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಗೊಯಲ್ ಅವರು, ರಾಹುಲ್ ಗಾಂಧಿ ಈ ರೀತಿಯಾಗಿ ದೇಶ ಮತ್ತು ವಿಶ್ವದ ಮುಂದೆ ನಿಯಂತ್ರಣವಿಲ್ಲದ ದಾಷ್ಟ್ರ್ಯದ ರಾಜಕೀಯ ನಡೆಸುತ್ತಿದ್ದಾರೆ. ಸಂಸತ್ತಿರಲಿ, ಹೊರಗಡೆ ಇರಲಿ ಅಥವಾ ಪತ್ರಿಕಾಗೋಷ್ಠಿಯೇ ಇರಲಿ ರಾಹುಲ್ ಗಾಂಧಿ ಮತ್ತು ಗಾಂಧಿ ಕುಟುಂಬ ಇಂದು ನಡೆದುಕೊಳ್ಳುತ್ತಿರುವ ರೀತಿ ಅವರು ಪೂರ್ಣವಾಗಿ ವಿದೇಶಿ ಶಕ್ತಿಗಳ, ರಾಷ್ಟ್ರ ಘಾತಕ ಶಕ್ತಿಗಳ ಮತ್ತು ಭಾರತ ವಿರೋಧಿ ಸಂಘಟನೆಗಳ ಕೈಗೊಂಬೆಯಾಗಿ ದೇಶಹಿತದೊಂದಿಗೆ ರಾಜಿ ಮಾಡಿಕೊಂಡಿದ್ದಾರೆ ಎಂಬುದನ್ನು ಎತ್ತಿತೋರಿಸುತ್ತಿದೆ.

ರಾಹುಲ್‌ಗಾಂಧಿ ರಾಷ್ಟ್ರಹಿತದ ವಿಷಯದಲ್ಲೂ ಚೆಲ್ಲಾಟ ಆಡುತ್ತಿದ್ದಾರೆ ಮತ್ತು ದೇಶದ ಜನತೆಯ ಹಿತಾಸಕ್ತಿಗಳನ್ನೇ ಅಪಾಯಕ್ಕೊಡ್ಡುತ್ತಿದ್ದಾರೆ ಎಂಬುದು ದುರಂತ. ಅವರಿಗೆ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯನ್ನು, ಹೊಸ ಆರ್ಥಿಕ ಪ್ರಗತಿಯನ್ನು ಮತ್ತು ಜಾಗತಿಕ ಶಕ್ತಿಯಾಗಿ ಭಾರತ ಮೂಡಿಬರುತ್ತಿರುವುದನ್ನು ಸಹಿಸಿಕೊಳ್ಳಲು ಅರಗಿಸಿಕೊಳ್ಳಲಾಗುತ್ತಿಲ್ಲ. ಆದ್ದರಿಂದಲೇ ಅವರು ಮತ್ತೆ ಮತ್ತೆ ದೇಶದ ಹಿತದೊಂದಿಗೆ ರಾಜಿ ಎಂದು ಮೋದಿಯವರ ವಿರುದ್ಧ ಪದೇಪದೆ ಸುಳ್ಳಿನ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ.



ದೇಶವನ್ನು ದಶಕಗಳ ಕಾಲ ಆಳಿದ ಈ ಗಾಂಧಿ ಕುಟುಂಬ ದೇಶಹಿತದೊಂದಿಗೆ ರಾಜಿ ಮಾಡುತ್ತಲೇ ಬಂದಿದ್ದರಿಂದ ಭಾರತ ಇಂದು ಅನೇಕ ಸವಾಲುಗಳನ್ನು ಎದುರಿಸಬೇಕಾಗಿ ಬಂದಿದೆ. ಮನಮೋಹನ್ ಸಿಂಗ್ ಸರಕಾರವನ್ನೇ ಉದಾಹರಣೆಗೆ ತೆಗೆದುಕೊಂಡರೂ, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರು ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಮೀರಿ ಸಂವಿಧಾನೇತರ ಅಧಿಕಾರ ಕೇಂದ್ರಗಳಂತೆ ಕಾರ್ಯಾಚರಿಸಿದ್ದನ್ನು ಉಲ್ಲೇಖಿಸಿದರು. ಭಾರತ ಸರಕಾರದ ಸಂಪುಟ ಸಭೆಯ ನಿರ್ಧಾರಗಳನ್ನೂ ಅವರು ಬೀದಿಯಲ್ಲಿ ಹರಿದೆಸೆದರು. ಪ್ರಧಾನಿಯವರನ್ನು ಅಗೌರವದಿಂದ ಕಂಡರು. ರಾಷ್ಟ್ರೀಯ ಸಲಹಾ ಮಂಡಳಿ ಮೂಲಕ ಅವರು ಮನಮೋಹನ್ ಸಿಂಗ್ ಸರಕಾರದ ಮೇಲೆ ನಿಯಂತ್ರಣ ಸಾಧಿಸಿದರು. ದೇಶದ ಮೇಲೆ ಎಡಪಂಥೀಯ ಸಿದ್ಧಾಂತಗಳನ್ನು ಹೇರಿದರು.

ರಕ್ಷಣಾ ಹಗರಣಗಳಲ್ಲಿ ನೆಹರೂ -ಗಾಂಧಿ ಕುಟುಂಬದ ಪಾತ್ರ: ನೆಹರೂ -ಗಾಂಧಿ ಕುಟುಂಬ ರಕ್ಷಣಾ ಜೀಪು ಹಗರಣದಿಂದ ಹಿಡಿದು ಬೊಫೋರ್ಸ್ ಹಗರಣಗಳನ್ನು ಎಸಗಿದ್ದಲ್ಲದೆ, ರಾಹುಲ್‌ಗಾಂಧಿ ಪರವಾಗಿ ಅಂದಿನ ವಿದೇಶಾಂಗ ಸಚಿವರು ಬೊಫೋರ್ಸ್ ಹಗರಣದ ತನಿಖೆಯನ್ನೇ ನಿಲ್ಲಿಸುವಂತೆ ಸ್ವೀಡೀಷ್ ಸರಕಾರದ ಮೇಲೆ ಒತ್ತಡ ಹೇರಿದರು. ತಮ್ಮ ಕುಟುಂಬದ ಮಿತ್ರ ಒಟ್ಟಾವಿಯೋ ಖಟ್ರೋಚ್ಚಿಯನ್ನು ರಕ್ಷಿಸಲು ಈ ಹಗರಣದ ತನಿಖೆಯನ್ನು ನಿಲ್ಲಿಸುವಂತೆ ಮಾಡುವ ಮೂಲಕ ದೇಶದ ರಕ್ಷಣೆಯಂತಹ ವಿಷಯದಲ್ಲೇ ರಾಜಿ ಮಾಡಿಕೊಂಡಿದ್ದನ್ನು ಅವರು ನೆನಪಿಸಿದರು.

ತುರ್ತು ಪರಿಸ್ಥಿತಿಯಂತೆ ವಿಷಾದ ಖಂಡಿತ

ಹೊಸದಿಲ್ಲಿ: ಕಾಂಗ್ರೆಸ್ ತುರ್ತು ಪರಿಸ್ಥಿತಿ ಬಗ್ಗೆ ವಿಷಾದಿಸುವಂತೆಯೇ ಎಐ ಶೃಂಗಸಭೆಯಲ್ಲಿ ನಡೆಸಿದ ಪ್ರತಿಭಟನೆ ಬಗ್ಗೆಯೂ ವಿಷಾದಿಸುವುದಕ್ಕಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು.ಈ ನಾಚಿಕೆಗೇಡಿನ ಕೃತ್ಯದ ವಿಷಯವನ್ನು ದೇಶವು ಶಾಶ್ವತವಾಗಿ ನೆನಪಿಸುತ್ತದೆ ಎಂದು ನುಡಿದರು. ಭಾರತೀಯ ಯುವ ಕಾಂಗ್ರೆಸ್ ಸದಸ್ಯರುರಾಷ್ಟ್ರರಾಜಧಾನಿಯಲ್ಲಿನಭಾರತ್‌ಮಂಟಪದ ಅಲ್ ಇಂಪ್ಯಾಕ್ಟ್ ಇಂಡಿಯಾ ಶೃಂಗಸಭೆಯಲ್ಲಿ ಅರೆ ನಗ್ನ ಸ್ಥಿತಿಯಲ್ಲಿ, ರಾಜಿ ಮಾಡಿಕೊಂಡ ಪ್ರಧಾನಿ ಎಂಬ ಘೋಷಣೆಗಳನ್ನು ಬರೆದ ಘಟನೆಗೆ ಸಂಬಂಧಿಸಿದಂತೆ ಈ ಸಚಿವೆ ನಿರ್ಮಲಾ ಸೀತಾರಾಮನ್ ಈ ರೀತಿ ತರಾಟೆತ್ತಿಕೊಂಡಿದ್ದಾರೆ. ಬಿಸಿನೆಸ್ ಸ್ಟ್ಯಾಂಡರ್ಡ್ ಮಂಥನ್ ಕಾರ್ಯಕ್ರಮವನ್ನುದ್ದೇಶಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಪ್ರತಿಭಟಿಸಲು ಇದು ಸರಿಯಾದ ನಡವಳಿಕೆಯೇ ಎಂದು ಪ್ರಶ್ನಿಸಿದ್ದಾರೆ. ಭಾರತೀಯರನ್ನು ಟೀಕಿಸುವ ಮತ್ತು ಎಐ ಶೃಂಗಸಭೆಯನ್ನು ಮೋಸ ಎಂದು ಕರೆಯುವ ಮೊದಲು, ನೀವು ಎಷ್ಟು ಮೋಸ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿಕೊಳ್ಳಿ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟಿಸುವ ಮಾರ್ಗ ಇದುವೇ? ಕಾಂಗ್ರೆಸ್ ಪಕ್ಷವು ತುರ್ತು ಪರಿಸ್ಥಿತಿಯ ಬಗ್ಗೆ ವಿಷಾದಿಸುವ ರೀತಿಯಲ್ಲಿಯೇ ಇದಕ್ಕಾಗಿ ವಿಷಾದಿಸಬೇಕು ಎಂದರು.




ದೇಶದಲ್ಲಿ ಮಹಿಳೆಯರಲ್ಲಿ ಕ್ಯಾನ್ಸರ್ ಸಂಬಂಧಿತ ಸಾವುಗಳಿಗೆ ಪ್ರಮುಖ ಕಾರಣಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಒಂದು. ಈ ಕಾಯಿಲೆ ಪ್ರಮಾಣವನ್ನು ಕಡಿಮೆ ಮಾಡುವ ಗುರಿ ಹೊಂದಿರುವ ಮಹತ್ವಾಕಾಂಕ್ಷೆಯ ರಾಷ್ಟ್ರವ್ಯಾಪಿ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್ ಪಿವಿ) ವ್ಯಾಕ್ಸಿ ನೇಷನ್ ಕಾರ್ಯಕ್ರಮವನ್ನು ಪ್ರಾರಂಭಿಸಲು ಭಾರತ ಸರ್ಕಾರ ಸಜ್ಜಾಗಿದೆ. ಈ ಯೋಜನೆ ವಿಶಾಲ ದೃಷ್ಟಿಕೋನವುಳ್ಳ ಸ್ವಸ್ಥನಾರಿ ಸಶಕ್ತ್ ಪರಿವಾರ್ ಮಿಷನ್‌ನ ಭಾಗವಾಗಿದ್ದು, 14 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಬಾಲಕಿಯರಿಗೆ ಎಚ್‌ಪಿವಿ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು.

ಸ್ವಸ್ಥನಾರಿ ಅಭಿಯಾನ

ಲಸಿಕೆ ವಿವರಗಳು

ಕಾರ್ಯಕ್ರಮದಡಿಯಲ್ಲಿ, ಅರ್ಹ ಬಾಲಕಿಯರು ಗಾರ್ಡಸಿಲ್ ಎಚ್‌ಪಿವಿ ಲಸಿಕೆ ಸ್ವೀಕರಿಸುತ್ತಾರೆ. ಇದು ನಾಲ್ಕು ಎಚ್‌ಪಿವಿ ವಿಧಗಳ ವಿರುದ್ಧ ರಕ್ಷಿಸುವ ಕ್ವಾಡ್ರಿವೆಲೆಂಟ್ ಚುಚ್ಚುಮದ್ದಾಗಿದ್ದು, ಇದು ಜನನಾಂಗದ ಭಾಗಕ್ಕೆ ಸಂಬಂಧಿಸಿದ 6 ಮತ್ತು 11 ನೇ ವಿಧಗಳು ಸೇರಿದಂತೆ, ಹೆಚ್ಚಿನ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳಿಗೆ ಸಂಬಂಧಿಸಿದ ವಿಧ 16 ಮತ್ತು 18 ನ್ನು ತಡೆಯುತ್ತದೆ. ಸಾರ್ವಜನಿಕ ಆರೋಗ್ಯ ಅಧಿಕಾರಿಗಳ ಪ್ರಕಾರ, 14 ನೇ ವಯಸ್ಸಿನಲ್ಲಿ ಲಸಿಕೆಯನ್ನು ನೀಡುವುದು-ಎಚ್‌ಪಿವಿಯಿಂದ ಬಲವಾದ ರಕ್ಷಣೆ ನೀಡುತ್ತದೆ. ಇದು ಜಾಗತಿಕ ಶಿಫಾರಸು ಹೊಂದಿದೆ ಎಂಬುದು ಗಮನಾರ್ಹ.

ಗರ್ಭಕಂಠದ ಕ್ಯಾನ್ಸರ್ ವಿರುದ್ಧ ರಾಷ್ಟ್ರವ್ಯಾಪಿ ಎಚ್‌ಪಿವಿ ಲಸಿಕಾ ಅಭಿಯಾನ



ಸುದ್ದಿ ಸಮಗ್ರ

ರೋಗ ನಿರೋಧಕ ರಕ್ಷಣೆ

ಜಾಗತಿಕ ಮತ್ತು ಭಾರತೀಯ ಸಂಶೋಧನೆಯಿಂದ ವಿಕಸನಗೊಂಡಿರುವ ಒಂದೇ ಡೋಸ್ ವೇಳಾಪಟ್ಟಿಯ ಆಯ್ಕೆ ಹದಿಹರೆಯದವರಿಗೆ ರೋಗನಿರೋಧಕ ರಕ್ಷಣೆ ನೀಡುವ ಬಗ್ಗೆ ಬಲವಾದ ಪುರಾವೆಗಳಿವೆ. ಇದು ಸಾಮೂಹಿಕ ರೋಗನಿರೋಧಕ ವ್ಯವಸ್ಥೆಗಳಲ್ಲಿ ಜಾಗತಿಕ ಸಹಕಾರದ ಒಂದು ಭಾಗವೂ ಹೌದು.

ಆರೋಗ್ಯ ವ್ಯವಸ್ಥೆ ಬಲಕ್ಕೆ ಆದ್ಯತೆ

ಈ ಸಮಗ್ರ ಆರೋಗ್ಯ ಅಭಿಯಾನದಲ್ಲಿ ಎಚ್‌ಪಿವಿ ಲಸಿಕೆಯನ್ನು ಸೇರಿಸುವ ಮೂಲಕ, ಸಮುದಾಯ ಮಟ್ಟದ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆರಂಭದಲ್ಲೇ ರೋಗವನ್ನು ತಡೆಗಟ್ಟುವ ಕ್ರಮಗಳನ್ನು ಉತ್ತೇಜಿಸಲು ಸರ್ಕಾರ ಉದ್ದೇಶಿಸಿದೆ. ಈ ಯೋಜನೆ, ಸಾಂಕ್ರಾಮಿಕವಲ್ಲದ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮೂಡಿಸುವುದು ಸೇರಿದಂತೆ, ಇತರ ಸಮಸ್ಯೆಗೂ ಸ್ಕ್ರೀನಿಂಗ್ ಮೊದಲಾದ ಪರಿಹಾರ ಕಲ್ಪಿಸುತ್ತಿದೆ.

ಲಸಿಕೆ ಎಲ್ಲಿ ದೊರೆಯುತ್ತದೆ?

ಲಸಿಕೆ ಸ್ವಯಂಪ್ರೇರಿತವಾಗಿರುತ್ತದೆ ಮತ್ತು ರಾಷ್ಟ್ರವ್ಯಾಪಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಸೇರಿದಂತೆ ಗೊತ್ತುಪಡಿಸಿದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಶಿಫಾರಸು ಮಾಡಿದ ವಯಸ್ಸಿನಲ್ಲಿ ನೀಡಿ ದಾಗ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟು ವಲ್ಲಿ ಅದರ ಪರಿಣಾಮ ಹೆಚ್ಚಿರುತ್ತದೆ ಎಂದು ವೈಜ್ಞಾನಿಕ ಪುರಾವೆಗಳು ತಿಳಿಸಿವೆ. ಈಗ ಏಕ-ಡೋಸ್ ವಿಧಾನ ಎಲ್ಲೆಡೆ ಪಾಲಿಸಲಾಗುತ್ತದೆ.


ಪ್ರಮುಖ ಆರೋಗ್ಯ ಯೋಜನೆ

ಎಚ್‌ಪಿವಿ ಲಸಿಕಾ ಅಭಿಯಾನ, "ಸ್ವಸ್ಥನಾರಿ ಸಶಕ್ತ್ ಪರಿವಾರ್ ಅಭಿಯಾನ್" ದ ಪ್ರಮುಖ ಅಂಶ. ಆರೋಗ್ಯ ಸಚಿವಾಲಯದ ಮೂಲಗಳು, ಭಾರತದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಕೇಂದ್ರೀಕರಿಸಿದ ಅತಿದೊಡ್ಡ ಆರೋಗ್ಯ ಯೋಜನೆ ಇದೆಂದು ಬಣ್ಣಿಸಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಗಳು ಜಂಟಿಯಾಗಿ ದೇಶಾದ್ಯಂತ ರೋಗ ತಡೆಗಟ್ಟುವ, ಪ್ರಚಾರ ಮಾಡುವ ಮತ್ತು ಗುಣಪಡಿಸುವ ಸೇವೆಗಳನ್ನು ನೀಡುವ ವ್ಯಾಪಕ ಆರೋಗ್ಯ ಶಿಬಿರಗಳನ್ನು ಈ ಹಿಂದೆಯೂ ಆಯೋಜಿಸಿವೆ.

ಸಾರ್ವಜನಿಕ ಆರೋಗ್ಯವೆಂಬ ಸವಾಲು

ಗರ್ಭಕಂಠದ ಕ್ಯಾನ್ಸರ್ ಭಾರತದಲ್ಲಿ ಪ್ರಮುಖ ಸಾರ್ವಜನಿಕ ಆರೋಗ್ಯ ಸವಾಲಾಗಿ ಉಳಿದಿದೆ. ಇದರಿಂದ ಮಹಿಳೆಯರಲ್ಲಿ ಕ್ಯಾನ್ಸರ್ ಪತ್ತೆ ಮಾತ್ರವಲ್ಲದೆ, ಮರಣದ ಪ್ರಮಾಣವೂ ಹೆಚ್ಚಲು ಕಾರಣವಾಗಿದೆ. ಹೆಚ್ಚಿನ ಅಪಾಯದ ಎಚ್‌ಪಿವಿ ವಿಧಗಳನ್ನು ಗಮನಿಸಿದಾಗ ನಿರಂತರವಾದ ಸೋಂಕು ಬಹುಪಾಲು ಗರ್ಭಕಂಠದ ಕ್ಯಾನ್ಸರ್‌ಗಳಿಗೆ ಕಾರಣವಾಗುತ್ತದೆ, ಎಂದು ತಿಳಿದುಬಂದಿದೆ. ಎಚ್‌ಪಿವಿ ಲಸಿಕೆ, ಸೋಂಕಿನ ಪ್ರಮಾಣ ಮತ್ತು ಭವಿಷ್ಯದಲ್ಲಿ ಕ್ಯಾನ್ಸರ್ ಪ್ರಕರಣಗಳನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ.

- ಎಚ್‌ಪಿವಿ ವ್ಯಾಕ್ಸಿನೇಷನ್ ಅಭಿಯಾನ- ಒಂದು ನೋಟದಲ್ಲಿ
- ಮಹಿಳೆಯರು ಮತ್ತು ಮಕ್ಕಳಿಗಾಗಿ 'ಸ್ವಸ್ಥ ನಾರಿ ಸಶಕ್ತ್ ಪರಿವಾರ' ಆರೋಗ್ಯ ಅಭಿಯಾನದ ಭಾಗ.
- ಯಾರು ಅರ್ಹರು- 14 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಬಾಲಕಿಯರು
- ಲಸಿಕೆ ಯಾವುದು- ಗಾರ್ಡಸಿಲ್, ಪ್ರಮುಖ ಕ್ಯಾನ್ಸರ್-ಕಾರಕಗಳ ವಿರುದ್ಧ ರಕ್ಷಿಸುವ ಕ್ವಾಡ್ರಿವೆಲೆಂಟ್ ಎಚ್‌ಪಿವಿ ಲಸಿಕೆ.
- ವೆಚ್ಚ- ಎಲ್ಲಾ ಅರ್ಹರಿಗೂ ಚುಚ್ಚುಮದ್ದು ಉಚಿತ ಮತ್ತು ಸ್ವಯಂಪ್ರೇರಿತ.
- ಉದ್ದೇಶ- ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್ ಸಂಭವಿಸುವಿಕೆಯನ್ನು ಕಡಿಮೆ ಮಾಡುವುದು



ಅನುಷ್ಠಾನ ಹೇಗೆ?

ಮುಂಬರುವ ವಾರಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಆರೋಗ್ಯ ಸೌಲಭ್ಯಗಳ ಮೂಲಕ ಲಸಿಕೆ ಒದಗಿಸುವ ಮೂಲಕ ಈ ಅಭಿಯಾನವನ್ನು ರಾಷ್ಟ್ರವ್ಯಾಪಿ ಪ್ರಾರಂಭಿಸಲು ಅಧಿಕಾರಿಗಳು ಯೋಜಿಸಿದ್ದಾರೆ. ಕಾರ್ಯ ಕ್ರಮದ ಸ್ವಯಂಪ್ರೇರಿತ ಸ್ವರೂಪ ಮತ್ತು ವೆಚ್ಚಕ್ಕೆ ಇರುವ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಸಮಾಜದ ಎಲ್ಲರಿಗೂ ಯೋಜನೆ ತಲುಪುವುದನ್ನು ಖಚಿತಪಡಿಸಿಕೊಳ್ಳಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಪೋಷಕ ಆರೈಕೆ ಒದಗಿಸಲು ಮತ್ತು ಪೋಷಕರ ವಿಶ್ವಾಸವನ್ನು ಹೆಚ್ಚಿಸಲು ಚುಚ್ಚುಮದ್ದು ಕೊಡುವ ಸ್ಥಳಗಳನ್ನು ಅಸ್ತಿತ್ವದಲ್ಲಿರುವ ಆರೋಗ್ಯ ಮೂಲಸೌಕರ್ಯಗಳೊಂದಿಗೆ ಸಂಪರ್ಕಿಸುವ ಪ್ರಯತ್ನ ನಡೆಯುತ್ತಿದೆ. ಆರೋಗ್ಯ ಅಧಿಕಾರಿಗಳು ಚುಚ್ಚುಮದ್ದು ತೆಗೆದುಕೊಳ್ಳುವವರ ಆರೈಕೆ ಮತ್ತು ಪರಿಣಾಮವನ್ನು ಮೇಲ್ವಿಚಾರಣೆ ಮಾಡುವ ಯೋಜನೆಯಿದೆ. ಭವಿಷ್ಯದಲ್ಲಿ ಸಾಮಾನ್ಯ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದಲ್ಲಿ ಎಚ್‌ಪಿವಿ ಲಸಿಕೆಯನ್ನು ಸಂಯೋಜಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಕಿರುಸುದ್ದಿ

ದಿಲ್ಲಿ ಸ್ಫೋಟ: ಎನ್‌ಐಎ ವಶಕ್ಕೆ ಇಬ್ಬರು ಶಂಕಿತರು

ಹೊಸದಿಲ್ಲಿ: ಕೆಂಪು ಕೋಟೆ ಸಮೀಪ ನಡೆದಿದ್ದ ಆತ್ಮಾಹುತಿ ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲಿ ಇನ್ನಿಬ್ಬರು ಶಂಕಿತ ಉಗ್ರರನ್ನು ಎನ್‌ಐಎ ಬಂಧಿಸಿದೆ. ಇದರಿಂದ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ 11ಕ್ಕೇರಿದೆ. ಜಮ್ಮು ಕಾಶ್ಮೀರದ ಗಾಂದರ್‌ಬಾಲ್ ನಿವಾಸಿ ಜಮೀರ್ ಅಹ್ಮದ್ ಅಹಂಗಾರ್ ಮತ್ತು ಶ್ರೀನಗರ ನಿವಾಸಿ ತುಫೈಲ್ ಅಹ್ಮದ್ ಎಂಬ ಇಬ್ಬರು ಶಂಕಿತರನ್ನು ಎನ್‌ಐಎ ಬಂಧಿಸಿದೆ. ದಿಲ್ಲಿ ಸ್ಫೋಟದ ಷಡ್ಯಂತ್ರ ರಚಿಸಿದ ಮತ್ತು ಸಕ್ರಿಯವಾಗಿ ಒಳಗೊಂಡಿದ್ದಾರೆಂಬ ಶಂಕೆಯಿಂದ ಇವರಿಬ್ಬರನ್ನು ವಿಚಾರಿಸಲು ಕಸ್ಟಡಿಗೆ ತೆಗೆದುಕೊಂಡಿದೆ.

ಅನಿಲ್ ಅಂಬಾನಿ ಮನೆ ಜಪ್ತಿ

ಮುಂಬೈ: ಉದ್ಯಮಿ ಅನಿಲ್ ಅಂ.ಬಾನಿ ಒಡೆತನದ ಅಬೋಡ್ ನಿವಾಸದ ಮೇಲೆಎ ಜಾರಿ ನಿರ್ದೇಶನಾಲಯ(ಇಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಕ್ರಮ ಕೈಗೊಂಡಿದೆ. ಈ ಕುರಿತು ಇಡಿ ಮಾಹಿತಿ ನೀಡಿದ್ದು, ಇದು 2002ರ ಪಿಎಂಎಲ್‌ಎ ಅನ್ವಯದಲ್ಲಿ 3,716.83 ಕೋಟಿ ರೂ. ಮೌಲ್ಯದ್ದಾಗಿದೆ. ಅನಿಲ್ ಅಂಬಾನಿ ಮತ್ತು ಅವರ ಗ್ರೂಪ್ ಕಂಪನಿಗಳ ವಿರುದ್ಧ ಇದುವರೆಗೆ 15,000 ಕೋಟಿ ರೂ. ಗಳಿಗಿಂತ ಹೆಚ್ಚು ಆಸ್ತಿ ಮುಟ್ಟುಗೋಲು ಹಾಕಲಾಗಿದೆ.

ಬನ್ಸಾಲ್‌ಗೆ ಕೇಂದ್ರದಿಂದ ಶೋಕಾಸ್ ನೋಟಿಸ್

ಹೊಸದಿಲ್ಲಿ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ಗೆ ಭೇಟಿ ನೀಡುವ ವೇಳೆ ಬಿಎಸ್‌ಎನ್‌ಎಲ್ ನಿರ್ದೇಶಕ ವಿವೇಕ್ ಬನ್ಸಾಲ್ ಅವರು ತಮ್ಮ ಅಧಿಕಾರಿಗೆ ನಿರ್ದೇಶಿಸಿದ್ದ ಶಿಷ್ಟಾಚಾರ ವ್ಯವಸ್ಥೆಗಳು ವಿವಾದಕ್ಕೀಡಾಗಿದೆ. ವಿವಾದದ ನಂತರ ಕೇಂದ್ರವು ಅವರ ವಿರುದ್ಧ ಶಿಷ್ಟಾಚಾರ ಕ್ರಮ ಜಾರಿ ಮಾಡಿದೆ.

ಪ್ರಯಾಗ್‌ರಾಜ್ ಗೆ ಭೇಟಿ ನೀಡಲು ಮಾಡಿದ್ದ ವಿಐಪಿ ವ್ಯವಸ್ಥೆಯ ಬಗ್ಗೆ ಸಾರ್ವಜನಿಕ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ನ ಹಿರಿಯ ಅಧಿಕಾರಿಯೊಬ್ಬರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ಬಿಎಸ್‌ಎನ್‌ಎಲ್ ನಿರ್ದೇಶಕ ವಿವೇಕ್ ಬನ್ಸಾಲ್‌ಗೆ ಶೋಕಾಸ್ ನೋಟಿಸ್ ನೀಡಲಾಗಿದ್ದು, ಉತ್ತರಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ವಿವರಣೆಯನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ. ಈ ವ್ಯವಸ್ಥೆಗಳು ಸ್ಥಾಪಿತ ನಿಯಮಗಳು ಮತ್ತು ಸಂಪ್ರದಾಯಗಳ ಉಲ್ಲಂಘನೆ ಎಂದು ಸಚಿವರು ಹೇಳಿದ್ದಾರೆ. ಭೇಟಿಯ ಭಾರೀ ಸಿದ್ಧತೆಗಳನ್ನು ವಿವರಿಸುವ ಆಂತರಿಕ ಆದೇಶ ಬಯಲಾದ ಬಳಿಕ ವಿವಾದ ಹುಟ್ಟಿಕೊಂಡಿತ್ತು. 50ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಆತಿಥ್ಯ, ಸಾರಿಗೆ, ಸ್ನಾನದ ವ್ಯವಸ್ಥೆ ಮತ್ತು ಛಾಯಾಗ್ರಹಣ ಸೇರಿದಂತೆ ಕರ್ತವ್ಯಗಳನ್ನು ನಿಯೋಜಿಸಲಾಗಿತ್ತು. ದೇವಾಲಯಗಳಿಗೆ ಭೇಟಿ ನೀಡಲು ಮತ್ತು ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಲು ಸ್ನಾನದ ಕಿಟ್‌ಗಳು, ಉಪಾ ಹಾರ ಮತ್ತು ಬೆಂಗಾವಲು ಸೇವೆಗಳನ್ನೂ ಯೋಜಿಸಲಾಗಿತ್ತು. ವಿರೋಧ ಹೆಚ್ಚಾದ ಬಳಿಕ ಒಂದೇ ದಿನದಲ್ಲಿ ಭೇಟಿಯನ್ನು ರದ್ದುಗೊಳಿಸಲಾಗಿದೆ.

ಆರ್‌ಒಎನ್ 95 ಇ20 ಪೆಟ್ರೋಲ್ ಕಡ್ಡಾಯ

ಹೊಸದಿಲ್ಲಿ: ಭಾರತ ಸರ್ಕಾರ ಹೊಸ ಇಂಧನ ಮಾನದಂಡವನ್ನು ಕಡ್ಡಾಯಗೊಳಿಸಿದ್ದು, ಕನಿಷ್ಠ ಆರ್‌ಒಎನ್ 95 ನೊಂದಿಗೆ ಇ 20 ಪೆಟ್ರೋಲ್ ಅನ್ನು ಏಪ್ರಿಲ್ 1 ರಿಂದ ರಾಷ್ಟ್ರವ್ಯಾಪಿ ಮಾರಾಟ ಮಾಡಬೇಕಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಈ ನಿರ್ದೇಶನವನ್ನು ಹೊರಡಿಸಿದ್ದು, ಶೇ.20ರಷ್ಟು ಎಥೆನಾಲ್ ಬೆರೆಸಿದ ಪೆಟ್ರೋಲ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ತಲುಪಿಸುವ ಮೊದಲು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಗುಣಮಟ್ಟವನ್ನು ಪೂರೈಸಬೇಕು ಎಂದು ಸೂಚಿಸಲಾಗಿದೆ.

ಸೂಚನೆಯನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನುಸರಿಸುವುದು ಕಡ್ಡಾಯ. ಅಧಿಸೂಚನೆಯ ಮೂಲಕ ತೈಲ ಸಂಸ್ಥೆಗಳಿಗೆ ಇದರ ಪಾಲನೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ವಿಶೇಷ ಸಂದರ್ಭಗಳಲ್ಲಿ, ಕೇಂದ್ರ ಸರ್ಕಾರ ನಿರ್ದಿಷ್ಟ ಪ್ರದೇಶಗಳಿಗೆ ಅಥವಾ ಸೀಮಿತ ಅವಧಿಗೆ ವಿನಾಯಿತಿ ನೀಡಬಹುದು ಎಂದು ಷರತ್ತು ವಿಧಿಸಲಾಗಿದೆ. ಹೆಚ್ಚಿನ ಹೊಸ ವಾಹನಗಳು ಈ ಹೆಚ್ಚಿನ ಎಥೆನಾಲ್ ಮಿಶ್ರಿತ ಪೆಟ್ರೋಲ್‌ಗೆ ಹೊಂದಿಕೊಳ್ಳುವ ನಿರೀಕ್ಷೆಯಿದೆ. ಈ ನೀತಿ, ಕಚ್ಚಾ ತೈಲದ ಆಮದನ್ನು ಕಡಿತಗೊಳಿಸುವುದು, ವಾಹನಗಳ ಹೊಗೆಯ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಕಬ್ಬು ಮೊದಲಾದ ಬೆಳೆಗಳಿಂದ ದೇಶೀಯವಾಗಿ ಉತ್ಪಾದಿಸುವ ಎಥೆನಾಲ್‌ಗೆ ಬೇಡಿಕೆ ಹೆಚ್ಚಿಸುವ ಗುರಿ ಹೊಂದಿದೆ. ಎಥೆನಾಲ್ ಒದಗಿಸುವ ಹೆಚ್ಚಿನ ಆಕ್ಟೇನ್ ರೇಟಿಂಗ್ ಎಂಜಿನ್‌ನ ಕಾರ್ಯಕ್ಷಮತೆ ಮತ್ತು ಇಂಧನ ಸ್ಥಿರತೆಯನ್ನು ಸುಧಾರಿಸುವ ನಿರೀಕ್ಷೆಯಿದೆ. ಹೊಸ ಹಣಕಾಸು ವರ್ಷದ ಆರಂಭದಲ್ಲಿ ದೇಶಾದ್ಯಂತ ಈ ಸೌಲಭ್ಯವನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ

ಎನ್ಸಿಇಆರ್‌ಟಿ ವಿವಾದಿತ ಅಧ್ಯಾಯಕ್ಕೆ ಶೀಘ್ರ ಕತ್ತರಿ?

ಹೊಸದಿಲ್ಲಿ: ಎಂಟನೇ ತರಗತಿಯ ಪಠ್ಯ ಪುಸ್ತಕದಲ್ಲಿ ಮುದ್ರಿಸಲ್ಪಟ್ಟ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಎಂಬ ವಿವಾದಿತ ಅಧ್ಯಾಯವನ್ನು ಎನ್‌ಸಿಇಆರ್‌ಟಿ ತೆಗೆದುಹಾಕುವ ಸಾಧ್ಯತೆಯಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ. ತನ್ನ ವೆಬ್‌ಸೈಟ್‌ನಿಂದ ಪುಸ್ತಕವನ್ನು ಈಗಾಗಲೇ ತೆಗೆದುಹಾಕಿದೆ. ಪಠ್ಯ ಪುಸ್ತಕದಲ್ಲಿ ವಿವಾದಿತ ಅಧ್ಯಾಯವು ನ್ಯಾಯಾಂಗ ವ್ಯವಸ್ಥೆ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡಿದೆ ಎಂಬ ಕಾರಣ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜೊಯಿಮಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿಪುಲ್ ಎಂ ಪಾಂಚೋಲಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ತ್ರಿ-ಸದಸ್ಯ ಪೀಠವು ಸ್ವಯಂಪ್ರೇರಿತ ವಿಚಾರಣೆ ನಡೆಸಲು ನಿರ್ಧರಿಸಿದೆ. ಹಿರಿಯ ವಕೀಲ ಕಪಿಲ್ ಸಿಬಲ್, ಅಭಿಷೇಕ್ ಸಿಂಗ್ವಿ ಸಹ ಆದಷ್ಟು ಬೇಗ ನ್ಯಾಯಪೀಠ ಪರಿಗಣಿಸಬೇಕು ಎಂದು ಮನವಿ ಮಾಡಿದ್ದರು. ಆದರೆ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಪ್ರತ್ಯೇಕವಾಗಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಭೂಮಿಯಲ್ಲಿ ಯಾರೂ ನ್ಯಾಯಾಂಗ ವ್ಯವಸ್ಥೆಯ ಹೆಸರು ಕೆಡಿಸಲು ಮತ್ತು ಸಮಗ್ರತೆಗೆ ಧಕ್ಕೆ ತರಲು ಅನುಮತಿಸಲು ಸಾಧ್ಯವಿಲ್ಲ ಎಂದು ಸಿಜೆಐ ಆಕ್ಷೇಪ ವ್ಯಕ್ತಪಡಿಸಿದ್ದರು.

ವಿವಾದಿತ ಅಂಶ: ಸಮಾಜದಲ್ಲಿ ನ್ಯಾಯಾಂಗದ ಪಾತ್ರ ಎಂಬ ಅಧ್ಯಾಯ ವಿವಾದ ಸೃಷ್ಟಿಸಿದೆ. ನ್ಯಾಯದಾನದಲ್ಲಿನ ವಿಳಂಬ, ನ್ಯಾಯ ನಿರಾಕರಿಸಿದಂತೆ ಮತ್ತು ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಎಂಬ ಭಾಗಗಳಲ್ಲಿ, ಭ್ರಷ್ಟಾಚಾರ ಮತ್ತು ಪ್ರಕರಣಗಳ ಬಾಕಿ ಸೇರಿದಂತೆ ನ್ಯಾಯಾಂಗ ಎದುರಿಸುವ ಸವಾಲುಗಳನ್ನು ಉಲ್ಲೇಖಿಸಲಾಗಿದೆ.

ಐಇಡಿ ದಾಳಿ ಸಂಚು ವಿಫಲ

ಶ್ರೀನಗರ: ಜಮ್ಮು ಕಾಶ್ಮೀರದಲ್ಲಿ ಉಗ್ರ ಅಡಗುದಾಣವನ್ನು ಧ್ವಂಸಗೊಳಿಸುವ ಮೂಲಕ ಭಯೋತ್ಪಾದಕ ದಾಳಿ ಸಂಚನ್ನು ಭಾರತೀಯ ಸೇನೆ ವಿಫಲಗೊಳಿಸಿದೆ. ಪೂಂಛ್ ಜಿಲ್ಲೆಯಲ್ಲಿ ಸ್ಫೋಟಕಗಳನ್ನು ಬಳಸಿಕೊಂಡು ದಾಳಿ ನಡೆಸಲು ಉಗ್ರರು ಸಂಚು ರೂಪಿಸಿದ್ದರು. ಎರಡು ಐಇಡಿ, ಒಂದು ಪಿಸ್ತೂಲ್ ವಶಪಡಿಸಿರುವುದಾಗಿ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಮೇಂಡರ್ ಪ್ರದೇಶದ ಸಲಾನಿ ಕಸ್‌ಬ್ಲಾರಿ ಗ್ರಾಮದಲ್ಲಿ ಸೇನೆ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಶಸ್ತ್ರಾಸ್ತ್ರಗಳನ್ನು ವಶಪಡಿಸಲಾಗಿದೆ. ಪಿಸ್ತೂಲಿನ 24 ಸುತ್ತು ಬುಲೆಟ್‌ಗಳು, ಸುಮಾರು 4.5 ಕೆ.ಜಿ ಭಾರದ ಎರಡು ಸುಧಾರಿತ ಸ್ಫೋಟಕ ಉಪಕರಣ(ಐಇಡಿ)ಗಳಿದ್ದವು, ಬಳಿಕ ನಿಯಂತ್ರಿತ ಸ್ಫೋಟದಿಂದ ಐಇಡಿಗಳನ್ನು ನಾಶಗೊಳಿಸಲಾಗಿದೆ. ಇದರಿಂದ ಯಾವುದೇ ರೀತಿಯ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.ಗಡಿ ಪ್ರದೇಶಗಳನ್ನೇ ಗುರಿಯಾಗಿಸಿ ದಾಳಿಗೆ ಉಗ್ರರು ಸಂಚು ರೂಪಿಸಿದ್ದರೂ ಸಕಾಲ ದಲ್ಲಿ ಉಗ್ರರ ಅಡಗುದಾಣವನ್ನು ಧ್ವಂಸ ಮಾಡಿದ್ದರಿಂದ ದಾಳಿ ಯತ್ನ ವಿಫಲವಾಗಿದೆ.

ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿ ಸಾಗಿಸುವ ಸಾಮರ್ಥ್ಯದ ಸ್ಟೆಲ್ತ್ ಫ್ರಿಗೇಟ್

ಮಾ.14ರಂದು ನೌಕಾಪಡೆಗೆ ತಾರಾಗಿರಿ

ಹೊಸದಿಲ್ಲಿ: ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಸಾಗಿಸುವ ಸಾಮರ್ಥ್ಯವಿರುವ ಸ್ಟೆಲ್ತ್ ಫ್ರಿಗೇಟ್ ತಾರಾಗಿರಿಯನ್ನು ಮಾ.14 ರಂದು ಭಾರತೀಯ ನೌಕಾಪಡೆಗೆ ನಿಯೋಜಿಸಲಾಗುತ್ತಿದೆ. ಇದು ದೇಶದ ಕಡಲ ದಾಳಿ ಸಾಮರ್ಥ್ಯ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

ಪ್ರಾಜೆಕ್ಟ್ 17ಎ ಮೈಲಿಗಲ್ಲು: ಈ ಯುದ್ಧನೌಕೆ, ಪ್ರಾಜೆಕ್ಟ್ 17ಎಯಲ್ಲಿ ಅಭಿವೃದ್ಧಿಪಡಿಸಲಾದ ಆಧುನಿಕ ನೀಲಗಿರಿ ವರ್ಗದ ನಾಲ್ಕನೇ ನೌಕೆಯನ್ನು ಪ್ರತಿನಿಧಿಸಲಿದೆ. ಇದನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದ್ದು, ಕಳೆದ ನವೆಂಬರ್ 28 ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು. ಈ ಯೋಜನೆಯನ್ನು ದೇಶೀಯ ಯುದ್ಧನೌಕೆ ವಿನ್ಯಾಸದಲ್ಲಿ ಒಂದು ಪ್ರಮುಖ ಹೆಜ್ಜೆ ಎನ್ನಲಾಗಿದ್ದು, ಇದು ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಮಾಡಿದ ಪ್ರಯತ್ನದ ಪ್ರತೀಕವೂ ಹೌದು.

ಸುಧಾರಿತ ಯುದ್ಧ ಕೌಶಲ್ಯ: ಹೊಸ ಕಡಲ ಜಲಾಂತರ್ಗಾಮಿ ವಿರೋಧಿ ಅಪಾಯಗಳನ್ನು ಎದುರಿಸಲು ತಾರಗಿರಿ ಯನ್ನು ಬಹು-ಮಿಷನ್ ವೇದಿಕೆಯಾಗಿ ವಿನ್ಯಾಸಗೊಳಿಸಲಾಗಿದೆ. ಇದು ಹಡಗಿನಿಂದ ಹಡಗಿಗೆ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಸಾಗಿಸಲು ಸಜ್ಜಾಗಿದೆ. ಇದರ ಯುದ್ಧ ಸೂಟ್ ಎಂಎಫ್‌ಎಸ್ ಟಿಎಆರ್ ರಡಾರ್ ಎಂಆರ್‌ಎಸ್‌ಎಎಂ ವಾಯು ರಕ್ಷಣಾ ವ್ಯವಸ್ಥೆ, 76 ಎಂಎಂ ಸೂಪರ್ ರಾಪಿಡ್ ಗನ್ ಮೌಂಟ್ ಮತ್ತು 30 ಎಂಎಂ ಮತ್ತು 12.7 ಎಂಎಂ ಕ್ಲೋಸ್-ಇನ್ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಒಳಗೊಂಡಿದೆ.



ಕಾರ್ಯಾಚರಣೆಗಳಿಗಾಗಿ, ವಿಶೇಷ ರಾಕೆಡ್‌ಗಳು ಮತ್ತು ಟಾರ್ಪಿಡೋಗಳನ್ನು ಜೋಡಿಸಲಾಗಿದೆ. ಈ ಹಡಗು ನಿಯಂತ್ರಿಸಬಹುದಾದ ಪಿಚ್ ಪ್ರೊಪೆಲ್ಲರ್‌ಗಳೊಂದಿಗೆ ಸಂಯೋಜಿತ ಡೀಸೆಲ್ ಅಥವಾ ಗ್ಯಾಸ್ (ಸಿಒಡಿಒಜಿ) ಪ್ರೊಪಲ್ಷನ್ ಸಿಸ್ಟಮ್, ಜತೆಗೆ ಕಾರ್ಯಾಚರಣೆಯನ್ನು ಸುಗಮಗೊಳಿಸಲು ಸಮಗ್ರ ಪ್ಲಾಟ್‌ಫಾರ್ಮ್ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದೆ. ಈ ವಿನ್ಯಾಸ ಜೀವ ರಕ್ಷಣೆಗೆ ಒತ್ತು ನೀಡುತ್ತದೆ.

ಸ್ಥಳೀಯ ಉತ್ಪಾದನೆಯ ಪರಂಪರೆ: ಸುಮಾರು ಶೇ.75 ದಷ್ಟು ದೇಶೀಕರಣವನ್ನು ಸಾಧಿಸಲಾಗಿದ್ದು, 200ಕ್ಕೂ ಹೆಚ್ಚು ಎಂಎಸ್‌ಎಂಇಗಳು ಇದರ ನಿರ್ಮಾಣಕ್ಕೆ ಕೊಡುಗೆ ನೀಡಿವೆ. 14,000ಕ್ಕೂ ಹೆಚ್ಚು ಜನರಿಗೆ ನೇರ ಮತ್ತು ಪರೋಕ್ಷ ಉದ್ಯೋಗ ದೊರೆತಿದೆ. ಈ ಹಡಗನ್ನು 2013ರಲ್ಲಿ ಸೇವೆಯಿಂದ ವಜಾಗೊಳಿಸುವ ಮೊದಲು 33 ವರ್ಷಗಳ ಕಾಲ ಸೇವೆ ಸಲ್ಲಿಸಿದ ಲಿಯಾಂಡರ್ ವರ್ಗದ ಯುದ್ಧನೌಕೆ ಹಿಂದಿನ ಐಎನ್‌ಎಸ್ ತಾರಾಗಿರಿಯ ಹೊಸ ರೂಪವೆಂದು ಪರಿಗಣಿಸಲಾಗಿದೆ.

ನೋಟಿಸ್ ಕಳಿಸಲು ಸಿದ್ಧತೆ | 1917ರಲ್ಲಿ ಸಾಲ ಕೊಟ್ಟಿದ್ದ ಭಾರತದ ಕುಟುಂಬ

ಯುದ್ಧಕ್ಕೆ ಕೊಟ್ಟ ಸಾಲ ವಾಪಸ್ ಕೊಡಿ!

ಭೋಪಾಲ್:: 'ಸೂರ್ಯ ಅಸ್ತಮಿಸದ ಸಾಮ್ರಾಜ್ಯ'ವೆಂದು ಹೆಮ್ಮೆಪಟ್ಟುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೂ ಒಮ್ಮೆ ಸ್ಥಳೀಯ ವ್ಯಾಪಾರಿಯ ನೆರವು ಬೇಕಾಗಿತ್ತು ಎಂಬ ಕುತೂಹಲಕಾರಿ ಸಂಗತಿ ಮಧ್ಯಪ್ರದೇಶದ ಸಿಹೋರ್ ಪಟ್ಟಣದಲ್ಲಿ ಮತ್ತೆ ಬೆಳಕಿಗೆ ಬಂದಿದೆ. 1917ರಲ್ಲಿ ಬ್ರಿಟಿಷ್ ಸರ್ಕಾರವು ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲ ಪಡೆದಿದ್ದು, ಇಂದಿಗೂ ಅದನ್ನು ವಾಪಸು ನೀಡಿಲ್ಲ ಎಂದು ಅವರ ಕುಟುಂಬ ಆರೋಪಿಸಿದೆ.

ಶತಮಾನಕ್ಕೂ ಹೆಚ್ಚು ಕಾಲ ಮರೆಯಾಗಿದ್ದ ಈ ದಾಖಲೆಗಳು, ಕುಟುಂಬದ ಹಳೆಯ ದಾಖಲೆಪತ್ರಗಳು ಈಗ ಪತ್ತೆಯಾಗಿವೆ ಎಂದು ಸೇಠ್ ಜುಮ್ಮಾಲಾಲ್ ಅವರ ಮೊಮ್ಮಗ ವಿವೇಕ್ ರುಥಿಯಾ ತಿಳಿಸಿದ್ದಾರೆ. ಇದೀಗ ಅವರು ಬ್ರಿಟನ್ ಸರ್ಕಾರಕ್ಕೆ ಕಾನೂನು ನೋಟಿಸ್ ಕಳುಹಿಸಲು ಸಿದ್ಧತೆ ನಡೆಸಿದ್ದಾರೆ.

ಯುದ್ಧಕಾಲದ ಸಾಲ: 1917ರಲ್ಲಿ ವಿಶ್ವಯುದ್ಧದ ಹೊತ್ತಿನಲ್ಲಿ ಬ್ರಿಟಿಷ್ ಆಡಳಿತ ಯಂತ್ರ ಸಂಕಷ್ಟಕ್ಕೆ ಸಿಲುಕಿದ್ದ ಸಂದರ್ಭದಲ್ಲೇ ಈ ಸಾಲವನ್ನು ಪಡೆದಿದ್ದರೆಂದು ದಾಖಲೆಗಳು ಸೂಚಿಸುತ್ತವೆ. ಭೋಪಾಲ್ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಲು ಈ ಮೊತ್ತವನ್ನು 'ಯುದ್ಧ ಸಾಲ'ವೆಂದು ದಾಖಲಿಸಲಾಗಿದೆ ಎನ್ನಲಾಗಿದೆ.



ಆ ಕಾಲದಲ್ಲಿ 35,000 ರೂ. ಅಪಾರ ಮೊತ್ತವಾಗಿತ್ತು. ಆ ಹಣದಿಂದ ದೊಡ್ಡ ಜಮೀನು ವ್ಯವಹಾರಗಳು ನಡೆಯಬಹುದಾಗಿತ್ತು, ಪ್ರಭಾವವನ್ನೂ ಸಾಧಿಸಬಹುದಾಗಿತ್ತು. ಆದರೆ ರುಥಿಯಾ ಕುಟುಂಬದ ಪ್ರಕಾರ, ಸಾಲ ನೀಡಿದ ನಂತರ ಅದರ ಮರುಪಾವತಿ ನಡೆದಿಲ್ಲ.

ಸೇಠ್ ಜುಮ್ಮಾಲಾಲ್ ರುಥಿಯಾ ಅವರು 1937ರಲ್ಲಿ ನಿಧನರಾದರು. ಸಾಲ ನೀಡಿದ ಎರಡು ದಶಕಗಳ ಬಳಿಕವೂ ಈ ವಿಚಾರ ಬಗೆಹರಿಯದೆ ಉಳಿದಿದ್ದು, ಕಾಲಕ್ರಮೇಣ ಮರೆಯಾಗಿತ್ತು ಎಂದು ಕುಟುಂಬದವರು ಹೇಳುತ್ತಾರೆ.

ಎಷ್ಟು ಸಿಗಬಹುದು?: ಇಂದಿನ ಮೌಲ್ಯದಲ್ಲಿ ಈ ಮೊತ್ತ ಎಷ್ಟು ಆಗಬಹುದು ಎಂಬ ಪ್ರಶ್ನೆಗೆ ಅವರು ನೀಡುವ ಉತ್ತರ ಗಮನಾರ್ಹವಾಗಿದೆ. '1917ರ ಚಿನ್ನದ ದರದ ಆಧಾರದ ಮೇಲೆ ಇಂದಿನ ದರದೊಂದಿಗೆ ಹೋಲಿಕೆ ಮಾಡಿದರೆ, ಈ ಮೊತ್ತ ಕೋಟಿ ರೂಪಾಯಿಗಳಿಗೆ ತಲುಪುತ್ತದೆ' ಎಂದು ಕುಟುಂಬಸ್ಥರು ಹೇಳುತ್ತಾರೆ.

ಪ್ರಭಾವಶಾಲಿ ಕುಟುಂಬದ ಹಿನ್ನೆಲೆ: ಸ್ವಾತಂತ್ರ್ಯಕ್ಕೂ ಮುನ್ನ ರುಥಿಯಾ ಕುಟುಂಬವು ಸಿಹೋರ್ ಮತ್ತು ಭೋಪಾಲ್ ಸಂಸ್ಥಾನಗಳಲ್ಲಿ ಅತ್ಯಂತ ಶ್ರೀಮಂತ ಮತ್ತು ಪ್ರಭಾವಶಾಲಿ ಕುಟುಂಬವಾಗಿತ್ತು. ಅಪಾರ ಜಮೀನು ಮತ್ತು ಆಸ್ತಿಗಳನ್ನು ಹೊಂದಿದ್ದ ಈ ಕುಟುಂಬದ ಪ್ರಭಾವ ರಾಜಕೀಯ ಮತ್ತು ಆಡಳಿತ ವಲಯಗಳಲ್ಲಿಯೂ ಕಂಡುಬರುತ್ತಿತ್ತು ಎನ್ನಲಾಗುತ್ತದೆ.

CHANGE OF NAME

I, **SOWMYA ACHARI**, D/o. Shrinivasa Acharya, Door No. 2-26, Poopadikallu Site House, Badagayedapadavu Village and Post, Mangalore, Dakshina Kannada, Karnataka - 574267 have changed my name as **SOWMYA ACHARYA** in all future purposes vide affidavit sworn and signed before the Notary Varadaraj A. at Mangalore dated 17-02-2026.

ಪ್ರಕಟಣೆ

ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದ ಬಾಬ್ತು ಆಸ್ತಿಯು ನನ್ನ ಪತಿಯವರಾದ ಪಿ ಬಿ ಉಮ್ಮರ್‌ರವರು ಪುತ್ತೂರು ಸ.ರಿ. ಕಛೇರಿಯ ದಸ್ತಾವೇಜು ನಂಬ್ರ 1610/1995–96ನೇ ದಿನಾಂಕ 29–12–1995 ರಂತೆ ಯು ನಾಗೇಶ ಶೆಣೈ ಎಂಬವರಿಂದ ಕ್ರಯವರಿಸಿದ್ದು. ಸದ್ರಿ ನನ್ನ ಪತಿಯವರ ನಿಧನದ ನಂತರ ಸದ್ರಿ ಆಸ್ತಿಯು ನನ್ನ ಮತ್ತು ನನ್ನ ಮಕ್ಕಳ ಹೆಸರಿಗೆ ಪೌತಿಯಾಗಿರುತ್ತದೆ. ಸದ್ರಿ ಆಸ್ತಿಯ ಮೂಲ ಕ್ರಯ ಪತ್ರ ನನ್ನ ಮನೆಯಿಂದ ಪುತ್ತೂರು ತಾಲೂಕು ಕಛೇರಿ ಮಾರ್ಗ ಮಧ್ಯೆ 16.02.2026 ರಂದು ಕಳೆದು ಹೋಗಿರುತ್ತದೆ. ಅದನ್ನು ಎಲ್ಲಿಯೂ ಅಡಮಾನ ಮಾಡಿ ಸಾಲ ಪಡಕೊಂಡಿರುವುದಿಲ್ಲ. ಸದ್ರಿ ದಾಖಲೆಯು ಯಾರಿಗಾದರು ಸಿಕ್ಕಿದಲ್ಲಿ ಒಂದು ವಾರದೊಳಗಾಗಿ ಕೆಳಗಿನ ವಿಳಾಸಕ್ಕೆ ತಂದು ನೀಡುವರೇ ಈ ಮೂಲಕ ವಿನಂತಿಸುತ್ತೇನೆ. ಸದ್ರಿ ದಾಖಲೆ ಕಳೆದು ಹೋದ ಬಗ್ಗೆ ಈಗಾಗಲೇ ದೂರನ್ನು ಕೂಡ ನೀಡಲಾಗಿರುತ್ತದೆ ಎಂದು ಈ ಮೂಲಕ ತಿಳಿಸುತ್ತೇನೆ.

ಸಹಿ/–ಮೈಮುನಾ
ಕೋಂ:ದಿ.ಪಿ ಬಿ ಉಮ್ಮರ್, ಮರೀಲ್ ಮನೆ, ಕೆಮ್ಮಿಂಜೆ ಗ್ರಾಮ, ಪುತ್ತೂರು ತಾಲೂಕು. ದ.ಕ.
ದಿನಾಂಕ: 16–02–2026

ಪುತ್ತೂರು ಮಾರುಕಟ್ಟೆ ಧಾರಣೆ

25-02-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 480
ಚೋಲ್ ಅಡಿಕೆ	505 - 535
ಡಬಲ್ ಚೋಲ್	505 - 535
ಹೊಸ ಪಟೋರ	365 - 415
ಹಳೆ ಪಟೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	350 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	216.00
ಆರ್‌ಎಸ್‌ಎಸ್ 2	191.00
ಸ್ಕ್ರಾಪ್ 1	137.50
ಸ್ಕ್ರಾಪ್ 2	123.00

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ದ.ಕ. ಜಿಲ್ಲೆ ಮಂಗಳೂರು ತಾಲೂಕು, ಸುರತ್ಕಲ್ ಗ್ರಾಮ ಮತ್ತು ಅಂಚೆ, ಅಗ್ಗಿದಕಳಿಯ ಸಸಿಹಿತ್ಲು ಡೋರ್‌ನಂಬ್ರ 2–178, ಎಂಬಲ್ಲಿ ವಾಸಿಸುತ್ತಿರುವ, ದಿವಂಗತ ಚಂದಪ್ಪ ಪುತ್ರನ್ ಎಂಬವರ ಮಕ್ಕಳಾದ ಶ್ರೀ ಸಹದೇವ ಕರ್ಕೇರ, ಶ್ರೀ ನಾಗೇಶ ಕರ್ಕೇರ, ಶ್ರೀಮತಿ ಮೋಹಿನಿ ಕರ್ಕೇರ, ಶ್ರೀಮತಿ ಸಾವಿತ್ರಿ ಕರ್ಕೇರ, ಶ್ರೀಮತಿ ಸುಮತಿ ಕರ್ಕೇರ ಮತ್ತು ಮೃತ ಲೋಕನಾಥ ಕರ್ಕೇರ ಎಂಬವರ ಹೆಂಡತಿ ಕುಮಾರಿ ಕೋಟ್ಯಾನ್, ಮಕ್ಕಳಾದ ಮಹೇಶ ಮತ್ತು ಮಹೇಂದ್ರ ಎಂಬವರು ದ.ಕ. ಜಿಲ್ಲೆ, ಮಂಗಳೂರು ತಾಲೂಕು, ಸುರತ್ಕಲ್ ಗ್ರಾಮದ ಸರ್ವೆ ನಂಬ್ರಗಳಾದ 144–13ರ ವಿಸ್ತೀರ್ಣ 0–25 ಎಕ್ರೆ, 144–14ರ ವಿಸ್ತೀರ್ಣ 0–72 ಎಕ್ರೆ ಮತ್ತು 144–17 ರ ವಿಸ್ತೀರ್ಣ 1–02 ಎಕ್ರೆ ಜಮೀನಿನಲ್ಲಿ ಅರ್ಧ ಅಂಶದ ಹಕ್ಕನ್ನು ಹೊಂದಿದ್ದು, ದ.ಕ. ಜಿಲ್ಲೆ, ಮಂಗಳೂರು ತಾಲೂಕು, ಸುರತ್ಕಲ್ ಗ್ರಾಮ ಮತ್ತು ಅಂಚೆ, ಹೂವಮ್ಮ ನಿವಾಸ, ರಾಮ ಭಜನಾ ಮಂದಿರದ ಹತ್ತಿರ, ಡೋರ್ ನಂಬ್ರ12–26, ಎಂಬಲ್ಲಿ ವಾಸಿಸುತ್ತಿರುವ, ದಿವಂಗತ ಹೂವಮ್ಮ ಎಂಬವರ ಮಕ್ಕಳಾದ ಶ್ರೀ ಮಾಧವ ಎಸ್ ಪುತ್ರನ್, ಶ್ರೀ ಮಹಾಬಲ ಎಸ್ ಪುತ್ರನ್, ಶ್ರೀಮತಿ ಗುಲಾಬಿ ಎಲ್ ಸಾಲ್ಯಾನ್, ಶ್ರೀಮತಿ ಮೋಹಿನಿ ಪಿ. ಸಾಲ್ಯಾನ್, ಶ್ರೀ ಗಂಗಾಧರ ಎಸ್ ಪುತ್ರನ್, ಮೊಮ್ಮಕ್ಕಳಾದ ಶ್ರೀಮತಿ ಶಾಲಿನಿ ರವಿರಾಜ್ ಕೋಟ್ಯಾನ್ ಮತ್ತು ಶ್ರೀಮತಿ ನಳಿನಿ ಭಾಸ್ಕರ್ ತೋಳಾರ್ ಹಾಗೂ ಜಾನಕೀ ಸಿ. ಮೆಂಡನ್ ಎಂಬವರು ಸದ್ರಿ ಮೇಲೆ ತಿಳಿಸಿದ ಜಮೀನಿನ ಆರ್.ಟಿ.ಸಿ.ಯಲ್ಲಿ ತಮ್ಮ ಹೆಸರನ್ನು ಮಾತ್ರ ಸೇರಿಸಿ, ನನ್ನ ಕಕ್ಷಿದಾರರ ಹೆಸರನ್ನು ಬಿಟ್ಟು ಮರೆಮಾಚಿ ಪ್ರಸ್ತುತ ಸದ್ರಿ ಜಮೀನನ್ನು ಮಾರಾಟ ಮಾಡುವರೇ ಪ್ರಯತಿಸುತ್ತಿದ್ದು, ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಸದ್ರಿ ಜಮೀನಿನಲ್ಲಿ ನನ್ನ ಕಕ್ಷಿದಾರರಿಗೆ ಅರ್ಧ ಅಂಶದ ಹಕ್ಕು ಇರುವುದರಿಂದ ಸದ್ರಿ ಜಮೀನಿನನ್ನು ಖರೀದಿ ಮಾಡುವುದು ಕಾನೂನುಬಾಹಿರವಾಗುತ್ತದೆ. ಆದುದರಿಂದ ಸದ್ರಿ ಜಮೀನುಗಳನ್ನು ಯಾರೇ ಆಗಲಿ ಖರೀದಿ ಮಾಡುವರೇ ಮೇಲೆ ತಿಳಿಸಲಾದ ವ್ಯಕ್ತಿಗಳ ಜೊತೆ ಯಾವುದೇ ರೂಪದಲ್ಲಿ ವ್ಯವಹರಿಸಿದರೆ ತಾವೇ ಹೊಣೆಗಾರರಾಗಬೇಕಾಗುತ್ತದೆ. ಅಲ್ಲದೆ ಮುಂದಕ್ಕೆ ಉಂಟಾಗುವ ಎಲ್ಲಾ ಕಷ್ಟ ನಷ್ಟ ತೊಂದರೆಗಳಿಗೆ ತಾವೇ ಜವಾಬ್ದಾರರಾಗಬೇಕಾಗುತ್ತದೆ ಎಂದು ಈ ಮೂಲಕ ಸಾರ್ವಜನಿಕರಿಗೆ ಎಚ್ಚರಿಸಲಾಗಿದೆ.

ಸಹಿ/– ಶ್ರೀ ರೋನಿ ಕ್ರಾಸ್ತ, ವಕೀಲರು, ಮಂಗಳೂರು

ಸಹಿ/– ಸಾವಿತ್ರಿ
ಮೊ.ನಂ.:8147618698
ಮಂಗಳೂರು
25–02–2026

IN THE COURT OF THE SUB ORDINATE JUDGE OF KASARAGOD

O.S. NO. 66/2025

Between:
Raghurama Shetty and others ...Plaintiffs
and
Shantha and Others ...Defendants

NOTICE

To defendants
No.15,21,22,24,27 and 30

15.Kalavathi aged about 45 years D/O Aithappa Malli Hindu household by profession and residing at Swastik Bekary padil Mangaluru, P.O.Mangalore-575007, D.K. District Karnataka State.

21.Kusala Shetty Aged about 58 years S/o Late Ishwara Shetty Hindu and profession not known and residing at Hosabettu Village P.O.Hosabettu-671323 Manjeshwar Taluk, Kasaragd District.

22.Satheesh Shetty aged about 54 years, S/o Late Ishwara Shetty Hindu and profession not known and residing at Bolnadu Guthu Hosabettu Doddamane, Hosabettu Village P.O Hosabettu-671323 Manjeshwar Taluk Kasaragod District

24. Prem Shetty aged about 46 years, S/o Late Ishwara Shetty Hindu and profession not known and residing at Bolnadu Guthu Hosabettu Doddamane, Hosabettu Village P.O Hosabettu-671323 Manjeshwar Taluk Kasaragod District

27. Kamalavathi aged about 75 years, D/o Late Ramakka Hindu household by profession and residing at Bolnadu Guthu Hosabettu Doddamane, Hosabettu Village P.O Hosabettu-671323 Manjeshwar Taluk Kasaragod District

30.Kavitha Shetty aged about 45 years, W/o Ashok Shetty, Hindu household by profession and residing Palemar Guthu House Konaje, P.O. Konaje-574199, Mangalore Taluk Dakshina Kannada District Karnataka State.

Please notice that the above suit filed against you stands posted to **09.03.2026 at 11.00 A.M.** in the above court for Your apperance. You may appear either in person or through an advocate before the aforesaid court on the aforesaid date and time. If your fail to appear before the court on the said date and time. the matter will be heard and decided in your absence.

(By Order)
Sd/- (Mahesh M.)
Advocate for the plaintiffs
Vidyanagar
23.02.2026

ಪ್ರಕಟಣೆ

ನಾನು ಎ.ಪಿ ಹಸೈನಾರ್ ಬಿನ್. ದಿ ಇಬ್ರಾಹಿಂ ಬ್ಯಾರಿ ಆದ ನಾನು ಬೆಳ್ಳಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದಲ್ಲಿ ಸಾಲವನ್ನು ಅಪೇಕ್ಷಿಸಿರುತ್ತೇನೆ. ಸದ್ರಿ ಸಾಲಕ್ಕೆ ಸಂಬಂಧಪಟ್ಟು ಮಾನ್ಯ ಸುಳ್ಯ ತಹಶೀಲ್ದಾರರವರು ಸುಳ್ಯ ತಾಲೂಕು ಕಛೇರಿ ಕಡತ ನಂಬ್ರ ಡಿ.ಎಸ್.ಎನ್.ಸಿಆರ್.ಎಸ್.ಆರ್:2/91–92(ಪೆರುವಾಜೆ) ರಂತೆ ಸಾಗುವಳಿ ಚೀಟಿ ನಮೂನೆ–7 ಪ್ರಕಾರ ಮಂಜೂರು ಮಾಡಿದ ಆಸ್ತಿಗಳನ್ನು ಹೊಣೆ ಕೊಡಲು ಉದ್ದೇಶಿಸಿರುತ್ತೇನೆ. ಆದರೆ ಸದ್ರಿ ಸಾಗುವಳಿ ಚೀಟಿ ನಮೂನೆ–7 ರ ಮೂಲ ಪ್ರತಿಯೂ ನನ್ನಿಂದ ಕಳೆದು ಹೋಗಿರುತದೆ. ಸದ್ರಿ ಆಸ್ತಿಗಳ ಬಗ್ಗೆ ಯಾರದಾದರೂ ಆಕ್ಷೇಪ/ ಕ್ಲೇಮುಗಳಿದ್ದಲ್ಲಿ ಸದ್ರಿ ಪ್ರಕಟಣೆಯ 7 ದಿನದ ಒಳಗೆ ನಮಗೆ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು.

ಸಹಿ/– ಎ ಪಿ ಹಸೈನಾರ್, ಬಿನ್. ದಿ ಇಬ್ರಾಹಿಂ ಬ್ಯಾರಿ, ಆಲಂತಡ್ಕ ಮನೆ, ಪೆರುವಾಜೆ ಗ್ರಾಮ, ಸುಳ್ಯ ತಾಲೂಕು, ದ.ಕ. ಜಿಲ್ಲೆ

IN THE COURT OF THE I ADDITIONAL DISTRICT JUDGE AT MANGALURU

COM. O.S.No. 276/2025

Between :
Karnataka Bank **Plaintiff**
and
Gopi M. **Defendant**

Defendant:
Mr. Gopi M.
S/o. Late M. Jayaram Achar
Aged about 55 years,
Proprietor of
M/s. Vighnesh Jewellers
D.No.1-N-12-797/1, Urva Store Junction, Opp. Bus Stand, Mangaluru, D.K. - 575 006

Please take notice, that the above case stands posted to **07.03.2026** for your appearance. If you fail to appear at 11 a.m. on **07.03.2026** the said date before the above said court either in person or through counsel, the same will be proceeded wit by setting you exparte.

Given under my hand and seal of the court this the 18.02.2026.

(By the order of the Court
Chief Administrative Officer
District Court D.K., Mangaluru

(B. Guruprasad Shetty)
Advocate for Plaintiff
Mangaluru, 17.02.2026

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿ ಕಛೇರಿ, ಹ್ಯಾಟ್‌ಹಿಲ್- ಲಾಲ್‌ಬಾಗ್, ಮಂಗಳೂರು-06
ಫೋನ್: 0824-2453063 FAX: 0824-2453063 E-mail- dao.mangalore09@gmail.com

ಸಂಖ್ಯೆ: ಸಂ:ಜಿಆಅಕದಕಮಂ:01:ಔಷಧಿ:2025-26 ದಿನಾಂಕ: 25.02.2026

ಟೆಂಡರ್ ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲೆ ಆಯುಷ್ ಇಲಾಖೆಯ ಜಿಲ್ಲಾ ಪಂಚಾಯತ್ ಅನುದಾನದಡಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಯುನಾನಿ ಮತ್ತು ಹೋಮಿಯೋಪತಿ ಔಷಧಗಳನ್ನು ಖರೀದಿಸಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ. ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ದಿನಾಂಕ: 04.03.2026ರ ಒಳಗೆ ಇ-ಪೋರ್ಟಲ್ ಪದ್ಧತಿಯಂತೆ ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು.

ಸಹಿ/–
ಸಹಾಯಕ ಆಡಳಿತಾಧಿಕಾರಿ
ಜಿಲ್ಲಾ ಆಯುಷ್ ಕಛೇರಿ, ದ.ಕ. ಜಿಲ್ಲೆ

DIPR/DK/MPL/1672/25-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ –577 005.

ದೂರವಾಣಿ ಸಂಖ್ಯೆ: 08192–262527 ಇ–ಮೇಲ್:–dcfdvg@gmail.com

ಸಂಖ್ಯೆ: ಸಅಸಂ/ದಾವಿ/ಟೆಂಡರ್/ವಿವ/2025–26 ದಿನಾಂಕ: 23–02–2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಮುಂದುವರೆದ ಕಾಮಗಾರಿಗಳಾದ ನೆಡುತೋಪು ನಿರ್ಮಾಣ, ನೆಡುತೋಪು ನಿರ್ವಹಣೆ, ಸಸಿಗಳನ್ನು ಬೆಳೆಸುವುದು ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲು ಮುಂಗಡವಾಗಿ 2025–26ನೇ ಸಾಲಿನಲ್ಲಿ ದಿ:23–02–2026 ರಂದು ಪ್ರಕಟಣೆ ಹೊರಡಿಸಿ, ದಿನಾಂಕ: 03–03–2026ರಂದು ಮಧ್ಯಾಹ್ನ 01:00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ 05–03–2026ರ ಟೆಂಡರ್‌ನಲ್ಲಿ ಯಾರೂ ಭಾಗವಹಿಸದ ಸಂದರ್ಭದಲ್ಲಿ ಮರು ಟೆಂಡರನ್ನು ದಿನಾಂಕ 13–03–2026ರಂದು ಮಧ್ಯಾಹ್ನ 01:00 ಗಂಟೆಯವರೆಗೆ ನಿಗಧಿಪಡಿಸಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/777/ ಕೆಎಸ್‌ಎಂಸಿಎ/2025–26

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ–1,3:ವಿವಿಧ:2025–26/5352
ದಿನಾಂಕ : 25–02–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **135.25** ಲಕ್ಷ ಮೊತ್ತದಲ್ಲಿ ಒಟ್ಟು **09** ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **1.15** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **64.10** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆಡಬ್ಲ್ಯೂ–1 ಹಾಗೂ 3, ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 - 33839

ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **05–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **07–03–2026**

Work Indent No: Part-2 - 33406, 29553/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **03–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **05–03–2026.**

Work Indent No: Part-3 - 32865, 22570

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **12–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **13–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **16–03–2026.**

Work Indent No: Part-4 - 33905, 33411-ST, 32888, 31331

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **16–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **18–03–2026** ಆರ್ಥಿಕ ಬಿಡ್ ತೆರೆಯುವ ದಿನಾಂಕ : **19–03–2026**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/680/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–6/ಕೆಕೆಆರ್‌ಡಿಬಿ/2025–26/6137 ದಿನಾಂಕ:21.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT33414	130.00
2)	PWD/2025-26/RD/WORK_INDENT33859	63.00
3)	PWD/2025-26/RD/WORK_INDENT33861 (Reserved CAT-2A Category)	15.00
4)	PWD/2025-26/BR/WORK_INDENT33809	30.00
5)	PWD/2025-26/RD/WORK_INDENT33854	63.00
6)	PWD/2025-26/RD/WORK_INDENT33857	63.00
7)	PWD/2025-26/RD/WORK_INDENT33855 (Reserved CAT-2A Category)	65.00
8)	PWD/2025-26/RD/WORK_INDENT33856 (Reserved CAT-2A Category)	72.65
9)	PWD/2025-26/BR/WORK_INDENT33868 (Reserved SC Category)	25.00
10)	PWD/2025-26/BR/WORK_INDENT33869 (Reserved ST Category)	90.00
11)	PWD/2025-26/RD/WORK_INDENT33852	50.00
12)	PWD/2025-26/BR/WORK_INDENT33860	35.00
13)	PWD/2025-26/RD/WORK_INDENT33469	70.00
14)	PWD/2025-26/RD/WORK_INDENT33652 (Reserved SC Category)	100.00
15)	PWD/2025-26/RD/WORK_INDENT33632	100.00
16)	PWD/2025-26/RD/WORK_INDENT33634	66.99
17)	PWD/2025-26/RD/WORK_INDENT33473	80.00
18)	PWD/2025-26/IND0223	49.20

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **27.02.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **02.03.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **04.03.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **05.03.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1047/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2025–26/52 ದಿ: 24.02.2026

ಟೆಂಡರ್ ಪ್ರಕಟಣೆ–52/2025–26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 1. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಶಿರಗುಂಜಿ ಗೌಡರಕೇರಿ ರಸ್ತೆ ನಿರ್ಮಾಣ 2. ಉತ್ತರಕನ್ನಡ ಜಿಲ್ಲೆಯ ಕುಮಟಾ ಅಳಕೋಡ ಪಂಚಾಯತ್ ಯಾಣ ಮುಖ್ಯ ರಸ್ತೆಯಿಂದ ಗಜಾನನ ಶಾಸ್ತ್ರೀ ಮನೆಯವರೆಗೆ ರಸ್ತೆ ನಿರ್ಮಾಣ 3.ಕುಮಟಾ ತಾಲೂಕಿನ ಅಳಕೋಡ ಪಂ ಸಾಂತೂರು ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 40.00 ಲಕ್ಷ, ಮುಂಗಡ ಠೇವಣಿ: ರೂ. 80,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 2ಎ) (2) 1. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಹೆಬ್ಬಾರಮನೆಯಲ್ಲಿ ಯಾಣ ಕೂಡುವ ರಸ್ತೆ ನಿರ್ಮಾಣ 2. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಮಳವಳ್ಳಿ ಗೌಡರಕೇರಿ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 16.03.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 17.03.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1151/25-26 dt. 25.02.2026

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ – 580 030.

ಟೆಂಡರ್ ಪ್ರಕಟಣೆ ಸಂಖ್ಯೆ : 13/2025–26 ದಿನಾಂಕ : 25–02–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆ.ಪಿ.ಪಿ.ಪಿ.) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಅಥವಾ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ	ಅಂದಾಜು ಮೌಲ್ಯ
01	NWKRTC/2025-26/IND0179	ವಾಹನಗಳಿಗಾಗಿ ಸ್ಪ್ರಿಂಗ್ ಪಟ್ಟಿಗಳು.	ರೂ. 655.00 ಲಕ್ಷ
02	NWKRTC/2025-26/IND0185	ಆಟೋಮೊಟಿವ್ ಲ್ಯೂಬ್ರಿಕಂಟ್ಸ್, ಗ್ರೀಸ್ & ಕೂಲಂಟ್.	ರೂ. 525.00 ಲಕ್ಷ
03	NWKRTC/2025-26/SE2641	ಹೊರಗುತ್ತಿಗೆ ಆಧಾರದ ಮೇಲೆ 250 ತಾಂತ್ರಿಕ ಸಿಬ್ಬಂದಿಗಳನ್ನು ಒದಗಿಸುವುದು.	ರೂ. 427.00 ಲಕ್ಷ
04	NWKRTC/2025-26/IND0176	ಬಾಲ್ ಮತ್ತು ರೋಲರ್ ಬೇರಿಂಗ್ಸ್‌ಗಳು.	ರೂ. 398.00 ಲಕ್ಷ
05	NWKRTC/2025-26/IND0183	ಏರ್ ಕಾಂಪ್ರೆಸರ್‌ಗಳು.	ರೂ. 215.00 ಲಕ್ಷ
06	NWKRTC/2025-26/IND0178	ವಾಟರ್ ಪಂಪ್ ಮತ್ತು ಬಿಡಿ ಭಾಗಗಳು.	ರೂ. 164.00 ಲಕ್ಷ
07	NWKRTC/2025-26/IND0188	235/75ಆರ್, 17.5" ರೇಡಿಯಲ್ ಟ್ಯೂಬ್‌ಲೆಸ್ ಟೈರ್‌ಗಳು.	ರೂ. 107.00 ಲಕ್ಷ
08	NWKRTC/2025-26/IND0177	ಫ್ಯಾನ್ ಬೆಲ್ಟ್‌ಗಳು.	ರೂ. 100.00 ಲಕ್ಷ
09	NWKRTC/2025-26/IND0182	ಸೆಲ್ಫ್ ಅಢೇಸಿವ್ ಪ್ಲಾಸ್ಟಿಕ್ ಫೆಲ್ಟ್	ರೂ. 59.42 ಲಕ್ಷ
10	NWKRTC/2025-26/IND0173/Call-2	ಬಸ್ ಪಾಸ್‌ಗಳ ಮುದ್ರಣ ಮತ್ತು ಸರಬರಾಜು.	ರೂ. 44.00 ಲಕ್ಷ
11	NWKRTC/2025-26/IND0181	ಅಲ್ಯೂಮಿನಿಯಂ ಪಾಪ್ ರಿವಿಟ್‌ಗಳು.	ರೂ. 43.33 ಲಕ್ಷ
12	NWKRTC/2025-26/IND0136/Call-2	ಇಂಜಿನ್ ರೀಕಂಡಿಷನ್‌ಗಾಗಿ ಬೇಕಾಗುವ ಯಂತ್ರಗಳು.	ರೂ. 40.00 ಲಕ್ಷ
13	NWKRTC/2025-26/IND0189	ಸ್ಮಾರ್ಟ್ ಕಾರ್ಡ್‌ಗಳು.	ರೂ. 27.50 ಲಕ್ಷ
14	NWKRTC/2025-26/IND0184	ಇಂಡಸ್ಟ್ರೀಯಲ್ ಗ್ಯಾಸ್‌ಗಳು.	ರೂ. 13.96 ಲಕ್ಷ
15	NWKRTC/2025-26/SE2605	ಕಂದಾಯ & ಭೂ ಸಮೀಕ್ಷೆ ವಿಷಯಗಳಲ್ಲಿ ತಜ್ಞರ ಸೇವೆ.	ರೂ. 10.00 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : ಟೆಂಡರ್ ಕ್ರ. ಸಂ. 1 ರಿಂದ 5 ರಲ್ಲಿನ ಟೆಂಡರ್‌ಗಳಿಗೆ 30–03–2026. ಕ್ರ. ಸಂ. 6 ರಿಂದ 15 ರಲ್ಲಿರುವ ಟೆಂಡರ್‌ಗಳಿಗೆ ದಿನಾಂಕ : 14–03–2026 ರ ಸಂಜೆ 5.30 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : http://kppp.karnataka.gov.in ಅಥವಾ ಮೊಬೈಲ್ ಫೋನ್ ಸಂಖ್ಯೆ : 70220 09113 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು, (ಟೆಂಡರ್ ಕರೆಯುವ ಪ್ರಾಧಿಕಾರ).

ಡಿಐಪಿಆರ್/ಧಾರವಾಡ/1279/ಮಣಿಪಾಲ್/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮಿತ್ವದಲ್ಲಿ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ

ಸಂಖ್ಯೆ:ಕೃಭಾಜನಿನಿ/ನಾಬದಂಕಾ/ವಿ–4/ತಾಶಾ/Maintenance/2025-26/844 ದಿನಾಂಕ:23.02.2026

ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ ಕಾಲುವೆ ವಿಭಾಗ ಸಂ.–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ, ಜಿಲ್ಲೆ: ರಾಯಚೂರು ಇವರು ಈ ಕೆಳಗಿನ ಕಾಮಗಾರಿಯ ನೋಂದಾಯಿತ ಕೆ.ಪಿ.ಡಬ್ಲ್ಯೂ.ಡಿ. 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮರನ್ವಯ ಗುತ್ತಿಗೆದಾರರು ಅಗತ್ಯ ಇ.ಎಂ.ಡಿ ಠೇವಣಿ ಮೊತ್ತವನ್ನು ಇ–ಕ್ಯಾಷ್‌ನಲ್ಲಿ ಪಡೆದು ದ್ವಿ ಲಕೋಟೆಯಲ್ಲಿ ಟೆಂಡರನ್ನು ಸಲ್ಲಿಸುವುದು. ಇ.ಎಂ.ಡಿ ಠೇವಣಿ ಮತ್ತು ಇತರೆ ಅವಶ್ಯಕ ಬಿಡ್ ದಾಖಲೆಗಳನ್ನೊಳಗೊಂಡಿರುವ ಬಿಡ್‌ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

ಕಾಮಗಾರಿಯ ಹೆಸರು: Maintenance work. ಒಟ್ಟು ಕಾಮಗಾರಿಗಳ ಸಂಖ್ಯೆ: 1. "ಇಎಂಡಿ ಮೊತ್ತ (ಪ್ರತಿ ಕಾಮಗಾರಿಗೆ)": As mentioned in e-portal. ಟೆಂಡರ್ ಪ್ರೋಸೆಸಿಂಗ್ ಶುಲ್ಕ: As mentioned in e-portal. ಕೆಲಸ ಮುಗಿಸಲು ಕಾಲಮಿತಿ :9 months including monsoon.

1) ಗುತ್ತಿಗೆದಾರರು ಇ–ಟೆಂಡರ್ ಪುಸ್ತಕಕ್ಕಾಗಿ ದಿನಾಂಕ: 24.02.2026 ರಿಂದ 04.03.2026 ರವರೆಗೆ ಕೆ.ಬಿ.ಜೆ.ಎನ್.ಎಲ್. ವೆಬ್ ಸೈಟ್ http://kppp.karnataka.gov.in ಕ್ಲಿಕ್ ಮಾಡಿ ಇ–ಪೋರ್ಟಲ್ ನಲ್ಲಿ ಇರುವಂತೆ ಟೆಂಡರ್ ಶುಲ್ಕ (ಮರಳಿಸಲಾಗದ)/ಇ.ಎಂ.ಡಿ. ಮೊತ್ತವನ್ನು ಭರಿಸಿ ಇ–ಟೆಂಡರ್ ಪುಸ್ತಕವನ್ನು ಕೋರಿಕೊಳ್ಳುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಈ ಕೆಳಗಿನ ಪೇಮೆಂಟ ಮೋಡ್‌ಗಳನ್ನು ಬಳಸಿಕೊಂಡು ದಿನಾಂಕ:04.03.2026 ರ ಸಾಯಂಕಾಲ 5.00 ಘಂಟೆಯೊಳಗಾಗಿ ಭರಿಸುವದು. Credit card / Direct debit / National electronic fund transfer (NEFT) / over the counter (OTC) 2) ಗುತ್ತಿಗೆದಾರರು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು. 3) ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು. 4) ಟೆಂಡರ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಸಂದೇಹಗಳಿಗಾಗಿ Pre-Bid meeting ಅನ್ನು 27.02.2026 ರಂದು ಬೆಳಿಗ್ಗೆ 11.00 AMಕ್ಕೆ ಸಹಿ ಮಾಡುವವರ ಕಚೇರಿಯಲ್ಲಿ ನಡೆಸಲಾಗುವುದು. Cover-I (Technical Bid) ಮತ್ತು Cover-II (Financial Bid)ಗಳನ್ನು Executive Engineer, KBJNL, NRBC, Division No.4, Chikkahonnakuni ಅವರ ಕಚೇರಿಯಲ್ಲಿ ವಿದ್ಯುನ್ಮಾನವಾಗಿ ಕ್ರಮವಾಗಿ 06.03.2026 ರಂದು ಬೆಳಿಗ್ಗೆ 11.00 AMಕ್ಕೆ ಮತ್ತು 07.03.2026 ರಂದು ಸಂಜೆ 05.00 PMಕ್ಕೆ ತೆರೆಯಲಾಗುವುದು. 5) ಟೆಂಡರಿಗೆ ಸಂಬಂಧಪಟ್ಟಂತೆ ಉಳಿದ ಯಾವುದೇ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಅಭಿಯಂತರರವರ ಕಛೇರಿಯಿಂದ (ಕಛೇರಿಯ ವೇಳೆಯಲ್ಲಿ) ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಲು ಸೂಚನೆ ನೀಡಲಾಗಿದೆ ಮತ್ತು ಟೆಂಡರ್‌ನಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದಲ್ಲಿ ಅದನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4, ಚಿಕ್ಕಹೊನ್ನಕುಣಿ, ತಾ:ದೇವದುರ್ಗ.

DIP/RCR/720/KSMC&A/723/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-41) ಡ್ರಾ ಫೆಬ್ರವರಿ 25ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DB 500865 (WAYANADU)

Consolation Prize Rs.5,000/-
DA 500865 DC 500865 DD 500865 DE 500865
DF 500865 DG 500865 DH 500865 DJ 500865
DK 500865 DL 500865 DM 500865

2nd Prize Rs.30,00,000/- [30 Lakhs]
DL 276837 (NEYYATTINKARA)

3rd Prize Rs.5,00,000/- [5 Lakhs]
DD 628529 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0141 0185 2685 3707 4373 4379 4967 5834 5854 6434 7070 7539 7785 8127 8341 8700 9678 9868 9942

5th Prize Rs.2,000/-
0555 2221 5628 6075 7075 9896

6th Prize Rs.1,000/-
0055 0324 0688 0803 1421 1977 2084 2299 2336 2947 3172 3484 3978 4483 4606 5572 6356 6628 6925 7023 7293 7461 8296 8331 9667

7th Prize Rs.500/-
0010 0077 0140 0221 0274 0294 0369 0413 0457 1027 1199 1366 1534 1572 1598 1780 1964 2003 2172 2252 2272 2343 2682 2689 2828 2974 2982 3082 3200 3235 3347 3392 3409 3502 3560 3673 3798 3904 4092 4252 4305 4840 4928 4945 5107 5344 5541 5815 5953 5987 6132 6136 6164 6165 6430 6566 6861 6944 7041 7110 7210 7342 7528 7590 7839 7860 8150 8643 8649 8843 8862 8992 9160 9677 9709 9940

8th Prize Rs.200/-
0360 0420 0650 0695 0782 1092 1177 1225 1299 1396 1628 1831 1970 2110 2116 2158 2289 2667 2683 2755 3369 3517 3589 3627 3693 4101 4251 4254 4266 4355 4523 4593 4634 4757 4868 5076 5129 5187 5418 5468 5509 5532 5579 5695 5821 5985 6421 6455 6507 6596 6678 6688 6747 6913 6985 7044 7115 7189 7212 7231 7290 7339 7720 7762 7888 7995 8013 8057 8074 8269 8301 8322 8371 8476 8625 8630 8855 9016 9041 9073 9115 9133 9189 9246 9326 9437 9531 9552 9560 9659 9757 9794 9840 9917 9931 9949

9th Prize Rs.100/-
0198 0211 0297 0334 0355 0365 0426 0635 0753 0855 0868 1046 1164 1422 1549 1608 1615 1636 1643 1756 1762 1777 1792 2126 2233 2256 2282 2705 2751 2783 2801 2872 3064 3193 3251 3333 3354 3380 3400 3617 3660 3799 3813 4013 4031 4033 4154 4183 4203 4352 4443 4453 4570 4597 4653 4753 4768 4887 4895 4915 4961 5012 5079 5117 5213 5313 5380 5381 5395 5513 5516 5521 5688 5776 5794 5813 5930 5952 5966 6010 6076 6090 6397 6472 6533 6543 6681 6862 7042 7072 7183 7241 7244 7270 7307 7437 7471 7536 7661 7742 7843 7859 7865 7941 7968 8129 8187 8201 8274 8408 8687 8768 8821 8856 8953 9128 9144 9170 9196 9253 9298 9316 9459 9478 9500 9515 9537 9549 9553 9704 9737 9762 9792 9884 9924 9934 9950 9979

94 ಕೋಟಿ ರೂ. ವೆಚ್ಚದ ರಕ್ಷಣಾ ತಡೆಗೋಡೆ ನಿರ್ಮಾಣದ ಕಾಮಗಾರಿಗೆ ಸಂಸದ ಯದುವೀರ್ ಭೂಮಿಪೂಜೆ

ಕೇಂದ್ರದಿಂದ ಎಲ್ಲಾ ಹೆದ್ದಾರಿಗಳ ಅಭಿವೃದ್ಧಿ

◆**ಮಡಿಕೇರಿ:** ರಾಷ್ಟ್ರೀಯ ಹೆದ್ದಾರಿ 275ರ ಇಬ್ಬನಿ ರೆಸಾರ್ಟ್ ಬಳಿಯಿಂದ ಸಂಪಾಜೆವರೆಗೆ 21 ಕಡೆಗಳಲ್ಲಿ ನಿರ್ಮಿಸಲಾಗುವ ಸುಮಾರು 94 ಕೋಟಿ ರೂ. ವೆಚ್ಚದ ರಕ್ಷಣಾ ತಡೆಗೋಡೆ ನಿರ್ಮಾಣದ ಕಾಮಗಾರಿಗೆ ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯ ಸಚಿವ ನಿತಿನ್ ಗಡ್ಕರಿ ಅವರ ಪ್ರಯತ್ನದಿಂದ ರಾಷ್ಟ್ರದಲ್ಲಿ ಹೆದ್ದಾರಿಗಳು ಅಭಿವೃದ್ಧಿ ಹೊಂದುತ್ತಿವೆ. ರಾಷ್ಟ್ರದ ರಾಜಧಾನಿ ನವದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ ಕೊಲ್ಕತ್ತಾ ಮತ್ತಿತ್ತರ ಕಡೆಗಳಲ್ಲಿ ಸಂಪರ್ಕ ರಸ್ತೆಯನ್ನು ಸರ್ಕಾರ ಕೈಗೊಂಡಿದೆ. ಹಾಗೆಯೇ ರೈಲ್ವೆ ಯೋಜನೆಗಳನ್ನು ವಿದ್ಯುದೀಕರಣ ಮಾಡಿ ಅಭಿವೃದ್ಧಿಗೊಳಿಸಲಾಗಿದೆ ಎಂದು ತಿಳಿಸಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪರಿಸರ ಶುಚಿತ್ವಕ್ಕೆ ಒತ್ತು ನೀಡುವ ಮೂಲಕ ಶೌಚಾಲಯ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳನ್ನು ರೂಪಿಸಿದೆ ಎಂದು ಸಂಸದರು ತಿಳಿಸಿದರು.

ಪರಿಸರ ಸಂರಕ್ಷಣೆಗೆ ಕಾರ್ಯಕ್ರಮ ಕೊಡಗು ಜಿಲ್ಲೆಗೆ ಪರಿಸರ ಸಂರಕ್ಷಣೆ ಮತ್ತು ಪ್ರಾಕೃತಿಕ ಸಂಪತ್ತನ್ನು ಸಂರಕ್ಷಣೆ ಮಾಡುವಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ.



ಸ್ವ ಉದ್ಯೋಗಕ್ಕೆ ಒತ್ತು

ಕೇಂದ್ರ ಸರ್ಕಾರದಿಂದ ಹಲವು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಯುವಜನರಿಗೆ ವೃತ್ತಿ ಕೌಶಲ್ಯ ತರಬೇತಿಯನ್ನು ನೀಡಿ, ಸ್ವ ಉದ್ಯೋಗ ಕೈಗೊಳ್ಳಲು ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸುವಂತಾಗಬೇಕು ಎಂದು ಹೇಳಿದರು.

ಮಣ್ಣಿನ ಗುಣಮಟ್ಟ ಆಧರಿಸಿ ಯೋಜನೆ

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಂಸದರು, ರಕ್ಷಣಾ ತಡೆಗೋಡೆ ನಿರ್ಮಾಣ ಸಂಬಂಧ ತಜ್ಞರು, ಇಲ್ಲಿನ ಸ್ಥಳೀಯ ಮಣ್ಣಿನ ಪರಿಸ್ಥಿತಿಯನ್ನು ಅವಲೋಕಿಸಿ ಯೋಜನೆ ರೂಪಿಸಲಾಗಿದೆ. ಆ ನಿಟ್ಟಿನಲ್ಲಿ ಕಾಮಗಾರಿ ನಡೆಯಲಿದೆ ಎಂದು ಪ್ರತಿಕ್ರಿಯಿಸಿದರು.

ರಸ್ತೆ ತಿರುವುಗಳ ಅಗಲೀಕರಣ ಸಂಬಂಧಿಸಿದಂತೆ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಂಸದರು, ಇದು ಕಷ್ಟಸಾಧ್ಯದ ಕೆಲಸವಾಗಿದ್ದು, ಪರಿಸರಕ್ಕೆ ಹಾನಿಯಾಗದಂತೆ ಮುಂದಿನ ಕ್ರಮವಹಿಸ ಲಾಗುವುದು ಎಂದರು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ಅವರು ಮಾತನಾಡಿ, ಸಂಸದರು ಕರಿಮೆಣಸಿಗೆ ಸೆಸ್ ಜಾರಿಗೊಳಿಸುವುದನ್ನು ತಡೆದಿದ್ದಾರೆ ಎಂದು ಶ್ಲಾಘಿಸಿದರು. ತಡೆಗೋಡೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅಗತ್ಯ ಸಹಕಾರ ನೀಡಿದೆ ಎಂದು ಹೇಳಿದರು.

ತಡೆಗೋಡೆ ಕಾಮಗಾರಿ 18 ತಿಂಗಳಲ್ಲಿ ಪೂರ್ಣ

ಮಡಿಕೇರಿ ತಾಲೂಕಿನ ಮದೆನಾಡು ಬಳಿಯ ಕರ್ತೋಜಿ ಬಳಿ ರಕ್ಷಣಾ ತಡೆಗೋಡೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಸಂಸದರು, ಸ್ಥಳೀಯರ ಬೇಡಿಕೆಯಂತೆ 21 ಕಡೆಗಳಲ್ಲಿ ರಕ್ಷಣಾ ತಡೆಗೋಡೆ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ರಕ್ಷಣಾ ತಡೆಗೋಡೆ ಕಾಮಗಾರಿಯು 18 ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದರು.

ವಿಮಾನ ನಿಲ್ದಾಣಗಳ ಹೆಚ್ಚಳ

ರಾಷ್ಟ್ರದಲ್ಲಿ ಹಿಂದೆ ಕಡಿಮೆ ವಿಮಾನ ನಿಲ್ದಾಣಗಳಿದ್ದವು. ಈಗ 150 ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅದರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನೂ ಸ್ಥಾಪಿಸಲಾಗಿದೆ. ಹೀಗೆ ರಾಷ್ಟ್ರ ಅಭಿವೃದ್ಧಿಯಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ ಎಂದು ಯದುವೀರ್ ವಿವರಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಪ್ರಮುಖರಾದ ನಾಗೇಶ್ ಕುಂದಲ್ಪಾಡಿ, ರವಿ ಕುಶಾಲಪ್ಪ, ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪ್ರಮುಖರಾದ ಉಮೇಶ್ ಸುಬ್ರಮಣಿ, ಕಾಂಗೀರ ಸತೀಶ್, ಪಿ.ಎಂ.ರವಿ. ಗೌತಮ್, ಸಜಿಲ್ ಕೃಷ್ಣ ಪುಷ್ಪಾ, ಧನಂಜಯ ಅಗೋಳಿಕಜೆ, ಬೆಳ್ಳಿಯನ ಚಂದ್ರಪ್ರಕಾಶ್, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಿ.ಎಚ್.ಗಿರೀಶ್, ಸಹಾಯಕ ಇಂಜಿನಿಯರ್ ಹನುಮಂತ ಇತರರು ಇದ್ದರು.



ಮೂಲ್ಕಿ ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದ ಸಮಗ್ರ ಜೀರ್ಣೋದ್ಧಾರ ಪ್ರಯುಕ್ತ ಮುಷ್ಠಿ ಕಾಣಿಕೆ ಮತ್ತು ಲಕ್ಷ ಪ್ರದಕ್ಷಿಣಾ ನಮಸ್ಕಾರ ಬುಧವಾರ ಆರಂಭಗೊಂಡಿತು. ನವಗ್ರಹಹವನ ಸಹಿತ ವಿವಿಧ ಹವನ ಪೂಜೆ ಪುನಸ್ಕಾರಗಳು, ಬಳಿಕ ಅಶ್ವತ್ಥೋಪನಯನ, ವಿವಾಹ, ಪ್ರಸನ್ನಪೂಜೆ, ಮಹಾನೈವೇದ್ಯ, ಸಮಾರಾಧನೆ ನಡೆಯಿತು. ಈ ಸಂದರ್ಭ ಶ್ರೀಕ್ಷೇತ್ರದ ಅರ್ಚಕ ವೃಂದ ಆಡಳಿತ ಮಂಡಳಿ, ಮೂಲ್ಕಿ ಪೇಟೆ ಹತ್ತು ಸಮಸ್ತರು ಮತ್ತು ಭಜಕವೃಂದ ಹಾಜರಿದ್ದರು.

ಹೊಸಬೆಟ್ಟಿನಲ್ಲಿ ಅಹೋರಾತ್ರಿ ತಾಳಮದ್ದಳೆ

ಗಿರಿಜಾ ಕಲ್ಯಾಣ-ಇಂದ್ರಜಿತು ಕಾಳಗ

◆**ಮಂಗಳೂರು:** ಶಾರದಾ ಮಾಸದ ಕೂಟ ಸುರತ್ಕಲ್ ಇದರ ಆಶ್ರಯದಲ್ಲಿ ಹೊಸಬೆಟ್ಟು ಶಾರದಾ ಮಂದಿರದಲ್ಲಿ ಮಹಾ ಶಿವರಾತ್ರಿ ಅಂಗವಾಗಿ 'ಗಿರಿಜಾ ಕಲ್ಯಾಣ – ಇಂದ್ರಜಿತು ಕಾಳಗ' ಇಡೀ ರಾತ್ರಿಯ ಯಕ್ಷಗಾನ ತಾಳಮದ್ದಳೆ ಜರಗಿತು.

ಅತಿಥಿಗಳಾಗಿ ವಿಶ್ವೇಶ್ವರ ಬದವಿದೆ, ರಮಾ ವೆಂಕಟರಾವ್, ವೈ. ರಾಘವೇಂದ್ರ ರಾವ್, ಡಾ. ಸತೀಶ್ ಪುಣಿಂಚಿತ್ತಾಯ ಮತ್ತು ಮಧುಕರ ಭಾಗವತ ಅವರು ಹಿಮ್ಮೇಳದಲ್ಲಿ ಭಾಗವಹಿಸಿದರು. ಸಂಘಟಕ ವಿನಯ ಆಚಾರ್ಯ ಹೊಸಬೆಟ್ಟು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾವಿದರು ಅಹೋರಾತ್ರಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಇಂದ್ರಜಿತು ಕಾಳಗ

ಬಳಿಕ ಜರಗಿದ ಇಂದ್ರಜಿತು ಕಾಳಗಟದಲ್ಲಿ ರಾಧಾಕೃಷ್ಣ ಕಲ್ಚಾರ್ (ಇಂದ್ರಜಿತು) , ಗಣೇಶ್ ಶೆಟ್ಟಿ ಕನ್ನಡಿಕಟ್ಟೆ (ಹನುಮಂತ), ದಿನೇಶ್ ಶರ್ಮ (ರಾಮ), ಕೆ.ಕಲಾವತಿ (ಮಾಯಾಸೀತೆ), ವಿನಯ ಆಚಾರ್ಯ ಹೊಸಬೆಟ್ಟು (ವಿಭೀಷಣ), ಗೋಪಾಲಕೃಷ್ಣ ಅನಂತಾಡಿ (ಲಕ್ಷ್ಮಣ) ಅರ್ಥಧಾರಿಗಳಾಗಿದ್ದರು.

ಭಾಗವತರಾಗಿ ಗಣೇಶ್ ಕುಮಾರ್ ಹೆಬ್ರಿ, ಶಶಿಧರ್ ರಾವ್ ಚಿತ್ರಾಪು, ಮಾಧವ ಮಯ್ಯ ಸುರತ್ಕಲ್ ಹಾಗೂ ಚೆಂಡೆ – ಮದ್ದಳೆ ವಾದಕರಾಗಿ ರಾಘವೇಂದ್ರ ಹೆಜಮಾಡಿ, ರಾಕೇಶ್ ಹೊಸಬೆಟ್ಟು, ರಾಮ ಹೊಳ್ಳ ಸುರತ್ಕಲ್, ವೇದವ್ಯಾಸ ರಾವ್ ಹಿಮ್ಮೇಳದಲ್ಲಿದ್ದರು.



ಗಿರಿಜಾ ಕಲ್ಯಾಣ

ಮೊದಲ ಪ್ರಸಂಗ 'ಗಿರಿಜಾ ಕಲ್ಯಾಣ'ದಲ್ಲಿ ಭಾಗವತರಾಗಿ ಸತೀಶ್ ಪುಣಿಂಚಿತ್ತಾಯ, ರಾಜಾರಾಮ ಹೊಳ್ಳ ಕೈರಂಗಳ, ಡಾ.ಪ್ರಖ್ಯಾತ್ ಶೆಟ್ಟಿ ಅಳಿಕೆ, ಚೆಂಡೆ – ಮದ್ದಲೆಯಲ್ಲಿ ಸಂಪತ್ ಬಾಬು, ಹರಿಶ್ಚಂದ್ರ ನಾಯಗ ಮಾಡೂರು, ಲಕ್ಷ್ಮೀಶ ಉಪಾಧ್ಯಾಯ, ಹರೀಶ್ ಹೆಬ್ಬಾರ್, ಚಂದ್ರಶೇಖರ ಕಾರಂತ್ ಭಾಗವಹಿಸಿದ್ದರು.
ಭಾಸ್ಕರ ರೈ ಕುಕ್ಕುವಳ್ಳಿ (ದೇವೇಂದ್ರ), ಪಶುಪತಿ ಶಾಸ್ತ್ರಿ ಶಿರಂಕಲ್ಲು (ಈಶ್ವರ), ವೇಣುಗೋಪಾಲ್ ಭಟ್ ಶೇಣಿ (ಗಿರಿಜೆ), ವಿನಯಾಚಾರ್ ಹೊಸಬೆಟ್ಟು ಮತ್ತು ಸದಾಶಿವ ಆಳ್ವ ತಲಪಾಡಿ (ಮನ್ಮಥ), ಕಲಾವತಿ (ಪರ್ವತ ರಾಜ), ವಿನೋದ್ ಕುಮಾರ್ ಪೆರ್ಲ ಮತ್ತು ನಳಿನಿ ಮೋಹನ್ (ತಾರಕಾಸುರ), ಗಾಯತ್ರಿ ಬಿ. ಎಸ್. (ರತಿ), ರಾಧಾಕೃಷ್ಣ ಭಟ್ ಕುಳಾಯಿ (ನಾರದ) , ಸಾವಿತ್ರಿ ಶಾಸ್ತ್ರಿ (ವಿಷ್ಣು), ಶ್ರೀಧರ್ ಎಸ್.ಪಿ. (ಷಣ್ಮುಖಿ) ಅರ್ಥಧಾರಿಗಳಾಗಿದ್ದರು.

ಬೇಕರಿಯಲ್ಲಿ ಬೆಂಕಿ ಅನಾಹುತ

◆**ಕಾಸರಗೋಡು:** ನಗರದ ಹೊಸ ಬಸ್ ನಿಲ್ದಾಣದ ಕಟ್ಟಡದಲ್ಲಿರುವ ಬೇಕರಿಯೊಂದರಲ್ಲಿ ಮಂಗಳವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ದಳ ನಡೆಸಿದ ಕಾರ್ಯಾಚರಣೆಯಿಂದ ಭಾರೀ ಅನಾಹುತ ತಪ್ಪಿಹೋಗಿದೆ.

ಸತೀಶ್ ಕೋಟೆಕಣಿ ಎಂಬವರ ಮಾಲಕತ್ವದ ಶ್ರೀಲಕ್ಷ್ಮೀ ಬೇಕರಿಯಲ್ಲಿ ಮಧ್ಯರಾತ್ರಿ ಒಂದು ಗಂಟೆಯ ವೇಳೆ ಬೆಂಕಿ ಕಾಣಿಸಿಕೊಂಡಿದೆ. ವಿಷಯ ತಿಳಿದು ಅಗ್ನಿಶಾಮಕ ದಳ ಆಗಮಿಸಿ ಬೆಂಕಿ ನಂದಿಸಿದೆ. ಬೆಂಕಿ ತಗುಲಲು ಕಾರಣ ತಿಳಿದುಬಂದಿಲ್ಲ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸುಮತಿ ದಿವಾಕರ ಶೆಟ್ಟಿ, ಕಂಬಳಿ ಹೌಸ್, ಸುರಗಿರಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ದಿ| ಶಾರದಾ ವಿಠಲ ಶೆಟ್ಟಿ ಸ್ಮರಣಾರ್ಥ ಮಕ್ಕಳು, ಮೊಮ್ಮಕ್ಕಳು, ಕುಟುಂಬಸ್ಥರು, ಬಂಗ್ರ ಕೂಳೂರು, ಮಂಗಳೂರು.
3. ಶ್ರೀನಿವಾಸ ಭಂಡಾರಿ, ಭಂಡಾರಿ ಕುಟುಂಬಸ್ಥರು, ಬೊಳಿಂಜ, ಬಾಳೆಪುಣಿ, ಪಾತೂರು.
4. ಬಿ. ಉಗ್ಗಪ್ಪ ಮೂಲ್ಯ (ಪಿಡಿಓ), ಹುಂಶಿಲಪದವು ಹೌಸ್, ನಿಡ್ಡೋಡಿ.
5. ದೇವಿ ಪ್ರಸಾದ್ ನಾಯಕ್, 'ನಾಯಕ್ ಕಂಪೌಂಡು', ಪೆರ್ಮುದೆ ವಯಾ ಬಜಪೆ.
6. ಶ್ರೀ ಶ್ರೀ ಮೋಹನದಾಸ ಸ್ವಾಮೀಜಿ, 'ಶ್ರೀಧಾಮ' ಮಾಣಿಲ ವಯಾ ಪೆರುವಾಯಿ, ಬಂಟ್ವಾಳ (ತಾ).
7. ದಿ| ಚೆನ್ನಪ್ಪ ಕುಲಾಲ್ ಸ್ಮರಣಾರ್ಥ ಪತ್ನಿ ಮತ್ತು ಮಗಳು ನಿಧಿ, ಕುರ್ಸುಗುಡ್ಡೆ ಹೌಸ್, ಮೊಡಂಕಾಪು, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಯಡೂರು ಕೌರಿಯಲ್ಲಿ
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕೌರಿ ಒಕ್ಕೂಟ

ಶ್ರೀ ಸಾಲಿಗ್ರಾಮ ಮೇಳ
ಸಂತೆಗುಳಿಯಲ್ಲಿ-ಸ್ವಪ್ನಮಂಟಪ

ಶ್ರೀ ಪೆರ್ಡೂರು ಮೇಳ
ಹೊನ್ನೆಕಟ್ಟೆಯಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಮೂಡುಬಿದಿರೆಯಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಬ್ರಹ್ಮಯಕ್ಷಿ ಸಪರಿವಾರ ದೈವಸ್ಥಾನ, ಸೇನಾಪುರ-ಕುಂದಾಪುರ -ಶ್ರೀ ದೇವಿ ಮಹಾತ್ಮೆ

'ಸ್ನೇಹ ಸೇತು' ಅಂತರ್ ಜಿಲ್ಲಾ ಸ್ನೇಹ ಸಮ್ಮಿಲನ

◆ **ಶಿರ್ವ:** ಶಂಕರಪುರ ಜೆ.ಎಮ್.ಜೆ ಸಭಾಭವನದಲ್ಲಿ ರೋಟರಿ ಸಂಸ್ಥಾಪನಾ ದಿನಾಚರಣೆಯ ಪ್ರಯುಕ್ತ ಬೆಳ್ಮಣ್ ರೋಟರಿ ನೇತೃತ್ವದಲ್ಲಿ ವಲಯ ಐದರ ಸಹಾಯಕ ಗವರ್ನರ್ ವಿಘ್ನೇಶ್ ಶೆಣೈ ಮಾರ್ಗದರ್ಶನದಲ್ಲಿ ರಂಗನಾಥ್ ಕಿಣಿ ಮಂಗಳೂರು ಸಹಕಾರದೊಂದಿಗೆ ಏರ್ಪಡಿಸಿದ ರೋ.ಅ.ಜಿಲ್ಲೆ 3182 ಮತ್ತು 3181 ಇದರ ಆಯ್ದ ರೋಟರಿ ಸಂಸ್ಥೆಗಳ ಸದಸ್ಯರ 'ಸ್ನೇಹ-ಸೇತು' ಕಾರ್ಯಕ್ರಮವನ್ನು ರೋಟರಿ ಅ.ಜಿಲ್ಲೆ 3180 ಇದರ ಮಾಜಿ ಜಿಲ್ಲಾ ಗವರ್ನರ್ ಡಾ.ಭರತೇಶ್ ಆದಿರಾಜ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಗವರ್ನರ್‌ಗಳಾದ ಡಾ.ಎ.ಭರತೇಶ್, ಡಾ.ದೇವದಾಸ್ ರೈ ಮಂಗಳೂರು, ರಂಗನಾಥ್ ಭಟ್, ಜಿಲ್ಲಾ ಗವರ್ನರ್ ನಾಮಿನಿ ಡಿಸಿಗ್ನೇಟ್ ಆಲೆನ್ ವಿನಯ್ ಲೂವಿಸ್ ಅವರನ್ನು ಸನ್ಮಾನಿಸಲಾಯಿತು. ವಲಯ ಸಹಾಯಕ ಗವರ್ನರ್ ರಜನಿ ಭಟ್ ಮಂಗಳೂರು, ವಲಯ ಸೇನಾನಿ ಜಾನ್ ಆರ್.ಡಿ. ಸಿಲ್ವ, ಕಾರ್ಯದರ್ಶಿ ಧೀರಜ್ ಎಸ್. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಬೆಳ್ಮಣ್ ರೋಟರಿ ಅಧ್ಯಕ್ಷ ಶಿವಕುಮಾರ್ ಪೂಜಾರಿ ವಹಿಸಿದ್ದರು. ಇಕ್ಬಾಲ್ ಅಹಮ್ಮದ್, ಶೈಲಜಾ ಶೆಟ್ಟಿ, ನವೀನ್ ಶೆಣೈ ಪರಿಚಯಿಸಿದರು.

ರೇಖಾ ಉಪಾಧ್ಯಾಯ ಕಾರ್ಕಳ ನಿರೂಪಿಸಿದರು. ವಲಯ ಕಾರ್ಯದರ್ಶಿ ಆಲ್ವಿನ್ ನೇರಿ ಪಿಂಟೊ ಧನ್ಯವಾದವಿತ್ತರು. ರಾಜೇಶ್ ಸಾಲಿಯಾನ್ ಸಹಕರಿಸಿದರು. ವಲಯ ಐದರಿಂದ ರೋಟರಿ ಕ್ಲಬ್‌ಗಳಾದ ಕಾರ್ಕಳ, ಕಾರ್ಕಳ ರೋಕ್‌ಸಿಟಿ, ನಿಟ್ಟೆ, ಪಡುಬಿದ್ರೆ, ಕಾಪು, ಶಂಕರಪುರ, ಶಿರ್ವ, ಮಣಿಪುರ, ಮಂಗಳೂರು ಭಾಗದ ರೋಟರಿ ಕ್ಲಬ್‌ಗಳಾದ ಬೈಕಂಪಾಡಿ, ಮೆಟ್ರೋ, ಸೆಂಟ್ರಲ್, ಮಿಡ್‌ಟೌನ್, ಹಿಲ್‌ಸೈಡ್ ಕ್ಲಬ್‌ಗಳ ಅಧ್ಯಕ್ಷರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಭೀಮ್ ಆ್ಯಪ್‌ನಿಂದ ಯುಪಿಐ ಸರ್ಕಲ್

◆**ಮಂಗಳೂರು:** ಡಿಜಿಟಲ್ ಪಾವತಿಗಳನ್ನು ಮತ್ತಷ್ಟು ಸುರಕ್ಷಿತ ಮತ್ತು ಸರಳಗೊಳಿಸಲು ಭೀಮ್ ಪೇಮೆಂಟ್ ಆ್ಯಪ್, ಯುಪಿಐ ಸರ್ಕಲ್ ಎಂಬ ವೈಶಿಷ್ಟ್ಯವನ್ನು ಪರಿಚಯಿಸಿದೆ. ಹೆಚ್ಚು ನಿಖರವಾಗಿ ರೂಪುಗೊಳಿಸಿರುವ ಈ ವೈಶಿಷ್ಟ್ಯ ಬಳಕೆದಾರರು ತಮ್ಮ ವಿಶ್ವಾಸಾರ್ಹ ಜನರಿಗೆ ನಿಯಂತ್ರಿತ ಪಾವತಿಗೆ ಸರಳ ಲಭ್ಯವಾಗುವಂತೆ ಮಾಡಲು ನೆರವಾಗುತ್ತದೆ. ಸ್ಪಷ್ಟ ಮಿತಿ, ಸಂಪೂರ್ಣ ದೃಶ್ಯಮಾನತೆಯೊಂದಿಗೆ ಮತ್ತು ಭದ್ರತೆ ಹಾಗೂ ಹೊಣೆಗಾರಿಕೆಯ ಸುಲಲಿತ ಸೌಲಭ್ಯವನ್ನು ಒದಗಿಸುತ್ತದೆ ಎಂದು ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಪ್ರಕಟಣೆ ಹೇಳಿದೆ. ಮುಖ್ಯ ಬಳಕೆದಾರ ನಿರ್ಧರಿತ ಮಿತಿಗಳ ಒಳಗೆ, ಸಂಪೂರ್ಣ ದೃಶ್ಯ ಮಾನತೆಯೊಂದಿಗೆ, ಬ್ಯಾಂಕ್ ಖಾತೆಯಿಂದ ಯುಪಿಐ ಪಾವತಿಗಳಿಗಾಗಿ ದ್ವಿತೀಯ ಬಳಕೆದಾರನಿಗೆ ಅನುಮತಿ ನೀಡಬಹುದು. ಈ ಮೂಲಕ, ಯುಪಿಐ ಪಿನ್, ಪಾಸ್‌ವರ್ಡ್ ಅಥವಾ ಸಾಧನ ಪ್ರವೇಶ ಹಂಚಿಕೊಳ್ಳುವ ಅಪಾಯಕರ ಅಭ್ಯಾಸವಿಲ್ಲದೆ, ಡಿಜಿಟಲ್ ಪಾವತಿಗಳನ್ನು ಹೆಚ್ಚು ವಾಸ್ತವಿಕವಾಗಿಸುತ್ತದೆ.

ಕಿರುಸುದ್ದಿ

ವನ ಚಾಮುಂಡೇಶ್ವರಿ ದೇವಾಲಯದ ಬ್ರಹ್ಮಕಲಶ ಅಷ್ಟಬಂಧ ಪುನರ್ ಪ್ರತಿಷ್ಠಾಪನಾ ಮಹೋತ್ಸವ

ಮಡಿಕೇರಿ: ಮಡಿಕೇರಿಯ ಜ್ಯೋತಿನಗರದಲ್ಲಿರುವ 426 ವರ್ಷಗಳ ಇತಿಹಾಸ ಹೊಂದಿರುವ ವನ ಚಾಮುಂಡೇಶ್ವರಿ ದೇವಾಲಯದ ಬ್ರಹ್ಮಕಲಶ ಅಷ್ಟಬಂಧ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಫೆ.26 ಮತ್ತು 27ರಂದು ದೇವಾಲಯದ ಆವರಣದಲ್ಲಿ ನಡೆಯಲಿದೆ ಎಂದು ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಟಿ.ಕೆ.ಸುಧೀರ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಮಡಿಕೇರಿಯ ಜ್ಯೋತಿನಗರದಲ್ಲಿರುವ ದೇವಾಲಯದ ಜೀರ್ಣೋದ್ಧಾರ ಕಾಮಗಾರಿ ಇತ್ತೀಚೆಗೆ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಳಶ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಂತ್ರಿಗಳಾದ ಶ್ರೀಕಾಂತ್ ಭಟ್ಟತಿರಿ ಚಾಲೋಡ್ ಅವರ ನೇತೃತ್ವದಲ್ಲಿ ಫೆ.26 ರಂದು ವಿವಿಧ ಪೂಜಾ ಕೈಂಕರ್ಯ ನಡೆಯಲಿದೆ. ಕಾರ್ಯಕ್ರಮ ಪ್ರಯುಕ್ತ ನಗರದ ಮುಖ್ಯ ಬೀದಿಗಳಲ್ಲಿ ಭವ್ಯ ಕಳಶ ಮೆರವಣಿಗೆ ನಡೆಯಲಿದ್ದು, ಫೆ.27 ರಂದು ಬೆಳಗ್ಗೆ 6 ಗಂಟೆಗೆ ಮಹಾಗಣಪತಿ ಹೋಮದೊಂದಿಗೆ ವಿವಿಧ ಪೂಜಾ ವಿಧಿ ವಿಧಾನಗಳು ನಡೆಯಲಿವೆ. ಬೆಳಗ್ಗೆ 11.12 ರಿಂದ 11.34 ರವರೆಗಿನ ಕುಂಭ ಲಗ್ನ ಶುಭಮುಹೂರ್ತದಲ್ಲಿ ಬಿಂಬಪ್ರತಿಷ್ಠೆ, ಕಲಾಭಿಷೇಕ ಪೂಜೆ, ಮಹಾಪೂಜೆ ನಡೆಯಲಿದೆ. ಮಾ.3 ರಂದು ದೇವಾಲಯದ ವಾರ್ಷಿಕ ಪೂಜೆ ನಡೆಯಲಿದೆ ಎಂದು ಅವರು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ವನಚಾಮುಂಡೇಶ್ವರಿ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಬಾಬು, ಉಪಾಧ್ಯಕ್ಷ ಗುರುಪ್ರಸಾದ್, ಕಾರ್ಯದರ್ಶಿ ಸುನಿಲ್, ಧರ್ಮದರ್ಶಿಗಳಾದ ನಂಜಪ್ಪ, ನಾಗೇಶ್ ಇದ್ದರು.

ನಿಧನ ಸುದ್ದಿ

ಯು.ಕೆ. ರೋಹಿತಾಕ್ಷ



ಉಪ್ಪಿನಂಗಡಿ: ಇಲ್ಲಿನ ರಾಮ್ ಲಕ್ಷ್ಮಣ್ ಆರ್ಕೆಡ್ ಮಾಲಕ, ಕ್ಲಾಸಿಕ್ ಮೆನ್ಸ್ ವೇರ್ ಟೈಲರಿಂಗ್ ಸಂಸ್ಥೆಯ ಮಾಲಕ, ವಿವಿಧ ಸಾಮಾಜಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದ ಯು.ಕೆ. ರೋಹಿತಾಕ್ಷ (47) ಅವರು ಅಲ್ಪ ಕಾಲದ ಅನಾರೋಗ್ಯದಿಂದಾಗಿ ಮಂಗಳವಾರದಂದು ನಿಧನರಾದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕನಾಗಿ, ಉಪ್ಪಿನಂಗಡಿ ಶ್ರೀ ಮಾಧವ ಶಿಶು ಮಂದಿರದ ಸಂಸ್ಥಾಪಕ ಜೊತೆ ಕಾರ್ಯದರ್ಶಿಯಾಗಿ, ಟೈಲರ್ಸ್ ಅಸೋಸಿಯೇಶನ್ ಸಂಸ್ಥೆಯ ಅಧ್ಯಕ್ಷನಾಗಿ ಹಲವಾರು ಸಾಮಾಜಿಕ, ಧಾರ್ಮಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡು ಜನಾನುರಾಗಿಯಾಗಿದ್ದರು. ಅವರು ಕೆಲ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಆಗಲಿದ್ದಾರೆ.

ಶತಾಯುಶಿ ಸೀತು ಪೂಜಾರ್ತಿ



ಕೈಕಂಬ: ನಾಲ್ಕು ತಲೆಮಾರು ಕಂಡ ಶತಾಯುಶಿ ಸೀತು ಪೂಜಾರ್ತಿ (106) ಕುಳವೂರಿನ ಐನದ ಸ್ವಗೃಹದಲ್ಲಿ ಬುಧವಾರ ಮುಂಜಾನೆ ನಿಧನರಾದರು. ಮೃತರು ಕುಪ್ಪೆಪದವಿನ ಹಿರಿಯ ರಿಕ್ಷಾ ಚಾಲಕ ಲಿಂಗಪ್ಪ ಪೂಜಾರಿ (ಕರಿಯಣ್ಣ) ಸೇರಿದಂತೆ ಮೂವರು ಪುತ್ರರನ್ನು ಮತ್ತು ಐವರು ಪುತ್ರಿಯರನ್ನು ಹಾಗೂ ಅಪಾರ ಬಂಧುಗಳನ್ನು ಆಗಲಿದ್ದಾರೆ.

ಅನಂತರಾಮ ಪಾಟ್ಕರ್



ಶಿರ್ವ: ಬಂಟಕಲ್ಲು ಶಾಲಾ ನಿವೃತ್ತ ಮುಖ್ಯಶಿಕ್ಷಕ ದಿ. ಎಚ್.ಪಾಂಡುರಂಗ ನಾಯಕ್ (ಪಾಟ್ಕರ್) ಅವರ ಪುತ್ರ ಹೇರೂರು ಗಂಪ ಅನಂತರಾಮ ಪಾಟ್ಕರ್ (ಅಂತು) (66) ಮಂಗಳವಾರ ಸಂಜೆ ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ರಾಧಾ ಭಂಡಾರ್ತಿ



ಶಿರ್ವ: ಬೆಳ್ಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಡಂಬೈಲು ದಿ. ಸಂಜೀವ ಭಂಡಾರಿ ಅವರ ಪತ್ನಿ ರಾಧಾ ಭಂಡಾರ್ತಿ (84) ಅಲ್ಪಕಾಲದ ಅಸೌಖ್ಯದಿಂದ ಭಾನುವಾರ ಸ್ವಗೃಹದಲ್ಲಿ ನಿಧನರಾದರು. ಇವರು ಬಂಟಕಲ್ಲು ರಕ್ಷಾ ಸೆಲೂನ್ ಮಾಲಕ ಸಾಮಾಜಿಕ ಕಾರ್ಯಕರ್ತ ಸತೀಶ್ ಭಂಡಾರಿ ಸೇರಿದಂತೆ ಇಬ್ಬರು ಗಂಡು, ಇಬ್ಬರು ಹೆಣ್ಣು ಹಾಗೂ ಅಪಾರ ಬಂಧುಗಳನ್ನು ಆಗಲಿದ್ದಾರೆ.

ನಾಗೇಶ್ ಆರ್. ಶೆಟ್ಟಿ



ಮುಲ್ಕಿ: ಕಾರ್ನಾಡ್ ಪಡುಬೈಲ್, ನಂದಗೋಕುಲ ನಿವಾಸಿ ನಾಗೇಶ್ ಆರ್. ಶೆಟ್ಟಿ (62) ಅನಾರೋಗ್ಯದಿಂದ ಫೆ. 24ರಂದು ನಿಧನರಾದರು. ಅವರು ಕಾರ್ನಾಡ್ ಶಾರದಾ ಬೇಕರಿಯ ಮಾಲೀಕರಾಗಿದ್ದು, ಅವರು ಪತ್ನಿ ಮತ್ತು ಪುತ್ರನನ್ನು ಆಗಲಿದ್ದಾರೆ.



ಪಾವತಿ ರಶೀದಿಯಲ್ಲಿ ನಡೆದ ಅಕ್ರಮದ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿ ಬಿಜೆಪಿ ಉಡುಪಿ ನಗರ ವತಿಯಿಂದ ನಗರಾಧ್ಯಕ್ಷ ದಿನೇಶ್ ಅಮೀನ್ ನೇತೃತ್ವದಲ್ಲಿ ಉಡುಪಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಉಡುಪಿ ನಗರಸಭೆಯಲ್ಲಿ ತೆರಿಗೆ ವಂಚನೆ ಪ್ರಕರಣ ಬೆಳಕಿಗೆ ಬಂದಿದ್ದು, ಈ ಪ್ರಕರಣವು ಗಂಭೀರ ಸ್ವರೂಪ ಹೊಂದಿರುವ ಸಾಧ್ಯತೆ ಇರುವುದರಿಂದ, ಎಲ್ಲಾ ಆರೋಪಿಗಳನ್ನು ಕಾನೂನಾತ್ಮಕ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಉಬಾರ್ ಉತ್ಸವದ 'ಸಂಗಮ ಪ್ರಶಸ್ತಿ'ಗೆ ನಿವೃತ್ತ ಸೇನಾಧಿಕಾರಿ ಚಂದಪ್ಪ ಮೂಲ್ಯ ಆಯ್ಕೆ

ಉಪ್ಪಿನಂಗಡಿ: ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಪ್ರಾಯೋಜಕತ್ವದಲ್ಲಿ ಟೀಮ್ ದಕ್ಷಿಣ ಕಾಶಿಯ ಆಶ್ರಯದಲ್ಲಿ ಫೆ.28ರಂದು ಉಪ್ಪಿನಂಗಡಿಯಲ್ಲಿ ನಡೆಯಲಿರುವ 6ನೇ ವರ್ಷದ ಉಬಾರ್ ಉತ್ಸವದಲ್ಲಿ ಕೊಡ ಮಾಡುವ 'ಸಂಗಮ ಪ್ರಶಸ್ತಿ–2026'ಕ್ಕೆ ನಿವೃತ್ತ ಸೇನಾಧಿಕಾರಿ, ಉದ್ಯಮಿ, ಸಾಮಾಜಿಕ ನೇತಾರ ಚಂದಪ್ಪ ಮೂಲ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಟೀಮ್ ದಕ್ಷಿಣ ಕಾಶಿಯ ಅಧ್ಯಕ್ಷ ಪ್ರಸನ್ನ ಪೆರಿಯಡ್ಕ ತಿಳಿಸಿದ್ದಾರೆ.



ಪ್ರಧಾನ ಮಂತ್ರಿಗಳ ರಕ್ಷಣಾ ನಿರ್ವಹಣೆಯೂ ಸೇರಿದಂತೆ ಸೇನಾ ವಿಭಾಗದ ಪ್ರಮುಖ ಹೊಣೆಗಾರಿಕೆಗಳನ್ನು ನಿರ್ವಹಿಸಿದ್ದು, ಬಿಎಸ್‌ಎಫ್‌ನಲ್ಲಿ 37 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಡೆಪ್ಯೂಟಿ ಕಮಾಂಡೆಂಟ್ ಆಗಿ ನಿವೃತ್ತರಾಗಿರುವ ಚಂದಪ್ಪ ಮೂಲ್ಯರಿಗೆ 1971ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಭಾಗವಹಿಸಿ ಉತ್ತಮ ನೇತೃತ್ವ ನೀಡಿರುವುದಕ್ಕಾಗಿ ಭಾರತ ಸರಕಾರವು 'ಸಂಗ್ರಾಮ ಮೆಡಲ್', 'ಪಶ್ಚಿಮ ಸ್ಟಾರ್', 'ಸೇನಾ ಮೆಡಲ್' ನೀಡಿ ಗೌರವಿಸಿದೆ. ಪಂಜಾಬಿನಲ್ಲಿ ಉಗ್ರವಾದಿಗಳ ವಿರುದ್ಧ ಹೋರಾಟ, ಅಮೃತಸರ್ ಗೋಲ್ಡನ್ ಟೆಂಪಲ್ ಬ್ಲೂ ಸ್ಟಾರ್ ಅಪರೇಷನ್‌ಗಳಲ್ಲಿ ಭಾಗವಹಿಸಿ ಗಣನೀಯ ಸೇವೆ ಸಲ್ಲಿಸಿರುವುದಕ್ಕೆ 'ಗರಾಜ್ ಮೆಡಲ್', 'ವಿಶಿಷ್ಟ ಸೇವಾ ಮೆಡಲ್', ಏಳು ವರ್ಷಗಳವರೆಗೆ ಪ್ರಧಾನ ಮಂತ್ರಿಗಳು ಮತ್ತು ವಿವಿಧ ಗಣ್ಯರಿಗೆ ಸುರಕ್ಷಾ ಕವಚವಾಗಿರುವ ಬ್ಲಾಕ್ ಕ್ಯಾಟ್ ಕಮಾಂಡೋದಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸಿದ್ದಕ್ಕೆ ರಾಷ್ಟ್ರಪತಿ ಪ್ರಶಸ್ತಿ ಸೇರಿದಂತೆ ಭಾರತ ಸರಕಾರವು ಅವರಿಗೆ 54 ಪ್ರಶಸಿ, 'ಕುಲಾಲ ಸಮಾಜ ರತ್ನ' ಪ್ರಶಸ್ತಿ, 'ಕುಲಾಲ ಕಿರೀಟ' ಸೇನಾ ಸಿಂಧೂರ ಪ್ರಶಸ್ತಿಯನ್ನೂ ನೀಡಿ ಅವರನ್ನು ಗೌರವಿಸಲಾಗಿದೆ.

ಚಂದಪ್ಪ ಮೂಲ್ಯ, ಪ್ರಸಕ್ತ ಉಪ್ಪಿನಂಗಡಿಯ ಅಮೂಲ್ಯ ಗ್ಯಾಸ್ ಏಜೆನ್ಸಿಯ ಮಾಲಕರಾಗಿದ್ದು, ಕರ್ನಾಟಕ ರಾಜ್ಯದ ಕೇಂದ್ರೀಯ ಸಶಸ್ತ ಪಡೆ–ನಿವೃತ್ತ ಯೋಧರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷರಾಗಿದ್ದು, ಮಂಗಳೂರಿನ ಕರಾವಳಿ ಕರ್ನಾಟಕ ನಿವೃತ್ತ ಯೋಧರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿದ್ದಾರೆ. ಇದರೊಂದಿಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಲ್ಲದೆ, ಭಗವದ್ಗೀತೆ ಅಭಿಯಾನದಲ್ಲಿ ಸುಮಾರು 3,500ಕ್ಕೂ ಅಧಿಕ ಪುಸ್ತಕ ಉಚಿತ ಹಂಚಿದ್ದಾರೆ.

ಮಂಗಳೂರು ವಿವಿ ಯಕ್ಷಮಂಗಳ ಪ್ರಶಸ್ತಿ | ಕೃತಿ ವಿಭಾಗದಲ್ಲಿ ಬಲಿಪ ಮಾರ್ಗ, ಅಗರಿಮಾರ್ಗ

ಕಪ್ಪೆಕೆರೆ, ಮಾಂಬಾಡಿ, ಸಮೊ ಮುಡಿಗೆ ಗರಿ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ 2025–26ನೇ ಸಾಲಿನ ಯಕ್ಷಮಂಗಳ ಪ್ರಶಸ್ತಿಗೆ ಯಕ್ಷಗಾನ ರಂಗದ ಹಿರಿಯ ಕಲಾವಿದ ಕಪ್ಪೆಕೆರೆ ಸುಬ್ರಾಯ ಭಾಗವತ, ಯಕ್ಷಗಾನ ಗುರುಗಳಾದ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಹಿರಿಯ ಯಕ್ಷಗಾನ ಅರ್ಥಧಾರಿ ಜಬ್ಬಾರ್ ಸಮೊ ಅವರು ಆಯ್ಕೆಯಾಗಿದ್ದಾರೆ. ಯಕ್ಷಮಂಗಳ ಕೃತಿ ಪ್ರಶಸ್ತಿಗೆ ಕೃಷ್ಣ ಪ್ರಕಾಶ್ ಉಳಿತ್ತಾಯ ಅವರ 'ಬಲಿಪ ಮಾರ್ಗ ಹಾಗೂ 'ಅಗರಿಮಾರ್ಗ' ಕೃತಿಯು ಆಯ್ಕೆಯಾಗಿದೆ.

ಯಕ್ಷಮಂಗಳ ಪ್ರಶಸ್ತಿಯು 25,000 ರೂ. ನಗದು, ಪ್ರಶಸ್ತಿ ಪತ್ರ, ಸ್ಮರಣಿಕೆ ಮತ್ತು ಸನ್ಮಾನಗಳನ್ನೊಳಗೊಂಡಿದೆ. ಯಕ್ಷಮಂಗಳ ಕೃತಿ ಪ್ರಶಸ್ತಿಯು 10,000 ರೂ. ನಗದು, ಪ್ರಶಸ್ತಿ , ಸ್ಮರಣಿಕೆಗಳನ್ನೊಳಗೊಂಡಿದೆ.

ಕಲಾವಿದರ ಪರಿಚಯ

ಕಪ್ಪೆಕೆರೆ ಸುಬ್ರಾಯ ಭಾಗವತ

ಕಪ್ಪೆಕೆರೆ ಸುಬ್ರಾಯ ಭಾಗವತರು ಬಡಗುತಿಟ್ಟು ಯಕ್ಷಗಾನ ರಂಗದ ಹಿರಿಯ ತಲೆಮಾರಿನ ಅಗ್ರಮಾನ್ಯ ಕಲಾವಿದರಾಗಿದ್ದಾರೆ. ಉತ್ತರ ಕನ್ನಡದ



ಹೊನ್ನಾವರ ತಾಲೂಕಿನ ಹಡಿನಬಾಳ ಎಂಬಲ್ಲಿ 1947 ರಲ್ಲಿ ಈಶ್ವರ ಹೆಗಡೆ ಗೋಪಿ ಹೆಗಡೆ ದಂಪತಿಯ ಪುತ್ರರಾಗಿ ಜನಿಸಿದ ಅವರು ಹದಿನಾರರ ಹರೆಯದಲ್ಲೇ ಯಕ್ಷಗಾನ ರಂಗಕ್ಕೆ ಪಾದಾರ್ಪಣೆ ಮಾಡಿದರು. ಸರ್ವಾಂಗೀಣ ಕಲಾವಿದರಾಗಿ, ನಾಡಿನ ಓರ್ವ ಶ್ರೇಷ್ಠ ಭಾಗವತರಾಗಿ ಗುರುತಿಸಿದ್ದಾರೆ. ಗುಂಡುಬಾಳ, ಇಡಗುಂಜಿ, ಅಮೃತೇಶ್ವರಿ, ಕಮಲಶಿಲೆ, ಸಾಲಿಗ್ರಾಮ, ಬಚ್ಚಗಾರು, ಪಂಚಲಿಂಗ ಮೇಳಗಳಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲ ಸೇವೆಗೈದ ಹಿರಿಯ ಕಲಾವಿದರಾಗಿದ್ದಾರೆ.

ಮಾಂಬಾಡಿ ಸುಬ್ರಹ್ಮಣ್ಯ ಭಟ್

ಯಕ್ಷಗಾನ ಕ್ಷೇತ್ರದಲ್ಲಿ ಹಿಮ್ಮೇಳ ವಾದಕರಾಗಿ ಮೇಳದ ತಿರುಗಾಟದ ಜೊತೆಗೆ ಯಕ್ಷಗಾನ ಗುರುಗಳಾಗಿ ಗುರುಪರಂಪರೆಯನ್ನು ಮೆರೆಸಿದ



ಮಾಂಬಾಡಿ ಸುಬ್ರಹ್ಮಣ್ಯ ಭಟ್ ಅವರು ಯಕ್ಷಗಾನ ರಂಗದ ಹಿರಿಯ ಸಾಧಕರಾಗಿದ್ದಾರೆ. ಮಾಂಬಾಡಿ ನಾರಾಯಣ ಭಾಗವತರ ಸುಪುತ್ರರಾಗಿ ತಂದೆಯ ಮಾರ್ಗದರ್ಶನದಲ್ಲಿ ಮುಂದುವರಿದು ಕಟೀಲು, ಕರ್ನಾಟಕ, ಕದ್ರಿ ಮೊದಲಾದ ಮೇಳಗಳಲ್ಲಿ ತಿರುಗಾಟ ಮಾಡಿದ್ದಾರೆ. ಕಾಸರಗೋಡು, ದ.ಕ.ಜಿಲ್ಲೆಯ ನಾನಾ ಕಡೆ ಯಕ್ಷಗಾನದ ಹಿಮ್ಮೇಳ ತರಗತಿಗಳನ್ನು ನಡೆಸಿ ನೂರಾರು ಶಿಷ್ಯಂದಿರಿಗೆ ಹಿಮ್ಮೇಳ ಶಿಕ್ಷಣ ನೀಡಿದ್ದಾರೆ. ಇವರಲ್ಲಿ ಕಲಿತ ಅನೇಕ ಶಿಷ್ಯರು ವೃತ್ತಿಪರ ಕಲಾವಿದರಾಗಿ, ಹವ್ಯಾಸಿ ಕಲಾವಿದರಾಗಿ ಸೇವೆಗೈಯ್ಯುತ್ತಿದ್ದಾರೆ.

ಜಬ್ಬಾರ್ ಸಮೊ

ಯಕ್ಷಗಾನ ರಂಗದ ಹಿರಿಯ ತಾಳಮದ್ದಳೆಯ ಅರ್ಥಧಾರಿಯಾಗಿರುವ ಜಬ್ಬಾರ್ ಸಮೊ ಅವರು ಸಂಪಾಜೆಯ ಮೊಯ್ದಿನ್ ಕುಂಞ ಹಾಗೂ



ಬಿಪಾತುಮ್ಮ ದಂಪತಿಯ ಪುತ್ರರಾಗಿ 1963 ರಲ್ಲಿ ಜನಿಸಿದರು. ಎಳವೆಯಲ್ಲಿಯೇ ಯಕ್ಷಗಾನದ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಅವರು ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ ಪಡೆದಿದ್ದರು. ವಳಕುಂಜ ಕುಮಾರ ಸುಬ್ರಹ್ಮಣ್ಯ ಭಟ್ ಅವರ ಮೊದಲ ಗುರುವಾಗಿದ್ದು, ಆರಂಭದಲ್ಲಿ ದ್ರೋಣ, ಜಾಬಾಲಿ, ಈಶ್ವರ, ಸಂಜಯ, ಅಕ್ರೂರ, ಬ್ರಹ್ಮ, ಕಂಸ ಮೊದಲಾದ ಪಾತ್ರಗಳನ್ನು ಮಾಡಿದ್ದರು. 1990ರ ಬಳಿಕ ತಾಳಮದ್ದಳೆಯಲ್ಲಿ ಭಾಗವಹಿಸಲು ಆರಂಭಿಸಿದ ಅವರು ವಾಲಿ, ಮಾಗಧ, ಕರ್ಣ, ಅರ್ಜುನ, ಶಲ್ಯ, ಸುಗ್ರೀವ, ಭೀಷ್ಮ ಕೌರವ, ಶುಂಭ, ರಕ್ತಬೀಜ, ಧರ್ಮಾಂಗದ, ಭರತ, ಶತ್ರುಘ್ನ, ಹನುಮಂತ, ವೀರಮಣಿ, ಈಶ್ವರ, ಬಲರಾಮ, ರುಕ್ಮ, ಭೀಷ್ಮ, ಜಾಂಬವಂತ, ಶತ್ರುಪ್ರಸೂದನ, ಬಲಿ, ಶುಕ್ರಾಚಾರ್ಯ ಮುಂತಾದ ಪಾತ್ರಗಳು ಅವರಿಗೆ ಖ್ಯಾತಿಯನ್ನು ತಂದಿದೆ. ಅವರ ಪಾಂಡಿತ್ಯಪೂರ್ಣ ಸಂಭಾಷಣೆ, ಆಕರ್ಷಕ ಪದಪ್ರಯೋಗ ಮತ್ತು ಭಾವಪೂರ್ಣ ನಟನೆಯು ಅವರಿಗೆ ಎಲ್ಲಾ ಸಮುದಾಯಗಳಿಂದ ಅಪಾರ ಅಭಿಮಾನಿಗಳನ್ನು ಗಳಿಸಿಕೊಟ್ಟಿದೆ.

'ಬಲಿಪ ಮಾರ್ಗ', 'ಅಗರಿ ಮಾರ್ಗ'ಕ್ಕೆ ಯಕ್ಷಮಂಗಳ ಕೃತಿ ಪ್ರಶಸ್ತಿ

ಕೃಷ್ಣ ಪ್ರಕಾಶ ಉಳಿತ್ತಾಯರು ಖ್ಯಾತ ಹಿಮ್ಮೇಳ ಕಲಾವಿದರಾಗಿದ್ದು 'ಬಲಿಪ ಮಾರ್ಗ' ಹಾಗೂ 'ಅಗರಿ ಮಾರ್ಗ' ಕೃತಿಗಳ ಲೇಖಕರಾಗಿದ್ದಾರೆ. ಬಲಿಪ ಮಾರ್ಗ ಕೃತಿಯು ಯಕ್ಷಗಾನ ರಂಗದ



ಹಿರಿಯ ಕಲಾವಿದರಾದ ಹಿರಿಯ ಅಜ್ಜ ಬಲಿಪ ನಾರಾಯಣ ಭಾಗವತರು ಹಾಗೂ ಕಿರಿಯ ಬಲಿಪ ನಾರಾಯಣ ಭಾಗವತರ ಬದುಕು, ಗಾನಮಾರ್ಗ ಇವುಗಳನ್ನು ಸುಂದರವಾಗಿ, ಅರ್ಥಪೂರ್ವಾಗಿ ನಿರೂಪಿಸುವ ಕೃತಿಯಾಗಿದೆ.

ಅಗರಿ ಮಾರ್ಗ ಕೃತಿಯು 'ಅಗರಿ ಮಾರ್ಗ' ಕೃತಿಯು ತೆಂಕುತಿಟ್ಟಿನ ಯಕ್ಷಗಾನ ಪ್ರದರ್ಶನ ಕಲೆಯಲ್ಲಿ ಯಕ್ಷಬ್ರಹ್ಮ ಎಂದು ಪ್ರಸಿದ್ಧರಾದ ಅಗರಿ ಶ್ರೀನಿವಾಸ ಭಾಗವತರ ಬದುಕು, ಹಾಡುವ ಕ್ರಮ, ರಚನೆ, ಸಾಹಿತ್ಯ ವೈಶಿಷ್ಟ್ಯತೆಯನ್ನು ತೆರೆದಿಡುವ ಮಹತ್ವದ ಕೃತಿಯಾಗಿದೆ. ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರ ನೇತೃತ್ವದಲ್ಲಿ ಪ್ರೊ.ಪಾದೆಕಲ್ಲು ವಿಷ್ಣುಭಟ್, ಯಕ್ಷಗಾನ ಸಂಘಟಕ ಮುರಲೀ ಕಡೇಕಾರ್ ಹಾಗೂ ಕೇಂದ್ರದ ನಿರ್ದೇಶಕರಾದ ಡಾ.ಧನಂಜಯ ಕುಂಬ್ಳೆ ಅವರನ್ನು ಒಳಗೊಂಡಿರುವ ಆಯ್ಕೆ ಸಮಿತಿಯ ಸಭೆಯಲ್ಲಿ ಈ ಹೆಸರನ್ನು ಸರ್ವಾನುಮತದಿಂದ ಶಿಫಾರಸ್ಸು ಮಾಡಲಾಯಿತು. ಮಂಗಳೂರು ವಿವಿ ಕುಲಪತಿ ಪ್ರೊ.ಪಿಎಲ್. ಧರ್ಮ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಯಕ್ಷಮಂಗಳ ಪ್ರಶಸ್ತಿ ಮತ್ತು ಕೃತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಂಗಳೂರು ವಿವಿ ಕುಲಸಚಿ ಪ್ರೊ.ಗಣೇಶ್ ಸಂಜೀವ್ ಹಾಗೂ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕೇಂದ್ರಕ್ಕೆ ದಯಾನಂದ ಪೈಗಳಿಂದ ಒಂದು ಕೋಟಿ ಅನುದಾನ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ದಯಾನಂದ ಪೈ ಸತೀಶ್ ಪೈ ಯಕ್ಷಗಾನ ಕೇಂದ್ರದಲ್ಲಿ ಯಕ್ಷಗಾನ ಸಂಬಂಧಿ ಅಧ್ಯಯನ ಸಂಶೋಧನೆಯನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಬೆಂಗಳೂರಿನ ಡಾ.ದಯಾನಂದ ಪೈಗಳು ಒಂದು ಕೋಟಿಯ ವಿಶೇಷ ಅನುದಾನ ನೀಡುವುದಾಗಿ ತಿಳಿಸಿದ್ದಾರೆ ಎಂದು ವಿವಿ ಕುಲಪತಿ ಪ್ರೊ.ಪಿ.ಎಲ್ ಧರ್ಮ ತಿಳಿಸಿದ್ದಾರೆ. ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದಯಾನಂದ ಪೈಗಳು ಭಾಗವಹಿಸಲಿದ್ದು ಆ ದಿನ ಈ ಮೊತ್ತವನ್ನು ಹಸ್ತಾಂತರಿಸಲಿದ್ದಾರೆ. ವಿವಿಯ ಶೈಕ್ಷಣಿಕ ಪ್ರಗತಿಗೆ ಕೈ ಜೋಡಿಸಿದ ಪೈಗಳನ್ನು ಕುಲಪತಿಗಳು ಅಭಿನಂದಿಸಿದ್ದಾರೆ.

ಉಕ್ಕಿನಡ್ಕ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಮೀನಮೇಷ

ಕಾನೂನು ಹೋರಾಟಕ್ಕೆ ಸಿದ್ಧತೆ

ಕಾಸರಗೋಡು: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜ್‌ನ ಆಸ್ಪತ್ರೆ ಬ್ಲಾಕ್‌ನ್ನು ಪೂರ್ಣಗೊಳಿಸುವಲ್ಲಿ 10 ವರ್ಷಗಳ ವಿಳಂಬಕ್ಕೆ ಸಂಬಂಧಿಸಿದಂತೆ ಶಾಸಕ ಎನ್.ಎ. ನೆಲ್ಲಿಕುನ್ನು ಆರೋಗ್ಯ ಸಚಿವೆ ವೀಣಾ ಜೋರ್ಜ್ ಮತ್ತು ರಾಜ್ಯ ಸರಕಾರದ ವಿರುದ್ಧ ಇದೀಗ ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಸಿದ್ದಾರೆ.



ಜಿಲ್ಲೆಯ ಆರೋಗ್ಯ ಕ್ಷೇತ್ರದ ನಿರಂತರವಾದ ನಿರ್ಲಕ್ಷ್ಯವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ.

ಹತ್ತು ವರ್ಷ ಕಳೆದರೂ ಅಪೂರ್ಣ

ಎನ್.ಎ. ನೆಲ್ಲಿಕುನ್ನು ಅವರ ಮೊದಲ ಶಾಸಕ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಉಮ್ಮನ್ ಚಾಂಡಿ 2013ನೇ ನವೆಂಬರ್ ತಿಂಗಳಲ್ಲಿ ವೈದ್ಯಕೀಯ ಕಾಲೇಜ್‌ನ ಅಡಿಪಾಯ ಹಾಕಿದ್ದರು. ಆದರೆ ಎಡರಂಗ ಸರಕಾರ ಅಧಿಕಾರದಲ್ಲಿದ್ದು 10 ವರ್ಷಗಳ ನಂತರವೂ ಆಸ್ಪತ್ರೆ ಬ್ಲಾಕ್‌ನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಈ ಬಗ್ಗೆ ವಿಧಾನಸಭೆಯ ಒಳಗೆ ಮತ್ತು ಹೊರಗೆ ಈ ವಿಷಯವನ್ನು ಹಲವು ಬಾರಿ ಪ್ರಸ್ತಾಪಿಸಿದರೂ ಪ್ರತಿಕ್ರಿಯೆಗಳು ಮಾತ್ರ ದೊರೆತಿವೆಯೇ ಹೊರತು ಯಾವುದೇ ಪ್ರಾಯೋಗಿಕ ಬದಲಾವಣೆಗಳಿಲ್ಲ ಎಂದು ಅವರು ಆರೋಪಿಸಿದರು.

ತಾಲೂಕು ಆಸ್ಪತ್ರೆಗಳೂ ದುಃಸ್ಥಿತಿಯಲ್ಲಿ

ವೈದ್ಯಕೀಯ ಕಾಲೇಜು ಮಾತ್ರವಲ್ಲದೆ ಜಿಲ್ಲೆಯ ತಾಲೂಕು ಆಸ್ಪತ್ರೆಗಳೂ ದುಃಸ್ಥಿತಿಯಲ್ಲಿದೆ. ಕಾಞಂಗಾಡು ಜಿಲ್ಲಾಸ್ಪತ್ರೆಯಲ್ಲಿ ಖಾಲಿಯಿರುವ ಸ್ತ್ರೀರೋಗ ತಜ್ಞರ ಹುದ್ದೆಗಳು, ತಾಲೂಕು ಆಸ್ಪತ್ರೆಗಳಲ್ಲಿ ಹೆರಿಗೆ ಬ್ಲಾಕ್ ಗಳಿದ್ದರೂ ಹೆರಿಗೆ ಪ್ರಕರಣ ಸ್ವೀಕರಿಸದಿರುವುದು ಗಂಭೀರ ನ್ಯೂನತೆಗಳಾಗಿವೆ ಎಂದು ಶಾಸಕ ನೆಲ್ಲಿಕುನ್ನು ಅವರು ಹೇಳಿದರು. ಜಿಲ್ಲೆಯಲ್ಲಿ ಶೇಕಡಾ 70ರಷ್ಟು ಹೆರಿಗೆಗಳು ಖಾಸಗಿ ಆಸ್ಪತ್ರೆಗಳಲ್ಲಿ ನಡೆಯುತ್ತವೆ. ಹೊಸ ಹುದ್ದೆಗಳನ್ನು ಸೃಷ್ಟಿಸಿದರೂ ವೈದ್ಯರು ಮತ್ತು ದಾದಿಯರ ಕೊರತೆಯನ್ನು ಪರಿಹರಿಸಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ನಿರ್ಮಾಣ ಕಾರ್ಯಕ್ಕೆ ಕಾನೂನು ತೊಡಕು

ನಿರ್ಮಾಣ ಗುತ್ತಿಗೆದಾರರಾದ ಈರೋಡ್ ಮೂಲದ ಆರಾರ್ ತುಳಸಿ ಬಿಲ್ಡರ್ಸ್‌ಗೆ ಸರಕಾರವು 6 ಕೋಟಿಯಿಂದ 9 ಕೋಟಿ ರೂ.ಗಳ ಬಾಕಿ ಹಣವನ್ನು ಪಾವತಿಸದ ಕಾರಣ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ. ಹಣದ ಕೊರತೆಯಿಂದಾಗಿ ಸರಕಾರವು ಬಾಕಿ ಹಣವನ್ನು ಪಾವತಿಸಲು ಸಿದ್ಧವಿಲ್ಲದ ಕಾರಣ ಗುತ್ತಿಗೆದಾರರು 2022ರಲ್ಲಿ ನ್ಯಾಯಾಲಯವನ್ನು ಸಂಪರ್ಕಿಸಿದರು. ಜೊತೆಗೆ ಕಾಮಗಾರಿಯನ್ನೂ ನಿಲ್ಲಿಸಿದರು. ಬಳಿಕ 2025ನೇ ನವೆಂಬರ್ ತಿಂಗಳಲ್ಲಿ ಬಾಕಿ ಹಣವನ್ನು ಪಾವತಿಸಲು ಒಪ್ಪಂದಕ್ಕೆ ಬರಲಾಯಿತು. ಆದರೆ ಬಡ್ಡಿಯ ವಿವಾದ ಇನ್ನೂ ಮುಂದುವರಿದಿದೆ. ಪ್ರಸ್ತುತ ಉಳಿದ ಕೆಲಸವನ್ನು ಯುಎಲ್ ಸಿಸಿಎಸ್ ಮೂಲಕ ಮಾಡಲಾಗುತ್ತಿದೆ.

ಅಮಾಸೆಬೈಲು ಕೊರಗರ ಕಾಲನಿಯಲ್ಲಿ 14 ಮನೆ ನಿರ್ಮಾಣಕ್ಕೆ ಭೂಮಿ ಪೂಜೆ



ಉಡುಪಿ: ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಅಮಾಸೆಬೈಲು ಕೊರಗರ ಕಾಲನಿಯಲ್ಲಿ 2.5 ಕೋ. ರೂ. ವೆಚ್ಚದಲ್ಲಿ 14 ಮನೆ ನಿರ್ಮಾಣಕ್ಕೆ ಭೂಮಿ ಪೂಜೆ ಬುಧವಾರ ನಡೆಯಿತು.

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ನೂತನ ಮನೆಗಳಿಗೆ ಭೂಮಿ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು. ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಕಿರಣ್ ಕುಮಾರ್ ಕೊಡ್ಗಿ, ಮಾಜಿ ಸಂಸದ ವಿನಯಕುಮಾರ್ ಸೊರಕೆ, ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಎಚ್.ಎಸ್. ಶೆಟ್ಟಿ, ವಾದಿರಾಜ ಸಮನ್ವಯ, ಕಮಲಶಿಲೆ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಎಸ್. ಸಚ್ಚಿದಾನಂದ ಚಾತ್ರ, ಉಡುಪಿ ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರ್, ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠದ ಟ್ರಸ್ಟಿ ಗುರುನಾಥ ದಾನಪ್ಪನವರ, ಕರ್ನಾಟಕ–ಕೇರಳ ಕೊರಗಾಭಿವೃದ್ಧಿ ಸಂಸ್ಥೆಗಳ ಒಕ್ಕೂಟ ಅಧ್ಯಕ್ಷೆ ಸುಶೀಲ ನಾಡ, ಕುಂದಾಪುರ ವಲಯ ಕೊರಗಾಭಿವೃದ್ಧಿ ಸಂಸ್ಥೆಗಳ ಒಕ್ಕೂಟದ ಕುಮಾರದಾಸ ಹಾಲಾಡಿ, ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೆಬಲ್ ಟ್ರಸ್ಟ್‌ನ ಉಪಾಧ್ಯಕ್ಷ ನಾಗರಾಜ ಶೆಟ್ಟಿ ಹಾಲಾಡಿ, ಕಾರ್ಯದರ್ಶಿ ಡಾ. ಸುಮನ ಶ್ರೀನಿವಾಸ ಶೆಟ್ಟಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಹೆಸರಲ್ಲಿ 'ನಮೋ ಕುಟೀರ' ನಿರ್ಮಾಣ ಸರಣಿ | ಕುರ್ನಾಡು ಅಬೆಮಾರ್‌ನ ಫಲಾನುಭವಿಗಳಿಗೆ ಆರನೇ ಮನೆ ಕೀಲಿ ಕೈ ಹಸ್ತಾಂತರ

ಸಂತೋಷ್ ಬೋಳಿಯಾರ್ ಕಾಳಜಿ ಪ್ರೇರಣಾದಾಯಿ: ಸಂಸದ ಕ್ಯಾ.ಚೌಟ

ಕೊಣಾಜೆ: ದೇಶದ ಕಟ್ಟ ಕಡೆಯ ವ್ಯಕ್ತಿಯೂ ಕೂಡ ವಸತಿ, ಆರೋಗ್ಯ, ಶಿಕ್ಷಣದಿಂದ ವಂಚಿತರಾಗಬಾರದೆಂಬ ನಿಟ್ಟಿನಲ್ಲಿ ಪ್ರಧಾನಿ ಮೋದಿ, ಅನೇಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಅಂತಹ ಹೆಮ್ಮೆಯ ಪ್ರಧಾನಿಯ ಹೆಸರಲ್ಲಿ ಸಮಾಜದ ಅಶಕ್ತ ವರ್ಗದವರಿಗೆ ಮನೆ ನಿರ್ಮಿಸಿ ಕೊಡುತ್ತಿರುವುದು ಪುಣ್ಯದ ಕಾರ್ಯವಾಗಿದೆ. ಸಂತೋಷ್ ಬೋಳಿಯಾರ್ ಕೈಗೊಂಡಿರುವ ನಮೋ ಕುಟೀರದ ಸರಣಿ ಯೋಜನೆಯ ಬಗ್ಗೆ ಪ್ರಧಾನಿ ಮೋದಿಯವರ ಗಮನಕ್ಕೆ ತರುವುದಾಗಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಅವರು ಕುರ್ನಾಡು ಅಬೆಮಾರ್ ಎಂಬಲ್ಲಿ ಬಿಜೆಪಿ ಮುಖಂಡರು ಹಾಗೂ ದಿ. ಮೈಸೂರು ಇಲೆಕ್ಟ್ರಿಕಲ್ಸ್ (ಲಿ)ನ ಮಾಜಿ ಅಧ್ಯಕ್ಷ ಸಂತೋಷ್ ಕುಮಾರ್ ರೈ ಬೋಳಿಯಾರ್ ಅವರು ಮಕ್ಕಳಿಲ್ಲದ ವೃದ್ಧ ದಂಪತಿ ರುಕ್ಮಯ ಮತ್ತು ವಿಜಯ ಎಂಬವರಿಗೆ ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ನಿರ್ಮಿಸಿ ಕೊಟ್ಟ ಆರನೇ ನೂತನ ಮನೆ 'ನಮೋ ಕುಟೀರ'ದ ಗೃಹ ಪ್ರವೇಶ ಹಾಗೂ ಕೀಲಿ ಕೈ ಫಲಾನುಭವಿ ಕುಟುಂಬಕ್ಕೆ ಬುಧವಾರದಂದು ಹಸ್ತಾಂತರಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ನಡೆಯುವ ದಾನ, ಧರ್ಮದ ಕೈಂಕರ್ಯಗಳು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ನಿರ್ದಿಷ್ಟ ಗುರಿ ಸಾಧನೆಯ ಸೇವಾ ಕಾರ್ಯಗಳು ಹಿಂದುಸಮಾಜದಇಂದಿನಅನಿವಾರ್ಯತೆಯಾಗಿದೆ. ಸಂತೋಷ್ ಬೋಳಿಯಾರ್ ಅವರ ಉತ್ಸಾಹವು ಕಳೆಗುಂದಿಲ್ಲ. ಅವರ ಸೇವಾ ಚಟುವಟಿಕೆಯು ಏಳನೇ ಮನೆ ನಿರ್ಮಾಣದತ್ತ ಮುಂದುವರೆದಿರುವುದು ನಮಗೆಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ಹಿಂದು ಸಮಾಜ ಬಲಿಷ್ಠವಾಗಲಿ

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಕಲ್ಲಡ್ಕ ಪ್ರಭಾಕರ ಭಟ್ ಮಾತನಾಡಿ ಧರ್ಮವೇ ದೇಶದ ಆತ್ಮವಾಗಿದ್ದು, ತ್ಯಾಗ ಮತ್ತು ಸೇವೆಯೇ ಧರ್ಮದ ಭಾಗವಾಗಿದೆ. ಹಿಂದೆ ನಾವು ಎನ್ನುವ ಯೋಚನೆ ಇದ್ದರೆ, ಪ್ರಸ್ತುತ ನಾನು ಮಾತ್ರ ಎನ್ನುವ ಯೋಚನೆ ಹಿಂದೂ ಸಮಾಜದ ಸಮಸ್ಯೆಯಾಗಿದೆ. ಜಗತ್ತಿಗೆ ಹಿತವನ್ನೇ ಬಯಸುವ



ಹಿಂದೂ ಸಮಾಜ ಅಭಿವೃದ್ಧಿಗೊಂಡರೆ ಇಡೀ ವಿಶ್ವ ಅಭಿವೃದ್ಧಿಯಾದಂತೆ. ಜಾತಿ, ಭಾಷೆ ಬೇರೆಯಾದರೂ ಒಗ್ಗಟ್ಟು ಅಗತ್ಯ ಎಂದರು. ಸಾಮಾಜಿಕ, ಜನಪರ ಚಿಂತನೆಗಳು ತೀರಾ ಕಡಿಮೆಯಾಗಿವೆ. ಪ್ರತಿಯೊಬ್ಬರೂ ಸಂತೋಷ್ ಬೋಳಿಯಾರ್ ಅವರ ಹಾದಿಯಲ್ಲೇ ಯೋಚಿಸಿ ಸಮಾಜಮುಖಿ ಕಾರ್ಯಗಳನ್ನು ನಡೆಸಿದಲ್ಲಿ ಹಿಂದೂ ಸಮಾಜ ಸದೃಢಗೊಳ್ಳಲು ಸಾಧ್ಯವಿದೆಯೆಂದರು. ಮಾಡೂರು ಮರಿಯಣ್ಣಪಾಲು ಶಿವದುರ್ಗಾಂಭ ಮಠದ ಶ್ರೀ ಶಿವಯೋಗಿ ದುರ್ಗಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ, ಮನುಷ್ಯನಾಗಿ ಹುಟ್ಟಿದ ಬಳಿಕ ಯಾರದಾದರೂ ಋಣ ಅಗತ್ಯ. ಇಲ್ಲಿ ಹಣದೊಂದಿಗೆ, ಭಕ್ತಿಯೂ ಇದೆ ಎನ್ನುವುದು ಸಾಬೀತುಪಡಿಸಿದೆ. ಆರನೇ ಮನೆ ಉದ್ಘಾಟನೆ ಗೊಂಡಿದ್ದು 108 ಮನೆ ನಿರ್ಮಾಣ ಭಾಗ್ಯ ಒದಗಲಿ ಎಂದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹ ಪಿ.ಎಸ್.ಪ್ರಕಾಶ್, ಕಣಂತೂರು ಕ್ಷೇತ್ರದ ಆಡಳಿತ ಮೊಕ್ತೇಸರರಾದ ದೇವಿಪ್ರಸಾದ್ ಪೊಯ್ಯತ್ತಾಯ, ನಾರ್ಯಗುತ್ತುವಿನ ಗಡಿ ಪ್ರಧಾನರಾದ ಪದ್ಮನಾಭ ಯಾನೆ ಮಂಜು ಭಂಡಾರಿ, ಹಿರಿಯರಾದ ನಾಗರಾಜ ಭಟ್ , ಇನೋಳಿ ಶ್ರೀ ಸೋಮನಾಥ ದುರ್ಗಾಪರಮೇಶ್ವರೀ ಕ್ಷೇತ್ರದ ಆಡಳಿತ ಮೊಕ್ತೇಸರ ಚಂದ್ರಹಾಸ ಪೂಂಜಾ, ಮುಖಂಡ ಡಾ. ಅಣ್ಣಯ್ಯ ಕುಲಾಲ್, ಮಾಜಿ ತಾ.ಪಂ. ಸದಸ್ಯ ಸೇಸಪ್ಪ ಟೈಲರ್, ಸೋಮೇಶ್ವರ ಪುರಸಭಾ ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ಜನಶಿಕ್ಷಣ ಟ್ರಸ್ಟ್‌ನ ಶೀನ ಶೆಟ್ಟಿ, ಕೃಷ್ಣ ಮೂಲ್ಯ, ಕುರ್ನಾಡು ಗ್ರಾ.ಪಂ. ಮಾಜಿ ಅಧ್ಯಕ್ಷ ಗಣೇಶ್ ನಾಯ್ಕ್ ಕುರ್ನಾಡು ಗುತ್ತು, ಮುಡಿಪು ಕುಲಾಲ ಸಂಘದ ಅಧ್ಯಕ್ಷ ಪುಂಡರೀಕಾಕ್ಷ ಮೂಲ್ಯ, ಪ್ರಮುಖರಾದ ಜಯರಾಮ ಶೆಟ್ಟಿ ಕಂಬ್ಳಪದವು, ರಾಜೇಶ್ ಮಡಿವಾಳ, ಹಿರಿಯರಾದ ನಾರಾಯಣ ಶೆಟ್ಟಿ ಬಲೆತ್ತೋಡು, ಉದ್ಯಮಿ ಚಂದ್ರಹಾಸ್ ಉಳ್ಳಾಲ್, ರಾಧಾಕೃಷ್ಣ ರೈ ಉಮಿಯ, ದಿ. ಮೈಸೂರು ಇಲೆಕ್ಟ್ರಿಕಲ್ಸ್ ಲಿ. ನ ಮಾಜಿ ಅಧ್ಯಕ್ಷ ಸಂತೋಷ್ ಕುಮಾರ್ ಬೋಳಿಯಾರ್, ಪತ್ನಿ ವೀಣಾ ರೈ, ಪುತ್ರಿ ಸ್ಪರ್ಶ ಎಸ್. ರೈ, ಪುತ್ರ ಸಮ್ಯಕ್ತ್ ರೈ ಬೋಳಿಯಾರ್ ಉಪಸ್ಥಿತರಿದ್ದರು. ರವಿ ರೈ ಪಜೀರು ಸ್ವಾಗತಿಸಿ, ನಿರೂಪಿಸಿದರು.

ನೂರು ಕುಟೀರ ನಿರ್ಮಾಣ ಗುರಿ

ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ಈ ಸರಣಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಪತ್ನಿ, ಮಕ್ಕಳು ಮತ್ತು ಸಮಾಜ ಬಾಂಧವರ ನಿರಂತರ ಪ್ರೋತ್ಸಾಹದಿಂದ ಸಮಾಜಮುಖಿ ಕಾರ್ಯ ನಡೆಸಲು ಉತ್ಸಾಹ ಇಮ್ಮಡಿಯಾಗಿದೆ. ದೇವರು ಕರುಣಿಸಿದರೆ ನೂರು ನಮೋ ಕುಟೀರಗಳನ್ನು ಕಟ್ಟುವ ಮಹದಾಸೆ ಇದೆ.

■ ಸಂತೋಷ್ ಕುಮಾರ್ ಬೋಳಿಯಾರ್

ವಿಂಡೀಸ್ VS ಆಫ್ರಿಕಾ | ಎರಡನೇ ಪಂದ್ಯದಲ್ಲಿ ಭಾರತ-ಜಿಂಬಾಬ್ವೆ ಪಂದ್ಯಾಟ

ಭಾರತ ಸೆಮಿ ನಿರ್ಧಾರ ಇಂದು

ಚೆನ್ನೈ: ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಸೆಮಿಫೈನಲ್‌ಗೇರುವುದನ್ನು ನಿರ್ಧರಿಸುವ ಎರಡು ಪ್ರಮುಖ ವಿಂಡೀಸ್-ದ.ಆಫ್ರಿಕಾ, ಭಾರತ-ಜಿಂಬಾಬ್ವೆ ಪಂದ್ಯಗಳು ಗುರುವಾರದಂದು ನಡೆಯಲಿವೆ.

ಸೂಪರ್-8ರ ಪಂದ್ಯಗಳು ಭಾರೀ ಸಂಚಲನ ಮೂಡಿಸುತ್ತಿವೆ. ಎರಡನೇ ಗುಂಪಿನಲ್ಲಿ ಇಂಗ್ಲೆಂಡ್ ಈಗಾಗಲೇ ಸೆಮಿಗೇರಿದೆ. ಇನ್ನು ಮೊದಲನೇ ಗುಂಪಿನಲ್ಲಿ ದ.ಆಫ್ರಿಕಾ ಮತ್ತು ವಿಂಡೀಸ್ ತಂಡಗಳು ತಲಾ ಒಂದು ಗೆಲುವಿನೊಂದಿಗೆ ಉತ್ತಮ ರನ್‌ರೇಟ್ ಕೂಡ ಹೊಂದಿದ್ದು ಮೊದಲೆರಡು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ. ಹೀಗಾಗಿ ಭಾರತಕ್ಕೆ ತನ್ನ ಪಂದ್ಯಕ್ಕಿಂತ ದ.ಆಫ್ರಿಕಾ-ವಿಂಡೀಸ್ ಪಂದ್ಯವೇ ಪ್ರಮುಖ. ಅಷ್ಟಾಗ್ಯೂ ಯಾವುದೋ ಒಂದು ಗೆಲುವು ಸೆಮಿ ಹಾದಿ ತೋರಿಸುವುದಿಲ್ಲ. ಭಾರತಕ್ಕೆ ಲಕ್ ಜತೆಗೆ ಪರಿಶ್ರಮದ ಅಗತ್ಯವಿದೆ.

ಭಾರತಕ್ಕಿದು ಕೊನೆಯ ಅವಕಾಶ: ಲೀಗ್ ಹಂತದ ಪಂದ್ಯಗಳಲ್ಲಿ ಅಜೇಯ ಓಟ ಮುಂದುವರಿಸಿದ್ದ ಭಾರತ ಟಾಪ್ ತಂಡವಾಗಿ ಬಂದಿತ್ತು. ನಾಲ್ಕು ಗೆಲುವುಗಳನ್ನು ಜೇಬಿನಲ್ಲಿಟ್ಟುಕೊಂಡು ಬಂದಿದ್ದ ಭಾರತಕ್ಕೆ ದ.ಆಫ್ರಿಕಾ ಹೀನಾಯವಾಗಿ ಸೋಲಿಸಿದೆ. ಪರಿಣಾಮ ಭಾರತಕ್ಕೆ ಇದು ಕೊನೆಯ ಅವಕಾಶವಾಗಿದೆ. ಸೂಪರ್-8ರ ಮೊದಲೆರಡು ತಂಡಗಳು ಮಾತ್ರ ಮುನ್ನಡೆ ಸಾಧಿಸುತ್ತವೆ. ಪರಿಣಾಮ ಭಾರತ ಒಂದು ವೇಳೆ ಈ ಪಂದ್ಯದಲ್ಲಿ ಸೋತರೆ ಹೊರಬೀಳಲಿದೆ. ಗೆದ್ದರೂ ಅದು ಸಾಕಾಗೊಲ್ಲ.

ಲೆಕ್ಕಾಚಾರ ಹೇಗಿದೆ?: ವಿಂಡೀಸ್ ಹಾಗೂ ದ.ಆಫ್ರಿಕಾ ಪಂದ್ಯದಲ್ಲಿ ವಿಜೇತರು ಭಾರತದ ಸೆಮಿ ಹಾದಿಯನ್ನು ನಿರ್ಧರಿಸಲಿದ್ದಾರೆ. ವಿಂಡೀಸ್ ಗೆಲುವು ಸಾಧಿಸಿದರೆ, ಭಾರತದ ಅವಕಾಶ ತೀರಾ ಕುಗ್ಗಲಿದೆ. ದ.ಆಫ್ರಿಕಾ ಗೆದ್ದರೆ ಭಾರತದ ಹಾದಿ ಸರಳಗೊಳ್ಳಲಿದೆ. ಎರಡನೇ ಪಂದ್ಯದಲ್ಲಿ ಭಾರತಕ್ಕೆ ಸಾಮಾನ್ಯ ಗೆಲುವು ದಕ್ಕಿದರೆ ಅದು ಸಾಕಾಗುವುದಿಲ್ಲ. ರನ್‌ರೇಟ್ ಹೆಚ್ಚಿಸಿಕೊಳ್ಳಬೇಗಾದ ಅನಿವಾರ್ಯತೆ ಭಾರತಕ್ಕಿದೆ.



ಬ್ಯಾಟರ್ಸ್ ಲಯದ ಚಿಂತೆ

ಒತ್ತಡದ ಮಧ್ಯೆ ಭಾರತದ ಬ್ಯಾಟಿಗರು ಲಯದ ಚಿಂತೆಯಲ್ಲಿದ್ದಾರೆ. ಆರಂಭಿಕ ಆಟಗಾರ ಅಭಿಷೇಕ್ ಶರ್ಮ ಅವರ ಲಯ ದೊಡ್ಡ ಹಿನ್ನಡೆ ತಂದಿದೆ. ಮೂರನೇ ಕ್ರಮಾಂಕದಲ್ಲಿ ತಿಲಕ್ ವರ್ಮಾ ಹಲವು ಪಂದ್ಯಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸೂರ್ಯ ಕೂಡ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ಶಿವಂ ದುಬೆ ಅವರ ಲಯ ಭಾರತಕ್ಕೆ ಶಕ್ತಿಯಾಗಿದೆ. ಪಾಂಡ್ಯ ಕೂಡ ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. ಇನ್ನು ಬೌಲಿಂಗ್‌ನಲ್ಲಿ ಬೂಮ್ರಾ ಮತ್ತು ವರುಣ್ ಚಕ್ರವರ್ತಿ ಹೊರತುಪಡಿಸಿ ಇನ್ನುಳಿದ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

(ಭಾರತ ತಂಡದ ಲೆಕ್ಕಾಚಾರ)

ಜಿಂಬಾಬ್ವೆ ವಿರುದ್ಧ	ವಿಂಡೀಸ್ ವಿರುದ್ಧ	ಅಂತಿಮ ರನ್‌ರೇಟ್
75 ರನ್‌ಗಳಿಂದ	75 ರನ್‌ಗಳಿಂದ	+1.23
120 ರನ್‌ಗಳಿಂದ	120 ರನ್‌ಗಳಿಂದ	+2.73
ಚೇಸಿಂಗ್ 15 ಓವರ್‌ಗಳಲ್ಲಿ 175	ಚೇಸಿಂಗ್ 15 ಓವರ್‌ಗಳಲ್ಲಿ 175	+0.31
ಚೇಸಿಂಗ್ 10 ಓವರ್‌ಗಳಲ್ಲಿ 175	ಚೇಸಿಂಗ್ 10 ಓವರ್‌ಗಳಲ್ಲಿ 175	+2.63
75 ರನ್‌ಗಳ ಗೆಲುವು	ಚೇಸಿಂಗ್ 12 ಓವರ್‌ಗಳಲ್ಲಿ 175	1.33

ರನ್‌ರೇಟ್ ಲೆಕ್ಕಾಚಾರ

ಭಾರತದ ರನ್‌ರೇಟ್ ತೀರಾ ಕಮ್ಮಿಯಾಗಿದೆ, -3.8. ಹೀಗಿದ್ದಾಗ ತನಗಿಂತ ಮೇಲಿರುವ ತಂಡವನ್ನು ದಾಟಬೇಕಾದರೆ, ಭಾರತ ದೊಡ್ಡ ಗೆಲುವುಗಳನ್ನು ಸಾಧಿಸಬೇಕು. ಎರಡೂ ಪಂದ್ಯದ ಗೆಲುವುಗಳೂ ಅಷ್ಟೇ ಮುಖ್ಯವಾಗುತ್ತದೆ. ಹಾಗಿದ್ದರೆ ರನ್‌ರೇಟ್ ಭಾರತದ ರನ್‌ರೇಟ್ ಏರುವುದು ಹೇಗೆ? ಯಾವ ಪಂದ್ಯವನ್ನು ಎಷ್ಟು ರನ್‌ಗಳಿಂದ ಗೆಲ್ಲಬೇಕು? ಗೆದ್ದರೆ ಅಂತಿಮದಲ್ಲಿರುವ ರನ್‌ರೇಟ್ ಏನಾಗಿರುತ್ತದೆ?

ಏನಾದರೆ ಏನಾಗುತ್ತೆ?

ಮಧ್ಯಾಹ್ನ ನಡೆಯಲಿರುವ ದ.ಆಫ್ರಿಕಾ-ವಿಂಡೀಸ್ ಪಂದ್ಯದಲ್ಲಿ ದ.ಆಫ್ರಿಕಾ ಗೆದ್ದುಬಿಟ್ಟರೆ ಭಾರತಕ್ಕೆ ಅದೇ ದೊಡ್ಡ ಗೆಲುವು. ಏಕೆಂದರೆ ಇಲ್ಲಿ ಸೋತ ವಿಂಡೀಸ್, ಮುಂದೆ ಭಾರತ ವಿರುದ್ಧವೂ ಸೋತರೆ ಸೆಮಿಗೇರಿವ ಅವಕಾಶ ಕೈಚೆಲ್ಲಲಿದೆ. ಅಂದರೆ, ಸೆಮಿಗೇರುವುದಕ್ಕೆ ಬೇಕಾದ 2 ಗೆಲುವುಗಳಿಲ್ಲದೆ ಹೊರಬೀಳುತ್ತೆ. ಹಾಗಾಗಬೇಕಾದರೂ ಭಾರತ ಜಿಂಬಾಬ್ವೆ ವಿರುದ್ಧ ಗೆಲ್ಲಲೇಬೇಕು. ಆಗ ಜಿಂಬಾಬ್ವೆ ಕೂಡ ಎರಡು ಸೋಲುಗಳೊಂದಿಗೆ ಹೊರನಡೆಯುತ್ತದೆ.

ವಿಂಡೀಸ್ ಗೆದ್ದರೆ?

ಒಂದು ವೇಳೆ ದ.ಆಫ್ರಿಕಾ ಸೋತುಬಿಟ್ಟರೆ, ಭಾರತ ಬಹುತೇಕ ಹೊರಬೀಳಲಿದೆ. ಏಕೆಂದರೆ ಮೊದಲೆರಡು ಸ್ಥಾನದಲ್ಲಿರುವ ತಂಡಗಳು ಭಾರೀ ರನ್‌ರೇಟ್‌ಗಳನ್ನು ಹೊಂದಿವೆ. ವಿಂಡೀಸ್ ಗೆಲುವು ಸಾಧಿಸಿದರೆ, 5ಕ್ಕಿರುವ ರನ್‌ರೇಟ್ ಹೆಚ್ಚಾಗುತ್ತದೆ. ದ.ಆಫ್ರಿಕಾ ರನ್‌ರೇಟ್ ಕಮ್ಮಿಯಾಗುತ್ತದೆ. ಹೀಗಾದರೆ ಭಾರತ ದ.ಆಫ್ರಿಕಾ ತಂಡವನ್ನು ರನ್‌ರೇಟ್‌ನಲ್ಲಿ ಸೋಲಿಸುವುದಕ್ಕೆ ದೊಡ್ಡ ಗೆಲುವುಗಳನ್ನು ದಾಖಲಿಸಬೇಕಾಗುತ್ತದೆ.

ಪಿಚ್

ಚೆನ್ನೈನ ಚಿದಂಬರಂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳು ದೊಡ್ಡ ಪಾತ್ರ ವಹಿಸಲಿದ್ದಾರೆ. ಸಾಮಾನ್ಯವಾಗಿ ಸ್ಪಿನ್ನರ್‌ಗಳು ಉತ್ತಮವಾಗಿ ಕಾಣಿಸಿಕೊಳ್ಳುತ್ತಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ಇಬ್ಬನಿ ದೊಡ್ಡ ಪಾತ್ರ ವಹಿಸಲಿದೆ.

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ವಿಂಡೀಸ್	1	1	0	0	2	+5.350
ದ.ಆಫ್ರಿಕಾ	1	1	0	0	2	+3.80
ಭಾರತ	1	0	1	0	0	-3.80
ಜಿಂಬಾಬ್ವೆ	1	0	1	0	0	-5.350

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	2	1	0	1	3	+3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಇಂದಿನ ಪಂದ್ಯಗಳು

ವಿಂಡೀಸ್ VS ಆಫ್ರಿಕಾ
ಮಧ್ಯಾಹ್ನ 3 (ಅಹಮದಾಬಾದ್)

ಭಾರತ VS ಜಿಂಬಾಬ್ವೆ
ಸಂಜೆ 7 (ಚೆನ್ನೈ)

ರಣಜಿ ಫೈನಲ್ | ಬೃಹತ್ ಮೊತ್ತದತ್ತ ಜಮ್ಮು-ಕಾಶ್ಮೀರ

ಕರ್ನಾಟಕ ಬೌಲರ್ಸ್ ಪರದಾಟ

ಚಿತ್ರ: ಮಂಜುನಾಥ ಜರತಾರಘರ



ಸಂಕ್ಷಿಪ್ತ ಸ್ಕೋರ್

ಜಮ್ಮು-ಕಾಶ್ಮೀರ: 527/6 (156)
ಶುಭಂ ಸಿಂಗ್ ಪುಂಡಿರ 121 (247ಎ, 12 ಬೌ, 2 ಸಿಕ್ಸ್) ಅಬ್ದುಲ್ ಸಮದ್ 61(104 ಎ, 6 ಬೌ 1 ಸಿ), ಕನ್ಹಯ್ಯ ವಾಧ್ವಾನ್ 70(109 ಎ, 9 ಬೌ), ಪಾರಾಸ್ ಡೋಗ್ರಾ 70(166 ಎ, 8 ಬೌ), ಸಾಹಿಲ್ ಲೋತ್ರಾ 57(93 ಎ, 7 ಬೌ), ಅಬಿದ್ ಮುಷ್ತಾಕ್ 20(31 ಎ, 2 ಬೌ)
ಕರ್ನಾಟಕ ಬೌಲಿಂಗ್:
ಪ್ರಸಿದ್ಧ ಕೃಷ್ಣ; 3 ವಿಕೆಟ್, 29 ಓ, 90 ರನ್) ವಿದ್ಯಾಧರ ಪಾಟೀಲ ; 1ವಿ, 29 ಓ, 104 ರನ್) ಶ್ರೇಯಸ್ ಗೋಪಾಲ; 1 ವಿ, 30 ಓ, 130 ರನ್) ಶಿಖರ ಶೆಟ್ಟಿ ; 1 ವಿ, 32 ಓ, 112 ರನ್).

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: 9ನೇ ಬಾರಿಗೆ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಕರ್ನಾಟಕ ತಂಡಕ್ಕೆ ಇದೇ ಮೊದಲ ಬಾರಿಗೆ ರಣಜಿ ಫೈನಲ್ ಪ್ರವೇಶಿಸಿರುವ ಜಮ್ಮು ಮತ್ತು ಕಾಶ್ಮೀರ ತಂಡ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ.

ಎರಡನೇ ದಿನವೂ ಬ್ಯಾಟರ್ ಸ್ನೇಹಿಯಾಗಿದ್ದ ಪಿಚ್‌ನಲ್ಲಿ ಕಾಶ್ಮೀರದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕರ್ನಾಟಕದ ಕರಾರುವಾಕ್ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿ ಬೃಹತ್ ಮೊತ್ತ ಪೇರಿಸಿದ್ದು, ಆತ್ಮವಿಶ್ವಾಸದ ಅಲೆಯಲ್ಲಿ ತೇಲುತ್ತಿದ್ದಾರೆ.

ಪಂದ್ಯದ ಎರಡನೇ ದಿನವೂ ಎದುರಾಳಿ ತಂಡದ ವಿಕೆಟ್ ಪಡೆಯಲು ಪರದಾಡಿದರು. ಆರು ವಿಕೆಟ್ ಪತನಗೊಂಡಿದ್ದರೂ ಕಾಶ್ಮೀರದ ಬಾಲಂಗೋಚಿಗಳು ಪಾರಮ್ಯ ಮೆರೆದರು.

ಮೊದಲ ದಿನದಾಟದ ಅಂತ್ಯಕ್ಕೆ 87 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 284 ರನ್ ಗಳಿಸಿದ್ದ ಅತಿಥಿ ಪಡೆ, ಎರಡನೇ ದಿನ ಇನ್ನೂ 23 ಓವರ್ ಬಾಕಿ ಇದ್ದಾಗ ಮಂದ ಬೆಳಕಿನಿಂದಾಗಿ ಆಟ ಸ್ಥಗಿತಗೊಂಡಾಗ 156 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 527 ರನ್ ಕಲೆ ಹಾಕಿದೆ. ಸಾಹಿಲ್ ಲೋತ್ರಾ 93 ಎಸೆತಗಳಲ್ಲಿ 57, ಅಬಿದ್ ಮುಷ್ತಾಕ್ 31 ಎಸೆತಗಳಲ್ಲಿ 20 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಎರಡನೇ ದಿನದಾಟ: ಶುಭಂ ಸಿಂಗ್ ಪುಂಡರಿ 247 ಎಸೆತಗಳಲ್ಲಿ 121ರನ್ ಗಳಿಸಿ ಔಟಾದರು. ಅವರೊಂದಿಗೆ ಕ್ರೀಸ್ ಅಜೇಯವಾಗಿ ಉಳಿದಿದ್ದ ಅಬ್ದುಲ್ ಸಮದ್ ಹಾಗೂ ಶುಭಂ ಸಿಂಗ್ ನಡುವಿನ 124 ರನ್‌ಗಳ ಜೊತೆಯಾಟ ಈ ಮೂಲಕ ಮುರಿದು ಬಿತ್ತು.

ಪ್ರಸಿದ್ಧ ಕೃಷ್ಣ ಎಸೆತದಲ್ಲಿ ಅಬ್ದುಲ್ ಸಮದ್ (61 ರನ್, 104 ಎಸೆತ) ಅವರು ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದಾಗ ಕರ್ನಾಟಕ ಎದುರಾಳಿಗಳ ಮೊತ್ತ ಉಬ್ಬದಂತೆ ತಡೆಯಬಹುದು ಎಂಬ ಆಶಾಭಾವ ವ್ಯಕ್ತವಾಗಿತ್ತಾದರೂ, ಮೊದಲ ದಿನ ಗಾಯಗೊಂಡು ನಿವೃತ್ತರಾಗಿದ್ದ ನಾಯಕ ಪಾರಸ್ ಡೋಗ್ರಾ (70 ರನ್ 166 ಎಸೆತ, 8 ಬೌಂಡರಿ) ಇನ್ನಿಂಗ್ಸ್ ಕಟ್ಟಿದರು. ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿರುವ ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್ (70 ರನ್, 109 ಎಸೆತ, 9 ಬೌಂಡರಿ) ನಾಯಕನಿಗೆ ಸಾಥ್ ನೀಡುವ ಮೂಲಕ ಅರ್ಧ ಶತಕ ಪೂರೈಸಿದರು.ನಂತರ ಬಂದ ಸಾಹಿಲ್ ಲೋತ್ರಾ ಅರ್ಧ ಶತಕ ಗಳಿಸಿ ಕ್ರೀಸ್ ಉಳಿಸಿಕೊಂಡಿದ್ದಾರೆ. ಕರ್ನಾಟಕದ ಬೌಲರ್‌ಗಳು ಎರಡನೇ ದಿನ 4 ವಿಕೆಟ್ ಪಡೆದರಾದರೂ, ರನ್ ಗಳಿಕೆಯ ಅವಕಾಶವನ್ನು ನಿರಾಕರಿಸುವಲ್ಲಿ ವಿಫಲರಾದರು. ವಿಕೆಟ್ ಬೇಟೆಯಲ್ಲಿದ್ದ ನಾಯಕ ದೇವದತ್ತ ಪಡಿಕಲ್ ಪ್ರಮುಖ ಬ್ಯಾಟರ್ ಕರುಣ್ ನಾಯರ್ ಅವರಿಗೂ ಬೌಲಿಂಗ್ ಅವಕಾಶ ನೀಡಿದರಾದರೂ ಬಾಲಂಗೋಚಿಗಳನ್ನು ನಿಯಂತ್ರಿಸಲು ಆಗಲಿಲ್ಲ.

ಆಟಗಾರರ ನಡುವೆ ವಾಗ್ವಾದ

ಪಂದ್ಯದ ವೇಳೆ ಉಭಯ ತಂಡದ ಆಟಗಾರರ ನಡುವೆ ವಾಗ್ವಾದ ನಡೆದ ಪ್ರಸಂಗವೂ ಜರುಗಿದೆ. ಪ್ರಸಿದ್ಧ ಕೃಷ್ಣ ಮಾಡಿದ 101ನೇ ಓವರನಲ್ಲಿ ಜಮ್ಮು ಕಾಶ್ಮೀರ ನಾಯಕ ಡೋಗ್ರಾ ಅವರು ಬ್ಯಾಟ್‌ಗೆ ಬಾಲ್ ಎಡ್ಜ್ ಆಗಿ ಬೌಂಡರಿ ಗೆರೆ ದಾಟುತ್ತದೆ. ಚೆಂಡು ಬೌಂಡರಿಗೆ ತಲುಪುತ್ತಿದ್ದಂತೆ, ಡೋಗ್ರಾ ಮತ್ತು ಫಾರ್ವಡ್ ಶಾರ್ಟ್ ಲೆಗ್‌ನಲ್ಲಿ ಕ್ಷೇತ್ರರಕ್ಷಣೆ ಮಾಡುತ್ತಿದ್ದ ಬದಲಿ ಆಟಗಾರ ಅನೀಶ್ ನಡುವೆ ಮಾತಿನ ಚಕಮಕಿ ನಡೆಯುತ್ತದೆ. ಆಗ ಅನೀಶ್ ಮೇಲೆ ಡೋಗ್ರಾ ಕೋಪಗೊಂಡು ತಲೆಗೆ ಪಂಚ್ ಮಾಡಿದರು. ಆಗ ಹಿರಿಯ ಆಟಗಾರ ಮಯಂಕ್ ಅಗರವಾಲ್ ಮಧ್ಯಪ್ರವೇಶಿಸಿ ಡೋಗ್ರಾ ಮೇಲೆ ಏರಿ ಹೋಗುತ್ತಾರೆ. ತಕ್ಷಣ ಅಂಪೈರ್‌ಗಳು ಮಧ್ಯ ಪ್ರವೇಶಿಸಿ ನಿಯಂತ್ರಿಸುತ್ತಾರೆ.



ಕಿರುಸುದ್ದಿ

ಜರ್ಮನ್ ಓಪನ್: ಆಕರ್ಷಿ ಮುಖ್ಯ ಡ್ರಾಗೆ

ಹೊಸದಿಲ್ಲಿ: ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶಟ್ಲರ್ ಆಕರ್ಷಿ ಕಶ್ಯಪ್ ಅವರು ಚೈನೀಸ್ ತೈಪೆಯ ಲೀ ಯು ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಮುಖ್ಯ ಡ್ರಾಕ್ಕೆ ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 62ನೇ ಸ್ಥಾನದಲ್ಲಿರುವ ಆಕರ್ಷಿ, ಲೀ ವಿರುದ್ಧ 21-10, 21-15 ಅಂತರದಿಂದ ಸುಲಭ ಜಯ ಸಾಧಿಸಿದರು. ಈಗ ಅವರು ಮುಖ್ಯ ಡ್ರಾದ ಮೊದಲ ಸುತ್ತಿನಲ್ಲಿ ಮತ್ತೊಬ್ಬ ಚೈನೀಸ್ ತೈಪೆ ಆಟಗಾರ್ತಿ ಹುವಾಮಗ್ ಯು ಅವರನ್ನು



ಎದುರಿಸಲಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಪಂದ್ಯದ ಮೊದಲ ಗೇಮ್‌ನಲ್ಲಿ ಲೀ ಉತ್ತಮ ಆರಂಭ ಮಾಡಿದರೂ 4-4 ಸಮಬಲದ ಬಳಿಕ ಆಕರ್ಷಿ ವೇಗ ಹೆಚ್ಚಿಸಿದರು. 9-4 ಹಾಗೂ 16-8ಕ್ಕೆ ಮುನ್ನಡೆ ಸಾಧಿಸಿದ ಅವರು ಮೊದಲ ಗೇಮ್ ಅನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಲೀ 8-14 ಹಿನ್ನಡೆಯಿಂದ 12-14ಕ್ಕೆ ಹಿಂತಿರುಗಿ ಸ್ವಲ್ಪ ಪ್ರತಿರೋಧ ತೋರಿದರೂ, ಆಕರ್ಷಿ ಅವರಿಗೆ ಅವಕಾಶ ನೀಡದೇ ಪಂದ್ಯವನ್ನು ಸಮರ್ಥವಾಗಿ ಮುಕ್ತಾಯಗೊಳಿಸಿದರು. 250,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಅನುಭವಿ ಶಟ್ಲರ್ ಕಿಡಂಬಿ ಶ್ರೀಕಾಂತ್ ಹಾಗೂ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತೆ ತನ್ವಿ ಶರ್ಮ ಕೂಡ ಭಾರತದ ಪರ ಸ್ಪರ್ಧಿಸುತ್ತಿದ್ದಾರೆ.

ಜಿಂಬಾಬ್ವೆ ಪಂದ್ಯಕ್ಕೆ ತಂಡದಲ್ಲಿ ಬದಲಾವಣೆ?

ಚೆನ್ನೈ: ಗೆಲ್ಲಲೇಬೇಕಾಗಿರುವ ಪಂದ್ಯದಲ್ಲಿ ಭಾರತ ತಂಡದಲ್ಲಿ ಬದಲಾವಣೆಗಳಾಗಬಹುದು ಎಂದು ಭಾರತ ತಂಡದ ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಸುಳಿವು ನೀಡಿದ್ದಾರೆ. ದ.ಆಫ್ರಿಕಾ ವಿರುದ್ಧ ಭಾರೀ ಸೋಲು ಕಂಡಿರುವ ಭಾರತ ವಿಶ್ವಕಪ್‌ನಿಂದಲೇ ಹೊರಬೀಳುವ ಆತಂಕದಲ್ಲಿದೆ. ಹೀಗಿರುವಾಗ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ. ಇದಕ್ಕೂ ಮುನ್ನ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ಅವರು, ತಂಡದ 3 ಆರಂಭಿಕರು ಎಡಗೈ ಆಟಗಾರರೇ ಆಗಿರುವುದು ದೊಡ್ಡ ವಿಷಯವೇನಲ್ಲ. ಆದಾಗ್ಯೂ ಮುಂದಿನ ಪಂದ್ಯದಲ್ಲಿ ಬದಲಾವಣೆಗಳಾಗಬಹುದು ಎಂದಿದ್ದಾರೆ. ಎಲ್ಲಾ ಪಂದ್ಯಗಳನ್ನು ನಾವು ಗೆಲ್ಲಲೇಬೇಕಾದ ಸ್ಥಿತಿಯಲ್ಲಿದ್ದೇವೆ. ಹೀಗಿರುವಾಗ ಎಲ್ಲ ವಿಭಾಗಗಳಲ್ಲೂ ನಾವು ಉತ್ತಮ ಪ್ರದರ್ಶನ ನೀಡಬೇಕು. ಟಿ20 ಕ್ರಿಕೆಟ್ ಅಂದರೆ ಹಾಗೆ, ನಾವು ಇಲ್ಲಿ ಎಲ್ಲ ಓವರ್‌ಗಳಲ್ಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಆಯ್ಕೆ ಮಾಡಲಾಗದು. ವಿಕೆಟ್ ಬಿದ್ದ ತಕ್ಷಣ ನಾವು ನಿಯಂತ್ರಿಸಲು ರನ್ ವೇಗ ಕುಗ್ಗಿಸಬೇಕಾಗುತ್ತದೆ ಎಂದರು.

ಕಿವೀಸ್‌ಗೆ ಗೆಲುವು, ಲಂಕಾ ಹೊರಕ್ಕೆ

ಕೊಲಂಬೋ: ಸ್ಯಾಂಟ್ನರ್ ಅವರ ಸೋಲರಾದ ಮನಸ್ಥಿತಿ ಮತ್ತು ರಚಿನ್ ರವೀಂದ್ರ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಶ್ರೀಲಂಕಾ ತಂಡವು ವಿಶ್ವಕಪ್ ಪಂದ್ಯಾವಳಿಯ ಸೂಪರ್-8ರ ಪಂದ್ಯದಲ್ಲಿ ಸತತ ಎರಡನೇ ಸೋಲನುಭವಿಸಿ ಪಂದ್ಯಾವಳಿಯಿಂದ ಹೊರನಡೆಯಿತು.

ಮೊದಲ ಪಂದ್ಯ ರದ್ದಾದ ನಂತರ ಎರಡನೇ ಪಂದ್ಯದಲ್ಲಿ ಲಂಕಾ ತಂಡವನ್ನು ಎದುರಿಸಿದ್ದ ಕಿವೀಸ್ ಬ್ಯಾಟಿಂಗ್‌ಗಿಳಿದು ಆಘಾತ ಎದುರಿಸಿತು. ಆದಾಗ್ಯೂ ಸ್ಯಾಂಟ್ನರ್ ಸೇರಿದಂತೆ ಮಧ್ಯಮ ಕ್ರಮಾಂಕಿತ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ ನಂತರ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 168 ರನ್ ಗಳಿಸಿತು. ಗುರಿ ಬೆನ್ನತ್ತಿದ ಶ್ರೀಲಂಕಾ 8 ವಿಕೆಟ್ ಕಳೆದುಕೊಂಡು 107 ರನ್ ಗಳಿಸಿತು. ಸ್ಯಾಂಟ್ನರ್ ಗೆಲುವಿನ ರೂವಾರಿ ಎನಿಸಿಕೊಂಡರು. ರಚಿನ್ ರವೀಂದ್ರ ಪಂದ್ಯದ ಹೀರೋ ಎನಿಸಿದ್ದಲ್ಲದೆ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಈ ಗೆಲುವಿನೊಂದಿಗೆ 3 ಅಂಕ ಗಳಿಸಿರುವ ಕಿವೀಸ್ ಸೆಮಿಗೆ ಬಹುತೇಕ ತಲುಪಿದಂತಿದೆ. ಶ್ರೀಲಂಕಾ ಹೊರಬಿದ್ದಿದೆ. ಪಾಕ್‌ಗೆ ಸೆಮಿ ಅವಕಾಶ ಪಡೆಯಲು ಶ್ರೀಲಂಕಾದೊಂದಿಗೆ ಅಸಾಮಾನ್ಯ ಗೆಲುವು ಸಾಧಿಸಬೇಕಿದೆ.

ರಚಿನ್ ದಾಳಿಗೆ ತತ್ತರಿಸಿದ ಲಂಕಾ: ಗುರಿ ಬೆನ್ನತ್ತುವಾಗ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ರಚಿನ್ ರವೀಂದ್ರ ಮಾರಕ ಬೌಲಿಂಗ್ ದಾಳಿಯೊಂದಿಗೆ ಲಂಕಾ ಪಡೆಯ ಹೆಡೆಮುರಿ ಕಟ್ಟಿದರು. ಕಮಿಂದು ಮೆಂಡೀಸ್, ದುನಿತ್ ಬಿಟ್ಟರೆ ಬೇರ‍್ಯಾವ ಆಟಗಾರರೂ 10ರ ಗಡಿ ದಾಟಲಾಗಲಿಲ್ಲ. ರವೀಂದ್ರ 4 ಓವರ್‌ಗಳಲ್ಲಿ 27 ರನ್ ನೀಡಿ 4 ವಿಕೆಟ್ ಕಿತ್ತರು.

ಸ್ಯಾಂಟ್ನರ್ ಆಸರೆ: ಫಿನ್ ಆಲೆನ್ ಆಟದೊಂದಿಗೆ ಸ್ಫೋಟಕ ಆರಂಭ ಪಡೆದರೂ ನ್ಯೂಜಿಲೆಂಡ್ ಆರಂಭಿಕ ಸೀಫರ್ಟ್ ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿತ್ತು. ಮೂರನೇ ಕ್ರಮಾಂಕದಲ್ಲಿ ರಚಿನ್ ಕೊಂಚ ಹೊತ್ತು ಆಸರೆಯಾದರು.

ಆಲೆನ್ 23 ರನ್‌ಗೆ ವಿಕೆಟ್ ಒಪ್ಪಿಸಿದರು. ಫಿಲಿಪ್ಸ್ ಹೆಚ್ಚಿನ ಕೊಡುಗೆ ನೀಡಲಿಲ್ಲ. ಮಿಚೆಲ್ ಮತ್ತು ಚಾಂಪಮನ್ ಜವಾಬ್ದಾರಿ ಮರೆತರು. ಇಷ್ಟೊಂದು ಆಘಾತ ಎದುರಿಸಿ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್‌ಗೆ ನಾಯಕ ಸ್ಯಾಂಟ್ನರ್ ಆಸರೆಯಾದರು. ಕೋಲ್ ಅವರೊಂದಿಗೆ ಜೊತೆಗೂಡಿ ಉತ್ತಮ ಬ್ಯಾಟಿಂಗ್ ಮಾಡಿದ ಅವರು, 26 ಬಾಲ್‌ಗಳಲ್ಲಿ 4 ಸಿಕ್ಸರ್ ಹಾಗೂ 2 ಬೌಂಡರಿಗಳೊಂದಿಗೆ 47 ರನ್ ಚಚ್ಚಿದರು. ಅವರಿಗೆ ಸಾಥ್ ನೀಡಿದ ಕೋಲ್ 23 ಬಾಲ್‌ಗಳಲ್ಲಿ ಔಟಾಗದೆ 31 ರನ್‌ಗಳಿಸಿದರು. ಶ್ರೀಲಂಕಾ ಪರ ತೀಕ್ಷಣ ಮತ್ತು ಚಮೀರಾ ತಲಾ 3 ವಿಕೆಟ್ ಪಡೆದರು.

ಎಫ್‌ಐಎಚ್ ಹಾಕಿ: ಕೊನೆಗೂ ಗೆದ್ದ ಭಾರತ

ಹೊಸದಿಲ್ಲಿ: ಎಫ್‌ಐಎಚ್ ಪ್ರೋ ಲೀಗ್ ಹಾಕಿ ಪಂದ್ಯಾವಳಿಯಲ್ಲಿ ಭಾರತ ಕೊನೆಗೂ ಗೆಲುವು ಸಾಧಿಸಿದೆ. ಸತತ ಆರು ಸೋಲುಗಳ ನಂತರ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಆಸ್ಟ್ರೇಲಿಯಾ ತಂಡದೊಂದಿಗಿನ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ವರ್ಷದ ಮೊದಲನೇ ಸುತ್ತಿನಲ್ಲಿ ತೀರಾ ಹಿನ್ನಡೆ ಅನುಭವಿಸಿದ್ದ ಭಾರತ ಮೊದಲಿನಿಂದಲೂ ಸೋಲುತ್ತಲೇ ಬಂದಿತ್ತು. ಇದೀಗ ಮೊದಲ ಬಾರಿಗೆ ಗೆದ್ದಿದೆ. ಬುಧವಾರ ನಡೆದ ರೋಚಕ ಪಂದ್ಯದಲ್ಲಿ ಮೊದಲಿಗೆ ಟೈ ಮಾಡಿಕೊಂಡ ಭಾರತ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು. ಪ್ರತಿ ಪಂದ್ಯಗಳಿಗಿಂತಲೂ ಭಾರತ ಈ ಪಂದ್ಯದಲ್ಲು ಉತ್ತಮ ಪೈಪೋಟಿ ನೀಡಿತು. ರಕ್ಷಣಾ ವಿಭಾಗ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಗೋಲೇ ದಾಖಲಾಗಲಿಲ್ಲ. ಆಸ್ಟ್ರೇಲಿಯಾದವರೆ 49ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ಸಾಧಿಸಿದರು. 49ನೇ ನಿಮಿಷದಲ್ಲಿ ಹೇವರ್ಡ್ ಗೋಲು ತಂದುಕೊಟ್ಟರು. ಎರಡು ನಿಮಿಷದ ನಂತರವೇ ಭಾರತದ ಶಿಲಾನಂದ ಲಕ್ರಾ ಗೋಲು ಗಳಿಸಿ ಸಮಬಲ ಸಾಧಿಸಿದರು. ಮುಂದಿನ ಪಂದ್ಯದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ. ಶೂಟೌಟ್‌ನಲ್ಲಿ ಭಾರತ 3-1ರಿಂದ ಗೆಲುವು ಸಾಧಿಸಿತು.

ಕಬಡ್ಡಿ: ಆಂಧ್ರ ಪ್ರದೇಶ ಸೇರಿ ವಿವಿಧ ತಂಡಗಳಿಗೆ ಗೆಲುವು

ವಡೋದರ: 72ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್‌ನ ಮೊದಲನೇ ಪೂಲ್ ಪಂದ್ಯವು ದಿನದ ಅತ್ಯಂತ ರೋಚಕ ಪಂದ್ಯ ಕಂಡಿತು.

ಆಂಧ್ರಪ್ರದೇಶವು ತೆಲಂಗಾಣವನ್ನು 47-45 ಅಂತರದಲ್ಲಿ ಸೋಲಿಸಿತು. ಪೋಟ್ಲಾ ಗೋಪಿಚಂದ್ 17 ಪಾಯಿಂಟ್‌ಗಳನ್ನು ಗಳಿಸಿದರು, ಗಾಳಿ ಲಕ್ಷ್ಮಾ ರೆಡ್ಡಿ 10 ಪಾಯಿಂಟ್‌ಗಳನ್ನು ಸೇರಿಸಿದರು. ತೆಲಂಗಾಣದ ಜಿ.ರಾಜು 20 ಪಾಯಿಂಟ್‌ಗಳನ್ನು ಗಳಿಸಿದರೂ ತಂಡಕ್ಕೆ ಜಯ ತಂದುಕೊಡಲು ಸಾಧ್ಯವಾಗಲಿಲ್ಲ.

ಅದೇ ಪೂಲ್‌ನ ಮತ್ತೊಂದು ಪಂದ್ಯದಲ್ಲಿ ಹರಿಯಾಣವು ತೆಲಂಗಾಣವನ್ನು 49-18 ಅಂತರದಲ್ಲಿ ಮಣಿಸಿತು. ನೀರಜ್ ನಾರ್ವಾಲ್ 11 ಪಾಯಿಂಟ್‌ಗಳೊಂದಿಗೆ ಮುನ್ನಡೆಸಿದರು.

ಪೂಲ್ ಬಿನಲ್ಲಿ ಮಧ್ಯಪ್ರದೇಶವು ಗೋವಾವನ್ನು 35-34 ಅಂತರದಲ್ಲಿ ಸೋಲಿಸಿ ಜಯ ಸಾಧಿಸಿತು. ಭವಾನಿ ರಾಜಪುತ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪೂಲ್ ಸಿದಲ್ಲಿ ತಮಿಳುನಾಡು ತನ್ನ ಪ್ರಭಾವಿ ಅಭಿಯಾನವನ್ನು ಮುಂದುವರಿಸಿ ವಿದರ್ಭವನ್ನು 40-21 ಅಂತರದಲ್ಲಿ ಸೋಲಿಸಿತು. ಸತೀಶ್ ಕನ್ನನ್ 8 ಪಾಯಿಂಟ್‌ಗಳನ್ನು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಹಿಮಾಚಲ ಪ್ರದೇಶವು ಗುಜರಾತ್‌ನ್ನು 51-34 ಅಂತರದಲ್ಲಿ ಮಣಿಸಿತು. ಯು ಮುಂಬಾದ ಅನಿಲ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪವ್ವು ಕಮಲ್ ಕುಮಾರ್ ಮತ್ತು ಮಯಂಕ್ ಸೈನಿ ಸಹಕಾರ ನೀಡಿದರು. ಗುಜರಾತ್‌ನ ಮಿತೇಶ್ ಪ್ರಜಾಪತಿ 13 ಪಾಯಿಂಟ್‌ಗಳನ್ನು ಗಳಿಸಿದರೂ ಹಿಮಾಚಲದ ನಾಲ್ಕು ಆಲ್-ಔಟ್‌ಗಳು ಹಾಗೂ ಬಲಿಷ್ಠ ಟ್ಯಾಕಲ್‌ಗಳು ಗೆಲುವಿಗೆ



ಕಾರಣವಾದವು.

ಪೂಲ್ ಡಿನಲ್ಲಿ ಉತ್ತರ ಪ್ರದೇಶವು ಮಣಿಪುರವನ್ನು 70-33 ಅಂತರದಲ್ಲಿ ಮಣಿಸಿ ಟೂರ್ನಿಯ ಅತ್ಯಂತ ದೊಡ್ಡ ಗೆಲುವುಗಳಲ್ಲಿ ಒಂದನ್ನು ದಾಖಲಿಸಿತು. ಉದಯ್ ದಾಬಾಸ್ ಭರ್ಜರಿ 25 ಪಾಯಿಂಟ್‌ಗಳನ್ನು ಗಳಿಸಿದರು. ಸೌರಭ್ 12 ಪಾಯಿಂಟ್‌ಗಳನ್ನು ಸೇರಿಸಿದರು. ಉತ್ತರ ಪ್ರದೇಶವು 53 ರೇಡ್ ಪಾಯಿಂಟ್‌ಗಳನ್ನು ಗಳಿಸಿ 8 ಆಲ್-ಔಟ್‌ಗಳನ್ನು ಸಾಧಿಸಿತು. ಮಣಿಪುರದ ಮಯೆಂಗ್‌ಬಂ ಮೆನ್ಸನ್ 18 ಪಾಯಿಂಟ್‌ಗಳನ್ನು ಗಳಿಸಿದರೂ ತಂಡವು ಯುಪಿ ದಾಳಿಯನ್ನು ತಡೆಯಲು ವಿಫಲವಾಯಿತು.

ಕೇರಳವು ಛತ್ತೀಸ್‌ಗಢವನ್ನು 45-30 ಅಂತರದಲ್ಲಿ ಸೋಲಿಸಿತು. ನಂದು ಟಿ 11 ಪಾಯಿಂಟ್‌ಗಳನ್ನು, ಆದಿತ್ಯನ್ 10 ಪಾಯಿಂಟ್‌ಗಳನ್ನು ಸೇರಿಸಿದರು. ದಿಲ್ಲಿ ತ್ರಿಪುರವನ್ನು 64-42 ಅಂತರದಲ್ಲಿ ಮಣಿಸಿತು. ಆಶಿಷ್ 18 ಪಾಯಿಂಟ್‌ಗಳನ್ನು ಗಳಿಸಿದರು. ಹಿಮಾಂಶು ಸಿಂಗ್ 14 ಪಾಯಿಂಟ್‌ಗಳನ್ನು ಸೇರಿಸಿದರು.

ಮಾ.1ರಿಂದ ಐಟಿಎಫ್ ಟೆನಿಸ್

ಬೆಂಗಳೂರು: ಮಹಿಳಾ ಟೆನಿಸ್‌ನ ಅತಿ ದೊಡ್ಡ ಟೆನಿಸ್ ಪಂದ್ಯಾವಳಿ ಎನಿಸುವ ಐಟಿಎಫ್-35 ಕೂಟವು ಕಲಬುರ್ಗಿಯಲ್ಲಿ ನಡೆಯಲಿದೆ ಎಂದು ಆಯೋಜಕರು ದೃಢಪಡಿಸಿದ್ದಾರೆ. ಅಲ್ಲಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣವು ಯುಎಸ್‌ಡಿ 30 ಸಾವಿರ ಡಾಲರ್ ಮೊತ್ತದ ಪಂದ್ಯಾವಳಿ ಮಾರ್ಚ್ 1-8ರವರೆಗೆ ನಡೆಯಲಿದೆ.

ಪಂದ್ಯಾವಳಿಯು ಐಟಿಎಫ್ ಆಶ್ರಯದ ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆಯು ಐಟಿಎಫ್ ಡಬ್ಲ್ಯು35 ಪಂದ್ಯಾವಳಿಯನ್ನು ನಡೆಸುವುದಕ್ಕೆ ಸಿದ್ಧವಾಗಿದೆ. ಕೂಟವು 32 ಸಿಂಗಲ್ ಆಟಗಾರರನ್ನು ಒಳಗೊಳ್ಳಲಿದೆ. ಮುಖ್ಯ ಡ್ರಾ ಕೇವಲ ನಾಕೌಟ್ ಮಾದರಿಯಾಗಿರುತ್ತದೆ. ಮಾರ್ಚ್ 1ಕ್ಕೆ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತವೆ. 3ರಿಂದ ಮುಖ್ಯ ಡ್ರಾ ಪಂದ್ಯಗಳು ನಡೆಯಲಿವೆ. 16 ಜೋಡಿಗಳು ಡಬಲ್ಸ್ ಪಂದ್ಯಗಳಲ್ಲಿ ಮಿಂಚಲಿದ್ದಾರೆ. 11 ದೇಶಗಳಿಂದ ಪ್ರಮುಖ ಆಟಗಾರರು ಕಣಕ್ಕಿಳಿಯುತ್ತಿರುವುದು ಇನ್ನೊಂದು ವಿಶೇಷ. ಮುಖ್ಯವಾಗಿ ಥೈಲ್ಯಾಂಡ್‌ನ ಅಚಿಲಿಸಾ ಚಾಂತಾ, ಜಾಸ್ಮಿನ್ ಗಿಂಬ್ರೆರೆ




ಅವರು ಭಾಗವಹಿಸುತ್ತಿರುವುದು ಕುತೂಹಲ ಮೂಡಿಸಿದೆ.

ಭಾರತದಿಂದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ಶ್ರೀವಲ್ಲಿ ರಶ್ಮಿಕಾ, ಅಂಕಿತಾ ರೈನಾ, ಝೀಲ್ ದೇಸಾಯಿ, ಆಕಾಂಶಾ, ಶೃತಿ ಮತ್ತು ಸೋನಲ್ ಪಾಟೀಲ್ ಭಾಗವಹಿಸಲಿದ್ದಾರೆ.

ಪದಬಂಧ 5907

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಪರ್ವತವನ್ನು ಹೊತ್ತು ನಿಂತವನು (4)
3.ಜ್ಞಾನ-ವಸ್ತು-ಆಲೋಚನೆ ಹಂಚುವವನು (4)
5.ಸಂಗೀತಕ್ಕೆ ತಕ್ಕಂತೆ ದೇಹ ಚಲಿಸುವ ಕ್ರಿಯೆ (3)
6.ಬೇರೆಯ, ದೀರ್ಘವಾದ ಕಾಲ (4)
8.ಇದು ಸೂರ್ಯನ ದಿನ (4)
10.ಅನುಮಾನದಿಂದ ಜನರೆಡೆಗೆ ಬಂದ ತಮ್ಮ (3)
11. ಗೌರವ ಸೂಚಿಸುವ ಕ್ರಿಯೆ (3)
13. ದೇವತೆ-ಸೃಷ್ಟಿಯ ಇತಿಹಾಸವಿದು (3)
15.ಉತ್ಸವದ ಒಂಬತ್ತು ಇರುಳು (4)
16. ಗಲ್ಲಿಯಲ್ಲಿ ದಿಕ್ಕು ತೋಚದಂತಾಗು (4)

ಮೇಲಿನಿಂದ ಕೆಳಕ್ಕೆ
1.ತೆಂಗಿನ ಕಾಯಿ ಒಣಗಿ ಒಣಕೊಬ್ಬರಿಯಾಗು (5)
2.ಮಣಿ-ಅಮೂಲ್ಯರತ್ನವಿದು (3)
3.ಸಾಮಾನ್ಯಕ್ಕಿಂತ ಉನ್ನತವಾದ ಅರಿವು (3)
4.ಇದು ಮೋಸದಿಂದ ಕೂಡಿದ ವ್ಯವಹಾರ (5)
7.ಮಗನನ್ನು ಹೀಗೂ ಕರೆಯುತ್ತೇವೆ (3)
9.ಆಕಾಶದಲ್ಲಿ ಚಲಿಸುವ ವಾಹನ (3)
10.ಕೃಷ್ಣನಿಂದ ಗೀತೋಪದೇಶ ಪಡೆದವನು (3)
12.ನಿಜವಲ್ಲದ, ಕೃತಕ ವಸ್ತು (3)
13.ಹೆಣ್ಣು ಮಗಳು (2)
14.ಗುಂಪು ಇಲ್ಲಿ ತಲೆಕೆಳಗಾಗಿದೆ (2)

5906 ಉತ್ತರ

ಎಡದಿಂದ ಬಲಕ್ಕೆ:
2.ವಿರಹ 5.ಸುಭಾಷಿತ
6.ವಿಕರಾಳ 7.ಕರುಣೆ
8.ಗಡಿಗೆ 10.ಕಪ್ತಾನ
12.ಅಪಾಯ 15.ವನವಾಸ
16.ರಾಮಾಯಣ
17.ಧಡೂತಿ

ಮೇಲಿನಿಂದ ಕೆಳಕ್ಕೆ :
1.ಮುಸುಕು 2.ವಿತರಣೆ
3.ಹವಿರ್ಭಾಗ 4.ಪುಳಕ
7.ಕಲಂಕ 9.ಗೆಳೆಯ
11.ನವಸತಿ 12.ಅಪರಾಧ
13.ಕವಲು 14.ಆಣತಿ

ಕಿರುಸುದ್ದಿ

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತೊಂದು ಪ್ರಶಸ್ತಿ

ಮಂಗಳೂರು: ಏರ್ ಪೋರ್ಟ್ಸ್ ಕೌನ್ಸಿಲ್ ಇಂಟರ್ ನ್ಯಾಷನಲ್ ವರ್ಲ್ಡ್ ನೀಡುವ 2025ರ ಏರ್‌ಪೋರ್ಟ್ ಸರ್ವಿಸ್ ಕ್ವಾಲಿಟಿ ಪ್ರಶಸ್ತಿಯಲ್ಲಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜಾಗತಿಕ ಮಟ್ಟದಲ್ಲಿ 'ಬೆಸ್ಟ್ ಏರ್‌ಪೋರ್ಟ್ ಅಟ್ ಅರೈವಲ್ಸ್' ಪ್ರಶಸ್ತಿಯನ್ನು ಪಡೆದುಕೊಂಡಿದೆ. ಇದು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸತತ ಎರಡನೇ ವರ್ಷದ ಗೌರವವಾಗಿದೆ. 2024ರಲ್ಲಿಯೂ ಇದೇ ವಿಭಾಗದಲ್ಲಿ ಜಾಗತಿಕ ಪ್ರಶಸ್ತಿಯನ್ನು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪಡೆದುಕೊಂಡಿತ್ತು.ಈ ವರ್ಷ ಜಗತ್ತಿನಾದ್ಯಂತ ಕೇವಲ ಆರು ವಿಮಾನ ನಿಲ್ದಾಣಗಳು ಮಾತ್ರ 'ಬೆಸ್ಟ್ ಏರ್‌ಪೋರ್ಟ್ ಅಟ್ ಅರೈವಲ್ಸ್ – ಗ್ಲೋಬಲಿ' ವಿಭಾಗಕ್ಕೆ ಆಯ್ಕೆಯಾಗಿದ್ದವು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಮಾರ್ಚ್ 2 ರಿಂದ ಪಂಚಗಂಗಾ ರೈಲಿನಲ್ಲಿ ಹೆಚ್ಚುವರಿ ಬೋಗಿ

ಉಡುಪಿ: ಕೆಎಸ್‌ಆರ್ ಬೆಂಗಳೂರು– ಕಾರವಾರ– ಕೆಎಸ್ ಆರ್ ಕಾರವಾರ ನಡುವೆ ಸಂಚರಿಸುವ ಪಂಚಗಂಗಾ ಎಕ್ಸ್‌ಪ್ರೆಸ್ ರೈಲಿಗೆ ಜನರ ಬೇಡಿಕೆ ಹೆಚ್ಚಿರುವುದರಿಂದ ತಾತ್ಕಾಲಿಕ ನೆಲೆಯಲ್ಲಿ ಹೆಚ್ಚುವರಿ ಬೋಗಿಗಳನ್ನು ಅಳವಡಿ ಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ಈ ವ್ಯವಸ್ಥೆ ಮಾರ್ಚ್ 2ರಿಂದ ಏಪ್ರಿಲ್ 16ರವರೆಗೆ ಜಾರಿಯಲ್ಲಿರುತ್ತದೆ ಎಂದು ಕೊಂಕಣ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ. ಸದ್ಯ 14 ಎಲ್‌ಎಚ್‌ಬಿ ಕೋಚ್‌ಗಳೊಂದಿಗೆ ಸಂಚರಿಸುವ ಈ ರೈಲಿಗೆ ಮಾ.2ರಿಂದ ಐದು ಹೆಚ್ಚುವರಿ ಕೋಚ್‌ಗಳನ್ನು ಸೇರ್ಪಡೆಗೊಳಿಸಲಾಗುತ್ತದೆ. ಇದು ಮುಂದಿನ ಏಪ್ರಿಲ್ 16ರವರೆಗೆ ಇರುತ್ತದೆ. ಇವುಗಳಲ್ಲಿ ಒಂದು ಫಸ್ಟ್ ಕ್ಲಾಸ್ ಎಸಿ ಒಂದು, 3 ಟಯರ್ ಎಸಿ ಇಕಾನಮಿ ಕೋಚ್ ಒಂದು, ಸ್ಲೀಪರ್ ಕೋಚ್ ಒಂದು ಹಾಗೂ ಜನರಲ್ 3 ಕೋಚ್‌ಗಳಿರುತ್ತವೆ.

ಕುಶಾಲನಗರದಲ್ಲಿ ಬೀದಿನಾಯಿಗಳ ಹಾವಳಿ: ಎರಡು ಮೇಕೆಗಳು ಬಲಿ

ಮಡಿಕೇರಿ: ಕುಶಾಲನಗರ ಪಟ್ಟಣದಲ್ಲಿ ಬೀದಿನಾಯಿಗಳ ಹಾವಳಿ ಎಲ್ಲೆ ಮೀರಿದ್ದು ನಗರದ ವಿವಿಧ ಬಡಾವಣೆಗಳ ನಿವಾಸಿಗಳು ಹೈರಾಣಾಗುತ್ತಿದ್ದಾರೆ. ಕುಶಾಲನಗರದ ಆದರ್ಶ ದ್ರಾವಿಡ ಬಡಾವಣೆ ನಿವಾಸಿ, ಪುರಸಭೆ ನೌಕರ ಬಣ್ಣಾರಿ ಎಂಬವರಿಗೆ ಸೇರಿದ ಸುಮಾರು 20 ಸಾವಿರ ರೂ. ಬೆಲೆಬಾಳುವ ಎರಡು ಮೇಕೆಗಳನ್ನು ಕಳೆದ ಎರಡು ದಿನಗಳ ಹಿಂದೆ ಬೀದಿನಾಯಿಗಳು ಬಲಿ ಪಡೆದಿವೆ. ಈ ಕುರಿತು ಬಣ್ಣಾರಿ ಅವರು ಸ್ಥಳೀಯ ಪುರಸಭೆ ಅಧಿಕಾರಿಗಳಿಗೆ ದೂರು ನೀಡಿದ್ದು, ಸೂಕ್ತ ಪರಿಹಾರಕ್ಕೆ ಮನವಿ ಸಲ್ಲಿಸಿದ್ದಾರೆ. ಅಲ್ಲದೆ ಸ್ಥಳೀಯ ಪಶುಪಾಲನಾ ಇಲಾಖೆಯ ವೈದ್ಯಾಧಿಕಾರಿಗಳ ಬಳಿಯೂ ಘಟನೆಯನ್ನು ವಿವರಿಸಿದ್ದು, ಸೂಕ್ತ ಪರಿಹಾರಕ್ಕೆ ಶಿಫಾರಸ್ಸು ಮಾಡುವಂತೆ ಕೋರಿದ್ದಾರೆ. ಬೀದಿ ನಾಯಿಗಳಿಂದ ನಷ್ಟಕ್ಕೆ ತುತ್ತಾದ ಮೇಕೆಗಳ ಪಾಲಕರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಲಾಗಿದ್ದು, ಪುರಸಭೆ ಅಧಿಕಾರಿಗಳು ಬೀದಿ ನಾಯಿಗಳ ದಾಳಿಯಿಂದ ಸಾರ್ವಜನಿಕರಿಗೆ ರಕ್ಷಣೆ ನೀಡಬೇಕೆಂಬ ಆಗ್ರಹವೂ ಕೇಳಿ ಬಂದಿದೆ. ಪುರಸಭೆ ಅಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸ ಬೇಕಿದೆ. ಹಾಗೆಯೇ, ಬೀದಿನಾಯಿಗಳು ಪುಟ್ಟ ಮಕ್ಕಳ ಮೇಲೆ ಎರಗುವ ಮುನ್ನ ಪುರಸಭೆ ಎಚ್ಚೆತ್ತುಕೊಳ್ಳಬೇಕು ಎಂಬುದು ಸಾರ್ವಜನಿಕರು ಒತ್ತಾಯವಾಗಿದೆ.

ಯುವತಿಗೆ ಲೈಂಗಿಕ ಕಿರುಕುಳ: ವ್ಯಕ್ತಿಯ ವಿರುದ್ಧ ಕೇಸು

ಮಂಜೇಶ್ವರ: ಮಂಜೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಸಿಸುವ 20ರ ಹರೆಯದ ಯುವತಿಗೆ ಲೈಂಗಿಕ ಕಿರುಕುಳ ನೀಡಿರುವುದಾಗಿ ದೂರಲಾಗಿದೆ. ಈ ಸಂಬಂಧ ಆಶಿಫ್ ಎಂಬಾತನ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖ ಲಿಸಿಕೊಂಡಿದ್ದಾರೆ. ಈ ಮಧ್ಯೆ ವಿವಾಹವಾಗುವುದಾಗಿ ಭರವಸೆಯೊಡ್ಡಿ ಫೆ.19ರ ವರೆಗೆ ಆರೋಪಿಯು ಲೈಂಗಿಕ ದೌರ್ಜನ್ಯವೆಸಗಿರುವುದಾಗಿ ಯುವತಿ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಜೈಲು

ಮಂಗಳೂರು: ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ ಆಕೆಯ ಮೇಲೆ ಬಲವಂತವಾಗಿ ಲೈಂಗಿಕ ದೌರ್ಜನ್ಯ ಎಸಗಿ ಗರ್ಭವತಿಯನ್ನಾಗಿಸಿದ ಅಪರಾಧಿಗೆ ಮಂಗಳೂರಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ (ಪೋಕ್ಸೋ–ಎಫ್ ಟಿ ಎಸ್ ಸಿ–2) ನ್ಯಾಯಾಧೀಶರಾದ ಮಾನು ಕೆ.ಎಸ್. ಅವರು 20 ವರ್ಷ ಕಠಿನ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಮೂಲತ: ಬಾಗಲಕೋಟೆಯವರಾಗಿದ್ದು ನಗರದಲ್ಲಿ ಆಟೋಚಾಲಕನಾಗಿರುವ ನಾಗರಾಜ್ ಶಿವಪ್ಪ ದುರಗಣ್ಣವರ (21) ಶಿಕ್ಷೆಗೊಳಗಾದವನು. ಈತ ತನ್ನ ತಾಯಿಯ ಪರಿಚಯದ ಮಹಿಳೆಯ ಪುತ್ರಿಯ ಜತೆಗೆ ಅನ್ಯೋನ್ಯವಾಗಿದ್ದ. ಆಕೆಯ ಮನೆಗೂ ಆಗಾಗ್ಗೆ ಹೋಗುತ್ತಿದ್ದ. 2025 ರ ಫೆ.25 ಮತ್ತು ಮಾ.13 ರಂದು ಅತ್ತಾವರದಲ್ಲಿರುವ ತನ್ನ ಬಾಡಿಗೆ ಮನೆಗೆ ಆಕೆಯನ್ನು ಕರೆದುಕೊಂಡು ಬಂದು ಬಲವಂತವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಪರಿಣಾಮವಾಗಿ ಬಾಲಕಿ ಗರ್ಭವತಿಯಾಗಿದ್ದಳು. ಈ ಬಗ್ಗೆ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಗೆ ಪೋಕ್ಸೋ ಕಲಂ 6 ರಡಿ 20 ವರ್ಷ ಕಠಿನ ಸಜೆ ಮತ್ತು 40,000 ರೂ. ದಂಡ, ಒಂದು ವೇಳೆ ದಂಡ ಪಾವತಿಸಲು ತಪ್ಪಿದರೆ ಹೆಚ್ಚುವರಿ 4 ತಿಂಗಳು ಸಾದಾ ಸಜೆ ಮತ್ತು ಬಿಎನ್ ಎಸ್ ಕಲಂ 69 ರಡಿ 5 ವರ್ಷ ಸಾದಾ ಸಜೆ, 10,000 ರೂ. ದಂಡ, ಒಂದು ವೇಳೆದಂಡ ಪಾವತಿಸಲು ತಪ್ಪಿದರೆ ಹೆಚ್ಚುವರಿ ಒಂದು ತಿಂಗಳ ಸಜೆ ವಿಧಿಸಿ ಮಂಗಳವಾರ ತೀರ್ಪು ನೀಡಿದ್ದಾರೆ. ದಂಡದ ಮೊತ್ತ ಒಟ್ಟು 50,000 ರೂ. ಅಲ್ಲದೆ 6.50 ಲಕ್ಷ ರೂ ಗಳನ್ನು ಸಂತ್ರಸ್ತೆಗೆ ಪರಿಹಾರವಾಗಿ ನೀಡುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದ್ದಾರೆ. ಮಹಿಳಾ ಠಾಣಾಧಿಕಾರಿ ಬಾಲಕೃಷ್ಣ ಎಚ್. ಎನ್ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಾಸಿಕ್ಯೂಷನ್ ಪರವಾಗಿ ಪೋಕ್ಸೊ ವಿಶೇಷ ಸರಕಾರಿ ಅಭಿಯೋಜಕಿ ಸಹನಾ ದೇವಿ ಬೋಳೂರು ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

ಕುಕ್ಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮುರುಳ್ಯ

ಸುಬ್ರಹ್ಮಣ್ಯ: ಜನತೆಗೆ ಉತ್ತಮವಾದ ಆರೋಗ್ಯ ಸೌಲಭ್ಯ ನೀಡಿದರೆ ಸಾರ್ವಜನಿಕರು ಹೆಚ್ಚು ಹೆಚ್ಚು ಸರಕಾರಿ ಆಸ್ಪತ್ರೆಗೆ ಬರುತ್ತಾರೆ. ಇಲ್ಲಿಗೆ ಬಂದು ಚಿಕಿತ್ಸೆ ಪಡೆಯುವ ಸಾರ್ವಜನಿಕರ ಸಂಖ್ಯೆ ಅಧಿಕವಾದಾಗ ಕುಕ್ಕೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಯೋಜನೆ ಶೀಘ್ರವಾಗಿ ಸಾಕಾರಗೊಳಿಸಲು ಸಾಧ್ಯವಾಗುತ್ತದೆ. ಅಲ್ಲದೆ ಸುಲಲಿತವಾಗಿ ಈ ಕಾರ್ಯ ಸಫಲವಾಗುತ್ತದೆ ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಸುಬ್ರಹ್ಮಣ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಗಳವಾರ ದಿಢೀರ್ ಭೇಟಿ ನೀಡಿದ ಬಳಿಕ ಅವರು ವೈದ್ಯರು ಹಾಗೂ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿ ಮಾತನಾಡಿದರು. ಜನತೆಗೆ ಆವಶ್ಯಕವಿರುವ ಚಿಕಿತ್ಸೆಯನ್ನು ಹಗಲು ಮಾತ್ರವಲ್ಲದೆ ರಾತ್ರಿಯೂ ನೀಡಿ ಸಿಬ್ಬಂದಿಗಳು ಸಹಕರಿಸಬೇಕು. ಈ ರೀತಿಯಲ್ಲಿ ಕಾರ್ಯ ನಿರ್ವಹಿಸಿದರೆ ಹೆಚ್ಚು ಜನರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಗಮಿಸುತ್ತಾರೆ ಎಂದು ಅವರು ತಿಳಿಸಿದರು.

ವಿಧಾನ ಸಭೆಯಲ್ಲಿ ಕುಕ್ಕೆಯ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವ ಕುರಿತು ಪ್ರಶ್ನಿಸಿದಾಗ, ಇಲ್ಲಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುವ ರೋಗಿಗಗಳ ಸಂಖ್ಯೆಯನ್ನು ಕೇಳುತ್ತಾರೆ. ಆದುದರಿಂದ ಹೆಚ್ಚು ಜನರು ಈ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಲು ಬೇಕಾದ ವ್ಯವಸ್ಥೆಯನ್ನು ಸಿಬ್ಬಂದಿಗಳು ನೆರವೇರಿಸಿ ಸಹಕರಿಸಬೇಕು. ಇತರ ಕಡೆಗೆ ಹೋಗದೆ ಇಲ್ಲಿನ ಆಸ್ಪತ್ರೆಗೆ ಹೆಚ್ಚು ಹೆಚ್ಚು ಸಾರ್ವಜನಿಕರು ಬರುವಂತೆ ಮಾಡುವುದು ಅತ್ಯವಶ್ಯಕ ಎಂದು ಭಾಗೀರಥಿ ಮುರುಳ್ಯ ತಿಳಿಸಿದರು.

ಗ್ರಾ.ಪಂ.ನ ನಿಕಟಪೂರ್ವ ಉಪಾಧ್ಯಕ್ಷ ರಾಜೇಶ್ ಎನ್.ಎಸ್., ನಿಕಟಪೂರ್ವ ಪಂ. ಸದಸ್ಯರಾದ ಭವಾನಿ ಶಂಕರ ಪೂಂಬಾಡಿ, ಗಿರೀಶ್ ಆಚಾರ್ಯ ಪೈಲಾಜೆ, ದಿಲೀಪ್ ಉಪ್ಪಳಿಕೆ, ಭಾರತಿ ದಿನೇಶ್, ಪ್ರಮುಖರಾದ ಪ್ರಸಾದ್ ಕಾಟೂರ್, ಅಶೋಕ್ ಕುಮಾರ್ ಮೂಲೆಮಜಲು ಮತ್ತಿತರರಿದ್ದರು.



ಆರೋಗ್ಯ ಕೇಂದ್ರ ಪರಿಶೀಲನೆ

ಆರಂಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಸೌಲಭ್ಯಗಳನ್ನು ಪರಿಶೀಲಿಸಿ ಇಲ್ಲಿನ ಸುಸಜ್ಜಿತ ಆಸ್ಪತ್ರೆಯಲ್ಲಿನ ಸವಲತ್ತುಗಳನ್ನು ವೀಕ್ಷಿಸಿದರು. ದಾಖಲೆಗಳನ್ನು ಪರಿಶೀಲಿಸಿ, ಸಿಬ್ಬಂದಿಗಳ ವಿವರ ಪಡೆದುಕೊಂಡರು. ಬಳಿಕ ಸಿಬ್ಬಂದಿಗಳೊಂದಿಗೆ ತುರ್ತು ಸಭೆ ನಡೆಸಿ ಕುಂದು ಕೊರತೆಗಳ ಬಗ್ಗೆ ವಿವರ ಪಡೆದುಕೊಂಡರು. ಹಗಲು ಸೇರಿದಂತೆ ರಾತ್ರಿಯೂ ಸೇವೆ ನೆರವೇರಿಸಲು ನಾವು ತಯಾರಿದ್ದೇವೆ. ಅಲ್ಲದೆ, ಜನತೆಯ ಸೇವೆ ಮಾಡಲು ನಾವು ಸದಾ ತಯಾರಿದ್ದೇವೆ ಎಂದು ಈ ಸಂದರ್ಭ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಶಾಸಕರಲ್ಲಿ ತಿಳಿಸಿದರು.

ಕುಕ್ಕುಂದೂರು ವಸತಿ ಪ್ರೌಢಶಾಲೆ 35ನೇ ವರ್ಷದ ಸಮಾರಂಭ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಗ್ಯಾರಂಟಿಗೆ ಜಾತಿ, ಧರ್ಮ ಬೇಧವಿಲ್ಲ

ಕಾರ್ಕಳ: ಕಾರ್ಕಳದಲ್ಲಿ ಕಿಸಾನ್ ಸಭಾದ ಮೂಲಕ ಪ್ರೌಢಶಾಲೆ ಪ್ರಾರಂಭಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ಕೆ ಮುಂದಾಗಿರುವ ಡಾ. ಎಂ. ವೀರಪ್ಪ ಮೊಯ್ಲಿ ಅವರ ಕಾರ್ಯ ಅಭಿನಂದನೀಯ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಬುಧವಾರ ಕಾರ್ಕಳ ತಾಲೂಕು ಕುಕ್ಕುಂದೂರು ಮಹಾತ್ಮಗಾಂಧಿ ವಸತಿ ಪ್ರೌಢ ಶಾಲೆಯ 35ನೇ ವರ್ಷದ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಶೇ. 35% ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಪ್ರಥಮ ಆದ್ಯತೆ ನೀಡುತ್ತಿರುವುದು ವಿಶೇಷ. ಈ ಕಾರ್ಯವನ್ನು ಹರ್ಷ ಮೊಯ್ಲಿ ಮುಂದುವರಿಸಲಿ ಎಂದು ಆಶಿಸಿದರು.

ಮಹಾಮಸ್ತಕಾಭಿಷೇಕಕ್ಕೆ ಸರ್ವ ಸಹಕಾರ

2027ರಲ್ಲಿ ನಡೆಯಲಿರುವ ಕಾರ್ಕಳ ಬಾಹುಬಲಿ ಮಹಾಮಸ್ತಕಾಭಿಷೇಕಕ್ಕೆ ಸರಕಾರದಿಂದ ಸರ್ವ ರೀತಿಯ ಸಹಕಾರ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ನುಡಿದಂತೆ ನಡೆಯುವ ನಮ್ಮ ಸರ್ಕಾರ, ಕಳೆದ ವಿಧಾನ ಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ 590 ಭರವಸೆ ನೀಡಿತ್ತು. ಇದೀಗ ಅಧಿಕಾರಕ್ಕೆ ಬಂದ ಎರಡೂವರೆ ವರ್ಷದಲ್ಲಿ 243 ಭರವಸೆ ಈಡೇರಿಸಲಾಗಿದೆ. ಅದರೊಂದಿಗೆ 5 ಗ್ಯಾರಂಟಿಗಳನ್ನು ಯಾವುದೇ ಜಾತಿ, ಧರ್ಮ, ವರ್ಗ ಭೇದವಿಲ್ಲದೆ ನೀಡಿದ್ದೇವೆ ಎಂದು ಸಿಎಂ ಹೇಳಿದರು.

ಇಂದಿನ ರಾಜಕೀಯದಲ್ಲಿ ಪ್ರಾಮಾಣಿಕರನ್ನು ಹುಡುಕುವುದು ಬಹಳ ಕಷ್ಟ. ಈ ವಿಚಾರವಾಗಿ ವೀರಪ್ಪ ಮೊಯ್ಲಿಯವರ ಅಂದಿನ ಕಾರ್ಯವೈಖರಿ ಶ್ಲಾಘನೀಯ ಎಂದು ಸಿಎಂ ಅಭಿಪ್ರಾಯಪಟ್ಟರು.

ಮಾಜಿ ಮುಖ್ಯಮಂತ್ರಿ ಹಾಗೂ ಕಿಸಾನ್ ಸಭಾ ಟ್ರಸ್ಟ್ ನ ಅಧ್ಯಕ್ಷ ಡಾ. ಎಂ.ವೀರಪ್ಪ ಮೊಯಿಲಿ ಮಾತನಾಡಿ, ರೈತರು ಸಂಘಟನೆಯಾಗಬೇಕೆಂದು ಕಿಸಾನ್ ಸಭಾ ಸ್ಥಾಪಿಸಿದೆವು. ಬಳಿಕ ಕಿಸಾನ್ ಸಭಾ ಟ್ರಸ್ಟ್ ಮೂಲಕ ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆ ಪ್ರಾರಂಭಿಸಿ ರೈತರು, ಹಿಂದುಳಿದವರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ ಎಂದರು. ಶೇ. 35 ಅಂಕ ಪಡೆದ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡು ಅವರು ಎಸ್ಸೆಸೆಲ್ಸಿಯಲ್ಲಿ ಉತ್ತಮ ಅಂಕ ಪಡೆದುಕೊಳ್ಳುವಂತೆ ಪ್ರೇರೆಪಿಸಲಾಗುತ್ತಿದೆ. ಪ್ರಸ್ತುತ ರಾಜ್ಯದ ವಿವಿಧ ಭಾಗಗಳ 104 ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಲಕ್ಷ್ಮೀ ಹೆಬ್ಬಾಳಕರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ನೇತೃತ್ವದ ನಮ್ಮ ಸರ್ಕಾರ ಸಾಮಾಜಿಕ ನೆಲೆಗಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಗೃಹಲಕ್ಷ್ಮಿ ಯೋಜನೆಯನ್ನು ಮನೆ ಮನೆಗೆ ತಲುಪಿಸುವ ಮೂಲಕ ಮಹಿಳಾ ಸಬಲೀಕರಣಕ್ಕೆ ಮುನ್ನುಡಿ ಬರೆದಿದೆ ಎಂದರು.

ಇದುವರೆಗೂ 26 ಕಂತಿನ ಹಣವನ್ನು 1.24 ಕೋಟಿ ಮಹಿಳೆಯರಿಗೆ ತಲಾ 52 ಸಾವಿರ ರೂಪಾಯಿಯಂತೆ ಹಾಕಿದ್ದೇವೆ ಎಂದರು.

ಉಡುಪಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಒಂದು ಸೀಟು ಗೆದ್ದಿಲ್ಲ, ಆದರೆ ಉಡುಪಿ ಜಿಲ್ಲೆಯಲ್ಲಿ ಅತಿಹೆಚ್ಚು ಗೃಹಲಕ್ಷ್ಮಿ ಫಲಾನುಭವಿಗಳು ಇದ್ದಾರೆ. ಇಡೀ ಕಾರ್ಕಳ ಕ್ಷೇತ್ರಾದ್ಯಂತ ಉದಯ್ ಕುಮಾರ್ ಅವರು ಮನೆ ಮನೆಗೆ ತಿರುಗಿ ಗೃಹಲಕ್ಷ್ಮಿ ಯೋಜನೆಯು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡಿದ್ದಾರೆ ಎಂದು ಹೇಳಿದರು.

ದೇಶ ಕಂಡ ಉತ್ತಮ ರಾಜಕೀಯ ಪಟು ವೀರಪ್ಪ ಮೊಯ್ಲಿ ಅವರ ಜೀವನ ನಮಗೆಲ್ಲ ಮಾದರಿ. ಬಡ ಮಕ್ಕಳಿಗೆ ಅನುಕೂಲ ಆಗುವ ದೃಷ್ಟಿಯಿಂದ ಸಿಇಟಿ ಆರಂಭಿಸಿ ಇಡೀ ದೇಶಕ್ಕೆ ಮಾದರಿಯಾದಂತಹ ಆಡಳಿತವನ್ನು ನೀಡಿದರು.

ಅವರು ಆರಂಭಿಸಿದ ಸಿಇಟಿಯೇ ಮುಂದೆ ಕೇಂದ್ರ ಸರ್ಕಾರ ಶಿಕ್ಷಣ ಹಕ್ಕು ಕಾಯ್ದೆ ಆರಂಭಕ್ಕೆ ಮಾದರಿ ಆಯಿತು ಎಂದರು.

ವೀರಪ್ಪ ಮೊಯ್ಲಿ ಅವರು ಆರಂಭಿಸಿದ ಮಹಾತ್ಮ ಗಾಂಧಿ ವಸತಿ ಶಾಲೆ ನಿಸ್ವಾರ್ಥತೆಯಿಂದ ಕೆಲಸ ಮಾಡುತ್ತಿದೆ. ಬಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿದೆ. ವೀರಪ್ಪ ಮೊಯ್ಲಿ ಅವರ ಜೀವನವೇ ನಮಗೆ ಮಾರ್ಗದರ್ಶನ, ಅವರು ನಮಗೆ ಆದರ್ಶ. ಐದು ದಶಕಗಳಿಗೂ ಹೆಚ್ಚು ಕಾಲ ನಿರಂತರವಾಗಿ ಸಮಾಜ ಸೇವೆ ಮಾಡುವುದು ಸುಲಭದ ಕೆಲಸವಲ್ಲ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ವೀರಪ್ಪ ಮೊಯ್ಲಿ ಅವರ ಕಾರ್ಯವನ್ನು ಶ್ಲಾಘಿಸಿದರು.

ಸಮಾಜ ಸೇವೆ ಎನ್ನುವುದು ಒಂದು ದಿನದ ಕೆಲಸವಲ್ಲ, ಅದು ಜೀವನದ ಧ್ಯೇಯವಾಗಬೇಕು. ನಮ್ಮ ಸಮಯ, ನಮ್ಮ ಶಕ್ತಿ ಮತ್ತು ನಮ್ಮ ಪ್ರತಿಭೆಯನ್ನು ಸಮಾಜದ ಹಿತಕ್ಕಾಗಿ ಬಳಸಿದರೆ, ನಮ್ಮ ರಾಜ್ಯ ಹಾಗೂ ರಾಷ್ಟ್ರ ಇನ್ನಷ್ಟು ಪ್ರಗತಿ ಸಾಧಿಸುತ್ತದೆ ಎನ್ನುವುದಕ್ಕೆ ಇಂದಿನ ಕಾರ್ಯಕ್ರಮ ಉದಾಹರಣೆ ಎಂದು ನಾನು ಭಾವಿಸುತ್ತೇನೆ. ಕಿಸಾನ್ ಸಭಾ ಟ್ರಸ್ಟ್ ಇನ್ನೂ ಅನೇಕ ವರ್ಷಗಳು ಇದೇ ರೀತಿಯ ಸೇವಾ ಕಾರ್ಯಗಳನ್ನು ಮುಂದುವರಿಸಿ, ಸಮಾಜಕ್ಕೆ ಬೆಳಕು ನೀಡಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಹಿರಿಯರ ಹೋರಾಟದ ಅನುಭವ ನಮಗಿಲ್ಲ. ಆದರೆ, ಅದನ್ನು ಗೌರವಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಸಮಾನತೆಯ ಶಿಕ್ಷಣವನ್ನು ಸಮಾಜದ

ಕಟ್ಟಕಡೆಯ ವಿದ್ಯಾರ್ಥಿಗೂ ನೀಡುವ ನಿಟ್ಟಿನಲ್ಲಿ ನಮ್ಮ ಇಲಾಖೆ ಪ್ರಾಮಾಣಿಕ ಪ್ರಯತ್ನ ಮಾಡಲಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್. ಸಿ. ಮಹಾದೇವಪ್ಪ ಮಾತನಾಡಿ, ಬಿಜೆಪಿಯ ಅವಧಿಯಲ್ಲಿ ಅಂಬೇಡ್ಕರ್ ಭವನಕ್ಕೆ ಮಂಜೂರಾತಿ ದೊರಕಿತ್ತು. ಆ ವೇಳೆ 74 ಲಕ್ಷ ರೂ.ಬಿಡುಗಡೆಗೊಂಡಿತ್ತು. ಬಳಿಕ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಒತ್ತಾಯದ ಮೇರೆಗೆ ಅನುದಾನ ಮಂಜೂರು ಮಾಡಲಾಗಿದೆ ಎಂದರು.

ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಮಾತನಾಡಿ, 2027ರ ಫೆಬ್ರವರಿಯಲ್ಲಿ ಕಾರ್ಕಳ ಬಾಹುಬಲಿ ಮಹಾಮಸ್ತಾಕಾಭಿಷೇಕ ನಡೆಯಲಿದೆ. ಈ ಹಿನ್ನಲೆಯಲ್ಲಿ ಕಾರ್ಕಳದ ಅಭಿವೃದ್ಧಿಗೆ ವಿಶೇಷ ಅನುದಾನ ಒದಗಿಸುವಂತೆ ಸಿಎಂ ಅವರಲ್ಲಿ ಮನವಿ ಮಾಡಿಕೊಂಡರು. ಹೆಬ್ರಿಯ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸುವಂತೆ, ಕಾರ್ಕಳದ ನರ್ಸಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವಂತೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಕೆಂಪು ಕಲ್ಲು, ಮರಳು, ಮಣ್ಣು ಸಾಗಾಟಕ್ಕಿರುವ ನಿಯಮ ಸರಳೀಕರಣಗೊಳಿಸುವಂತೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದರು.

ಉದಯ ಶೆಟ್ಟಿ ಮುನಿಯಾಲು ಮಾತನಾಡಿ, ಮಲೆನಾಡು ಮತ್ತು ಕರಾವಳಿಗೆ ಕೊಂಡಿಯಾಗಿರುವ ಆಗುಂಬೆ ಘಾಟ್ ರಸ್ತೆ ಅಗಲೀಕರಣ ಮಾಡಿದಲ್ಲಿ ನಮ್ಮ ಅಭಿವೃದ್ಧಿಯ ಹೆಬ್ಬಾಗಿಲು ತೆರೆದಂತಾಗುತ್ತದೆ. ಕಾರ್ಕಳದ ಮಹಾಮಸ್ತಕಾಭಿಷೇಕದ ಹಿನ್ನೆಲೆಯಲ್ಲಿ 100 ಕೋಟಿ ರೂ.ಅನುದಾನ ಒದಗಿಸಿ ಕ್ಷೇತ್ರದ ಅಭಿವೃದ್ಧಿಗೆ ನೆರವಾಗುವಂತೆ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಾ.ಎಂ.ಎನ್. ರಾಜೇಂದ್ರ ಕುಮಾರ್ ನೇತೃತ್ವದ ಮಹಾಮಸ್ತಾಕಾಭಿಷೇಕ ಸಮಿತಿ ವತಿಯಿಂದ ಹಾಗೂ ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಮುದ್ರಾಡಿ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು.

ಶಾಲಾ ನಿವೃತ್ತ ಮುಖ್ಯ ಶಿಕ್ಷಕ ಎಂ.ಸಿ. ಆಚಾರ್ಯ, ಮುಖ್ಯ ಶಿಕ್ಷಕ ಸಂಜೀವ ಪೂಜಾರಿ ಎಂ., ಹಿರಿಯ ಅಧ್ಯಾಪಕಿ ನಿರ್ಮಲಾವತಿ, ಉಡುಪಿ ನಿರ್ಮಿತಿ ಕೇಂದ್ರದ ಪವನ್ ಹಾಗೂ ಶಾಲೆಗೆ ಸಹಕಾರ ನೀಡಿದ ನರಸಿಂಹ ಪೈ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಐವನ್ ಡಿಸೋಜ, ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್, ಮಾಜಿ ಸಚಿವರಾದ ರಮಾನಾಥ್ ರೈ, ವಿನಯ್ ಕುಮಾರ್ ಸೊರಕೆ, ಜಯಪ್ರಕಾಶ್ ಹೆಗ್ಡೆ, ಮುಖಂಡರಾದ ಉದಯ್ ಕುಮಾರ್ ಶೆಟ್ಟಿ ಮುನಿಯಾಲು, ಮಾಜಿ ಶಾಸಕ ಗೋಪಾಲ್ ಪೂಜಾರಿ, ಮುಖಂಡರಾದ ಮಂಜುನಾಥ್ ಪೂಜಾರಿ, ಎಂ.ಎ.ಗಫೂರ್, ಅಶೋಕ್ ಕುಮಾರ್ ಕೊಡವೂರು, ಕಿಸಾನ್ ಸಭಾದ ಅಧ್ಯಕ್ಷರಾದ ಹರ್ಷ ಮೊಯ್ಲಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.





ಮುಖ್ಯಮಂತ್ರಿಗೆ ಭವ್ಯ ಸ್ವಾಗತ

ಕಾರ್ಕಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಕಳಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಿದರು. ಅವರ ಜೊತೆ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ , ಸಮಾಜಕಲ್ಯಾಣ ಇಲಾಖೆ ಸಚಿವ ಮಹದೇವಪ್ಪ ಸಾಥ್ ನೀಡಿದರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಜಿಲ್ಲಾ ಪಂಚಾಯತ್ ಸಿಇಒ ಪ್ರತೀಕ್ ಬಾಯಲ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ಕಾಂಗ್ರೆಸ್ ಮುಖಂಡರಾದ ಮುನಿಯಾಲು ಉದಯ್ ಕುಮಾರ್ ಶೆಟ್ಟಿ, ಐವನ್ ಡಿಸೋಜಾ, ರಮಾನಾಥ ರೈ, ಸಹಕಾರಿ ಧುರೀಣ ರಾಜೇಂದ್ರ ಕುಮಾರ್, ಗಫೂರ್ ಹಾಗೂ ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಸೇರಿದಂತೆ ಗಣ್ಯರು ಮುಖ್ಯಮಂತ್ರಿ ಅವರನ್ನು ಸ್ವಾಗತಿಸಿದರು.

- ಕಿಸಾನ್ ಸಭಾ ಟ್ರಸ್ಟ್ ಮೂಲಕ ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆ ಪ್ರಾರಂಭಿಸಿ ರೈತರು, ಹಿಂದುಳಿದವರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ
- ಶೇ. 35 ಅಂಕ ಪಡೆದ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡು ಅವರು ಎಸ್ಸೆಸೆಲ್ಸಿಯಲ್ಲಿ ಉತ್ತಮ ಅಂಕ ಪಡೆದು ಕೊಳ್ಳುವಂತೆ ಪ್ರೇರೆಪಿಸಲಾಗುತ್ತಿದೆ.
- ಪ್ರಸ್ತುತ ರಾಜ್ಯದ ವಿವಿಧ ಭಾಗಗಳ 104 ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.
- ಇದುವರೆಗೂ 26 ಕಂತಿನ ಹಣವನ್ನು 1.24 ಕೋ. ಮಹಿಳೆಯರಿಗೆ ತಲಾ 52 ಸಾವಿರ ರೂಪಾಯಿಯಂತೆ ಹಾಕಿದ್ದೇವೆ

ಮನೆಯ ಅಂಗಳಕ್ಕೆ ಬಂದ ಚಿರತೆ | ಆತಂಕದಲ್ಲಿ ಜನತೆ

ಅರಣ್ಯ ಇಲಾಖೆಯ ಬೋನು

ಸೋಮವಾರಪೇಟೆ: ತಾಲೂಕಿನ ಗೆಜ್ಜೆಹಣಕೋಡು ಗ್ರಾಮದ ಮನೆಯ ಅಂಗಳದಲ್ಲೇ ಚಿರತೆ ಪ್ರತ್ಯಕ್ಷಗೊಂಡಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಮಂಗಳವಾರ ಸಂಜೆ 7.30 ರ ಸಮಯಕ್ಕೆ ಗ್ರಾಮದ ಉದಯ ಎಂಬವರ ಅಂಗಳದಲ್ಲಿ ಚಿರತೆ ಕಾಣಿಸಿಕೊಂಡಿದೆ. ಅದನ್ನು ಕಂಡ ಗೃಹಿಣಿ ವಿದ್ಯಾ ಬೊಬ್ಬೆ ಹೊಡೆದ ಸಂದರ್ಭ ಪೊದೆಯೊಳಗೆ ಹೋಗಿದೆ.

ಚಿರಚಿತಜ ಓಡುವ ಈ ದೃಶ್ಯ ಮನೆಯ ಮುಂಭಾಗದಲ್ಲಿದ್ದ ಸಿ.ಸಿ ಕ್ಯಾಮೆರಾ ಸೆರೆಯಾಗಿದೆ. ದನಕರುಗಳು ಕೊಟ್ಟಿಗೆಯಲ್ಲಿದ್ದು ಸಾಕು ಪ್ರಾಣಿಗಳಿಗೆ ತೊಂದರೆಯಾಗಿಲ್ಲ. ಸ್ಥಳಕ್ಕೆ ಆರ್‌ಎಫ್‌ಒ ಶೈಲೇಂದ್ರ ಕುಮಾರ್, ಡಿಆರ್‌ಎಫ್‌ಒ ಪ್ರಶಾಂತ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಗೆಜ್ಜೆ ಹಣಕೋಡು ಗ್ರಾಮದ ರಸ್ತೆ ಬದಿಯಲ್ಲಿ ಹಾಗೂ ಬೇಳೂರು ಶ್ರೀ ಮುರುಘಾರಾಜೇಂದ್ರ ಮಠದ ತೋಟದ ದಂಚಿನ ಅರಣ್ಯ ಭಾಗದಲ್ಲಿ ಚಿರತೆ ಹಿಡಿಯುವ ಬೋನು ಅಳವಡಿಸಲಾಗಿದೆ.

ಕಳೆದ ಒಂದು ತಿಂಗಳಿನಿಂದ ಚಿರತೆ ಕಾಟ ಹೆಚ್ಚಾಗಿದೆ. ಇತ್ತೀಚೆಗೆ ಕಾರೆಕೊಪ್ಪ ಗ್ರಾಮದಲ್ಲಿ ನಾಯಿ ಮತ್ತು ಕರುವನ್ನು ಚಿರತೆ ಕಚ್ಚಿ ಗಾಯಗೊಳಿಸಿದೆ. ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ಚಿರತೆಯನ್ನು ಸೆರೆಹಿಡಿಯಲು ಹರಸಾಹಸ ಪಡುತ್ತಿದ್ದಾರೆ.



ಸೋಮವಾರಪೇಟೆ ತಾಲೂಕಿನ ಗೆಜ್ಜೆಹಣಕೋಡು ಗ್ರಾಮದ ಕಾಫಿ ತೋಟದಲ್ಲಿ ಚಿರತೆ ಹಿಡಿಯಲು ಬೋನು ಅಳವಡಿಸಿರುವುದು.

ಮಹಾಮಸ್ತಕಾಭಿಷೇಕ ಸಮಿತಿಯಿಂದ ಸಿಎಂ ಸಿದ್ದರಾಮಯ್ಯಗೆ ಗೌರವಾರ್ಪಣೆ

ಕಾರ್ಕಳ: ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮುಂಬರುವ ಮಹಾಮಸ್ತಕಾಭಿಷೇಕ ಮಹೋತ್ಸವದ ಹಿನ್ನೆಲೆಯಲ್ಲಿ, ಮಹೋತ್ಸವ ಸಮಿತಿಯ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು.

ಕುಕ್ಕುಂದೂರಿನ ಮಹಾತ್ಮಗಾಂಧಿ ವಸತಿ ಪ್ರೌಢಶಾಲೆಯ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ, ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿದರು.

ಈ ವೇಳೆ ಮಹಾಮಸ್ತಕಾಭಿಷೇಕ ಮಹೋತ್ಸವದ ಸಿದ್ಧತೆಗಳ ಕುರಿತು ಸಮಿತಿಯ ಪದಾಧಿಕಾರಿಗಳು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಸುನಿಲ್ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಐವನ್ ಡಿ'ಸೋಜಾ, ಎಸ್‌ಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ದೇವಿಪ್ರಸಾದ್ ಶೆಟ್ಟಿ ಬೆಳಪು, ಮುನಿಯಾಲ್ ಉದಯಕುಮಾರ್ ಶೆಟ್ಟಿ, ಮಾಜಿ ಮೇಯರ್ ಭಾಸ್ಕರ್ ಮೊಯ್ಲಿ, ಮಹೋತ್ಸವ ಸಮಿತಿಯ ಪದಾಧಿಕಾರಿಗಳಾದ ಪುಷ್ಪರಾಜ್ ಜೈನ್, ಸುನಿಲ್ ಕುಮಾರ್ ಬಜಗೋಳಿ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 32° 22° | ಉಡುಪಿ 31° 23°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಗುರುವಾರ 26, ಫೆಬ್ರವರಿ 2026 | e-mail diganthamlr@gmail.com | Website www.hosadigantha.com

ಸುಳ್ಯ ತಾಲೂಕಿನ ವಿವಿಧೆಡೆ ಅಧ್ವಾನ ಸೃಷ್ಟಿಸಿತು ಎರಡನೇ ಮಳೆ...



ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಗೂನಡ್ಕ ಎಂಬಲ್ಲಿ ಬುಧವಾರ ಸುರಿದ ಈ ವರ್ಷದ ಎರಡನೇ ಮಳೆಗೆ ರಾಜ ಮತ್ತು ಜಯ ಎಂಬುವವರ ಮನೆಯ ಮೇಲ್ಛಾವಣಿ ಮೇಲೆ ಮರ ಉರುಳಿ ಬಿದ್ದು ಮನೆ ಧ್ವಂಸಗೊಂಡಿದೆ. ತೆರವು ಕಾರ್ಯ ಇನ್ನಷ್ಟೇ ನಡೆಯಬೇಕಾಗಿದೆ.

ದಕ್ಷಿಣ ಕನ್ನಡದ ವಿವಿಧೆಡೆ ನಡುಗಿಸಿದ ಗುಡುಗು

ಇಳೆಗೆ ಮಳೆಯ ಕಳೆ!

ಸುಳ್ಯದಲ್ಲಿ ಮನೆ ಮೇಲ್ಛಾವಣಿಗೆ ಮರ ಪಲ್ಟಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಬುಧವಾರ ಸಂಜೆಯ ಬಳಿಕ 'ಬೇಸಗೆ'ಯ ಮಳೆಯಾಗಿದೆ.

ಸುಳ್ಯದಲ್ಲಿ ಗುಡುಗು, ಸಿಡಿಲು

ಸುಳ್ಯ ತಾಲೂಕಿನ ಸುಳ್ಯ ಪಟ್ಟಣ, ಬೆಳ್ಳಾರೆ, ಸಂಪಾಜೆ ಮೊದಲಾದ ಕಡೆಗಳಲ್ಲಿ ಗಾಳಿ, ಗುಡುಗು, ಸಿಡಿಲಿನ ಜೊತೆಗೆ ಸಾಧಾರಣ ಪ್ರಮಾಣದ ಮಳೆಯಾಗಿದೆ. »ಪುಟ 3





ಕೈಕೊಟ್ಟ ಕರೆಂಟ್, ಸ್ತಬ್ಧವಾದ ಇಂಟರ್ನೆಟ್!

ಸಂಜೆಯ ಬಳಿಕ ಸುರಿದ ಹಠಾತ್ ಮಳೆಯಿಂದಾಗಿ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ಕೆಲವಡೆಗಳಲ್ಲಿ ಅಂತರ್ಜಾಲ ವ್ಯವಸ್ಥೆಯಲ್ಲಿ ಕೂಡಾ ಭಾರೀ ವ್ಯತ್ಯಯ ಉಂಟಾಗಿದೆ.

ಕೊಡಗಿನ ಬೆಳೆಗಾರರಿಗೆ ಸಿಕ್ಕಿದೆ ಹೊಸ ಚೈತನ್ಯ

ಕಾಫಿ ತೋಟಗಳಿಗೆ 'ಹೂ' ಮಳೆ ಸಿಂಚನ!

ಬುಧವಾರ ಬೆಳಗಿನ ಜಾವ ಕೊಡಗು ಜಿಲ್ಲೆಯ ಹಲವೆಡೆ ಸುರಿದ ಮಳೆ ಕಾಫಿ ಬೆಳೆಗಾರರಲ್ಲಿ ಹೊಸ ಚೈತನ್ಯ ತುಂಬಿದೆ. ಕೊಡಗಿನಲ್ಲಿ ಪ್ರಸಕ್ತ ಕಾಫಿ ಕೊಯ್ಲು ಮುಗಿಯುವ ಹಂತಕ್ಕೆ ತಲುಪಿದ್ದು ಫೆಬ್ರವರಿ ಎರಡನೇ ವಾರದಿಂದ ಬೆಳೆಗಾರರು ಹೂ ಮಳೆ ಎದುರು ನೋಡುತ್ತಾರೆ. ಇದೀಗ ವರುಣ ದಿಢೀರ್ ಭೇಟಿ ನೀಡಿ ಅವರಿಗೆ 'ಗಿಫ್ಟ್' ನೀಡಿದ್ದಾನೆ!

ಮಡಿಕೇರಿ: ಕೊಡಗು ಜಿಲ್ಲೆಯ ಹಲವೆಡೆ ಹಗುರದಿಂದ ಸಾಧಾರಣ ಮಳೆಯಾಗಿದೆ.

ಬುಧವಾರ ಬೆಳಗಿನ ಜಾವ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಿದ್ದರೆ, ಮಧ್ಯಾಹ್ನದ ವೇಳೆಗೆ ಇಲ್ಲಿನ ಕುಶಾಲನಗರ ತಾಲೂಕಿನ ಹಲವೆಡೆ ಸಾಧಾರಣ ಮಳೆ ಬಿದ್ದಿದೆ.

ಈ ಮಳೆಯ ನಿರೀಕ್ಷೆಯಲ್ಲಿದ್ದರು!

ಕೊಡಗಿನಲ್ಲಿ ಪ್ರಸಕ್ತ ಕಾಫಿ ಕೊಯ್ಲು ಮುಗಿಯುವ ಹಂತಕ್ಕೆ ತಲುಪಿದ್ದು, ಈಗ ಫೆಬ್ರವರಿ ಎರಡನೇ ವಾರದಿಂದ ಜಿಲ್ಲೆಯ ಕಾಫಿ ಬೆಳೆಗಾರ ಬೇಸಗೆ ಮಳೆಯ (ಹೂ ಮಳೆ)ನ್ನು ಎದುರು ನೋಡುವುದು ಸಹಜ. ಕಾಫಿ ಕೊಯ್ಲು ಮುಗಿಯುತ್ತಿದ್ದಂತೆ ಬೆಳೆಗಾರರು ಮುಂದಿನ ಸಾಲಿನ ಫಸಲು ತೆಗೆಯಲು ಅಣಿಯಾಗುವ ಮುಖ್ಯ ಸಮಯವಾಗಿದ್ದು, ಈ ಸಂದರ್ಭ ನೀರಿನ ಅಭಾವ ಹಾಗೂ ಆರ್ಥಿಕ ಸಮಸ್ಯೆ ಇಲ್ಲದವರು ತುಂತುರು ನೀರಾವರಿ ಮೂಲಕ ತಮ್ಮ ತೋಟದಲ್ಲಿ ಕಾಫಿ ಹೂವನ್ನು ಅರಳಿಸುವುದರೊಂದಿಗೆ ಮುಂದಿನ ಫಸಲು ತೆಗೆಯಲು ಮುಂದಾಗುತ್ತಾರೆ. ಆದರೆ ಇಲ್ಲಿ ನೀರಿನ ಆಶ್ರಯ ಇಲ್ಲದ ಹಾಗೂ ಆರ್ಥಿಕವಾಗಿ ಹಿಂದುಳಿದವರು ಮಳೆಯನ್ನೇ ಆಶ್ರಯಿಸಬೇಕಿದ್ದು, ಅಂತಹ ಬೆಳೆಗಾರರಿಗೆ ಈಗ ಮಳೆಯ ಅಗತ್ಯವಿದೆ.

ಸಾಕಾಗಿಲ್ಲ ಬಿದ್ದಿರುವ ಮಳೆ...

ಬುಧವಾರ ಜಿಲ್ಲೆಯಲ್ಲಿ ಸುರಿದ ಮಳೆಯು ಕಾಫಿ ಹೂವನ್ನು ಅರಳಿಸಲು ಸಾಕಾಗದು ಎಂಬ ಬೇಸರವೂ ಬೆಳಗಾರರಲ್ಲಿದೆ. ಜಿಲ್ಲೆಯಲ್ಲಿ ಬುಧವಾರ ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣವಿದ್ದು, ಒಂದೆರಡು ದಿನಗಳಲ್ಲಿ ಉತ್ತಮ ಮಳೆಯಾಗಲಿ ಎಂದು ಬೆಳೆಗಾರರು ಆಶಿಸುತ್ತಿದ್ದಾರೆ.

ನಾಪೋಕ್ಲು ಬೆಳೆಗಾರ ಫುಲ್ ಖುಷ್

ನಾಪೋಕ್ಲು ಪರಿಸರದಲ್ಲಿ ಬುಧವಾರ ಸುರಿದ ಬಿರುಸಿನ ಮಳೆಯಿಂದ ಇಲ್ಲಿನ ಕಾಫಿ ಬೆಳೆಗಾರರು ಸಖತ್ ಸಂತಸಪಟ್ಟರು. ಈ ಬಿರುಸಿನ ಮಳೆ ಈಗ ಕಾಫಿ ಹೂವರಳಲು ಸಹಕಾರಿಯಾಗಿದೆ. ಇಲ್ಲಿನ ವಿವಿಧ ಗ್ರಾಮಗಳಲ್ಲಿ ಬುಧವಾರ ಸುಮಾರು 20 ಸೆಂಟಿಮೀಟರ್ ನಿಂದ ಇಂಚಿಗಿಂತಲೂ ಅಧಿಕ ಮಳೆ ಸುರಿದಿದೆ. ಬಲ್ಲಮಾವಟಿ ಗ್ರಾಮದಲ್ಲಿ ಒಂದು ಇಂಚು ಮಳೆಯಾಗಿದೆ.



- ಕೊಡಗಿನ ಬೆಳೆಗಾರಗೆ ಕಾಫಿ ಕೊಯ್ಲು ಮುಕ್ತಾಯದ ಹಂತದಲ್ಲಿ ಖುಷಿ ನೀಡಿದ ಮಳೆ
- ಮಳೆ ನೀರನ್ನೇ ಆಶ್ರಯಿಸಿ ಬೆಳೆ ತೆಗೆಯುವವರಿಗೆ ವರದಾನವಾದ ಫೆಬ್ರವರಿ ತಿಂಗಳಿನ ಮಳೆ
- ಕೊಡಗು ಜಿಲ್ಲೆಯಲ್ಲಿ ಇನ್ನಷ್ಟು ಮಳೆಯ ನಿರೀಕ್ಷೆಯಲ್ಲಿ ಜನತೆ

ನಾಪೋಕ್ಲು ಪರಿಸರದಲ್ಲಿ ಕಂಡಿತು ಉತ್ತಮ ಮಳೆ

ಕೊಡಗು ಜಿಲ್ಲೆಯ ನಾಪೋಕ್ಲು ಪರಿಸರದಲ್ಲಿ ಉತ್ತಮ ಮಳೆಯಾಗಿದೆ. ಇಲ್ಲಿಯ ಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮಗಳು ಸೇರಿದಂತೆ ಬಲ್ಲಮಾವಟಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಬುಧವಾರ ಉತ್ತಮ ಮಳೆ ಸುರಿಯಿತು. ನೆಲಜಿ, ಬಲ್ಲಮಾವಟಿ, ಪೇರೂರು, ದೊಡ್ಡಪುಲಿಕೋಟು, ಅಯ್ಯಂಗೇರಿ ಗ್ರಾಮಗಳಲ್ಲಿ ಗುಡುಗು ಸಹಿತ ಮಳೆಯಾಯಿತು. ಬಲ್ಲಮಾವಟಿ ಗ್ರಾಮದ ಪ್ರೌಢಶಾಲೆಯ ಕ್ರೀಡಾಂಗಣದಲ್ಲಿ ಮಳೆಯಿಂದಾಗಿ ನೀರು ತುಂಬಿ ಹರಿಯಿತು.

ಸುತ್ತಮುತ್ತ

ಕದ್ರಿ ದೇವಸ್ಥಾನ ಬಳಿಯ ಡಾಕ್ಟರ್ಸ್ ಕಾಲನಿಯಲ್ಲಿ ಚಿರತೆರಾಯ ಪ್ರತ್ಯಕ್ಷ!!

ಮಂಗಳೂರು: ನಗರದ ಕದ್ರಿ ದೇವಸ್ಥಾನ ಬಳಿಯ ಡಾಕ್ಟರ್ಸ್ ಕಾಲನಿಯಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಸ್ಥಳೀಯರಲ್ಲಿ ಭೀತಿ ಮೂಡಿಸಿದೆ. ಸೋಮವಾರ ಮಧ್ಯರಾತ್ರಿ ಒಂದು ಗಂಟೆ ಸುಮಾರಿಗೆ ಚಿರತೆ ಬಂದಿದ್ದು ಸಿಸಿಟಿವಿಯಲ್ಲಿ ಸ್ಪಷ್ಟವಾಗಿ ಸೆರೆಯಾಗಿದೆ. ಇಲ್ಲಿ ಚಿರತೆ ಅಡ್ಡಾಡುವುದು ಎರಡು ಸಿಸಿ ಕ್ಯಾಮರಾಗಳಲ್ಲಿ ದಾಖಲಾಗಿದೆ. ಕದ್ರಿ ದೇವಸ್ಥಾನ ಮೇಲ್ಭಾಗದಲ್ಲಿ ಸ್ವಲ್ಪ ಕಾಡು ಹೊಂದಿದ್ದು ಬಿಟ್ಟರೆ ಉಳಿದೆಲ್ಲ ಕಡೆ ಜನವಸತಿ ಪ್ರದೇಶವಿದೆ. ಇಲ್ಲಿ ಅಪಾರ್ಟ್‌ಮೆಂಟ್‌ಗಳು, ವಿಲ್ಲಾ ರೀತಿಯ ಮನೆ ಮಾತ್ರ ಇರುವ ಸ್ಥಳದಲ್ಲಿ ಚಿರತೆ ಕಾಣಿಸಿಕೊಂಡಿರುವುದು ಅಚ್ಚರಿ ಮೂಡಿಸಿದೆ. ಇದೀಗ ಚಿರತೆಯನ್ನು ಸೆರೆಹಿಡಿಯಲು ಬೋನು ಇರಿಸಲಾಗಿದೆ.

ಸುತ್ತಮುತ್ತ

ಶ್ರೀ ಜಾರಂದಾಯ ದೈವಸ್ಥಾನದಲ್ಲಿ ನೇಮ



ಮುಲ್ಕಿ: ಹಳೆಯಂಗಡಿ ರಾಜನ್ ದೈವ ಲಚ್ಚಿಲು ಸಂಕೇಸ ಶ್ರೀ ಜಾರಂದಾಯ ದೈವಸ್ಥಾನದಲ್ಲಿ ಜಾರಂದಾಯ ದೈವದ ನೇಮ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಅರ್ಚಕ ಹಾಗೂ ಆಡಳಿತ ಮೊಕ್ತೇಸರ ವೇ.ಮೂ. ರಂಗನಾಥ ಭಟ್ ನೇತೃತ್ವದಲ್ಲಿ ಸೋಮವಾರ ಪೂರ್ವಾಹ್ನ ಗಂಟೆ 10ಕ್ಕೆ ದೇವತಾ ಪ್ರಾರ್ಥನೆ, ದೈವ ದರ್ಶನ, ಉಗ್ರಾಣ ಮುಹೂರ್ತ, ಧ್ವಜಾರೋಹಣ, ರಾತ್ರಿ ದೀಪಾರಾಧನೆ ಬಲಿ ನಡೆಯಿತು. ಮಂಗಳವಾರ ಬೆಳಿಗ್ಗೆ ಗಂಟೆ 9 ಗಂಟೆಗೆ ಗಣಹೋಮ, ನವಕ ಕಲಶಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಪೂಜೆ ಪಲ್ಲಪೂಜೆ, ಗಂಟೆ 1 ರಿಂದ ಮಹಾ ಅನ್ನಸಂತರ್ಪಣೆ ನಡೆಯಿತು ರಾತ್ರಿ ಜಾರಂದಾಯ ದೈವದ ನೇಮೋತ್ಸವ, ಬಂಡಿ ಉತ್ಸವ,ಧ್ವಜಾವರೋಹಣ ಪ್ರಸಾದ ವಿತರಣೆ ನಡೆಯಿತು ಈ ಸಂದರ್ಭ ದೈವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು

ಮಾ.3ರಂದು: ಆಪರೇಷನ್ ಸಿಂಧೂರ ಹೀರೋಗೆ ಅಭಿನಂದನೆ

ಬಂಟ್ವಾಳ: ಬಿ.ವಿ. ಕಾರಂತ ರಂಗಭೂಮಿಕಾ ಟ್ರಸ್ಟ್ ಮಂಚಿ ಲಯನ್ಸ್ ಕ್ಲಬ್, ಕೊಳ್ನಾಡು, ಸಾಲೆತ್ತೂರು ಇದರ ವತಿಯಿಂದ ಆಪರೇಷನ್ ಸಿಂಧೂರದಲ್ಲಿ ಭಾಗವಹಿಸಿದ ವಸಂತ ಪೂಜಾರಿ ಹಟದಡ್ಕ ಇವರಿಗೆ ಅಭಿನಂದನಾ ಕಾರ್ಯಕ್ರಮ 'ಯೋಧಾಭಿನಂದನೆ' ಮಾ.3ಕ್ಕೆ ಅಪರಾಹ್ನ 3.30ರಿಂದ ಮಂಚಿ ನೂಜಿಬೈಲು ಅನುದಾನಿತ ಹಿ.ಪ್ರಾ.ಶಾಲೆಯಲ್ಲಿ ಜರಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಶಾಲಾ ಸಂಚಾಲಕ ನೂಜಿಬೈಲು ನಾರಾಯಣ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಳೆಮಾಪನ ಕೇಂದ್ರ ಸುಸ್ಥಿತಿಯಲ್ಲಿಡಲು ಪ್ರಭಾಕರ ಪ್ರಭು ಮನವಿ

ಬಂಟ್ವಾಳ: ಗ್ರಾಮ ಪಂಚಾಯತ್‌ನಲ್ಲಿರುವ ಮಳೆಮಾಪನ ಕೇಂದ್ರಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸಿದ್ದಕಟ್ಟೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ನಿ.ದ ಅಧ್ಯಕ್ಷ ಪ್ರಭಾಕರ ಪ್ರಭು ಅವರು ರಾಜ್ಯ ತೋಟಗಾರಿಕೆ ಸಚಿವರಿಗೆ ಲಿಖಿತ ಮನವಿ ಮಾಡಿದ್ದಾರೆ. 2024-25 ನೇ ಸಾಲಿಗೆ ಸಂಬಂಧಿಸಿದಂತೆ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯ ಪ್ರೀಮಿಯಂ ಪಾವತಿಸಿದ ರೈತರಿಗೆ ಬಿಡುಗಡೆಯಾದ ಪರಿಹಾರದಲ್ಲಿ ಗೊಂದಲಗಳಿದ್ದು,ಈ ಬಗ್ಗೆ ತೋಟಗಾರಿಕಾ ಇಲಾಖಾಧಿಕಾರಿಗಳು ಮತ್ತು ಟೆಂಡರ್ ವಹಿಸಿದ ಏಜೆನ್ಸಿಗಳಲ್ಲಿ ವಿಚಾರಿಸಿದಾಗ ಮಳೆ ಮಾಪನ ಕೇಂದ್ರಗಳಲ್ಲಿ ಬಿದ್ದಿರುವ ಮಳೆಯ ಪ್ರಮಾಣದಲ್ಲಿ ಪರಿಹಾರ ನೀಡಲಾಗಿದೆ ಎಂದು ಸ್ಪಷ್ಟನೆ ನೀಡುತ್ತಾರೆಯಾದರೂ ಹೆಚ್ಚಿನ ಗ್ರಾಮ ಪಂಚಾಯತ್ ಗಳಲ್ಲಿರುವ ಮಳೆ ಮಾಪನ ಕೇಂದ್ರಗಳು ಚಲಾವಣೆ ಇಲ್ಲದೇ ದುಸ್ಥಿತಿಯಲ್ಲಿದೆ ಎಂದು ಅವರು ಮನವಿಯಲ್ಲಿ ವಿವರಿಸಿದ್ದಾರೆ. ಕರಾವಳಿಯ ಕೆಲವೊಂದು ತಾಲೂಕುಗಳಲ್ಲಿ ರೈತರು ಪಾವತಿಸಿದ ಪ್ರೀಮಿಯಂಗಿಂತಲೂ ಕಡಿಮೆ ಪರಿಹಾರ ದೊರೆಯುತ್ತಿದೆ . ಇದರಿಂದಾಗಿ ಸಾವಿರಾರು ರೈತರಿಗೆ ಸಮರ್ಪಕ ಪರಿಹಾರ ದೊರಕದೇ ರೈತರು ಸರಕಾರದ ಅಸಮರ್ಪಕ ಧೋರಣೆಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ ಹಾಗೂ ಇದನ್ನೇ ನಂಬಿಕೊಂಡಿರುವ ರೈತರು ಕಂಗಲಾಗಿದ್ದಾರೆ .ಈ ಎಲ್ಲಾ ಹಿನ್ನಲೆಯಲ್ಲಿ ಪ್ರತಿ ಗ್ರಾಮ ಪಂಚಾಯತ್ ನಲ್ಲಿರುವ ಮಳೆ ಮಾಪನ ಕೇಂದ್ರಗಳನ್ನು ಪಂಚಾಯತ್ ಮಟ್ಟದ ಕಂದಾಯ ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸುಪರ್ಧಿಯಲ್ಲಿ ಪ್ರತಿ ತಿಂಗಳಿಗೊಮ್ಮೆ ಪರಿವೀಕ್ಷಣೆ ಮಾಡಿಸಿ ಸುಸ್ಥಿತಿಯಲ್ಲಿಡಲು ಅಗತ್ಯ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಎನ್‌ಎಂಸಿ ಸುವರ್ಣ ಮಹೋತ್ಸವ: ಅಷ್ಟ ಭಾಷೆಗಳ ಗೋಷ್ಠಿ

ಸುಳ್ಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ನೆಹರು ಮೆಮೋರಿಯಲ್ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಎನ್‌ಎಂಸಿ ಸುವರ್ಣ ಮಹೋತ್ಸವ ಸಂಭ್ರಮಾಚರಣೆ ಹಿನ್ನಲೆಯಲ್ಲಿ ಬುಧವಾರ ಗಡಿನಾಡು 'ಸುಳ್ಯ ಪರಿಸರದ ಭಾಷಾ ಪರಂಪರೆ' ಕುರಿತ ಒಂದು ದಿನದ ವಿಚಾರ ಗೋಷ್ಠಿಯಲ್ಲಿ ಅಷ್ಟ ಭಾಷೆಗಳ ಗೋಷ್ಠಿ ನಡೆಯಿತು. ಸುಳ್ಯ ಹಾಗೂ ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾತನಾಡುವ ಅರೆ ಭಾಷೆ ಕುರಿತು ಕವಯತ್ರಿ ಬರಹಗಾರ್ತಿ ಸ್ಮಿತಾ ಅಮೃತರಾಜ್, ಅವಿಭಜಿತ ಕರಾವಳಿ ಹಾಗೂ ರಾಷ್ಟ್ರದ ನಾನಾ ಭಾಗಗಳಲ್ಲಿ ನೆಲೆಸಿರುವ ಹಳೆಯದಾದ ಭಾಷೆಗಳಲ್ಲಿ ಒಂದಾದ ತುಳು ಕುರಿತಾಗಿ ಪೂವಪ್ಪ ಕಣಿಯೂರು, ಬರಹಗಾರ್ತಿ ಕೃಷಿಕೆ ಸಹನಾ ಕಾಂತಬೈಲು ಹವ್ಯಕ ಕನ್ನಡದ ಕುರಿತು ವಿಚಾರ ಮಂಡಿಸಿದರು. ಮಳೆಯಾಳಿ ಭಾಷೆಯ ಕುರಿತು ಬರಹಗಾರ ಡಾ. ಸುಂದರ ಕೇನಾಜೆ, ಬ್ಯಾರಿ ಭಾಷೆಯ ಕುರಿತಾಗಿ ಬರಹಗಾರ ಇಸ್ಮತ್ ಪಜೀರ್, ಕೊಂಕಣಿ ಕುರಿತು ಸುಳ್ಯ ಪಶು ವೈದ್ಯಧಿಕಾರಿ ಡಾ. ನಿತಿನ್ ಪ್ರಭು, ಭಾರತ ಶ್ರೀಲಂಕಾ ಒಪ್ಪಂದದಂತೆ ತಮಿಳು ಕಾರ್ಮಿಕರನ್ನು ಕರೆ ತಂದು ಇಂದು ಇಲ್ಲಿ ನೆಲೆಸಿರುವ ಎಲ್ಲಾ ಭಾಷೆಗಳಿಗೆ ಸಂಬಂಧ ಹೊಂದಿರುವ ಭಾಷೆಯಾಗಿರುವ ತಮಿಳು ಬಗ್ಗೆ ಡಾ. ಸೆಲ್ವರತ್ನಂ ಕಂದಡ್ಕ ವಿಚಾರ ಮಂಡಿಸಿದರು.

ಎನ್‌ಎಚ್ 66ರಲ್ಲಿ ಹೆಚ್ಚುತ್ತಿದೆ ಜೀವಹಾನಿ, ಅಪಘಾತ ಪ್ರಕರಣ | ಬೇಡಿಕೆ ಈಡೇರಿಕೆಗೆ ನಾಗರಿಕರಿಂದ ಸಮಿತಿ

ಡಿಪಿಆರ್‌ನಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಸೇರ್ಪಡೆಗೆ ಕೂಗು



ಮಂಗಳೂರು: ರಾಷ್ಟ್ರೀಯ ಹೆದ್ದಾರಿ 66ರ ಸುರತ್ಕಲ್‌ನಿಂದ ಮಂಗಳೂರು ನಡುವೆ ಪದೇ ಪದೇ ಅಪಘಾತಗಳು ಸಂಭವಿಸಿ ಪ್ರಯಾಣಿಕರು, ಪಾದಚಾರಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದು, ಇಲ್ಲಿ ಸರ್ವಿಸ್ ರಸ್ತೆ ನಿರ್ಮಿಸಲೇಬೇಕೆಂದು ಇದೀಗ ನಾಗರಿಕರು ಒಟ್ಟಾಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯ ಸುರತ್ಕಲ್ ನಿಂದ ಮಂಗಳೂರು ನಡುವೆ ಪ್ರತಿನಿತ್ಯ ಒಂದಿಲ್ಲೊಂದು ಅಪಘಾತಗಳು ನಡೆಯುತ್ತಲೇ ಇವೆ. ಹೆದ್ದಾರಿಯ ಅವ್ಯವಸ್ಥೆ, ಅಸಮರ್ಪಕ ನಿರ್ವಹಣೆಯಿಂದ ಅಮಾಯಕರು ಅಪಘಾತಕ್ಕೆ ಬಲಿಯಾಗುತ್ತಿದ್ದಾರೆ. ಸುರತ್ಕಲ್- ನಂತೂರು- ಬಿಸಿರೋಡ್ ನಡುವೆ ಹೆದ್ದಾರಿ ಅಭಿವೃದ್ಧಿಗೆ ಡಿಪಿಆರ್ ಪ್ರಕ್ರಿಯೆಗೆ ಅನುಮೋದನೆ ದೊರೆತಿದ್ದು, ಸರ್ವಿಸ್ ರಸ್ತೆ ನಿರ್ಮಾಣ ಡಿಪಿಆರ್‌ನಲ್ಲಿ ಸೇರ್ಪಡೆಯಾಗಬೇಕು ಎಂದು ಸ್ಥಳೀಯ ನಾಗರಿಕರು ಆಗ್ರಹಿಸಿದ್ದಾರೆ. ಇದಕ್ಕಾಗಿ ಸುರತ್ಕಲ್, ಹೊಸಬೆಟ್ಟು, ಕುಳಾಯಿ, ಬೈಕಂಪಾಡಿ ಪ್ರದೇಶದ ನಾಗರಿಕರು ಸಮಿತಿಗಳನ್ನು ರಚಿಸಿಕೊಂಡಿದ್ದು, ಈ ಸಂಬಂಧ ಹೋರಾಟ ನಡೆಸಲು ನಿರ್ಧರಿಸಿದ್ದಾರೆ.

ಹೋರಾಟಕ್ಕೆ ತೀರ್ಮಾನ

ಸ್ಥಳೀಯ ಸಾಮಾಜಿಕ ಕಾರ್ಯ ಕರ್ತರಾದ ಪುಷ್ಪರಾಜ್ ಕುಳಾಯಿ, ರಾಜ್‌ಮೋಹನ್ ರಾವ್, ಸತೀಶ್ ಸದಾನಂದ, ರಮೇಶ ಆಳಪೆ, ನವೀನ್ ಬೈಕಂಪಾಡಿ, ಭರತ್ ಶೆಟ್ಟಿ ಕುಳಾಯಿ ಮುಂತಾದವರ ನೇತೃತ್ವದಲ್ಲಿ ನಾಗರಿಕ ಸಮಿತಿ ರಚನೆಗೊಂಡಿದ್ದು ಸರ್ವಿಸ್ ರಸ್ತೆಗಾಗಿ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. 50ಕ್ಕೂ ಹೆಚ್ಚು ಸಂಘ ಸಂಸ್ಥೆಗಳು ನಾಗರಿಕ ಸಮಿತಿಗೆ ಸಹಯೋಗ ನೀಡಿವೆ. ಸುರತ್ಕಲ್‌ನಿಂದ ಬೈಕಂಪಾಡಿವರೆಗೆ ಎಂಆರ್‌ಪಿಎಲ್, ಎನ್‌ಎಂಪಿಎ, ಕುದುರೆಮುಖ ಕಂಪೆನಿ, ಬೈಕಂಪಾಡಿ ಕೈಗಾರಿಕಾ ಪ್ರದೇಶ ಇರುವುದರಿಂದ ಈ ಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನದ 24 ಗಂಟೆಯೂ ವಾಹನ ದಟ್ಟಣೆ ಇರುತ್ತದೆ. ಒಂದು ಅಂದಾಜಿನ ಪ್ರಕಾರ ಇಲ್ಲಿ ದಿನದ 24 ಗಂಟೆಯಲ್ಲಿ 40 ಸಾವಿರಕ್ಕೂ ಅಧಿಕ ವಾಹನಗಳು ಹಾದು ಹೋಗುತ್ತಿವೆ. ಸಂಚಾರ ದಟ್ಟಣೆ ಇಲ್ಲಿನ ನಿತ್ಯದ ಗೋಳು. ಭಾರಿ ಗಾತ್ರದ ವಾಹನಗಳು, ಬಸ್‌ಗಳು ಸಂಚರಿಸುವ ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು, ರಸ್ತೆ ದಾಟುವವರು ಅಪಾಯದ ಅಂಚಿನಲ್ಲೇ ಇರಬೇಕಾದ ಸ್ಥಿತಿಯಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಸರ್ವಿಸ್ ರಸ್ತೆ ಆಗಲೇಬೇಕು ಎಂಬುದು ಈ ಭಾಗದ ಸ್ಥಳೀಯರ ಹಲವು ವರ್ಷದ ಆಗ್ರಹವಾಗಿದೆ.

ಹೆದ್ದಾರಿ 66ರಲ್ಲಿ 2025ರಲ್ಲಿ ಒಟ್ಟು 34 ಮಂದಿ ಸಾವು!

ರಾಷ್ಟ್ರೀಯ ಹೆದ್ದಾರಿ 66ರ ಪಾವಂಜೆಯಿಂದ ಬೈಕಂಪಾಡಿವರೆಗೆ ಸಂಚಾರ ಉತ್ತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2025ರಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ 34 ಮಂದಿ ಮೃತಪಟ್ಟಿದ್ದು, 206 ಮಂದಿ ಗಾಯಗೊಂಡಿದ್ದಾರೆ. ಒಂದು ವರ್ಷದ ಅವಧಿಯಲ್ಲಿ 34 ಮಂದಿ ಈ ಪ್ರದೇಶದಲ್ಲಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಲು ಹೆದ್ದಾರಿಯ ಅವ್ಯವಸ್ಥೆಯೇ ಪ್ರಮುಖ ಕಾರಣವಾಗಿದ್ದು ಇಲ್ಲಿ ಸರ್ವಿಸ್ ರಸ್ತೆ ನಿರ್ಮಾಣಗೊಳ್ಳಬೇಕು ಎಂಬುದು ಸ್ಥಳೀಯರ ಒತ್ತಾಯ. ಈ ನಿಟ್ಟಿನಲ್ಲಿ ಇದೀಗ ಶತಪ್ರಯತ್ನ ನಡೆಸುತ್ತಿದ್ದಾರೆ.

ಸಂಸದರಿಗೆ ಮನವಿ

ಹೊಸಬೆಟ್ಟು ಕೋರ್ದಬ್ಬು ದೈವಸ್ಥಾನದಿಂದ ಬೈಕಂಪಾಡಿವರೆಗೆ ಹೆದ್ದಾರಿಯಲ್ಲಿ ಸರ್ವಿಸ್ ರಸ್ತೆ ಇಲ್ಲ. ಈ ಸಂಬಂಧ ಇದುವರೆಗೆ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು, ಡಿಸಿಗೆ ಮನವಿ ನೀಡಲಾಗಿದೆ. ಇದೀಗ ಹೆದ್ದಾರಿ ಅಭಿ ವೃದ್ಧಿಗೆ ಡಿಪಿಆರ್ ಆಗುತ್ತಿದ್ದು, ಸರ್ವಿಸ್ ರಸ್ತೆ ನಿರ್ಮಿಸಬೇಕೆಂದು ಹೆದ್ದಾರಿ ಪ್ರಾಧಿಕಾರದ ಬೆಂಗಳೂರಿನ ಪ್ರಾದೇಶಿಕ ಕಚೇರಿಗೆ ಮನವಿ ನೀಡಿದ್ದೇವೆ. ಸಂಸದರನ್ನು ಭೇಟಿ ಮಾಡಿ ಈ ಬಗ್ಗೆ ಒತ್ತಾಯಿಸುತ್ತೇವೆ. ಜೀವಹಾನಿ ತಡೆಗೆ ಸರ್ವಿಸ್ ರಸ್ತೆ ನಿರ್ಮಾಣ ಆಗಲೇಬೇಕು.

- ಪುಷ್ಪರಾಜ್ ಕುಳಾಯಿ, ಸಾಮಾಜಿಕ ಕಾರ್ಯಕರ್ತರು

ಎಂಆರ್‌ಪಿಎಲ್ ಅನುದಾನದ ನೀರಿನ ಓವರ್ ಟ್ಯಾಂಕ್ ಉದ್ಘಾಟನೆ



ಮುಲ್ಕಿ: ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಮೂಲ ಸೌಕರ್ಯ ಒದಗಿಸುವುದರ ಮೂಲಕ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಶಾಸಕ ಉಮಾನಾಥ ಕೋಟ್ಯಾನ್ ಹೇಳಿದರು

ಅವರು ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯ 10ನೇ ತೋಕೂರಿನ ಒಂದನೇ ವಾರ್ಡ್‌ನ ಹಿಂದೂ ಸ್ಥಾನಿ ಶಾಲೆ ಬಳಿ ಎಂಆರ್‌ಪಿಎಲ್‌ನ ಸಿಎಸ್ ಆರ್ ಅನುದಾನದಲ್ಲಿ 25 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಸಮಿತಿ 10ನೇ ತೋಕೂರು ಕ್ಲಸ್ಟರ್-1ರ ಕುಡಿಯುವ ನೀರಿನ 50,000 ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಉದ್ಘಾಟನೆ ನೆರವೇರಿಸಿ, ಮಾತನಾಡಿದರು

ಪಡುಪಣಂಬೂರು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಸುಧೀ ರ್, ಜಿ.ಪಂ. ಮಾಜಿ ಸದಸ್ಯ ವಿನೋದ್ ಬೊಳ್ಳೂರು, ನೀರು ಸರಬರಾಜು ಸಮಿತಿಯ ಅಧ್ಯಕ್ಷ ಪುರುಷೋತ್ತಮ ಕೋಟ್ಯಾನ್, ಕಾರ್ಯದರ್ಶಿ ದಾಮೋದರ್ ಶೆಟ್ಟಿ, ಕೋಶಾಧಿಕಾರಿ ಶೇಖರ ಶೆಟ್ಟಿಗಾರ್, ಸದಸ್ಯರಾದ ರಮೇಶ್ ದೇವಾಡಿಗ, ವಿನೋದ್ ಸುವರ್ಣ, ರಮೇಶ್ ಕಲ್ಲಾಪು, ಗೋಪಾಲ ಮೂಲ್ಯ ವಿಪುಲ ಶೆಟ್ಟಿಗಾರ್, ರತ್ನ ಭಂಡಾರಿ, ವಿಮಲಾ ಶೆಟ್ಟಿಗಾರ್, ಶ್ಯಾಮಲಾ ಭಟ್, ಗ್ರಾ.ಪಂ. ಮಾಜಿ ಅಧ್ಯಕ್ಷೆ ಕುಸುಮಾ ಚಂದ್ರಶೇಖರ್, ಉಪಾಧ್ಯಕ್ಷ ಹೇಮನಾಥ ಅಮೀನ್, ಮಾಜಿ ಸದಸ್ಯ ಪ್ರಮೀಳಾ ಡಿ. ಶೆಟ್ಟಿ ನಮಿತಾ, ಮೋಹನ್ ದಾಸ್ ತೋಕೂರು ಮತ್ತಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಬಳಿಕ ದೇಶದಲ್ಲಿ 254 ಭಾಷೆಗಳು ನಾಶ: ಡಾ. ಬಿಳಿಮಲೆ ಆತಂಕ



ಸುಳ್ಯ: ಸ್ವಾತಂತ್ರ್ಯ ಬಳಿಕ ದೇಶದಲ್ಲಿ 254 ಭಾಷೆಗಳು ನಾಶವಾಗಿದ್ದು ಮುಂದಿನ 30 ವರ್ಷಗಳಲ್ಲಿ 300 ಭಾಷೆಗಳು ದೇಶದಿಂದ ನಾಶವಾಗಲಿದೆ ಎಂಬ ವರದಿ ಇದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಆತಂಕ ವ್ಯಕ್ತಪಡಿಸಿದ್ದಾರೆ.

ಸುಳ್ಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ನೆಹರು ಮೆಮೋರಿಯಲ್ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಎನ್‌ಎಂಸಿ ಸುವರ್ಣ ಮಹೋತ್ಸವ ಸಂಭ್ರಮಾಚರಣೆ ಹಿನ್ನಲೆಯಲ್ಲಿ ಬುಧವಾರ ನಡೆದ ಗಡಿನಾಡು ಸುಳ್ಯ ಪರಿಸರದ ಭಾಷಾ ಪರಂಪರೆ ಕುರಿತ ಒಂದು ದಿನದ ವಿಚಾರ ಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಕನ್ನಡ ಶಾಲೆಗಳಲ್ಲಿ ಹಕ್ಕುಪತ್ರಗಳು ಇಲ್ಲದೇ ಇರುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದ ವೇಳೆಯಲ್ಲಿ ರಾಜ್ಯದ ಸುಮಾರು 19,700 ಶಾಲೆಗಳಲ್ಲಿ ಹಕ್ಕುಪತ್ರಗಳು ಇಲ್ಲದಿರುವುದು ಪತ್ತೆಯಾಗಿದ್ದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶನದಂತೆ ಆ ಬಳಿಕ ಸುಮಾರು 19,300 ಶಾಲೆಗಳಿಗೆ ಹಕ್ಕುಪತ್ರ ಕೊಡಿಸಲಾಗಿದೆ. ಶಾಲೆಗಳ ಆಸ್ತಿ ರಕ್ಷಿಸುವ, ಕನ್ನಡ ಶಾಲೆಗಳ ಉಳಿಸುವ ನಿಟ್ಟಿನಲ್ಲಿ ಶಾಲೆಗಳಲ್ಲಿ ಹಕ್ಕುಪತ್ರ ನೀಡುವ ಕಾರ್ಯ ಮಾಡಲಾಗಿದ್ದು, ಇನ್ನೂ 400 ಶಾಲೆಗಳಿಗೆ ಹಕ್ಕುಪತ್ರ ಆಗಬೇಕಾಗಿದೆ ಎಂದು ಅವರು ತಿಳಿಸಿದರು.

ಸ್ವಾತಂತ್ರ್ಯ ಬಳಿಕ ದೇಶದಲ್ಲಿ 254 ಭಾಷೆಗಳು ನಾಶವಾಗಿದೆ. ಮುಂದಿನ 30 ವರ್ಷಗಳಲ್ಲಿ 300 ಭಾಷೆಗಳು ದೇಶದಿಂದ ನಾಶವಾಗಲಿದೆ ಎಂಬ ವರದಿ ಇದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ನಾನು ಅಧ್ಯಕ್ಷನಾದ ಬಳಿಕ ರಾಜ್ಯದ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗಿದೆ ಎಂದರು. ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ ಮಾತನಾಡಿದರು. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಟಿ. ವಿಶ್ವನಾಥ ಅಧ್ಯಕ್ಷತೆ ವಹಿಸಿದ್ದರು. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಎನ್‌ಎಂಸಿ ಆಡಳಿತಾಧಿಕಾರಿ ಚಂದ್ರಶೇಖರ ಪೇರಾಲು ಇದ್ದರು. ಪ್ರಾಂಶುಪಾಲ ರುದ್ರಕುಮಾರ್ ಎಂ.ಎಂ. ಸ್ವಾಗತಿಸಿ, ಹಿರಿಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಮಧುರ ಎಂ.ಆರ್. ವಂದಿಸಿದರು. ಉಪನ್ಯಾಸಕಿ ಅನುರಾಧ ಕುರುಂಜಿ ನಿರ್ವಹಿಸಿದರು.

ಹನುಮಗಿರಿ ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವ: ಸರ್ವಗ್ರಾಮ ಭಕ್ತರ ಸಮಾಲೋಚನಾ ಸಭೆ



ಪುತ್ತೂರು: ನಮ್ಮ ಕಾರ್ಯಕ್ರಮ ಎಂಬ ಭಾವನೆಯೊಂದಿಗೆ ಎಲ್ಲರೂ ಸೇರಿಕೊಂಡು ಕೆಲಸ ಮಾಡುತ್ತಿರುವುದರಿಂದ ಹನುಮಗಿರಿಯ ಬ್ರಹ್ಮಕಲಶೋತ್ಸವ ಯಶಸ್ವಿಯಾಗಿ ನಡೆದು ಇತಿಹಾಸ ಸೃಷ್ಟಿಸಲಿದೆ. ಜಾತ್ರೆ, ದೈವಗಳ ನೇಮ, ನಾಗಾರಾಧನೆ, ನಾಗಮಂಡಲ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಹೇಗೆ ನಡೆಸಬೇಕೆಂಬುವುದು ಜಿಲ್ಲೆಯ ಜನತೆಗೆ ಚೆನ್ನಾಗಿ ಗೊತ್ತಿದೆ ಎಂದು ಈಶ್ವರಮಂಗಲ ಹನುಮಗಿರಿ ಕ್ಷೇತ್ರ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಹೇಳಿದರು.

ಹನುಮಗಿರಿಯ ವೈದೇಹಿ ಸಭಾಂಗಣದಲ್ಲಿ ಹನುಮಗಿರಿ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ನಡೆದ ಸರ್ವಗ್ರಾಮ ಭಕ್ತರ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಪದೀಕ್ಷೆ, ನಾರಿಕೇಳ ಸಮರ್ಪಣೆ

ಕೋಟಿ ಶ್ರೀರಾಮ ತಾರಕ ಮಹಾಯಜ್ಞದ ಜಪದೀಕ್ಷೆ ಹಾಗೂ ಲಕ್ಷೋತ್ತರ ನಾರಿಕೇಳ ಸಮರ್ಪಣಾ ಕಾರ್ಯಕ್ರಮ ಮಾ.2ರಂದು ಕ್ಷೇತ್ರದಲ್ಲಿ ನಡೆಯಲಿದೆ. ಅಂದು ಪಾಲ್ಗೊಳ್ಳಲು ಸಾಧ್ಯವಾಗದ ಭಕ್ತರು ಬೇರೆ ದಿನಗಳಲ್ಲಿಯೂ ರಾಮ ಜಪದೀಕ್ಷೆ ಸ್ವೀಕರಿಸಬಹುದು. ರಾಮ ಜಪದೀಕ್ಷೆಗೆ ಕಡ್ಡಾಯ ದಿನವಿಲ್ಲ, ಯಾವುದೋ ಸೂತಕ ಎಂಬುವುದೂ ಇಲ್ಲ ಎಂದು ತಿಳಿಸಿದ ಅವರು, ಕೋಟಿ ಶ್ರೀರಾಮ ತಾರಕ ಮಹಾಯಜ್ಞದ ದಿನದಂದು ಅಖಂಡ ಭಜನಾ ಕಾರ್ಯಕ್ರಮ ನಡೆಸುವ ಕುರಿತು ಮುಂದೆ ನಿರ್ಧರಿಸಲಾಗುವುದು ಎಂದರು.

ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ ಮಾತನಾಡಿ, ಇಂದು ವಿಭಾಗಾವಾರು ಬೈಠಕ್ ನಡೆಸಿ ಎಲ್ಲರ ಅಭಿಪ್ರಾಯಗಳನ್ನು ಪಡೆಯಲಾಗಿದೆ. ಇಷ್ಟರ ತನಕ ಆಗದ ರೀತಿಯಲ್ಲಿ ಬ್ರಹ್ಮಕಲಶೋತ್ಸವ, ಕೋಟಿ ಶ್ರೀರಾಮ ತಾರಕ ಮಹಾಯಜ್ಞ, ಲಕ್ಷೋತ್ತರ ನಾರಿಕೇಳ ಸಮರ್ಪಣಾ ಕಾರ್ಯಕ್ರಮಗಳು ನಡೆಯಲಿದ್ದು, ಹನುಮಗಿರಿಯ ಬ್ರಹ್ಮಕಲಶೋತ್ಸವ ಹೊಸ ಇತಿಹಾಸ ಸೃಷ್ಟಿಸಲಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿಯ ಪ್ರಮುಖರಾದ ಸಾಜ ರಾಧಾಕೃಷ್ಣ ಆಳ್ವ, ಮುರಳೀಕೃಷ್ಣ ಹಸಂತಡ್ಕ, ಸೀತಾರಾಮ ರೈ ಕೆದಂಬಾಡಿಗುತ್ತು, ಅರುಣ್ ಕುಮಾರ್ ಪುತ್ತಿಲ, ವಿದ್ಯಾ ಆರ್. ಗೌರಿ, ಪರಮೇಶ್ವರಿ ಭಟ್ ಅವರು ಆಯಾ ವಿಭಾಗದಲ್ಲಿ ನಡೆದ ಬೈಠಕ್‌ನಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ತಿಳಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಪ್ರಮುಖರಾದ ರವಿಕಿರಣ್ ಶೆಟ್ಟಿ ಬೆದ್ರಾಡಿ, ಸುಬ್ಬಪ್ಪ ಪಾಟಾಳಿ, ನಹುಷಾ ಭಟ್, ಪ್ರವೀಣ್ ಸರಳಾಯ, ಸವಿತಾ ರೈ, ಕ್ಷೇತ್ರದ ಧರ್ಮದರ್ಶಿಗಳಾದ ಶಿವರಾಮ್ ಪಿ., ಶಿವರಾಮ ಶರ್ಮ ಕತ್ರಿಬೈಲು ಮತ್ತಿತರರಿದ್ದರು. ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ ರೆಂಜ ವಂದಿಸಿ, ಸಾಮಾಜಿಕ ಜಾಲತಾಣ ಸಮಿತಿಯ ಹರಿಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

ಪ್ರಿಯದರ್ಶಿನಿ ಸೊಸೈಟಿಯಿಂದ ಡಾ. ಎಂಎನ್‌ಆರ್‌ಗೆ ಶುಭಹಾರೈಕೆ



ಹಳೆಯಂಗಡಿ: ಕಳೆದು 45 ವರ್ಷಗಳಿಂದ ಸಹಕಾರಿ ಸಂಘದಲ್ಲಿ ನಾನು ಸಾಧನೆ ಮಾಡಲು ಹೆಜ್ಜೆ ಹೆಜ್ಜೆಗೂ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಹಸ್ರ ಸಹಕಾರಿಗಳು ನೀಡಿದ ಪ್ರೋತ್ಸಾಹ ಮತ್ತು ಬೆಂಬಲ ಎಂದೂ ಮರೆಯುವಂತಿಲ್ಲ, ಇಂದು 77ನೇ ಜನ್ಮ ದಿನಾಚರಣೆಯನ್ನು ಸರಳವಾಗಿ ಆಚರಿಸಬೇಕೆಂಬ ನಿಟ್ಟಿನಲ್ಲಿ ಸಮಿತಿಯು ಕಾರ್ಯಕ್ರಮವು ಆಯೋಜನೆಗೊಂಡಿದ್ದು ಆಗಮಿಸಿದ ಎಲ್ಲಾ ಸಹಕಾರಿಗಳಿಗೂ ಕೃತಜ್ಞತೆ ಸಲ್ಲಿಸುತ್ತಿದ್ದೇನೆ ಎಂದು ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಹೇಳಿದರು.

ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿಯ ಪರವಾಗಿ ಅಧ್ಯಕ್ಷ ವಸಂತ ಬರ್ನಾಡ್ ರವರ ಗೌರವ ಸ್ವೀಕರಿಸಿ ಮಾತನಾಡಿದರು. ಈ ಸಂದರ್ಭ ಸೊಸೈಟಿ ಸಿಇಒ ಸುದರ್ಶನ್ ಪಂಜ, ಸಿಬ್ಬಂದಿ ಪ್ರತೀಕ್ ಜೊತೆಯಲ್ಲಿದ್ದರು.

ಬಂಟ್ವಾಳ: ಕಾರಾಂಬಲ್ಲೆ-ಬಂಟ್ರಿಂಜಾ ಸರ್ವಋತು ರಸ್ತೆಯ ಲೋಕಾರ್ಪಣೆ



ಬಂಟ್ವಾಳ: ಶಾಸಕ ರಾಜೇಶ್ ನಾಕ್ ಅವರ ಅನುದಾನದಿಂದ ನಿರ್ಮಾಣಗೊಂಡ ಕಾರಾಂಬಲ್ಲೆ -ಬಂಟ್ರಿಂಜಾ 'ಶ್ರೀ ಉಳ್ಳಾಲ್ತಿ ಮಾಡ' ಸರ್ವಋತು ರಸ್ತೆಯನ್ನು ಬುಧವಾರ ಲೋಕಾರ್ಪಣೆ ಮಾಡಲಾಯಿತು.

ಉಳ್ಳಾಲ್ತಿ ದೈವಸ್ಥಾನದ ಆಡಳಿತ ಮುಕ್ತೇಸರ ಮೋಹನ್ ಪೈ, ಕರಿಂಕ ದೇವಾಲಯದ ಆಡಳಿತ ಮುಕ್ತೇಸರ ನರೇಂದ್ರ ರೈ, ಬಿಜೆಪಿ ಜಿಲ್ಲಾ ವಕ್ತಾರ ಮಾಧವ ಮಾವೆ ರಸ್ತೆಯನ್ನು ಉದ್ಘಾಟಿಸಿದರು. ಎಂ.ಪಿ. ಪೈ ಮತ್ತು ರಾಮಕೃಷ್ಣ ರೈ ಅವರು ಈ ರಸ್ತೆಗೆ ಜಮೀನು ಒದಗಿಸಿರುವುದನ್ನು ಈ ಸಂದರ್ಭ ಸ್ಮರಿಸಿಲಾಯಿತು. ತುಂಬೆಕೋಡಿ ಬಾಲಕೃಷ್ಣಶೆಟ್ಟಿ, ಮೋನಪ್ಪ ಗೌಡ ತಾರಿಪಡ್ಪು, ನಾರಾಯಣ ಶೆಟ್ಟಿ ಪುಣ್ಕೇದಡಿ, ಮಂಡಲ ಕಾರ್ಯದರ್ಶಿ ಸನತ್ ಕುಮಾರ್ ರೈ, ಬಿಜೆಪಿ ಮಾಣಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಆರವಿಂದ್ ರೈ ಮುರ್ಜೆಬೆಟ್ಟು ಪ್ರಧಾನ ಕಾರ್ಯದರ್ಶಿ ನಾಗೇಶ್ ಭಂಡಾರಿ, ಅನಂತಾಡಿ ಗ್ರಾ.ಪಂ. ಅಧ್ಯಕ್ಷೆ ಸುಜಾತಾ, ಉಪಾಧ್ಯಕ್ಷೆ ಸಂಧ್ಯಾ, ನಿಕಟಪೂರ್ವ ಪಂ. ಅಧ್ಯಕ್ಷ ಗಣೇಶ್ ಬಂಟ್ರಿಂಜಾ,ಉಪಾಧ್ಯಕ್ಷ ಕುಸುಮಾಧರ, ಮಾಜಿ ತಾ.ಪಂ. ಸದಸ್ಯೆ ಗೀತಾ, ಶಕ್ತಿ ಕೇಂದ್ರ ಪ್ರಮುಖ್ ಮಹಾಬಲ ಪೂಜಾರಿ, ಬೂತ್ ಅಧ್ಯಕ್ಷ ರಮೇಶ್ ಗೌಡ, ನಾರಾಯಣ ಗೌಡ, ಕಾರ್ಯದರ್ಶಿ ಅಶೋಕ್, ಕೇಶವ ಕಿದೆನಾರ್, ಶಶಿಕಾಂತ್ ಶೆಟ್ಟಿ ನವೀನ್ ಶೆಟ್ಟಿ ಪುಣ್ಕೇದಡಿ, ಸೊಸೈಟಿ ಉಪಾಧ್ಯಕ್ಷ ತನಿಯಪ್ಪ ಗೌಡ, ನಿರ್ದೇಶಕ ಶೆಕಟೇಶ್ ಕೋಟ್ಯಾನ್, ಕಿರಣ್ ಪೂಜಾರಿ, ಜಯಂತಿ, ಪದ್ಮಾವತಿ ಶೋಭಾ, ಪ್ರೇಮ, ರಮೇಶ್ ಪೋಯ್ಯ, ವಂದನಾ, ಅರವಿಂದ್ ಕೊಂಡೆ, ಸಂಜೀವ ಮಡಿವಾಳ, ಕಿರಣ್ ಬಂಟ್ರಿಂಜ ತಿಮ್ಮಪ್ಪ ಗೌಡ ನಿತಿನ್ ರೈ, ರಾಮಕೃಷ್ಣ ಗೌಡ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಸಹಕರಿಸಿದ ವೆಂಕಪ್ಪ ಗೌಡ, ದಯಾನಂದ ಮಡಿವಾಳ ಸುಮತಿ ಮಡಿವಾಲ್, ಬಾಲಕೃಷ್ಣ ಮಡಿವಾಳ್ ಅವರನ್ನು ಗೌರವಿಸಲಾಯಿತು.



ಕಟೀಲು ದೇಗುಲದ ನಂದಿನಿ ನದಿಯ ಕುದ್ರುವಿನಲ್ಲಿ ಮಾ.1ರಂದು ನಡೆಯಲಿರುವ ಮೂಲ್ಕಿ ತಾಲೂಕು 3ನೆಯ ಕನ್ನಡ ಸಾಹಿತ್ಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರಂಗನಟ ಕೃಷ್ಣಮೂರ್ತಿ ಕವತ್ತಾರು ಅವರಿಗೆ ಆಮಂತ್ರಣ ನೀಡಿ ಆಹ್ವಾನಿಸಲಾಯಿತು. ರಾಮಮೂರ್ತಿ ಕವತ್ತಾರು, ಕಸಾಪದ ವೀಣಾ ಶಶಿಧರ, ದೇವದಾಸ ಮಲ್ಯ, ಕೃಷ್ಣರಾಜ ಭಟ್, ಮಾಧವ ಕೆರೆಕಾಡು, ಜಯಂತ ಸುವರ್ಣ, ಮಿಥುನ ಕೊಡೆತ್ತೂರು ಮತ್ತಿತರರಿದ್ದರು.



ಕ್ಯಾಂಪ್ಕೋ ಸಂಸ್ಥೆ ವತಿಯಿಂದ ಸಾಂತ್ವನ ಯೋಜನೆಯಡಿ ಅಡ್ಯನಡ್ಕ ಶಾಖೆಯ ಸಕ್ರಿಯ ಸದಸ್ಯ ರಾಮಚಂದ್ರ ಮಣಿಯಾಣಿ ಸಾರಡ್ಕ ಅವರ ಹೃದಯದ ಆಂಜಿಯೋಪ್ಲಾಸ್ಟಿ ಚಿಕಿತ್ಸೆಗಾಗಿ ರೂ.50 ಸಾವಿರ ಸಹಾಯಧನವನ್ನು ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕ ವೆಂಕಟರಮಣ ಭಟ್ ವೈ. ಅವರು ಬುಧವಾರ ಅಡ್ಯನಡ್ಕ ಶಾಖೆಯಲ್ಲಿ ಹಸ್ತಾಂತರಿಸಿದರು. ಪುತ್ತೂರು ಪ್ರಾಂತೀಯ ಸೀನಿಯರ್ ಮ್ಯಾನೇಜರ್ ಪ್ರಕಾಶ ಕುಮಾರ್ ಶೆಟ್ಟಿ, ಅಡ್ಯನಡ್ಕ ಶಾಖಾ ವ್ಯವಸ್ಥಾಪಕ ತಾರನಾಥ ಬಂಗೇರ ಮತ್ತು ಜಿ. ಗೋಬಿನ್ ಹಾಗೂ ಸಂಧ್ಯಾ ಲಕ್ಷ್ಮೀ ಉಪಸ್ಥಿತರಿದ್ದರು.

ಸುಳ್ಯ ಸಿಎ ಬ್ಯಾಂಕ್ ಗ್ರಾಹಕರಿಗೆ ಕೃಷಿಕರಿಗೆ ನೂತನ ಓವರ್ ಡ್ರಾಫ್ಟ್ ಸಾಲ, ಆ್ಯಪ್‌ಗಳ ಬಿಡುಗಡೆ ಕಾರ್ಯಕ್ರಮ

ಡಿಜಿಟಲ್ ಯುಗದಲ್ಲಿ ಸಹಕಾರಿ ಸಂಸ್ಥೆಗಳು ಕೂಡ ಡಿಜಿಟಲೀಕರಣ: ಸದಾಶಿವ



ಸುಳ್ಯ: ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನೂತನವಾಗಿ ಕೃಷಿಕರಿಗೆ ಓವರ್ ಡ್ರಾಫ್ಟ್ ಸಾಲ ನೀಡಿ ಜಿಲ್ಲೆಯಲ್ಲಿ ಪ್ರಥಮವಾಗಿ ಚಾಲನೆ ನೀಡಿದ ಸಹಕಾರಿ ಸಂಘ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಇದು ರೈತರಿಗೆ ವರದಾನವಗಲಿದ್ದು, ಜಿಲ್ಲೆಯಲ್ಲೇ ಮಾದರಿ ಸೊಸೈಟಿಯಾಗಿದೆ ಎಂದು ಎಂ.ಬಿ ಫೌಂಡೇಶನ್ ಅಧ್ಯಕ್ಷ ಎಂ.ಬಿ. ಸದಾಶಿವ ಹೇಳಿದರು.

ಅವರು ಬುಧವಾರ ಸುಳ್ಯ ಸಿಎ ಬ್ಯಾಂಕ್ ಗ್ರಾಹಕರಿಗೆ ಕೃಷಿಕರಿಗೆ ನೂತನ ಓವರ್ ಡ್ರಾಫ್ಟ್ ಸಾಲ ಹಾಗೂ ಆ್ಯಪ್ ಗಳ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ, ಜಿಲ್ಲೆಯಲ್ಲಿ ಪ್ರಥಮವಾಗಿ ಇಂತಹ ಯೋಜನೆ ಜಾರಿಮಾಡಿದ್ದು ಇದರ ಸದುಪಯೋಗವನ್ನು ಪ್ರತಿಯೊಬ್ಬ ಸದಸ್ಯರು ಪಡೆದು ತಮ್ಮ ಹಾಗೂ ಸಂಸ್ಥೆಯ ಬೆಳವಣಿಗೆಗೆ ಪೂರಕವಾಗಲಿ ಎಂದು ಹೇಳಿದರು.

ಯಂತ್ರೋಪಕರಣ ಬಿಡುಗಡೆ

ಇದೇ ಸಂದರ್ಭದಲ್ಲಿ ಅಡಿಕೆ ಕೃಷಿಗೆ ಔಷಧ ಸಿಂಪಡಣೆಗೆ ದೋಟಿ ಮತ್ತು ಯಂತ್ರೋಪಕರಣ ಗಳನ್ನು ಬಿಡುಗಡೆಗೊಳಿಸಲಾಯಿತು. ಭಾರತವು ಇಂದು ಡಿಜಿಟಲ್ ಯುಗದಲ್ಲಿ ಸಹಕಾರಿ ಸಂಸ್ಥೆಗಳು ಕೂಡ ಡಿಜಿಟಲೀಕರಣ ಆಗುತ್ತ ಇರುವುದು ಬಹಳ ಸಂತೋಷದ ವಿಚಾರವಾಗಿದ್ದು, ಮುಂದೆ ನಮ್ಮ ಸಂಸ್ಥೆಯಲ್ಲಿಯು ಸಂಪೂರ್ಣ ಡಿಜಿಟಲ್ ಮೂಲಕ ಪೂರ್ಣಪ್ರಮಾಣದಲ್ಲಿ ಡಿಜಿಟಲೀಕರಣಕ್ಕೆ ಒತ್ತು ನೀಡಲಾಗುವುದು ಜೊತೆಗೆ ಕೃಷಿಕರ ಓವರ್ ಡ್ರಾಫ್ಟ್ ಸರಳ ರೀತಿಯಲ್ಲಿ ದಾಖಲೆ ಪತ್ರಗಳ ಮೂಲಕ ಸಾಲ ಸೌಲಭ್ಯಗಳನ್ನು ನೀಡಲಾಗುವುದು ಸಭೆಯ ಅಧ್ಯಕ್ಷತೆ ವಹಿಸಿದ್ದು ಸಂಘದ ಅಧ್ಯಕ್ಷ ವಿಕ್ರಂ ಎ.ವಿ ಹೇಳಿದರು. ಸಭಾ ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ಚಂದ್ರಶೇಖರ ನಡುಮನೆ, ಮುಖ್ಯ ಕಾರ್ಯನಿರ್ವಣಾಧಿಕಾರಿ ಸುದರ್ಶನ್ ಎಸ್.ಪಿ., ಬಾಲಕೃಷ್ಣ ಭಟ್, ಪಿ.ಕೆ ಉಮೇಶ್, ಎ.ಟಿ ಕುಸುಮಾಧರ, ವಿನಯ ಕುಮಾರ್ ಕಂದಡ್ಕ, ಬಾಸ್ಕರ ರಾವ್ ಬಯಂಬು, ಜಯರಾಮ ಮುಂಡೋಳಿ ಮೂಲೆ, ಎಸ್.ಎಸ್. ಮನ್ಮಥ, ಪ್ರಥಮ ಸಾಲಗಾರ ಮಣಿಕಂಠ ಹಾಸ್ಪರೆ ಮತ್ತು ಬಾಲಕೃಷ್ಣ ನೆಡ್ಚಿಲ್ ಮೊದಲ ಸಾಲದ ಪತ್ರವನ್ನು ನೀಡಿದರು. ಈ ಸಂದರ್ಭ ನಿರ್ದೇಶಕ ರಾಮಚಂದ್ರ ಎನ್ . ಎ, ಪ್ರಬೋದ್ ಶೆಟ್ಟಿ ಮೇನಾಲ, ವೆಂಕಟ್ರಮಣ ಎಂ., ಶಿವರಾಮ ಕೆ., ಕೇಶವ ಸಿ.ಎ., ವಾಸುದೇವ ನಾಯಕ್ ಪಿ , ನವ್ಯ ಎನ್.ಸಿ., ಹರಿಣಾಕ್ಷಿ ಬೇಲ್ಯ , ಚಂದ್ರಶೇಖರ ದೊಡ್ಡೇರಿ ಇದ್ದರು.ಉಪಾಧ್ಯಕ್ಷ ಚಂದ್ರಶೇಖರ ನಡುಮನೆ ಸ್ವಾಗತಿಸಿ ಬಾಲಗೋಪಾಲ ಎಂ. ವಂದಿಸಿ ಹೇಮಂತ್ ಕಂದಡ್ಕ ನಿರೂಪಿಸಿದರು.

ಸುಳ್ಯ ಸಿಎ ಬ್ಯಾಂಕ್‌ನ ವಿಶಿಷ್ಟ ಯೋಜನೆಗಳು

ಸಹಕಾರಿ ಆ್ಯಪ್, ಕೃಷಿಕರು ಮತ್ತು ವ್ಯಾಪಾರಸ್ಥರಿಗೆ ಓವರ್ ಡ್ರಾಫ್ಟ್ ಸಾಲ, ಚಿನ್ನ ಖರೀದಿ ಸಾಲ, ರಿಯಾಯಿತಿ ಬಡ್ಡಿದರದಲ್ಲಿ ರಸಗೊಬ್ಬರ ಖರೀದಿ ಸಾಲ ಜೊತೆಗೆ ಕೃಷಿಕರು ಅಡಿಕೆ ಬೆಳೆಗಳಿಗೆ ಔಷಧಿ ಸಿಂಪಡಿಸುವ ಯಂತ್ರ ಮತ್ತು ಕಾರ್ಬನ್ ದೋಟಿ ವ್ಯವಸ್ಥೆಗೆ ಚಾಲನೆ ನೀಡಲಾಯಿತು.

ಸುತ್ತ ಮುತ್ತ

ಸವಿತಾ ಮಾಧವ ಶಾಸ್ತ್ರಿ ಮಹಿಳಾ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷೆ

ಕೋಟ: ಕಾರಂತ ಪ್ರತಿಷ್ಠಾನ ಕೋಟ,ಕೋಟತಟ್ಟು ಗ್ರಾಮ ಪಂಚಾಯತ್, ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘ, ಕೋಟ, ನೆನಪು ಮತ್ತು ಉಸಿರು ಕೋಟ ಸಹಯೋಗದೊಂದಿಗೆ ವಿಶ್ವಮಹಿಳಾ ದಿನಾಚರಣೆ ಅಂಗವಾಗಿ ಮಾ.15ರಂದು ಅಪರಾಹ್ನ ಕೋಟದ ಕಾರಂತ ಥಿಮ್ ಪಾರ್ಕ್‌ನಲ್ಲಿ ನಡೆಯುವ ಉಡುಪಿ ಜಿಲ್ಲಾ ಮಟ್ಟದ 4ನೇ ಮಹಿಳಾ ಕಾಲಮಿತಿ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸವಿತಾ ಮಾಧವ ಶಾಸ್ತ್ರಿಯನ್ನು ಆಯ್ಕೆ ಮಾಡಲಾಗಿದೆ. ಮೂರು ಕಥಾ ಸಂಕಲನ, ಕಥೆಗಳು ಹಾಸ್ಯ ಬರಹಗಳು ನಾಡಿನ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಹಲವಾರು ರಾಜ್ಯ ಮಟ್ಟದ ಸಾಹಿತ್ಯಿಕ ಸ್ಪರ್ಧೆಯಲ್ಲಿ ಪುರಸ್ಕಾರಗಳಿಸಿದ್ದಾರೆ. ಅವರ ಕಥೆ ತೆಲುಗಿಗೆ ಅನುವಾದಗೊಂಡಿದ್ದು, ಅವರ ಕಥೆಯನ್ನು ಕೆನಡಾ ದೇಶದ ತಂಡ ಕಿರುಚಿತ್ರ ನಿರ್ಮಿಸುತ್ತಿದ್ದಾರೆ. ಪತಿ ಉದ್ಯಮಿ ಮಾಧವ ಶಾಸ್ತ್ರಿ, ಮಕ್ಕಳು ವೈಭವಿ, ಸಾನ್ವಿ ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಆನಂದ ಸಿ ಕುಂದರ್, ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ 'ಸೇವಾ ಭೂಷಣ ಪ್ರಶಸ್ತಿ' ಪ್ರದಾನ

ಉಡುಪಿ: ಯಕ್ಷಗಾನ ಕಲಾರಂಗದಲ್ಲಿ ಇಪ್ಪತ್ತೇಳು ವರ್ಷ ಕೋಶಾಧಿಕಾರಿಗಳಾಗಿ ಸೇವೆಸಲ್ಲಿಸಿದ್ದ ಎಸ್. ಗೋಪಾಲಕೃಷ್ಣ ಹಾಗೂ ಕಾರ್ಯಕರ್ತರಾಗಿ, ಜೊತೆಕಾರ್ಯದರ್ಶಿಯಾಗಿ 35 ವರ್ಷಗಳ ಕಾಲ ಸಂಸ್ಥೆಯ ಉತ್ಕರ್ಷಕ್ಕೆ ಕಾರಣರಾಗಿದ್ದ ಎಚ್. ಎನ್. ಶೃಂಗೇಶ್ವರ ಇವರೀರ್ವರ ನೆನಪಿನಲ್ಲಿ ಸಂಸ್ಥೆಯು



ನೀಡುವ ಸೇವಾಭೂಷಣ ಪ್ರಶಸ್ತಿ ಪ್ರಧಾನ ಫೆ.27ರಂದು ಸಂಜೆ 5 ಗಂಟೆಗೆ ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಜರಗಲಿದೆ. ನಿವೃತ್ತ ಬ್ಯಾಂಕ್ ಅಧಿಕಾರಿ, ಸಮಾಜ ಸೇವಕ, ಹಿರಿಯ ಲೇಖಕ ಯು. ಶ್ರೀಧರ್ ಇವರಿಗೆ ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್ ಇವರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಡಾ. ಎ. ವಿ. ಬಾಳಿಗಾ ಆಸ್ಪತ್ರೆಯ ಮನೋವೈದ್ಯರಾದ ಡಾ. ವಿರೂಪಾಕ್ಷ ದೇವರಮನೆ ಅವರು ಅಭಿನಂದನಾ ಮಾತುಗಳನ್ನು ಆಡಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಹಾಗೂ ಕಾರ್ಯದರ್ಶಿ ಮುರಲಿ ಕಡೆಕಾರ್ ತಿಳಿಸಿದೆ.

ವಿದ್ಯುತ್ ವ್ಯತ್ಯಯ

ಶಿರ್ವ: ಮಣಿಪಾಲದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.26ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಶಿರ್ವ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಬಂಟಕಲ್ಲು, ಶಂಕರಪುರ, ಶಿರ್ವ ಹಾಗೂ ಮುದರಂಗಡಿ, ಕಾಪು, ಕಳತ್ತೂರು, ಕುರ್ಕಾಲು, ಮಟ್ಟಾರು ಫೀಡರ್ ಮಾರ್ಗದ ಪಾಂಗಳ, ಮೂಡಬೆಟ್ಟು, ಬಂಟಕಲ್ಲು, ಶಂಕರಪುರ, ಕುಂಜಾರುಗಿರಿ, ಸಾಲ್ಮರ, ಕುರ್ಕಾಲು, ಪಾಜೈ, ಇನ್ನಂಜೆ, ಪಡುಬೆಳ್ಳೆ, ಶಿರ್ವ, ಮಟ್ಟಾರು, ಪದವು ಪಂಜಿಮಾರು, ಪಿಲಾರುಖಾನ, ಪೆರ್ನಾಲು, ಕುತ್ಯಾರು, ಪುಂಚಲಕಾಡು, ಕಳತ್ತೂರು, ಚಂದ್ರನಗರ, ಕಲ್ಯ ಪದವು, ಅಬ್ಬೆಟ್ಟು, ಹೇರೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಮೊದಲನೇ ಪುಟದಿಂದ

ಮಳೆಯ ಕಳೆ!

ಕಲ್ಮಡ್ಕ ಕುಕ್ಕುಜಡ್ಕ, ಬಾಳಿಲ, ದೊಡ್ಡತೋಟ, ಪಂಜ, ಸಂಪಾಜೆ, ಜಾಲ್ಸೂರು ಸೇರಿದಂತೆ ವಿವಿಧೆಡೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ಉಪ್ಪಿನಂಗಡಿ ಪರಿಸರದಲ್ಲಿಯೂ ಉತ್ತಮ ಮಳೆಯಾಗಿದ್ದು, ಸುಡು ಬಿಸಿಲಿಗೆ ಕೆಂಡದಂತಾಗಿದ್ದ ವಾತಾವರಣಕ್ಕೆ ತುಸು ತಂಪೆರೆದಿದೆ. ಬೆಳ್ತಂಗಡಿ ತಾಲೂಕಿನ ಬಹುತೇಕ ಕಡೆಗಳಲ್ಲಿ ಮಧ್ಯಾಹ್ನದ ವೇಳೆ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ಸಿಡಿಲು,ಗಾಳಿಯೊಂದಿಗೆ ಸಾಧಾರಣದಿಂದ ಉತ್ತಮ ಮಳೆ ಸುರಿದಿದೆ. ಬೆಳಿಗ್ಗೆಯಿಂದ ಬಿಸಿಲಿನೊಂದಿಗೆ ಕೊಂಚ ಮೋಡ ಕವಿದ ವಾತಾವರಣವಿತ್ತು. ಹಠಾತ್ ಸುರಿದ ಈ ಮಳೆಯಿಂದಾಗಿ ವಾತಾವರಣದಲ್ಲಿ ಕೊಂಚ ತಂಪಿನ ಅನುಭವವಾಗಿದೆ. ಬೆಳ್ತಂಗಡಿ ಪಟ್ಟಣ, ಚಾರ್ಮಾಡಿ ಘಾಟಿ ಸಹಿತ ಅಳದಂಗಡಿ, ತಣ್ಣೀರುಪಂತ, ಮುಂಡಾಜೆ,ಬಂದಾರು, ಮೊಗ್ರು,ಉರುವಾಲು, ಕಣಿಯೂರು, ಮಚ್ಚಿನ, ಕಳಿಯ, ನ್ಯಾಯತರ್ಪು, ಸವಣಾಲು, ಹುಣ್ಸೆಕಟ್ಟೆ ಮಡಂತ್ಯಾರು, ಕೊಕ್ಕಡ, ನಾವೂರು,ಬೆಳಾಲು, ತೆಕ್ಕಾರು,ಇಳಂತಿಲ ,ಕಲ್ಮಂಜ ಸಹಿತ ನಾನಾ ಕಡೆಗಳಲ್ಲಿ ಮಳೆಯಾಗಿದೆ. ವಿಪರೀತ ಸೆಕೆಯಿಂದ ಕಂಗಾಲಾಗಿದ್ದ ಮಂದಿಗೆ ಈ ಬೇಸಿಗೆಯ ಅಕಾಲಿಕ ಮಳೆ ಕೊಂಚ ಸಮಾಧಾನ ತಂದಿದೆ. ಶನಿವಾರ ತಾಲೂಕಿನ ಕೆಲವು ಕಡೆಗಳಲ್ಲಿ ಮೊದಲ ಅಕಾಲಿಕ ಮಳೆಯಾಗಿತ್ತು. ಬಳಿಕ ಹೆಚ್ಚಿನ ಭಾಗದಲ್ಲಿ ಬುಧವಾರ ಎರಡನೇ ಬೇಸಿಗೆ ಮಳೆಯಾಗಿದೆ. ಪುಂಜಾಲಕಟ್ಟೆ-ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ತಾಲೂಕಿನ ನಗರದ ಪ್ರದೇಶಗಳಲ್ಲಿ ಹೆದ್ದಾರಿ ಕಾಮಗಾರಿಯಿಂದ ಕೆಲವೊಂದು ಕಡೆಗಳಲ್ಲಿ ಅಂಗಡಿಗಳ ಮುಂಭಾಗದವರೆಗೆ ಮಳೆ ನೀರು ಬಂದಿತ್ತು. ಮಳೆ ಹೆಚ್ಚು ಸುರಿಯುತ್ತಿದ್ದರೆ ಮಳೆ ನೀರು ಅಂಗಡಿಯೊಳಗೆ ಹೋಗುತ್ತಿತ್ತು.ಇನ್ನು ಕೆಲವು ಕಡೆಗಳಲ್ಲಿ ಹನಿ ಮಳೆ ಸುರಿದಿದೆ. ಹಲವೆಡೆ ಅಂಗಳದಲ್ಲಿ ಒಣಗಲು ಹಾಕಿದ್ದ ಅಡಕೆ ಮಳೆಗೆ ಒದ್ದೆಯಾಗಿದೆ. ತಾಲೂಕಿನ ಹಲವು ಕಡೆಗಳಲ್ಲಿ ಬ್ರಹ್ಮಕಲಶೋತ್ಸವ, ಜಾತ್ರೆ, ನೇಮೋತ್ಸವ ಶುಭ ಸಮಾರಂಭಗಳು, ಜರಗಲಿದ್ದು ಇದರ ಪೂರ್ವ ತಯಾರಿಗೆ ಮಳೆ ಅಡ್ಡಿ ನೀಡಿದೆ. ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆ ಹಾಗೂ ಅಂತರ್ಜಾಲ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿದೆ. ಉಜಿರೆಯ ಕೆಳಗಿನ ಪೆಟ್ರೋಲ್ ಪಂಪ್ ಬಳಿ ಚರಂಡಿ ವ್ಯವಸ್ಥೆ ಮಾಡಿದ್ದರೂ ಮಳೆ ನೀರು, ಚರಂಡಿ ನೀರಿನೊಂದಿಗೆ ಎಂದಿನಂತೆ ರಸ್ತೆಯ ಮೇಲೆಯೇ ಹರಿದಿದೆ.

ಎರ್ಮಾಳು ಶ್ರೀಜನಾರ್ದನ ಕಂಬಳ ಸಮಿತಿಯಿಂದ ಸಿದ್ಧತೆ | ಒಟ್ಟು 151 ಮೀಟರ್ ಉದ್ದದ ಕರೆ ನಿರ್ಮಾಣ

ಫೆ.28: ಎರ್ಮಾಳು ತೆಂಕ-ಬಡಾ ಜೋಡುಕರೆ ಚೊಚ್ಚಲ ಕಂಬಳ

ಪಡುಬಿದ್ರಿ: ಎರ್ಮಾಳು ಶ್ರೀ ಜನಾರ್ದನ ಕಂಬಳ ಸಮಿತಿ ವತಿಯಿಂದ ನಮ್ಮ ಕಂಬಳ ಎರ್ಮಾಳು ಕಂಬಳವು ಫೆ.28ರಂದು ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಎರ್ಮಾಳು ರೋಹಿತ್ ಹೆಗ್ಡೆ ಮಾಹಿತಿಯನ್ನು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರ್ಮಾಳು ಗ್ರಾಮದ ಸರ್ವರ ಸಹಕಾರದೊಂದಿಗೆ ಇದೇ ಪ್ರಥಮ ಬಾರಿಗೆ ಎರ್ಮಾಳಿನಲ್ಲಿ ಕಂಬಳ ಸಮಿತಿ ರಚಿಸಿಕೊಂಡು ಅವಿಸ್ಮರಣೀಯ ಹಾಗೂ ಆಧುನೀಕೃತ ಎರ್ಮಾಳು ತೆಂಕ-ಬಡಾ ಜೋಡುಕರೆ ಕಂಬಳ ನಡೆಯಲಿದೆ.

ಸುಮಾರು 300 ವರ್ಷಗಳ ಇತಿಹಾಸದ ಬಡಕೊಟ್ಟು ಬಾಕಿಮಾರು ಗದ್ದೆಯಲ್ಲಿ 10 ಎಕರೆ ವಿಸ್ತೀರ್ಣದಲ್ಲಿ ದಾನಿಗಳ ನೆರವಿನೊಂದಿಗೆ ಸುಮಾರು 1.50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಕಂಬಳ ಕರೆ ನಿರ್ಮಿಸಿ ಸಾಂಪ್ರದಾಯಿಕ ಬದ್ಧವಾಗಿ ಆಚರಿಸುವ ಚೊಚ್ಚಲ ಎರ್ಮಾಳು ತೆಂಕ-ಬಡಾ ಜೋಡುಕರೆ ಕಂಬಳಕ್ಕೆ ಸಿದ್ಧಗೊಂಡಿದೆ





ಅವಿಭಜಿತ ದಕ ಜಿಲ್ಲೆಯ ಕಂಬಳ ಕರೆಗಳ ಪೈಕಿ ಎರ್ಮಾಳು ಕಂಬಳ ಕರೆಯು 151 ಮೀ. ಉದ್ದವಿದ್ದು ದೀರ್ಘ ಉದ್ದದ ಕರೆ ಎಂಬ ಪ್ರಸಿದ್ಧಿಗೆ ಒಳಗಾಗಲಿದೆ. 125 ಮೀಟರ್‌ನಲ್ಲಿ ಸೆನ್ಸಾರ್ ಅಳವಡಿಸಲು ಸಿದ್ಧತೆ ನಡೆಸಲಾಗಿದೆ.

200ಕ್ಕೂ ಅಧಿಕ ಕಂಬಳ ಕೋಣಗಳು ಭಾಗವಹಿಸುವ ನಿರೀಕ್ಷೆ ಹೊಂದಿದ್ದು, ವಿಜೇತರಿಗೆ ಗರಿಷ್ಠ 2 ಪವನ್ ಚಿನ್ನದ ಮೆಡಲ್ ನೀಡಲಾಗುವುದು. ಎರ್ಮಾಳು ಕಂಬಳದಲ್ಲಿ ಸಮಯ ಪರಿಪಾಲನೆಗೆ ಹೆಚ್ಚು ಆಸಕ್ತಿವಹಿಸಲಾಗುವುದು ಎಂದು ಹೇಳಿದರು.

ಸರ್ವಋತು ಕ್ರೀಡಾ ಚಟುವಟಿಕೆ

ಕಂಬಳ ಕರೆಯ ವಿಶಾಲ ಜಾಗವನ್ನು ಕೇವಲ ಕಂಬಳಕ್ಕೆ ಮಾತ್ರ ಮೀಸಲಿಡದೆ ಸರ್ವಋತುವಿನಲ್ಲಿಯೂ ಇತರ ಕ್ರೀಡಾ ಚಟುವಟಿಕೆಗಳಿಗೆ ಉಪಯೋಗಿಸಲು ಕಾರ್ಯಸೂಚಿ ಹಮ್ಮಿಕೊಳ್ಳಲಾಗಿದೆ ಎಂದು ಡಾ. ಚಿಂತನ್ ರೋಹಿತ್ ಹೆಗ್ಡೆ ತಿಳಿಸಿದರು.

ಫೆ.28ರಂದು ಬೆಳಿಗ್ಗೆ 8.30 ಗಂಟೆಗೆ ಎರ್ಮಾಳು ಗ್ರಾಮ ದೇವರಾದ ಶ್ರೀ ಜನಾರ್ದನ ದೇವಳದಿಂದ ಮೆರವಣಿಗೆಯ ಮೂಲಕ ಪ್ರಸಾದ ತಂದು ಧಾರ್ಮಿಕ ಕ್ರಿಯೆಗಳ ಬಳಿಕ ವಿದ್ವಾಂಸರು, ಅರ್ಚಕರು, ಗಣ್ಯರು, ಎರ್ಮಾಳು ದೇವಳದ ಆಡಳಿತ ಮೊಕ್ತೇಸರ ಅಶೋಕ್‌ರಾಜ್ ಎರ್ಮಾಳು ಬೀಡು ಉಪಸ್ಥಿತಿಯಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಕಂಬಳ ಕರೆ ಉದ್ಘಾಟಿಸಲಿದ್ದಾರೆ. ಕಂಬಳ ಸಮಾರಂಭದಲ್ಲಿ ಸಂಸದರು, ಉಭಯ ಜಿಲ್ಲಾ ಶಾಸಕರು, ದಾನಿಗಳು, ಗಣ್ಯರು ಹಾಗೂ ಚಲನಚಿತ್ರ ನಟರು ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ವಿಜಯ ಕುಮಾರ್ ಕಂಗಿನಮನೆ, ಮುಂಬೈ ಸಮಿತಿಯ ಅಧ್ಯಕ್ಷ ಎರ್ಮಾಳು ಹರೀಶ್ ಶೆಟ್ಟಿ, ಗೌರವ ಕಾರ್ಯದರ್ಶಿ ಅನಿವಾಸಿ ಭಾರತೀಯ ಸಮಿತಿಯ ಅಧ್ಯಕ್ಷ ಕರ್ಣ ಪ್ರಭಾಕರ ಹೆಗ್ಡೆ ಎರ್ಮಾಳು, ಸಂಚಾಲಕ ಜಗಜೀವನ್ ಎನ್. ಚೌಟ ಎರ್ಮಾಳು, ಸ್ವಾಗತ ಸಮಿತಿಯ ಅಧ್ಯಕ್ಷ ಪುಚ್ಚೊಟ್ಟು ಬೀಡು ಬಾಲಚಂದ್ರ ಎಲ್.ಶೆಟ್ಟಿ, ಪ್ರಚಾರ ಸಮಿತಿಯ ಅಧ್ಯಕ್ಷ ಶಿವಪ್ರಸಾದ್ ಶೆಟ್ಟಿ ಎಲ್ಲದಡಿ, ಕಾರ್ಯದರ್ಶಿ ಸಂತೋಷ್ ಜೆ.ಶೆಟ್ಟಿ ಬರ್ಪಾಣಿ ಎರ್ಮಾಳು ಇದ್ದರು.

- ದಾನಿಗಳ ನೆರವಿನೊಂದಿಗೆ ಸುಮಾರು 1.50 ಕೋಟಿ ವೆಚ್ಚದಲ್ಲಿ 151 ಮೀ. ಉದ್ದದ ಸುಸಜ್ಜಿತ ಕಂಬಳ ಕರೆ
- ಅವಿಭಜಿತ ದ.ಕ. ಜಿಲ್ಲೆಯ ದೀರ್ಘ ಉದ್ದದ ಕರೆ ಎಂಬ ಪ್ರಸಿದ್ಧಿಗೆ ಪಾತ್ರವಾಗಲಿರುವ ಕಂಬಳ ಕರೆ
- 200ಕ್ಕೂ ಅಧಿಕ ಕಂಬಳ ಕೋಣಗಳು ಭಾಗವಹಿಸುವ ನಿರೀಕ್ಷೆ
- ಎರ್ಮಾಳು ಕಂಬಳದಲ್ಲಿ ಸಮಯ ಪರಿಪಾಲನೆಗೆ ಹೆಚ್ಚು ಒತ್ತು

ದೇಗುಲಗಳು ಸಾಂಸ್ಕೃತಿಕ, ಧಾರ್ಮಿಕ ಪ್ರಜ್ಞೆ ಪ್ರತೀಕ: ಶ್ರೀವಿದ್ಯಾಧೀಶತೀರ್ಥ



ಉಪ್ಪುಂದ: ದೇವಾಲಯಗಳು ಸಾಂಸ್ಕೃತಿಕ, ಧಾರ್ಮಿಕ ಪ್ರಜ್ಞೆಯ ಪ್ರತೀಕವಾಗಿದ್ದು, ಸಮಾಜ ಶಕ್ತಿಯುತವಾಗಿ ವಿಸ್ತಾರಗೊಳ್ಳಲು ಸಹಕಾರಿಯಾಗುತ್ತದೆ. ಗುರುಗಳ ಆಶೀರ್ವಾದ ಮತ್ತು ಮಾರ್ಗದರ್ಶನದ ಮೂಲಕ ಮಾಡುವ ಪುಣ್ಯಕಾರ್ಯವನ್ನು ದೇವರು ಯಾವುದನ್ನೂ ಪರಿಶೀಲಿಸದೇ ಭಕ್ತರಿಗೆ ಅನುಗ್ರಹಿಸುತ್ತಾನೆ ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ನಿಮಿತ್ತ ತೆರವುಗೊಳ್ಳುತ್ತಿರುವ ಶಿರೂರು ಪೇಟೆ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದ ಮರುನಿರ್ಮಾಣ ಕಾಮಗಾರಿಗಳಿಗೆ ಬುಧವಾರ ಭೂಮಿಪೂಜೆ ನೆರವೇರಿಸಿ ನಂತರ ಅನುಗ್ರಹ ಆಶೀರ್ವಚನ ನೀಡಿದರು. ಯಾವುದೇ ಸಮಾಜ ಉದ್ಧಾರವಾಗಬೇಕಾದರೆ ಅಲ್ಲಿ ಆಚಾರ-ವಿಚಾರ, ದೇವರು, ಧರ್ಮವಿರಬೇಕು. ಆಗ ಮಾತ್ರ ಸಮಾಜದ ಸಮೃದ್ಧಿಯಾಗಿರಲು ಸಾಧ್ಯ ಎನ್ನುವುದು ತತ್ವಸಿದ್ಧಾಂತ. ನಮ್ಮ ಪೂರ್ವಜರು ದೇವರಿಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಉದ್ದೇಶದಿಂದ ಮಠ, ಮಂದಿರಗಳನ್ನು ನಿರ್ಮಾಣ ಮಾಡಿದರು. ಕಾಲ ಬದಲಾದಂತೆ ಹಾಗೂ ದೇಶದ ಅಭಿವೃದ್ಧಿ ದೃಷ್ಟಿದಿಂದ ಪ್ರಸ್ತುತ ಕೆಲವು ಬದಲಾವಣೆಗಾಗಿ ಈ ದೇವಳವನ್ನು ತೆರವುಗೊಳಿಸಬೇಕಾಯಿತು. ಪ್ರಸ್ತುತ ಈ ದೇವಸ್ಥಾನದ ಹಿಂದಿನ ಸ್ಥಳದಲ್ಲಿ ಮೊದಲಿನಂತೆ ನೂತನ ಮಂದಿರ ನಿರ್ಮಾಣವಾಗುತ್ತಿರುವುದು ಖುಷಿಯ ವಿಚಾರ. ಸಮಾಜದ ಸರ್ವರೂ ಏಕತ್ರಯ ಮನಸ್ಸಿನಿಂದ ನೂತನ ದೇವಾಲದ ನಿರ್ಮಾಣದಲ್ಲಿ ಕೈಜೋಡಿಸಬೇಕು. ನಿಮ್ಮೊಂದಿಗೆ ಶ್ರೀಮಠದ ಸಹಕಾರ, ಗುರುಗಳ ಮಾರ್ಗದರ್ಶನವೂ ಇದೆ. ಎಲ್ಲರಿಗೂ ಸ್ವಯಂಸೇವಕರಂತೆ ಶ್ರಮಾದಾನದ ಮೂಲಕವೂ ಸೇವೆ ಸಲ್ಲಿಸುವ ಅವಕಾಶ ವಿದ್ದು, ಆದಷ್ಟು ಶೀಘ್ರವಾಗಿ ದೇವಸ್ಥಾನ ನಿರ್ಮಾಣ ಪೂರ್ಣಗೊಳಿಸಿ ಎಂದರು.

ಪೇಟೆ ಹತ್ತು ಸಮಸ್ತರ ಪರವಾಗಿ ಬಾಬುರಾಯ ಕಾಮತ್, ವಾಸುದೇವ ಶ್ಯಾನುಭಾಗ್ ಹಾಗೂ ದೇವಳದ ಆಡಳಿತ ಮಂಡಳಿಯ ವತಿಯಿಂದ ಅಧ್ಯಕ್ಷ ಗಣೇಶ ಪ್ರಭು ಗುರುಗಳ ಪಾದಪೂಜೆಗೈದರು. ನೂತನ ದೇವಾಲಯದ ನೀಲನಕ್ಷೆ ಬಗ್ಗೆ ಗುರುಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿರೂರು ಪ್ರಸಾದ ಪ್ರಭು, ಕಾರ್ಯದರ್ಶಿ ನಾಗರಾಜ ಪ್ರಭು, ಶ್ರೀಕಾಂತ್ ಕಾಮತ್ ಹಾಗೂ ಸಮಾಜ ಬಾಂಧವರು ಇದ್ದರು.

ಮಹಾಮಸ್ತಕಾಭಿಷೇಕ, ಅಭಿವೃದ್ಧಿ ಅನುದಾನಕ್ಕೆ ಶಾಸಕ ಸುನೀಲ್ ಮನವಿ



ಕಾರ್ಕಳ: ಡಾ.ಬಿ.ಆರ್. ಅಂಬೇಡ್ಕರ್ ಭವನ ಲೋಕಾರ್ಪಣೆ ಹಾಗೂ ಕಿಸಾನ್ ಸಭಾಭವನ ಉದ್ಘಾಟನೆ ಕಾರ್ಯಕ್ರಮದ ಅಂಗವಾಗಿ ಕಾರ್ಕಳಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಾಸಕರಾದ ವಿ ಸುನೀಲ್ ಕುಮಾರ್ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು.

ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಕಾರ್ಕಳ ಮಹಾಮಸ್ತಕಾಭಿಷೇಕ ಮಹೋತ್ಸವಕ್ಕೆ ರಸ್ತೆ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರೂ.75 ಕೋಟಿ ಬಿಡುಗಡೆ ಮಾಡುವಂತೆ ಕೋರಿ ಮನವಿ ಮಾಡಿದರು. ಕೆಜಿಟಿಟಿಐ ತರಬೇತಿ ಕೇಂದ್ರ ಹಾಗೂ ಸರಕಾರಿ ಬಿ.ಎಸ್.ಸಿ ನರ್ಸಿಂಗ್ ಕಾಲೇಜುಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೂ ಅನುದಾನ ಬೇಡಿಕೆ ಇಟ್ಟರು.

ಹೆಬ್ರಿ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ತಾಲೂಕು ಆಸ್ಪತ್ರೆಗೆ ಮೇಲ್ದರ್ಜೆಗೆರಿಸುವಂತೆ ಮನವಿ ಸಲ್ಲಿಸಲಾಯಿತು. ಕಾರ್ಕಳದ ಡಾ. ಅಂಬೇಡ್ಕರ್ ಭವನಕ್ಕೆ ಹೆಚ್ಚುವರಿ ರೂ.3 ಕೋಟಿ ಹಾಗೂ ಹೆಬ್ರಿ ತಾಲೂಕಿನ ಭವನ ನಿರ್ಮಾಣಕ್ಕೆ ರೂ.2 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಕೋರಿದರು. ಇದರ ಜೊತೆಗೆ ನಿಟ್ಟೆ ಜವಳಿ ಪಾರ್ಕ್ ಅಭಿವೃದ್ಧಿ, ಕೆಂಪುಕಲ್ಲು ಮರಳು ಸಾಗಾಟ ಮತ್ತು 9/11ಎ ಖಾತೆ ಸಮಸ್ಯೆ ಪರಿಹಾರ ಸೇರಿದಂತೆ ವಿವಿಧ ಸಾರ್ವಜನಿಕ ಸಮಸ್ಯೆಗಳ ಸರಳೀಕರಣಕ್ಕೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲಾಯಿತು.

ಅನ್ನಭಾಗ್ಯ ಯೋಜನೆಗಳ ಅರಿವು ಮೂಡಿಸಿ: ಮೋಹನ್

ಉಪ್ಪುಂದ: ಪ್ರತೀ ವಾರ್ಡ್‌ಗಳಲ್ಲಿ ಒಟ್ಟು ಪಡಿತರ ಚೀಟಿಯಲ್ಲಿ ಶೇ. 30ರಷ್ಟು ಎಸ್‌ಸಿ, ಎಸ್‌ಟಿ ಕುಟುಂಬಗಳಿದ್ದರೆ ಅಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ತೆರೆದು ಪಡಿತರ ನೀಡಬೇಕು ಎಂಬ ನಿಯಮದ ಬಗ್ಗೆ ಹಾಗೂ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ನಭಾಗ್ಯ ಯೋಜನೆಗಳ ಅರಿವು ಮೂಡಿಸಲು ಬ್ಯಾನರ್ ಅಳವಡಿಸುವಂತೆ ಬೈಂದೂರು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೋಹನ್ ಪೂಜಾರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಇಲ್ಲಿನ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ನಡೆದ ಗ್ಯಾರಂಟಿ ಅನುಷ್ಠಾನ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಗಳೂರಿನಿಂದ ಭಟ್ಕಳದ ಕಡೆಗೆ ಹೋಗುವ ಕೆಎಸ್‌ಆರ್‌ಟಿಸಿ ಬಸ್‌ಗಳು ಬೈಂದೂರು ಬಸ್ ನಿಲ್ದಾಣಕ್ಕೆ ಬರದಿರುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಪ್ರತಿಯೊಂದು ಸಮಸ್ಯೆಗಳಿಗೆ ಕಾರಣಗಳನ್ನಷ್ಟೇ ನೀಡುತ್ತಾ ಬರಲಾಗುತ್ತಿದೆ. ಆದರೆ ಯಾವೊಂದು ಕೆಲಸವೂ ಕಾರ್ಯರೂಪಕ್ಕೆ ಬಂದಿಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಎಂದು ಅಧ್ಯಕ್ಷರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹಣ ವರ್ಗಾವಣೆ ಬಾಕಿ

ಸರ್ಕಾರದ ಪಂಚ ಗ್ಯಾರಂಟಿ ಯೋಜನೆಯಿಂದ ನವೆಂಬರ್, ಡಿಸೆಂಬರ್, ಜನವರಿ ಹಣ ಬರುವುದು ಬಾಕಿ ಇದೆ. ಗೃಹಜ್ಯೋತಿ ಯೋಜನೆಯಿಂದ ಬೈಂದೂರು ಹಾಗೂ ತಲ್ಲೂರು ಮೆಸ್ಕಾಂ ಉಪಕೇಂದ್ರ ವ್ಯಾಪ್ತಿಯ 30344 ಕುಟುಂಬಗಳಿಗೆ 54.44 ಕೋಟಿ ರೂ. ವೆಚ್ಚವಾಗಿದೆ. ಅನ್ನಭಾಗ್ಯ ಯೋಜನೆಯಡಿ 25,532 ಪಡಿತರ ಚೀಟಿಗಳಿಗೆ 1.91 ಕೋಟಿ ರೂ. ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗಿದೆ. ಯುವನಿಧಿ ಯೋಜನೆಯಡಿ 616 ಫಲಾನುಭವಿಗಳಿಗೆ 1.55 ಕೋಟಿ ರೂ. ಜಮಾ ಆಗಿದೆ. ಶಕ್ತಿ ಯೋಜನೆಯಡಿ ಇದುವರೆಗೆ 1.86 ಕೋಟಿ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ್ದು 73.78 ಕೋಟಿ ರೂ.ರಿಯಾಯಿತಿ ಪಡೆದಿದ್ದಾರೆ ಎಂದು ಇಲಾಖಾಧಿಕಾರಿಗಳು ತಿಳಿಸಿದರು.

ಸಮಿತಿ ಸದಸ್ಯರಾದ ಮಾಲತಿ ಶಿವಾನಂದ, ರಾಮ ಪೂಜಾರಿ, ಅನೀಶ್ ಪೂಜಾರಿ, ರಾಘವೇಂದ್ರ ಬಿಲ್ಲವ, ಸೂರ್ಯಕಾಂತಿ ಡಿ., ದೇವದಾಸ್ ವಿ. ಜೆ., ಬಾಬು ದೇವಾಡಿಗ, ಮುಕ್ರಿ ಮೊಹಮ್ಮದ್ ಅಲ್ತಾಫ್, ನರೇಗಾ ಸಹಾಯಕ ನಿರ್ದೇಶಕ ಸುರೇಶ, ಮೆಸ್ಕಾಂ, ಕೆಎಸ್‌ಆರ್‌ಟಿಸಿ, ಮಹಿಳಾ ಮತ್ತು ಮಕ್ಕಳ ಶಿಶು ಅಭಿವೃದ್ಧಿ ಇಲಾಖೆ, ಆಹಾರ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿವೃತ್ತ ನೌಕರರ ಸಂಘದ ಸಮಾವೇಶ



ಉಡುಪಿ: ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿವೃತ್ತ ನೌಕರರ ಸಂಘದ ಉತ್ತರ ಕನ್ನಡ, ದ.ಕ. ಚಿಕ್ಕಮಗಳೂರು, ಉಡುಪಿ, ಹಾಸನ, ಶಿವಮೊಗ್ಗ ಜಿಲ್ಲೆಗಳ ವಿಭಾಗ ಮಟ್ಟದ ಸಮಾವೇಶ ಬುಧವಾರ ಬ್ರಹ್ಮಗಿರಿ ಲಯನ್ಸ್ ಭವನದಲ್ಲಿ ಉದ್ಘಾಟನೆಗೊಂಡಿತು.

ಕಾರವಾರ, ಉಡುಪಿ ಜಿಲ್ಲಾ ಕೈಗಾರಿಕಾ ಜಂಟಿ ನಿರ್ದೇಶಕ ನಾಗರಾಜ ನಾಯಕ್ ಉದ್ಘಾಟಿಸಿದರು.ಸಂಘದ ಅಧ್ಯಕ್ಷ ಜಿ. ನಾಗರಾಜು, ಉಡುಪಿ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಸೀತಾರಾಮ ಶೆಟ್ಟಿ ಸಂಘದ ಉಪಾಧ್ಯಕ್ಷರಾದ ಕೆ.ಬಿ. ಮುನಿವೆಂಕಟಸ್ವಾಮಿ, ಡಾ. ಚೌಡಯ್ಯ, ಎಂ. ಬೈರೇಗೌಡ, ಪ್ರಧಾನ ಕಾರ್ಯದರ್ಶಿ ಕಾಂತರಾಜ್, ನರಸಿಂಹ ಮೂರ್ತಿ, ಸಾಂಸ್ಕೃತಿಕ ಕಾರ್ಯದರ್ಶಿ ಪಿ.ಆರ್ಮುಗಂ ಉಡುಪಿ ಇದ್ದರು.ಸಂಘದ ಸದಸ್ಯರಿಗೆ ಜೆ.ಸಿ.ರಾಘವೇಂದ್ರ ಭಟ್ ಹಿರಿಯ ನಾಗರಿಕರಿಗೆ ಜೀವನೋತ್ಸವ ಮತ್ತು ಪ್ರೇರಣಾತ್ಮಕ ವಿಷಯ ಕುರಿತು ಮಾತನಾಡಿದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿವೃತ್ತ ಅಪರ ನಿರ್ದೇಶಕ ರಮಾನಂದ ನಾಯಕ್ ಸ್ವಾಗತಿಸಿದರು, ಗೋವಿಂದರಾಜು ವಂದಿಸಿದರೆ, ಸಿ ಹನುಮೇಗೌಡ ನಿರೂಪಿಸಿದರು.

ಸಮಾಜ ಸರಿದಾರಿಗೆ ನಡೆಯಲು ನಾಟಕಗಳು ಬೆಳಕಾಗಲಿದೆ: ತಲ್ಲೂರು



ಉಡುಪಿ: ತಪ್ಪು ಯಾವುದು, ಸರಿ ಯಾವುದು ಎಂದು ತಿಳಿಸಿಕೊಡುವ ನಾಟಕಗಳು ಸಮಾಜವನ್ನು ಸದಾ ಎಚ್ಚರಿಸುತ್ತಿರುತ್ತವೆ. ಸರಿದಾರಿಯಲ್ಲಿ ನಡೆಯಲು ಬೆಳಕು ತೋರುತ್ತವೆ ಎಂದು ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ತಿಳಿಸಿದರು.

ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ನಾಟಕೋತ್ಸವ ರಂಗಹಬ್ಬ-14ರ ನಾಲ್ಕನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಂಗಸಾಧಕ ಗೌರವ ಸ್ವೀಕರಿಸಿದ ಯಕ್ಷಗುರು ನಿತ್ಯಾನಂದ ಶೆಟ್ಟಿಗಾರ್ ಮಾತನಾಡಿ, ತುಳುಕೂಟದವರು ನಡೆಸುವ ತುಳು ನಾಟಕ ಸ್ಪರ್ಧೆಯಿಂದಾಗಿ ಅನೇಕ ತಂಡಗಳು ಉಳಿದು ಬೆಳೆದಿವೆ. ತುಳುನಾಡಿನಲ್ಲಿರುವ ಕಲೆ ಬೇರೆಲ್ಲೂ ಸಿಗುವುದಿಲ್ಲ, ಅಭಿಮಾನಿಗಳ ಪ್ರೋತ್ಸಾಹದಿಂದ ಕಲಾವಿದರು ಬೆಳೆದಿದ್ದಾರೆ ಎಂದು ಹೇಳಿದರು.

ಮಲ್ಪೆ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಗೋಪಾಲ ಸಿ. ಬಂಗೇರ ಮಾತನಾಡಿ, ನಾಟಕ ಅಂದರೆ ಮನರಂಜನೆ ಮಾತ್ರವಲ್ಲ, ನಮ್ಮ ಬದುಕಿನ ಆಗುಹೋಗುಗಳನ್ನು ಸುಖ ಕಷ್ಟಗಳನ್ನು, ಪ್ರೀತಿ ವಿರಹಗಳನ್ನು ಬಿಂಬಿಸುವ ವೇದಿಕೆ ಎಂದರು.

ಈ ವೇಳೆ ನಗರಸಭೆಯ ಮಾಜಿ ಸದಸ್ಯೆ ರಶ್ಮಿ ಚಿತ್ತರಂಜನ್ ಭಟ್, ಡಾ. ವಿಜಯೇಂದ್ರ, ಸೌಹಾರ್ದ ಸಂಘ ನಿಯಮಿತದ ಅಧ್ಯಕ್ಷ ಬಿ.ಜಿ. ಸುಬ್ಬರಾವ್, ಮಲ್ಪೆ ಮತ್ಸ್ಯರಾಜ್ ಗ್ರೂಪ್‌ನ ಅಭಿನಂದನ್ ಕೆ. ಕೋಟ್ಯಾನ್, ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಉಪಸ್ಥಿತರಿದ್ದರು. ವಿದ್ದು ಉಚ್ಚಿಲ್ ಸ್ವಾಗತಿಸಿದರು. ರಾಗಿಣಿ ಹರೀಶ್ ವಂದಿಸಿದರು, ಕಾರ್ತಿಕ್ ಪ್ರಭು, ಸೌಭಾಗ್ಯ ತಂತ್ರಿ ಕಾರ್ಯಕ್ರಮ ನಿರೂಪಿಸಿದರು.

ನಿರ್ಮಾಣ್ ಸೊಸೈಟಿ: ಆತ್ರಾಡಿ ಶಾಖೆಯಲ್ಲಿ ಇ-ಸ್ಟ್ಯಾಂಪಿಂಗ್ ಆರಂಭ



ಉಡುಪಿ: ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ. ಉಡುಪಿ ಇದರ ಆತ್ರಾಡಿ ಶಾಖೆಯಲ್ಲಿ ಇ ಸ್ಟ್ಯಾಂಪಿಂಗ್ ಕೇಂದ್ರವನ್ನು ಬ್ಯಾಂಕ್ ಆಫ್ ಬರೋಡಾದ ಪ್ರಬಂಧಕಿ ಆನಂದ ಲಕ್ಷ್ಮಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕಟ್ಟಡ ಮಾಲೀಕರಾದ ಸೆಲಿನಾ ಅಪ್ಪು ಮರಕಲ ಮತ್ತು ಎಂಜೆಲೀನ ಅವರು ಮುಖ್ಯ ಉಪಸ್ಥಿತರಿದ್ದರು ಜೊತೆಗೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ನಿತ್ಯಾನಂದ ನಾಯಕ್, ಉಪಾಧ್ಯಕ್ಷರಾದ ಬಿ. ಮಧುಸೂದನ ನಾಯಕ್ ಹಾಗೂ ನಿರ್ದೇಶ ದಯಾನಂದ ನಾಯಕ್, ರಮಾನಂದ ನಾಯಕ್ ಸದಾನಂದ ನಾಯಕ್ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು ನಿರ್ದೇಶಕ ಸುದರ್ಶನ ನಾಯಕ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು, ಮುಖ್ಯ ಕಾರ್ಯ ನಿರ್ವಾಹಕರು ವಂದನಾರ್ಪಣೆಗೈದರು.

ದೇವಿ ಅಮೃತೇಶ್ವರೀ ಹಲವು ಮಕ್ಕಳ ತಾಯಿಗೆ ವಿಶೇಷ ಪೂಜೆ | ಅನ್ನದಾಸೋಹದ ಚಪ್ಪರದಲ್ಲಿ ಒಲೆ ಮುಹೂರ್ತ

ಕೋಟ ದೇಗುಲ ಏಕಃ ಪವಿತ್ರ ನಾಗಮಂಡಲೋತ್ಸವದ ಉಗ್ರಾಣ ಮುಹೂರ್ತ

ಕೋಟ: ಮಾ. 1ರಂದು ಕೋಟದ ಅಮೃತೇಶ್ವರೀ ಹಲವು ಮಕ್ಕಳ ತಾಯಿ ದೇಗುಲದ ವತಿಯಿಂದ ನಡೆಯಲಿರುವ ಏಕಃ ಪವಿತ್ರ ನಾಗಮಂಡಲೋತ್ಸವದ ಉಗ್ರಾಣ ಮುಹೂರ್ತ ಬುಧವಾರ ಜರಗಿತು.

ವೇದಮೂರ್ತಿ ಮಧುಸೂದನ್ ಬಾಯರಿ ನೇತೃತ್ವದಲ್ಲಿ ಪೂಜಾ ವಿಧಿವಿಧಾನಗಳು ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ್ ಸಿ. ಕುಂದರ್ ಸಮ್ಮುಖದಲ್ಲಿ ಜರಗಿತು. ಬೆಳಿಗ್ಗೆ ದೇಗುಲದ ದೇವಿ ಅಮೃತೇಶ್ವರೀ ಹಲವು ಮಕ್ಕಳ ತಾಯಿಗೆ ಪೂಜೆ ಸಲ್ಲಿಸಿ ಸ್ಥಳ ಸಾನಿಧ್ಯದ ನಾಗದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಕೋಟದ ಗಾಂಧಿ ಮೈದಾನದಲ್ಲಿರುವ ಉಗ್ರಾಣ ಚಪ್ಪರದಲ್ಲಿ ಧಾರ್ಮಿಕ ಕಾರ್ಯ ನೆರವೇರಿತು.

ಅನ್ನದಾಸೋಹಕ್ಕೆ ಚಪ್ಪರದಲ್ಲಿ ಅಗ್ನಿಸ್ಪರ್ಶ

ಕೋಟದ ಗಾಂಧಿ ಮೈದಾನದಲ್ಲಿರುವ



ನಾಗಮಂಡಲದ ಅನ್ನದಾಸೋಹದ ಚಪ್ಪರದಲ್ಲಿ ಒಲೆ ಮುಹೂರ್ತ ಕೈಗೊಳ್ಳಲಾಯಿತು.ನಾಗಮಂಡಲದ ಅಡುಗೆಯ ಪಾಕತಜ್ಞ ಸುಂದರ್ ಭಟ್ ಮೂಲಕ ಅಗ್ನಿ ಸ್ಪರ್ಶಿಸಿ ದೇಗುಲದ ಟ್ರಸ್ಟಿಗಳಾದ ಸುಧಾ ಎ ಪೂಜಾರಿ, ಜ್ಯೋತಿ ಡಿ. ಕಾಂಚನ್, ಮಾಜಿ ಟ್ರಸ್ಟಿ ಸುಶೀಲಾ ಸೋಮಶೇಖರ್ ದೇಗುಲದ ಅಧ್ಯಕ್ಷ ಆನಂದ್ ಸಿ. ಕುಂದರ್ ಸಮ್ಮುಖದಲ್ಲಿ ದಾಸೋಹದ ಒಲೆಗೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದೇಗುಲದ ಟ್ರಸ್ಟಿಗಳಾದ ಸುಭಾಷ್ ಶೆಟ್ಟಿ ಗಣೇಶ್ ನೆಲ್ಲಿಬೆಟ್ಟು ಶಿವ ಪೂಜಾರಿ,ಸುಧಾ ಎ.ಪೂಜಾರಿ,ಜ್ಯೋತಿ ಕಾಂಚನ್, ಸುಬ್ರಾಯ ಜೋಗಿ, ರತನ್ ಐತಾಳ್, ಚಂದ್ರ ಆಚಾರ್,ಮಾಜಿ ಟ್ರಸ್ಟಿಗಳಾದ ಚಂದ್ರ ಪೂಜಾರಿ, ಸುಶೀಲಾ ಸೋಮಶೇಖರ್, ಕೋಟ ಪಂಚಾಯತ್ ಸದಸ್ಯ ಭುಜಂಗ ಗುರಿಕಾರ, ಗ್ರಾಮಸ್ಥರು ಉಪಸ್ಥಿತರಿದ್ದರು.

ಹಸಿರು ಹೊರೆಕಾಣಿಕೆ ಸಮರ್ಪಣೆ

ಬುಧವಾರ ಹೊರೆಕಾಣಿಗೆ ಪ್ರಾರಂಭಗೊಂಡಿದ್ದು ಈ ಹಿನ್ನಲ್ಲೆಯಲ್ಲಿ ಶ್ರೀ ದೇಗುಲದಲ್ಲಿ ಹೊರೆಕಾಣಿಕೆ ಸಮರ್ಪಿಸುವ ಕಾರ್ಯಕ್ಕೆ ದೇಗುಲದ ಅಧ್ಯಕ್ಷ ಆನಂದ್ ಸಿ. ಕುಂದರ್ ಚಾಲನೆ ನೀಡಿದರು.

ಕೋಟದ ಜನತಾ ಫಿಶ್ ಮಿಲ್ ಸಂಸ್ಥೆಯು ಬಹೃತ್ ಮೆರವಣಿಗೆಯ ಮೂಲಕ ಹೊರೆಕಾಣಿಕೆಗೆ ಮೊದಲು ದೇಗುಲಕ್ಕೆ ಅರ್ಪಿಸಿದರು. ಶ್ರೀ ದೇಗುಲದಲ್ಲಿ ಅರ್ಚಕ ಅರವಿಂದ ಜೋಗಿ ಸಮ್ಮುಖದಲ್ಲಿ ಪೂಜೆ ಸಲ್ಲಿಸಿಕೊಂಡು ಹಸಿರುಹೊರೆಕಾಣಿಕೆಯನ್ನು ಉಗ್ರಾಣಕ್ಕೆ ಕೊಂಡ್ಯೊಯಲಾಯಿತು.ಡಾ.ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಮುಖ್ಯಸ್ಥ ನಾಡೋಜ ಡಾ.ಜಿ ಶಂಕರ್ ವಿಶೇಷ ಹೊರೆಕಾಣಿಕೆಯನ್ನು ಸಹೋದರ ಶಿವ ಎಸ್. ಕರ್ಕೇರ ಮೂಲಕ ದೇಗುಲದ ಅಧ್ಯಕ್ಷರಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಜನತಾ ಸಂಸ್ಥೆಯ ನಿರ್ದೇಶಕರಾದ ಪ್ರಶಾಂತ್ ಎ ಕುಂದರ್,ದಿವ್ಯಲಕ್ಷ್ಮೀ ಪಿ ಕುಂದರ್, ವೈಷ್ಣವಿ ರಕ್ಷಿತ್ ಕುಂದರ್, ವ್ಯವಸ್ಥಾಪಕರಾದ ಶ್ರೀನಿವಾಸ್ ಕುಂದರ್, ಮಿಥುನ್ ಕುಮಾರ್, ಗೀತಾನಂದ ಸಮಾಜಕಾರ್ಯದ ರವಿ ಕಿರಣ್ ಕೋಟ, ದೇಗುಲದ ಟ್ರಸ್ಟಿಗಳು,ವ್ಯವಸ್ಥಾಪಕರು,ಸಿಬ್ಬಂದಿವರ್ಗ, ಗ್ರಾಮಸ್ಥರು,ಜನತಾ ಸಿಬ್ಬಂದಿ ವರ್ಗ, ಅರ್ಚಕರು ಉಪಸ್ಥಿತರಿದ್ದರು.

ಸುತ್ತಮುತ್ತ

ಪುತ್ತೂರು: ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಪುತ್ತೂರು: ಕಬಕ, ನಗರ, ಬಲ್ನಾಡು (ಕೆದಿಲ), ದರ್ಬೆ, ಕೆಮ್ಮಾಯಿ (ಇಂಡಸ್ಟ್ರಿಯಲ್), ವಾಟರ್ ಸಪ್ಲೈ, ಉಪ್ಪಿನಂಗಡಿ ಓಲ್ಡ್ ಮತ್ತು ರಾಮಕುಂಜ ಫೀಡರ್‌ನಲ್ಲಿ ಫೆ.26ರಂದು ಪೂರ್ವಾಹ್ನ 0 9.30ರಿಂದ ಅಪರಾಹ್ನ 5.30 ಗಂಟೆಯವರೆಗೆ ವಿದ್ಯುತ್ ನಿಲುಗಡೆಯಾಗಲಿದೆ. ಈ ಹಿನ್ನಲೆಯಲ್ಲಿ 110/33/11 ಕೆ.ವಿ. ಪುತ್ತೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಫೀಡರ್‌ನಿಂದ ವಿದ್ಯುತ್ ಸರಬರಾಜಾಗುವ ನಗರ, ಬನ್ನೂರು, ಕೊಡಿಪ್ಪಾಡಿ, ಪಡ್ನೂರು, ಮುರ, ಕಬಕ ಮತ್ತು ವಿದ್ಯಾಪುರ, ಕೆಎಸ್‌ಆರ್‌ಟಿಸಿ, ಟ್ಯಾಕ್ಸಿ ಸ್ಟ್ಯಾಂಡ್, ದೇವಣ್ಣ ಕಿಣಿ ಬಿಲ್ಡಿಂಗ್, ರೂಪಾ ಕಾಂಪ್ಲೆಕ್ಸ್, ಅಕ್ಷಯ ಮೋಟಾರ್ಸ್, ಸಿಟಿ ಸೆಂಟರ್, ಕಲ್ಲಾರೆ, ದರ್ಬೆ ಸರ್ಕಲ್, ಅಶ್ವಿನಿ ಹೋಟೆಲ್, ಬೀರಮಲೆ, ಮಕ್ಕಳ ಮಂಟಪ, ಹನುಮಾನ್ ಮಿಲ್, ಐಬಿ, ಸಿಟಿಓ ರೋಡ್, ಎ.ಪಿ.ಎಂ.ಸಿ. ರೋಡ್, ಸಾಮೆತ್ತಡ್ಕ, ಎಂ.ಟಿ. ರೋಡ್, ಚಿಕ್ಕಪುತ್ತೂರು, ಮಡಿವಾಳಕಟ್ಟೆ, ಬಲ್ನಾಡು, ನವನಗರ, ಪಡೀಲು, ಸಾಲ್ಮರ, ಬೀರ್ನಹಿತ್ತು, ಕೆಮ್ಮಾಯಿ, ಕೃಷ್ಣನಗರ, ಆನೆಮಜಲು, ಬನ್ನೂರು, ಹಲಂಗ, ಸೇಡಿಯಾಪು, ಕೋಡಿಂಬಾಡಿ, ಮಠಂತಬೆಟ್ಟು, ಶಾಂತಿನಗರ, ದಾರಂದಕುಕ್ಕು, ಚಿಕ್ಕಮುಡ್ನೂರು, ಬೆಳ್ಳಿಪ್ಪಾಡಿ, ವಾಟರ್‌ಸಪ್ಲೈ, ಬೆಳ್ಳಿಪ್ಪಾಡಿ, ಹಿರೇಬಂಡಾಡಿ, ಕ್ಯೊಲ ಮತ್ತು ರಾಮಕುಂಜ ಗ್ರಾಮದ ಪರಿಸರದ ವಿದ್ಯುತ್ ಬಳಕೆದಾರರು ಗಮನಿಸಿ ಸಹಕರಿಸುವಂತೆ ಮೆಸ್ಕಾಂ ಪ್ರಕಟನೆ ತಿಳಿಸಿದೆ.

ಬಾಕ್ಸಿಂಗ್ ಸಂಸ್ಥೆಯ ಉಪಾಧ್ಯಕ್ಷರಾಗಿ ಎನ್.ಸಿ. ಸುದರ್ಶನ್



ಮಡಿಕೇರಿ: ದಕ್ಷಿಣ ಭಾರತ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಉಪಾಧ್ಯಕ್ಷರಾಗಿ ಮಾದಾಪುರದ ಎನ್.ಸಿ. ಸುದರ್ಶನ್ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಎನ್.ಸಿ. ಸುದರ್ಶನ್ ಅವರು ಕೊಡಗು ಜಿಲ್ಲೆಯ ನೂರಾರು ವಿದ್ಯಾರ್ಥಿಗಳಿಗೆ ಮಿಕ್ಸ್ ಬಾಕ್ಸಿಂಗ್ ತರಬೇತಿಯನ್ನು ನೀಡಿದ್ದಾರೆ. ಅಲ್ಲದೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪದಕಗಳನ್ನು ಗೆಲ್ಲಲು ಕಾರಣಕರ್ತರಾಗಿದ್ದಾರೆ. ಇಂಡಿಯನ್ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಕೇಶ್ ಎಸ್. ಮಾಸ್ಕರ್ ಅವರು ಎನ್.ಸಿ. ಸುದರ್ಶನ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಆದೇಶ ಪತ್ರ ನೀಡಿದ್ದಾರೆ.

ನೋಟರಿಗಳಾಗಿ ಪವನ್ ಪೆಮ್ಮಯ್ಯ, ಸುನೀಲ್ ಕುಮಾರ್ ನೇಮಕ





ಮಡಿಕೇರಿ: ಮಡಿಕೇರಿ ತಾಲೂಕು ನೋಟರಿಗಳಾಗಿ ಮಡಿಕೇರಿ ವಕೀಲರ ಸಂಘದ ಅಚ್ಚಾಂಡಿರ ಪವನ್ ಪೆಮ್ಮಯ್ಯ ಹಾಗೂ ಸುನಿಲ್ ಕುಮಾರ್ ಜೆ. ನೇಮಕಗೊಂಡಿದ್ದಾರೆ.

ಕೊಡಗು ಜಿಲ್ಲೆಯ ಮಡಿಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಸೃಷ್ಟಿಸಿರುವ ಎರಡು ನೋಟರಿ ಹುದ್ದೆಗಳಿಗೆ ಸರಕಾರ ಇವರನ್ನು ನೇಮಕ ಮಾಡಿದೆ. ಅಚ್ಚಾಂಡಿರ ಪವನ್ ಪೆಮ್ಮಯ್ಯ ಅವರು ಮಡಿಕೇರಿ ವಕೀಲರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು, ಸಮಾಜ ಸೇವೆಯಲ್ಲೂ ಸಕ್ರಿಯರಾಗಿದ್ದಾರೆ.

ಇರುವಂಬಳ್ಳ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಸುಳ್ಯ: ಸುಮಾರು ರೂ.20 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಮಂಡೆಕೋಲು ಗ್ರಾಮದ ಇರುವಂಬಳ್ಳ ಅಂಗನವಾಡಿ ಕೇಂದ್ರದ ಹೊಸ ಕಟ್ಟಡದ ಕಾಮಗಾರಿಗೆ ಶಾಸಕಿ ಭಾಗೀರಥಿ ಮುರುಳ್ಯ ಗುದ್ದಲಿ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭ ಗ್ರಾ.ಪಂ. ನಿಕಟಪೂರ್ವ ಸದಸ್ಯರಾದ ತಿಲಕ ಕುತ್ಯಾಡಿ, ತಾರನಾಥ ಕೊಡೆಂಚಿಕರ್, ಸುಂದರ ಕಾಡುಸೊರಂಜ, ಆಡಳಿತಾಧಿಕಾರಿ ಡಾ. ನಿತಿನ್ ಪ್ರಭು, ಪಿಡಿಒ ರಮೇಶ್ ಪಿ., ಸೊಸೈಟಿ ಮಾಜಿ ಅಧ್ಯಕ್ಷ ಶಿವಪ್ರಸಾದ್ ಉಗ್ರಾಣಿಮನೆ, ರಾಮಕೃಷ್ಣ ರೈ ಪೇರಾಲುಗುತ್ತು, ಶಾಲಾ ಎಸ್‌ಡಿಎಂಸಿ. ಅಧ್ಯಕ್ಷ ಅಬೂಬುಕ್ಕರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಜಯ, ಸುಬೋಧ ಶೆಟ್ಟಿ, ಮೇನಾಲ ಅಂಗನವಾಡಿ ಕಾರ್ಯಕರ್ತೆ ರೇಷ್ಮಾ ಹಾಗೂ ಸಹಾಯಕಿ ಸೀಮ ಅತ್ಯಾಡಿ, ಶಿಕ್ಷಕಿ ಪಲ್ಲವಿ, ಗ್ರಾಮಸ್ಥರಾದ ಹರೀಶ್ ಕುಕ್ಕುಡೇಲು, ಜಯರಾಮ ಬಲಂದೋಟಿ, ತೀರ್ಥೇಶ್ ಬಲಂದೋಟಿ, ಹೊನ್ನಪ್ಪ ಗೌಡಕುತ್ಯಾಡಿ ಕೇಶವ ಬಾಳೆಕೋಡಿ ಬಶಿರ್, ಮುರಳಿ ರೈ, ಪದ್ಮಾವತಿ ಕುತ್ಯಾಡಿ, ರೇವತಿ, ದಾಮೋದರ ಕುತ್ಯಾಡಿ, ತೇಜಾವತಿ ಕುತ್ಯಾಡಿ, ಯಶಸ್ವಿನಿ ಕುತ್ಯಾಡಿ, ಪುಷ್ಪಾವತಿ ಕುತ್ಯಾಡಿ, ಚಂದ್ರಾವತಿ ಕುತ್ತಿಹಾಡಿ, ಕುಸುಮ ಕುತ್ಯಾಡಿ, ಮೊಹಮ್ಮದ್ ಇರುವಂಬಲ್ಲ, ಖಿಯಾಬು ಕೆನಾಜೆ, ರಂಜನ್ ಸೊರಂಜ, ವಿಷ್ಣುಪ್ರಸಾದ್ ಮೀನಗದ್ದೆ ಮತ್ತಿತರರಿದ್ದರು.

ಕಲ್ಲರ್ಪೆಯಲ್ಲಿ ಬೆಂಕಿ ಆಕಸ್ಮಿಕ

ಪುತ್ತೂರು: ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕಲ್ಲರ್ಪೆಯಲ್ಲಿ ಹೆದ್ದಾರಿ ಬದಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಗುಡ್ಡಕ್ಕೆ ಬೆಂಕಿ ಬಿದ್ದ ಘಟನೆ ನಡೆದಿದೆ. ಅಕ್ಕಪಕ್ಕಗಳಲ್ಲಿ ಮನೆಗಳು ಇದ್ದ ಕಾರಣ ತೀವರ ಅಪಾಯದ ಸಂಭವವಿತ್ತು. ಆದರೆ, ಪುತ್ತೂರು ಅಗ್ನಿಶಾಮಕ ದಳದವರು ಆಗಮಿಸಿ ಸಕಾಲದಲ್ಲಿ ಬೆಂಕಿಯನ್ನು ನಂದಿಸಿದ್ದಾರೆ.

ಮಾ.1ಕ್ಕೆ ಹಸಿರು ಹೊರೆಕಾಣಿಕೆ ಸಮರ್ಪಣೆ | ಸಮಿತಿ ಗೌರವಾಧ್ಯಕ್ಷ ಶಾಸಕ ಹರೀಶ್ ಪೂಂಜ ಮಾಹಿತಿ

ಮಾ.1ರಿಂದ 6ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂಭ್ರಮ



ಬೆಳ್ತಂಗಡಿ: ಪದ್ಮುಂಜದ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದೊಂದಿಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮಾ.1ರಿಂದ 6ರವರೆಗೆ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶಾಸಕ ಹರೀಶ್ ಪೂಂಜ ತಿಳಿಸಿದರು.

ಅವರು ಪದ್ಮುಂಜದ ಮಲೆಂಗಲ್ಲು ಉಮಾಮಹೇಶ್ವರ ದೇವಸ್ಥಾನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ.1ರಂದು ಸಾಮೂಹಿಕ ಪ್ರಾರ್ಥನೆಯೊಂದಿಗೆ ವಿವಿಧ ವೈದಿಕ ಕಾರ್ಯಕ್ರಮಗಳು ಉಗ್ರಾಣ ಮುಹೂರ್ತ ನಿತ್ಯ ಅನ್ನಂಸತರ್ಪಣೆ ನಡೆಯಲಿದೆ. ಬೆಳಿಗ್ಗೆ 11:30ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ ಕ್ಷೇತ್ರದ ಆನುವಂಶೀಯ ಮೊಕ್ತೇಸರರಾದ ಚಿದಾನಂದ ರಾವ್ ಕೊಲ್ಲಾಜೆ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಂಗಳೂರು ಕುದ್ರೋಳಿ ಶ್ರೀ ನಾರಾಯಣ ಗುರು ಕಾಲೇಜ್ ಉಪನ್ಯಾಸಕ ಕೇಶವ ಬಂಗೇರ ಧಾರ್ಮಿಕ ಉಪನ್ಯಾಸ ನೀಡಲಿರುವರು. ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕ ಅನಂತ ಪದ್ಮನಾಭ ಆಸ್ರಣ್ಣ ಉಗ್ರಾಣವನ್ನು ಉದ್ಘಾಟಿಸುವರು. ಮೊಗರೋಡಿ ಲಕ್ಷ್ಮೀಶ ಮೇಲಾಂಟ ಕಾರ್ಯಾಲಯ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪ್‌ಸಿಂಹ ನಾಯಕ್ ಹಾಗೂ ಉಜಿರೆ ಕನಸಿನ ಮನೆ ಲಕ್ಷ್ಮೀ ಇಂಡಸ್ಟ್ರೀಸ್ ಕೆ. ಮೋಹನ್ ಕುಮಾರ್ ಭಾಗವಹಿಸುವರು ಎಂದರು.

ಮಾ.2ಕ್ಕೆ ಬೆಳಿಗ್ಗೆಯಿಂದ ಭಜನಾ ಕಾರ್ಯಕ್ರಮ, ವೈದಿಕ ಕಾರ್ಯಕ್ರಮಗಳು, ರಾತ್ರಿ ಧಾರ್ಮಿಕ ಸಭಾ ಕಾರ್ಯಕ್ರಮ ಜರುಗಲಿದೆ. ಕುಕ್ಕೆ ಸುಬ್ರಹ್ಮಣ್ಯದ ಸುಬ್ರಹ್ಮಣ್ಯ ಮಠದ ಜಗದ್ಗುರು ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಮ್ ಶ್ರೀ ವಿಷ್ಣುತೀರ್ಥ ಪೀಠಂ ಶ್ರೀ ಡಾ.ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಆಶೀರ್ವಚನ ನೀಡುವರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಅಧ್ಯಕ್ಷತೆ ವಹಿಸುವರು. ಕಾರ್ಕಳದ ಧಾರ್ಮಿಕ ಚಿಂತಕ, ವಿಮರ್ಶಕ ದಾಮೋದರ ಶರ್ಮ ಧಾರ್ಮಿಕ ಉಪನ್ಯಾಸ ನೀಡಲಿರುವರು. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಆರಿಕೋಡಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ, ಬೆಳ್ತಂಗಡಿ ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವಾರಂ, ಶ್ರೀ ಕ್ಷೇತ್ರ ಧರ್ಮಸ್ಥಳದ ಅನ್ನಪೂರ್ಣ ಛತ್ರದ ಪ್ರಬಂಧಕ ಸುಬ್ರಹ್ಮಣ್ಯ ಪ್ರಸಾದ್ ಧರ್ಮಸ್ಥಳ ಸಹಿತ ಮತ್ತಿತರರು ಭಾಗವಹಿಸುವರು.

ಮಾ.3ಕ್ಕೆ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಅರ್ಧ ಏಕಾಹ ಭಜನೆ, ವೈದಿಕ ವಿಧಿ ವಿಧಾನ, ದೀಪಾರಾಧನೆ, ಕುಂಭೇಶ ಕರ್ಕರೀ ಪೂಜೆ, ಅನುಜ್ಞಾಕಲಶ, ಪರಿಕಲ ಪೂಜೆ, ಕಲಶಾಧಿವಾಸ, ತ್ರಿಕಾಲ ಪೂಜೆ, ಮಹಾಪೂಜೆ ನಡೆಯಲಿದೆ. ಮಾ.4ಕ್ಕೆ ಬೆಳಗ್ಗೆಯಿಂದಲೇ ವೈದಿಕ ಕಾರ್ಯಕ್ರಮಗಳು, ಭಜನೆ ನಡೆಯಲಿರುವುದು. ರಾತ್ರಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠಲ ಶೆಟ್ಟಿ ಕೊಲ್ಲೊಟ್ಟು ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರಿನ ಬಾಲವಾಗ್ಮಿ ಹಾರಿಕಾ ಮಂಜುನಾಥ್ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಮಾ.5ರಂದು ವೈದಿಕ ವಿಧಿ ವಿಧಾನ, ಭಜನಾ ಕಾರ್ಯಕ್ರಮ ನಡೆಯಲಿದೆ.

ಮಾ.6ಕ್ಕೆ ರಾತ್ರಿ ಶಾಸಕ ಹರೀಶ್ ಪೂಂಜ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಆರ್ಶೀವಚನ ನೀಡಲಿರುವರು. ಶ್ರೀಕಾಂತ್ ಶೆಟ್ಟಿ ಕಾರ್ಕಳ ಧಾರ್ಮಿಕ ಉಪನ್ಯಾಸ ನೀಡಲಿರುವರು. ಸಂಸದ ಕ್ಯಾ.ಬ್ರಿಜೇಶ್ ಚೌಟ, ಬರೋಡ ಉದ್ಯಮಿ ಗುರುವಾಯನಕೆರೆ ನವಶಕ್ತಿ ಶಶಿಧರ್ ಶೆಟ್ಟಿ ಬರೋಡ, ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಮ್.ಮೋಹನ್ ಆಳ್ವ, ಹಲೇಜಿ ತನ್ನೋಜಿ ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ಮೊಕ್ತೇಸರರಾದ ಕೆ. ಎನ್. ಆತುಲ್ ಕುಮಾರ್, ಬೆಂಗಳೂರಿನ ಉದ್ಯಮಿ ನಾಗಾರ್ಜುನ ರಾವ್, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ ಮಲಾರುಬೀಡು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ ಮಾತನಾಡಿ, ಕ್ಷೇತ್ರಕ್ಕೆ ತೆರಳುವ ರಸ್ತೆಯನ್ನು ಶಾಸಕರು ಡಾಮರೀಕರಣ ಮಾಡಿಕೊಟ್ಟಿದ್ದಾರೆ. ಉತ್ಸವಕ್ಕೆ ದಿನಗಣಣೆ ಆರಂಭಗೊಂಡಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು, ಅನುವಂಶೀಯ ಆಡಳಿತ ಮೊಕ್ತೇಸರರಾದ ಚಿದಾನಂದ ರಾವ್ ಕೊಲ್ಲಾಜೆ, ಕಾರ್ಯದರ್ಶಿ ಜಿತೇಶ್ ಜೈನ್, ಕೋಶಾಧಿಕಾರಿ ರಕ್ಷಿತ್ ಪಣಕ್ಕರ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠ್ಠಲ ಶೆಟ್ಟಿ ಕೊಲ್ಲೊಟ್ಟು, ಕಲಶ ಸಮಿತಿ ಸಂಚಾಲಕಿ ಶಾರದಾ ರೈ ಮುಗೆರೋಡಿ ಹಾಗೂ ಪ್ರಚಾರ ಸಮಿತಿ ಸಂಚಾಲಕ ಪ್ರದೀಪ್ ಶೆಟ್ಟಿ ಮಲೆಂಗಲ್ಲು ಉಪಸ್ಥಿತರಿದ್ದರು.

> ಮಾ.6ಕ್ಕೆ ಬೆಳಗ್ಗೆ ಗಂಟೆ 5ರಿಂದ ಮಹಾಗಣಪತಿ ಹೋಮ, ಗಂಟೆ 10.44ರಿಂದ 11.50ರವರೆಗೆ ನಡೆಯುವ ವೃಷಭ ಲಗ್ನ ಶುಭ ಮುಹೂರ್ತದಲ್ಲಿ ಶ್ರೀದೇವರಿಗೆ ಅಷ್ಟಬಂಧ ಕ್ರಿಯೆ, ಬ್ರಹ್ಮಕಲಶಾಭಿಷೇಕ ಶ್ರೀ ಮಹಾಗಣಪತಿ ದೇವರ ಪುನಃ ಪ್ರತಿಷ್ಠೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ವೈದಿಕ ಮಂತ್ರಾಕ್ಷತೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ. ರಾತ್ರಿ 7ಕ್ಕೆ ಶ್ರೀದೇವರಿಗೆ ಮಹಾರಂಗಪೂಜೆ ಹಾಗೂ ಪಿಲಿಚಾಮುಂಡಿ ದೈವದ ನರ್ತನ ಸೇವೆ ನಡೆಯಲಿರುವುದು. ಮಾ.1ಕ್ಕೆ ಪದ್ಮುಂಜ ಶ್ರೀ ಕಲ್ಕುಡ ದೈವಸ್ಥಾನದಿಂದ ಚೆಂಡೆ-ಘೋಷಗಳ ವೈಭಯುತ ಮೆರವಣಿಗೆಯೊಂದಿಗೆ ಹಸಿರು ಹೊರೆಕಾಣಿಕೆ ಸಮರ್ಪಣೆಯಾಗಲಿದೆ.
>
> ● ಹರೀಶ್ ಪೂಂಜ, ಶಾಸಕ

ಮಂಗಳೂರಿನಲ್ಲಿ ನೂತನ ಎಲ್‌ಐಸಿ ಮ್ಯೂಚುವಲ್ ಫಂಡ್ ಕಚೇರಿ ಉದ್ಘಾಟನೆ



ಮಂಗಳೂರು: ಎಲ್‌ಐಸಿ ಮ್ಯೂಚುವಲ್ ಫಂಡ್ ಮಂಗಳೂರು ನಗರದಲ್ಲಿ ಸುಸಜ್ಜಿತ, ಅತ್ಯಾಧುನಿಕ ಹಾಗೂ ವಿಶಾಲ ಕಚೇರಿಯನ್ನು ಬುಧವಾರ ಆರಂಭಿಸಿದೆ.

ಹೂಡಿಕೆದಾರರಿಗೆ ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಮತ್ತು ದಕ್ಷಿಣ ಭಾರತದ ವೇಗವಾಗಿ ಬೆಳೆಯುತ್ತಿರುವ ಎರಡನೇ ಹಂತದ ನಗರಗಳಲ್ಲಿ ತನ್ನ ವ್ಯಾಪ್ತಿ ಬಲಪಡಿಸುವ ನಿಟ್ಟಿನಲ್ಲಿ ಈ ಹೆಜ್ಜೆ ಇಟ್ಟಿದೆ ಎಂದು ಕಂಪನಿ ಪ್ರಕಟಿಸಿದೆ.

ನವಭಾರತ ಸರ್ಕಲ್ ಬಳಿಯ ರಾಮಭವನ ಕಾಂಪ್ಲೆಕ್ಸ್ ಮೊದಲನೇ ಮಹಡಿಯಲ್ಲಿರುವ ಕಚೇರಿ, ಸಮಗ್ರ ಸೇವೆ, ವಿತರಕರಿಗೆ ಮೀಸಲಾದ ನೆರವು ಮತ್ತು ಎಲ್‌ಐಸಿ ಎಂಎಫ್‌ನ ಎಲ್ಲ ಈಕ್ವಿಟಿ, ಡೆಟ್, ಹೈಬ್ರೀಡ್ ಹಾಗೂ ಪರಿಹಾರ ಆಧರಿತ ಯೋಜನೆಗಳನ್ನು ಅನುಕೂಲಕರ ರೀತಿಯಲ್ಲಿ ಒದಗಿಸುತ್ತದೆ.

ಮಂಗಳೂರಿನಲ್ಲಿ 535ಕ್ಕೂ ಹೆಚ್ಚು ಸಕ್ರಿಯ ಮ್ಯೂಚುವಲ್ ಫಂಡ್ ವಿತರಕರಿದ್ದು, ಹೂಡಿಕೆದಾರರಿಗೆ ಮತ್ತು ಪಾಲುದಾರರಿಗೆ ಉತ್ತಮ ನೆರವು, ವೇಗದ ಸೇವೆ ಮತ್ತು ಉತ್ತಮ ಅನುಭವ ಒದಗಿಸುವ ದೃಷ್ಟಿಯಿಂದ ಸುಧಾರಿತ ಶಾಖೆ ತೆರೆಯಲಾಗಿದೆ ಎಂದು ಉದ್ಘಾಟನೆ ನೆರವೇರಿಸಿದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರವಿಕುಮಾರ್ ಝಾ ಹೇಳಿದ್ದಾರೆ.

ಎಲ್‌ಐಸಿ ಮ್ಯೂಚುವಲ್ ಫಂಡ್ ಮಂಗಳೂರಿನಲ್ಲಿ 2026ರ ಜನವರಿ ಅಂತ್ಯದ ವೇಳೆಗೆ 281.29 ಕೋಟಿ ರೂಪಾಯಿ ಆಸ್ತಿ ನಿರ್ವಹಿಸುತ್ತಿದೆ. ಈಕ್ವಿಟಿ ವಿಭಾಗದಲ್ಲಿ 247.80 ಕೋಟಿ ಹಾಗೂ ನಗದು ರೂಪದಲ್ಲಿ 6.10 ಕೋಟಿ, ಧೀರ್ಘಾವಧಿ ಸಾಲ ನಿಧಿಯಲ್ಲಿ 8.46 ಕೋಟಿ, ಅಲ್ಪಾವಧಿ ಸಾಲ ನಿಧಿಯಲ್ಲಿ 15.65 ಕೋಟಿ ಹಾಗೂ ಇಟಿಎಫ್ ವಿಭಾಗದಲ್ಲಿ 3.28 ಕೋಟಿ ರೂಪಾಯಿ ಹೂಡಿಕೆಯಾಗಿದೆ ಎಂದು ವಿವರಿಸಿದ್ದಾರೆ.

ಉರ್ವ: ಅಂತರ್‌ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟದ ಸಮಾರೋಪ ಸಮಾರಂಭ



ಮಂಗಳೂರು: ದ.ಕ. ಜಿಲ್ಲಾ ಅತ್ಯುತ್ತಮ ಯುವ ಮಂಡಲ ಪ್ರಶಸ್ತಿ ಪುರಸ್ಕೃತ ಅಶೋಕನಗರ ಯುವಕ ಸಂಘದ 65ನೇ ವರ್ಷಾಚರಣೆ ಪ್ರಯುಕ್ತ ಅಂತರ್‌ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟದ ಸಮಾರೋಪ ಸಮಾರಂಭ ಉರ್ವ ಕೆನರಾ ಹೈಸ್ಕೂಲ್‌ನಲ್ಲಿ ಸಂಘದ ಅಧ್ಯಕ್ಷ ಜಯರಾಮ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೊಬೈಲ್‌ನಿಂದ ದೂರಗೊಳಿಸಿ

ಮುಖ್ಯ ಅತಿಥಿಯಾಗಿದ್ದ ಧಾರ್ಮಿಕ ಪ್ರವಚನಕಾರ ಯು. ಮಾಧವ ಸುವರ್ಣ ಮಾತನಾಡಿ, ಅಶೋಕನಗರ ಯುವಕ ಸಂಘ ಮಹಾನ್ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ. ಪುಟ್ಟ ಮಕ್ಕಳನ್ನು ಮೊಬೈಲ್‌ನಿಂದ ದೂರಗೊಳಿಸಿ ಅವರನ್ನು ಚದುರಂಗ ಆಟಕ್ಕೆ ತರಬೇತುಗೊಳಿಸಿ ಪಂದ್ಯಾಟಕ್ಕೆ ಕರೆತಂದಿರುವ ಹೆತ್ತವರ ಕಾರ್ಯ ಸ್ತುತ್ಯರ್ಹ ಎಂದು ಹೇಳಿದರು.

ಪ್ರಿಯಾ ಇಂಜಿನಿಯರ್ಸ್ ಹೊಯಿಗೆಬೈಲ್ ಇದರ ಮಾಲಕ ಯು. ದಿಲೀಪ್ ಕುಮಾರ್ ಮಾತನಾಡಿ, ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು.

ದ.ಕ. ಜಿಲ್ಲಾ ಚೆಸ್ ಅಸೋಸಿಯೇಶನ್ ಮುಖ್ಯ ತೀರ್ಪುಗಾರ ಸಾಕ್ಷಾತ್ ಯು. ಕೆ., ಸಂಘದ ಗೌರವಾಧ್ಯಕ್ಷ ಜೋಸೆಫ್ ಲೋಬೊ, ಕ್ರೀಡಾ ಸಂಚಾಲಕ ಬಿ.ಶ್ರೀನಿವಾಸ ಕರ್ಕೇರ ಉಪಸ್ಥಿತರಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಶ್ರೀನಿವಾಸ ಸ್ವಾಗತಿಸಿ ನಿರೂಪಿಸಿದರು. ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ವಾಸುದೇವ ಶೆಟ್ಟಿಗಾರ್ ವಂದಿಸಿದರು. ಮುಖ್ಯ ತೀರ್ಪುಗಾರ ಸಾಕ್ಷಾತ್ ಯು. ಕೆ. ವಿಜೇತ ಮಕ್ಕಳಿಗೆ ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಚೆಸ್ಟ್ ಅಕಾಡೆಮಿ ಪ್ರಥಮ ಸ್ಥಾನವನ್ನು ಮಂಗಳೂರಿನ ರಾವ್ಸ್ ಚೆಸ್ ಕಾರ್ನರ್, ದ್ವಿತೀಯ ಸ್ಥಾನ ವೆಸ್ಟರ್ ಚೆಸ್ ಅಕಾಡೆಮಿ ವಿಟ್ಲ, ತೃತೀಯ ಸ್ಥಾನ ಶ್ರೀ ನಾರಾಯಣಗುರು ಸ್ಕೂಲ್ ಆಫ್ ಚೆಸ್ ಕಾಮ ಪಡೆದರು. ಒಟ್ಟು 194 ಸ್ಪರ್ಧಾಳುಗಳು ಭಾಗವಹಿಸಿದ್ದು, ಒಟ್ಟು 85 ಪ್ರಶಸ್ತಿಯನ್ನು ವಿತರಿಸಲಾಯಿತು.

ಶ್ರೀ ರಾಮಕುಂಜೇಶ್ವರ ಕಾಲೇಜಿನಲ್ಲಿ ಎನ್ನೆಸ್ಸೆಸ್ ಚಟುವಟಿಕೆ ಸಮಾರೋಪ



ಕಡಬ: ಶ್ರೀ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಮಾರೋಪ ಸಮಾರಂಭವು ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕ ವಸಂತ ಕುಮಾರ್ ಮಾತನಾಡಿ,, ರಾಷ್ಟ್ರೀಯ ಸೇವಾ ಯೋಜನಾ ಘಟಕವು ವಿದ್ಯಾರ್ಥಿಗಳಲ್ಲಿ ಸ್ವತ್ವದ ಭಾವನೆ ಮೂಡಿಸುತ್ತದೆ. ಈ ನೆಲ, ಪರಿಸರ, ಸಮಾಜ ನನ್ನದು ಎಂದು ಭಾವಿಸಿದಾಗ ಮಾತ್ರವೇ ಸೇವೆ ಮಾಡಲು ಸಾಧ್ಯ. ಇಂತಹ ಸೇವೆ ಮಾಡಿದ ಕಾಲೇಜಿನ ಎನ್ನೆಸ್ಸೆಸ್ ಘಟಕವು ಮುಂದಿನ ವರ್ಷ ಇನ್ನಷ್ಟು ಸಾಧನೆಗಳನ್ನು ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಕೆ. ಅಧ್ಯಕ್ಷತೆ ವಹಿಸಿದ್ದರು. ಘಟಕದ ಯೋಜನಾಧಿಕಾರಿ ಕೀರ್ತನ್ ವರದಿ ವಾಚಿಸಿದರು. ಇದೇ ಸಂದರ್ಭ ಹಿರಿಯ ಉಪನ್ಯಾಸಕ ವಸಂತ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ರಾಷ್ಟ್ರೀಯ ಸೇವಾ ಯೋಜನೆ ಘಟಕದ ನಾಯಕ ಲಿಖಿತ್ ರೈ ಮತ್ತು ನಾಯಕಿ ರಕ್ಷಾ ಜೆ. ರೈ ತಮ್ಮ ಅನಿಸಿಕೆ ಹಂಚಿಕೊಂಡರು. ಸಹ ಯೋಜನಾಧಿಕಾರಿ ಶಿವಪ್ರಸಾದ್ ಮತ್ತು ಅಕ್ಷತಾ ಇದ್ದರು. ಶ್ರಾವ್ಯ ಸ್ವಾಗತಿಸಿ, ಕುಶಾಂತ್ ವಂದಿಸಿದರು. ಶಹನಿ ಮತ್ತು ಬಳಗದವರು ಪ್ರಾರ್ಥಿಸಿದರು. ಸ್ವಯಂ ಸೇವಕ ವೈಶಿಕಾ ನಿರೂಪಿಸಿದರು.

ಬೋಳಂಗಡಿಯಲ್ಲಿ ದಿವ್ಯಾಂಗ ಮಕ್ಕಳಿಗೆ ಸಹಾಯಧನ, ಸೇವಾ ರತ್ನ ಪ್ರಶಸ್ತಿ ಪ್ರದಾನ



ಬಂಟ್ವಾಳ: ಮೆಲ್ಕಾರ್ ಸಮೀಪದ ಬೋಳಂಗಡಿಯ ಅಮ್ಮ ಸ್ವೀಟ್ಸ್ ಇದರ 17ನೇ ವಾರ್ಷಿಕೋತ್ಸವದ ಪ್ರಯುಕ್ತ ಬೋಳಂಗಡಿ ಶಾಲಾ ವಠಾರದಲ್ಲಿ ದಿವ್ಯಾಂಗ ಮಕ್ಕಳಿಗೆ ಸಹಾಯಧನ ವಿತರಣೆ ಹಾಗೂ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಲಯನ್ ದಾಮೋದರ್ ಬಿ.ಎಂ. ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಉದ್ಯಮಿ ಸತೀಶ್ ಆಚಾರ್ಯ ಕಾರ್ಯಕ್ರಮ ಉದ್ಘಾಟಿಸಿದರು. ತಾಲೂಕು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ರೇಖಾ, ಪತ್ರಕರ್ತ ಲತೀಫ್ ನೇರಳಕಟ್ಟೆ, ನಾಗ ಸುಜ್ಞಾನ ಫ್ರೆಂಡ್ಸ್‌ನ ಸ್ಥಾಪಕಾಧ್ಯಕ್ಷ ನಾಗರಾಜ ಕಲ್ಲಡ್ಕ, ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ ಉಪಾಧ್ಯಕ್ಷ ಜನಾರ್ದನ ಕುಲಾಲ್ ಬೊಂಡಾಲ, ಉದ್ಯಮಿ ಎಂ.ಎನ್. ಮೆಲ್ಕಾರ್, ದುರ್ಗಾದಾಸ್ ಕಾಮತ್ ಭಾಗವಹಿಸಿದ್ದರು.

ಇದೇ ವೇಳೆ ನಿವೃತ್ತ ಶಿಕ್ಷಕ ಕೇಶವ ಮಾಸ್ತರ್, ಶಂಭೂರು ಅಂಗನವಾಡಿ ಕೇಂದ್ರದ ಸಹಾಯಕಿ ಸುನೀತಾ, ಪನೋಲಿಬೈಲು ಅಂಗನವಾಡಿ ಕೇಂದ್ರದ ಸಹಾಯಕಿ ಯಮುನಾ ಹಾಗೂ ಗುಡ್ಡೆಯಂಗಡಿ ಅಂಗನವಾಡಿ ಕೇಂದ್ರದ ಸಹಾಯಕಿ ಶಕುಂತಲಾ ಅವರಿಗೆ 2026ರ ಅಮ್ಮ ಸೇವಾ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಬಂಟ್ವಾಳ ಪುರಸಭಾ ಮಾಜಿ ಸದಸ್ಯೆ ವಸಂತಿ ಗಂಗಾಧರ್, ಅಮ್ಮ ಸ್ವೀಟ್ಸ್ ಮಾಲಕ ಜನಾರ್ದನ, ಅವರ ಪತ್ನಿ ವನಿತಾ ಸಹೋದರ ರವೀಂದ್ರ, ಪುತ್ರಿ ಜಿಶಾ ಇದ್ದರು. ನಿತಿನ್ ಶೆಟ್ಟಿ ಶಂಭೂರು ವಂದಿಸಿದರು. ಚೇತನ್ ಶೆಟ್ಟಿ ಮಂಗಳೂರು ಸ್ವಾಗತಿಸಿದರು.

ಗಣರಾಜ್ಯೋತ್ಸವದ ನೃತ್ಯ ತಂಡದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾತ್ವಿಕ ಭಟ್‌ಗೆ ಸನ್ಮಾನ



ಬಂಟ್ವಾಳ: ಕರ್ನಾಟಕ - ಗೋವಾ ಎನ್.ಸಿ.ಸಿ. ಡೈರೆಕ್ಟೋರೇಟ್ ವತಿಯಿಂದ 2026ರ ದೆಹಲಿ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾದ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ವಿಭಾಗದ ನೃತ್ಯ ತಂಡದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಗಳಿಸಿದ ಸಾತ್ವಿಕ ಆರ್. ಭಟ್ ಅವರನ್ನು ಕಲಾ ಸಂಗಮ ನಡುಬೈಲು ಹಾಗೂ ಸ್ಥಳೀಯ ನಾಗರಿಕರ ಪರವಾಗಿ ಅವರ ನಿವಾಸದಲ್ಲಿ ಗೌರವಾಭಿನಂದನೆ ಸಲ್ಲಿಸಲಾಯಿತು.

ಬಂಟ್ವಾಳ ತಾಲೂಕು ಪುದು ಗ್ರಾಮದ ನಡುಬೈಲು ದಿ ಕೃಷ್ಣ ಭಟ್ ರ ಮೊಮ್ಮಗಳು, ರವಿರಾಜ್ ಭಟ್ ಹಾಗೂ ಅರ್ಚನಾ ಅವರ ಪುತ್ರಿಯಾಗಿರುವ ಸಾತ್ವಿಕ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್ ಬಳಿಕ ಪ್ರದರ್ಶನಗೊಂಡ ನೃತ್ಯ ತಂಡದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಗಮನಸೆಳೆದಿದ್ದರು. ಹಿರಿಯರಾದ ಶಕುಂತಲಾ ಭಟ್, ರವಿರಾಜ್ ಭಟ್, ಅರ್ಚನಾ ಭಟ್, ಬಾಲಸುಬ್ರಮಣ್ಯ ಭಟ್, ಶ್ವೇತಾ ಭಟ್, ಪಿ. ಸುಬ್ರಮಣ್ಯ ರಾವ್, ಸುರೇಶ ಪೂಜಾರಿ ನಡುಬೈಲ್, ದಿನೇಶ್ ಶೆಟ್ಟಿ ಕೊಟ್ಟಿಂಜ, ಸಂತೋಷ್ ಕುಲಾಲ್ ನೆತ್ತರಕೆರೆ, ಗಿರೀಶ್ ಶೆಟ್ಟಿ ಕುಂಪನಮಜಲು, ಮನೋಜ್ ಶರ್ಮ, ರವಿ ನಡುಬೈಲು, ಕಿಶೋರ್ ನಡುಬೈಲು, ಮೋಹನದಾಸ, ಸುಮಂತ್, ಪೂರ್ವಿಕ್ ಹಾಗೂ ಕಲಾ ಸಂಗಮದ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಕೆಎಂಸಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರದಲ್ಲಿ ಆಪರೇಷನ್ ಥಿಯೇಟರ್ ಉದ್ಘಾಟನೆ



ಉಡುಪಿ: ಕರ್ನಾಟಕದ ಪ್ರಮುಖ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರಗಳಲ್ಲಿ ಒಂದಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ, ಮಂಗಳವಾರ ಶಿರ್ಡಿ ಸಾಯಿಬಾಬಾ ಕ್ಯಾನ್ಸರ್ ಕೇಂದ್ರದಲ್ಲಿ ಹೊಸದಾಗಿ ಸ್ಥಾಪಿಸಲಾದ ಮಕ್ಕಳ ಕ್ಯಾನ್ಸರ್ ಅಸ್ಥಿ ಮಜ್ಜೆ ಕಸಿ ಘಟಕ ಮತ್ತು ಕ್ಯಾನ್ಸರ್ ಶಸ್ತ್ರ ಚಿಕಿತ್ಸಾ ಆಪರೇಷನ್ ಥಿಯೇಟರ್ ಉದ್ಘಾಟನೆಗೊಂಡಿದೆ.

ಮಾಹೆ ಮಣಿಪಾಲದ ಮುಖ್ಯ ಕಾರ್ಯಾಚರಣಾ ಅಧಿಕಾರಿ ಡಾ. ಆನಂದ್ ವೇಣುಗೋಪಾಲ್ ಅವರು ಉದ್ಘಾಟಿಸಿದರು. ಬಳಿಕ ಮಾತನಾಡಿ, ಈ ಸಂದರ್ಭದಲ್ಲಿ ಮಾತನಾಡಿದ ಸುಧಾರಿತ ಸೌಲಭ್ಯಗಳ ಸೇರ್ಪಡೆಯು ಮಣಿಪಾಲ ಸಮಗ್ರ ಕ್ಯಾನ್ಸರ್ ಕೇಂದ್ರದ ಸಾಮರ್ಥ್ಯಗಳನ್ನು ಮತ್ತಷ್ಟು ಬಲಪಡಿಸುತ್ತದೆ ಎಂದರು.

ಹೊಸದಾಗಿ ಉದ್ಘಾಟನೆಗೊಂಡ ಮಕ್ಕಳ ಆಂಕೊಲಾಜಿ ಬಿಎಂಟಿ ಘಟಕವು ಸುಧಾರಿತ ಮೂಲಸೌಕರ್ಯ, ವಿಶೇಷ ಐಸೋಲೇಷನ್ ಕೊಠಡಿಗಳು ಮತ್ತು ಅಸ್ಥಿಮಜ್ಜೆಯ ಕಸಿಗೆ ಅಂತರರಾಷ್ಟ್ರೀಯ ಮಾನದಂಡಗಳನ್ನು ಪೂರೈಸಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಸೋಂಕು-ನಿಯಂತ್ರಣ ಕ್ರಮಗಳನ್ನು ಹೊಂದಿದೆ. ಹೊಸ ಕ್ಯಾನ್ಸರ್ ಶಸ್ತ್ರ ಚಿಕಿತ್ಸಾ ಆಪರೇಷನ್ ಥಿಯೇಟರ್ ಅನ್ನು ಸುರಕ್ಷತೆ ಮತ್ತು ನಿಖರತೆಯೊಂದಿಗೆ ಸಂಕೀರ್ಣ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ.

ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯಾಚರಣಾ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ, ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ, ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ನವೀನ ಕುಮಾರ್ ಎ.ಎನ್ ಮತ್ತು ಮಕ್ಕಳ ಆಂಕೊಲಾಜಿ ವಿಭಾಗದ ಮುಖ್ಯಸ್ಥ ಡಾ. ವಾಸುದೇವ ಭಟ್ ಕೆ ಉಪಸ್ಥಿತರಿದ್ದರು.

ಶ್ರೀ ಗುರುಮಠ ಕಾಳಿಕಾಂಬಾ ದೇವಸ್ಥಾನದ ವರ್ಷಾವಧಿ ಮಹೋತ್ಸವದಲ್ಲಿ ಆನೆಗುಂದಿ ಕಾಳಹಸ್ತೇಂದ್ರ ಸ್ವಾಮೀಜಿ ಆಶೀರ್ವಚನ

ದೇಶದ ರಕ್ಷಣಾ ರಂಗಕ್ಕೆ ಕೊಡುಗೆಯಾಗಬಲ್ಲ ಆವಿಷ್ಕಾರಗಳು ಮೂಡಿಬರಲಿ



ಮೂಡುಬಿದಿರೆ: ಸಾಂಪ್ರದಾಯಿಕವಾಗಿ ತಾಂತ್ರಿಕ ಕೌಶಲವನ್ನು ಸಹಜವಾಗಿ ಮೈಗೂಡಿಸಿಕೊಂಡಿರುವ ವಿಶ್ವಕರ್ಮ ಸಮಾಜದವರು ಆಧುನಿಕ ಶಿಕ್ಷಣ ಪಡೆದು ದೇಶಕ್ಕೆ ಕೊಡುಗೆಯಾಗಬಲ್ಲ ಆವಿಷ್ಕಾರಗಳನ್ನು ರೂಪಿಸಿಕೊಡುವಲ್ಲೂ ಮುಂದೆ ಬರಬೇಕಾಗಿದೆ. ವಿಶೇಷವಾಗಿ ಯುವಪ್ರತಿಭೆಗಳು ರಕ್ಷಣಾ ರಂಗದಲ್ಲಿ ಸ್ವಾವಲಂಬಿಗಳಾಗುವಂಥ ಸಂಶೋಧನೆಗಳನ್ನು ನಡೆಸುವ ಮೂಲಕ ರಕ್ಷಣಾ ರಂಗದ ಕೆಲವೊಂದು ವಿಷಯಗಳಲ್ಲಿ ವಿದೇಶಗಳ ಅವಲಂಬನೆಯಿಂದ ನಾವು ಮುಕ್ತರಾಗಬಹುದು ಎಂದು ಆನೆಗುಂದಿ ಪಡುಕುತ್ಯಾರು ಶ್ರೀ ಕಾಳಹಸ್ತೇಂದ್ರ ಸರಸ್ವತೀ ಪೀಠಾಧೀಶ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಶ್ರೀ ಗುರುಮಠ ಕಾಳಿಕಾಂಬಾ ದೇವಸ್ಥಾನದ ವರ್ಷಾವಧಿ ಮಹೋತ್ಸವದಂಗವಾಗಿ ಬುಧವಾರ ನಡೆದ ಧಾರ್ಮಿಕ ಸಭೆಯಲ್ಲಿ ಸಾಧಕರನ್ನು ಸಮ್ಮಾನಿಸಿ ಆಶೀರ್ವಚನವಿತ್ತು ದೇವಸ್ಥಾನದ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಧಕರಿಗೆ ಸನ್ಮಾನ

ಡ್ರೋನ್ ತಯಾರಿಕೆಯಲ್ಲಿ ವಿಶ್ವಮಟ್ಟದಲ್ಲಿ ಎರಡು ದಾಖಲೆಗಳನ್ನು ಮಾಡಿರುವ, ಎಂಆರ್ ಪಿಎಲ್ ನಡೆಲ್ಲಿ ಪಬ್ಲಿಕ್ ಸ್ಕೂಲ್‌ನ 6ನೇ ತರಗತಿ ವಿದ್ಯಾರ್ಥಿ ಈಶಾನ ವಿಕ್ರಮ ಪಾಲ್ತಾಡಿ ಅವರನ್ನು ಸಮ್ಮಾನಿಸಲಾಯಿತು. ಪಡುಮಾರ್ನಾಡು ಗ್ರಾಮಕೂಡುವಳಿಕೆ ಮೊಕ್ತೇಸರರಾಗಿ 29 ವರ್ಷಗಳಿಂದ ಸೇವೆ ಸಲ್ಲಿಸುತ್ತ ಬರುತ್ತಿರುವ ಪುರೋಹಿತ ಜಗನ್ನಾಥ ಆಚಾರ್ಯ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತೆ ಪ್ರಾಂತ್ಯ ಸ.ಪ್ರೌಢಶಾಲಾ ಸಹಶಿಕ್ಷಕಿ ರತ್ನಾವತಿ ಆಚಾರ್ ಕೆ. ಹಾಗೂ ಶ್ರವಣ ಮತ್ತು ವಾಕ್ ದೋಷವಿದ್ದರೂ ಚಿತ್ರ ಮತ್ತು ಶಿಲ್ಪಕಲೆಯಲ್ಲಿ ಬೆಳಗುತ್ತಿರುವ ಕಾಪು ಸುಭಾಷ್ ನಗರದ ಯುವ ಕಲಾವಿದ ಅಖಿಲೇಶ್ ಆಚಾರ್ಯ ಅವರನ್ನು ಸನ್ಮಾನಿಸಲಾಯಿತು.

ಮುಖ್ಯಅತಿಥಿ, ಕಟಪಾಡಿ ವೇಣುಗಿರಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಮುರಹರಿ ಆಚಾರ್ಯ ಮಾತನಾಡಿದರು. ದೇವಸ್ಥಾನದ ಆಡಳಿತ ಮೊಕ್ತೇಸರ ಎಂ.ಕೆ. ಬಾಲಕೃಷ್ಣ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಎರಡನೇ ಮೊಕ್ತೇಸರ ಶಿವರಾಮ ಆಚಾರ್ಯ ಉಳಿಯ ಸ್ವಾಗತಿಸಿ ಪ್ರಸ್ತಾವನೆಗೈದರು.

ದಿ. ಸುನಂದಾ ಭಾಸ್ಕರ ಆಚಾರ್ಯ ಪಾಲ್ತಾಡಿ ಸಂಸ್ಮರಣಾರ್ಥ ಸರಕಾರಿ ಶಾಲೆಗಳಲ್ಲಿ ಪ್ರಥಮ ಸ್ಥಾನಿ ದರೆಗುಡ್ಡೆ ಸ. ಪ್ರೌಢಶಾಲೆಯ ಪದ್ಮಶ್ರೀ ಶ್ರೀಪಾದ ಹೆಗ್ಡೆ, ಅತಿಹೆಚ್ಚು ಅಂಕ ಗಳಿಸಿದ ವಿಶ್ವಕರ್ಮ ವಿದ್ಯಾರ್ಥಿನಿ, ಮೂಡುಮಾರ್ನಾಡು ಸ. ಪ್ರೌಢಶಾಲೆಯ ಲಿಖಿತಾ ವಸಂತ ಆಚಾರ್ಯ ಅವರಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಪಿಯುಸಿಯಲ್ಲಿ ಗರಿಷ್ಠ ಅಂಕಗಳಿಸಿದ ಶರಣ್ಯ ರವೀಂದ್ರ ಆಚಾರ್ಯ ಮುರಗೋಳಿ ಇವರಿಗೆ ಬಿ.ಲಕ್ಷ್ಮಣ ಆಚಾರ್ಯ-ಸರಸ್ವತಿ ಸಂಸ್ಮರಣ ವಿದ್ಯಾರ್ಥಿ ವೇತನ ನೀಡಲಾಯಿತು. ಶಾಂತಲಾ ಎಸ್. ಆಚಾರ್ಯ, ಚಿತ್ರಾಕ್ಷ ಆಚಾರ್ಯ ಅವರನ್ನು ವಿಶೇಷವಾಗಿ ಗೌರವಿಸಲಾಯಿತು. ಶ್ರೀ ಕಾಳಿಕಾಂಬಾ ಸೇವಾ ಸಮಿತಿ ಅಧ್ಯಕ್ಷ ಶ್ರೀನಾಥ ಆಚಾರ್ಯ, ಮಹಿಳಾ ಸಮಿತಿ ಅಧ್ಯಕ್ಷೆ ಶಾಂತಲಾ ಎಸ್. ಆಚಾರ್ಯ ಇದ್ದರು. ಮೂರನೇ ಮೊಕ್ತೇಸರ ಯೋಗೀಶ ಆಚಾರ್ಯ ವಂದಿಸಿದರು. ಗೀತಾ ಯೋಗೀಶ್, ಶಶಿಧರ ಆಚಾರ್ಯ, ಯಮುನಾ ಯೋಗೀಶ್ ಸನ್ಮಾನ ಪತ್ರ ವಾಚಿಸಿದರು. ಬೇಲಾಡಿ ಜಗದೀಶ ಆಚಾರ್ಯ ಮತ್ತು ಧನಂಜಯ ಮೂಡುಬಿದಿರೆ ನಿರೂಪಿಸಿದರು.

ಸುತ್ತ ಮುತ್ತ



ವರ್ಕಾಡಿ ಕೊಂಡೆವೂರು ಶ್ರೀ ಅನಂತಪದ್ಮನಾಭ ದೇವಸ್ಥಾನ ಮಂಜೇಶ್ವರ ವಾರ್ಷಿಕ ಜಾತ್ರೆ ಅಂಗವಾಗಿ ದೇವರ ಬಲಿ ಉತ್ಸವ ಜರಗಿತು.

ಮಲ್ಲ ದೇಗುಲದಲ್ಲಿ ವಾರ್ಷಿಕ ಜಾತ್ರೆ

ಕಾಸರಗೋಡು: ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ಫೆ.27ರಿಂದ ಮಾ.5ರ ವರೆಗೆ ಜರಗಲಿದೆ.
ಫೆ.27ರಂದು ರಾತ್ರಿ 8ಕ್ಕೆ ಧ್ವಜಾರೋಹಣ ಬಳಿಕ ಶ್ರೀ ಭೂತಬಲಿ ನಡೆಯಲಿದೆ. ಫೆ.28ರಿಂದ ಮಾ.3ರ ತನಕ ದಿನಂಪ್ರತಿ ಬೆಳಗ್ಗೆ 7.30ಕ್ಕೆ ಶ್ರೀ ಭೂತಬಲಿ, ತುಲಾಭಾರ ಸೇವೆ, ಮಧ್ಯಾಹ್ನ ಮಹಾಪೂಜೆ, ರಾತ್ರಿ 9ಕ್ಕೆ ಶ್ರೀ ಭೂತಬಲಿ, ಪಾಲಕಿ ಸೇವೆ, ನೃತ್ಯ, ಮಾ.2ರಂದು ರಾತ್ರಿ ಅಮ್ಮಂಗೋಡು ಕಟ್ಟೆಪೂಜೆ (ನಡು ದೀಪೋತ್ಸವ), ಮಲ್ಲ ಶ್ರೀ ದುರ್ಗಾಪರಮೇಶ್ವರಿ ಭಜನಾ ಸಂಘದವರಿಂದ ಭಜನೆ ನೆರವೇರಲಿದೆ. ಮಾ.3ರಂದು ರಾತ್ರಿ 10ರಿಂದ ಶ್ರೀ ಭೂತಬಲಿ ಬಳಿಕ ಬೆಡಿ, ರಥೋತ್ಸವ, ನೃತ್ಯ, ಶಯನ, ಮಾ.4ರಂದು ಪ್ರಾತಃಕಾಲ ಶಯನೋದ್ಘಾಟನೆ, ಮಂಗಳಾಭಿಷೇಕ, ಶ್ರೀ ಭೂತಬಲಿ, ಅವಭೃತ ಸ್ನಾನ, ಬಟ್ಟಲುಕಾಣಿಕೆ, ಧ್ವಜಾವರೋಹಣ, ಮಂತ್ರಾಕ್ಷತೆ, ಮಾ.5ರಂದು ಬೆಳಗ್ಗೆ 10ಕ್ಕೆ ಶ್ರೀ ಧೂಮಾವತಿ ದೈವದ ನೇಮ ನಡೆಯಲಿದೆ.

ಕಂಬಾರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಉತ್ಸವ

ಕುಂಬಳೆ: ಪೆರ್ಮುದೆ ಕಂಬಾರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವರ್ಷಾವಧಿ ಭೂತಬಲಿ ಉತ್ಸವ ಹಾಗೂ ಶ್ರೀ ಜಟಾಧಾರಿ ದೈವದ ಮಹಿಮೆಯು ಫೆ.28ರಿಂದ ಮಾ.3ರ ವರೆಗೆ ಜರಗಲಿದೆ. ಫೆ.28ರಂದು ರಾತ್ರಿ 9ಕ್ಕೆ ಅತ್ತಾಳ, ಗಣಪತಿ ಪೂಜೆ, ಮಾ.1ರಂದು ಬೆಳಗ್ಗೆ 8ರಿಂದ ಗಣಪತಿ ಹೋಮ, 10ಕ್ಕೆ ಶ್ರೀ ಜಟಾಧಾರಿ ದೈವದ ಭಂಡಾರ ಏರುವುದು, 10.30ಕ್ಕೆ ನವಕಾಭಿಷೇಕ, 10.45ಕ್ಕೆ ನಾಗತಂಬಿಲ, 11.15ರಿಂದ ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ 6ಕ್ಕೆ ದೀಪಾರಾಧನೆ, ತಾಯಂಬಕ, ರಾತ್ರಿ 7ಕ್ಕೆ ಪೆರ್ಮುದೆ ಶ್ರೀ ದುರ್ಗಾಪಮೇಶ್ವರಿ ಭಜನಾ ಮಂದಿರದಿಂದ ಭಜನಾ ಮೆರವಣಿಗೆ, 8ರಿಂದ ರಂಗಪೂಜೆ, ಅನ್ನ ಸಂತರ್ಪಣೆ, 9.30ಕ್ಕೆ ಶ್ರೀ ದೇವರ ಬಲಿ ಉತ್ಸವ, 1ಗಂಟೆಗೆ ಸುಡುಮದ್ದು ಪ್ರದರ್ಶನ ನಡೆಯಲಿದೆ. ಮಾ.2ರಂದು ಬೆಳಗ್ಗೆ 9.30ಕ್ಕೆ ಶ್ರೀ ದೇವರ ರಾಜಾಂಗಣ ಪ್ರವೇಶ, ಬಟ್ಟಲು ಕಾಣಿಕೆ, ಕಾಲಾವಽ ಪ್ರಸಾದ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ಭೋಜನ, ಸಂಜೆ 5.30ಕ್ಕೆ ಕಂಬಾರು ಶ್ರೀ ದುರ್ಗಾಪರಮೇಶ್ವರಿ ಭಜನಾ ಸಂಘದವರಿಂದ ಭಜನೆ, ರಾತ್ರಿ 7.30ರಿಂದ ರಂಗಪೂಜೆ, 8.30ಕ್ಕೆ ಬಾಡೂರು ಶ್ರೀ ದುರ್ಗಾ ಯುವಕ ಸಂಘ ಮತ್ತು ಶ್ರೀ ದುರ್ಗಾ ಮಹಿಳಾ ಸಂಘದವರಿಂದ ಸಾಂಸ್ಕೃತಿಕ ಕಾರ್ಯಕ್ರಮ, 9ರಿಂದ ಅನ್ನ ಸಂತರ್ಪಣೆ, 10.30ರಿಂದ ಶ್ರೀ ಜಟಾಧಾರಿ ದೈವದ ಮಹಿಮೆ, ಮಾ.3ರಂದು ರಾತ್ರಿ 12.30ಕ್ಕೆ ಮಂತ್ರಾಕ್ಷತೆ, 1ಗಂಟೆಗೆ ಭಂಡಾರ ಇಳಿಯುವುದರೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಲಿದೆ.

ಇಂದು ಹಕ್ಕುಪತ್ರ ಮೇಳ

ಕಾಸರಗೋಡು: ಜಿಲ್ಲಾ ಮಟ್ಟದ ಭೂ ಹಕ್ಕುಪತ್ರ ಮೇಳವನ್ನು ಫೆ.26ರಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಾಞಂಗಾಡು ಮಿನಿ ಸಿವಿಲ್ ಸ್ಟೇಷನ್‌ನಲ್ಲಿ ಆನ್ ಲೈನ್ ಮೂಲಕ ಉದ್ಘಾಟಿಸಲಿದ್ದಾರೆ. ಭೂ ಹಕ್ಕುಪತ್ರ ಮೇಳದಲ್ಲಿ ಸುಮಾರು 600 ಮಂದಿ ಹಕ್ಕುಪತ್ರಗಳನ್ನು ವಿತರಿಸಲಾಗುವುದು. ತೃಶೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಹಕ್ಕುಪತ್ರ ವಿತರಣಾ ಮೇಳವನ್ನು ಉದ್ಘಾಟಿಸುವುದರೊಂದಿಗೆ ಮುಖ್ಯಮಂತ್ರಿಗಳು ಕಾಸರಗೋಡು ಜಿಲ್ಲಾ ಮಟ್ಟದ ಹಕ್ಕುಪತ್ರ ಮೇಳವನ್ನು ಲೋಕಾರ್ಪಣೆಗೊಳಿಸುವರು. ಕಂದಾಯ ಮತ್ತು ವಸತಿ ಇಲಾಖೆ ಸಚಿವ ಕೆ.ರಾಜನ್ ಅಧ್ಯಕ್ಷತೆ ವಹಿಸಲಿದ್ದಾರೆ.

ನಾಳೆ ಆನೆಕಲ್ಲು ಛತ್ರ ಶ್ರೀ ಸಂತಾನ ಗೋಪಾಲಕೃಷ್ಣ ಕ್ಷೇತ್ರದ ಜಾತ್ರೆ

ಮಂಜೇಶ್ವರ: ಆನೆಕಲ್ಲು ಛತ್ರ ಸಂತಾನ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ ಫೆ.27ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಸೂರ್ಯೋದಯದಿಂದ ಸೂರ್ಯಾಹಸ್ತಮಾನದ ತನಕ ವಿವಿಧ ತಂಡದಿಂದ ಭಜನೆ, ಬೆಳಿಗ್ಗೆ 8ಕ್ಕೆ ಗಣಪತಿ ಹೋಮ, ನವಕ ಕಲಶ, 10.30ಕ್ಕೆ ಕಲಶಾಬಿಷೇಕ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 5.30ಕ್ಕೆ ಕುಣಿತ ಭಜನೆ, 6ಕ್ಕೆ ದೀಪಾರಾಧನೆ, 6.30ಕ್ಕೆ ರಂಗಪೂಜೆ, ರಾತ್ರಿ 8ಕ್ಕೆ ಶ್ರೀ ದೇವರ ಬಲಿ ಉತ್ಸವ, ವಸಂತ ಕಟ್ಟೆ ಪೂಜೆ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಅನ್ನದಾನ, ರಾತ್ರಿ 10ಕ್ಕೆ ಅಮ್ಮ ಕಲಾವಿದೆರ್ ಕುಡ್ಲ ಅಭಿನಯದ ಅನ್‌ಮಗೆ ನಾಟಕ ಪ್ರದರ್ಶನಗೊಳ್ಳಲಿದೆ.

ಕೇರಳ ಸರ್ಕಾರ ಅಂಗೀಕಾರ ನೀಡಿದ್ದರೂ ಕಟ್ಟಡ ನಿರ್ಮಾಣ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ

ಪೈವಳಿಕೆಯಲ್ಲಿ ಪೊಲೀಸ್ ಠಾಣೆಯ ನಿರ್ಮಾಣಕ್ಕೆ ಮೀನಾಮೇಷ

ಕಾಸರಗೋಡು: ಮಂಜೇಶ್ವರ ಮತ್ತು ಕುಂಬಳೆ ಪೊಲೀಸ್ ಠಾಣಾ ವ್ಯಾಪ್ತಿಗಳನ್ನು ವಿಭಜಿಸಿ ಪೈವಳಿಕೆಯಲ್ಲಿ ನೂತನ ಪೊಲೀಸ್ ಠಾಣೆ ನಿರ್ಮಿಸಲು ಕೇರಳ ಸರ್ಕಾರವು ಅಂಗೀಕಾರ ನೀಡಿದ್ದರೂ, ಕಟ್ಟಡ ಸ್ಥಾಪನೆ ನಿಟ್ಟಿನಲ್ಲಿ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ.
ಪೈವಳಿಕೆ ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ ಅಪರಾಧ ಕೃತ್ಯಗಳ ಹೆಚ್ಚಳ ಮತ್ತು ಮಾದಕ ವಸ್ತು ವ್ಯವಹಾರ ಸಹಿತ ಮಕಾನೂನುಬಾಹಿರ ಅಲ್ಲದೆ ಅಕ್ರಮ ಚಟುವಟಿಕೆಗಳು ದಿನ ಕಳೆದಂತೆ ವಿಪರೀತಗೊಳ್ಳುತ್ತಿದ್ದು, ಮಂಜೇಶ್ವರ ಮತ್ತು ಕುಂಬಳೆ ಪೊಲೀಸ್ ಠಾಣಾ ಸಿಬ್ಬಂದಿ ಕರ್ತವ್ಯದ ಒತ್ತಡದಿಂದ ಬಳಲುವಂತಾಗಿದೆ. ಪೈವಳಿಕೆ ಪೊಲೀಸ್ ಠಾಣೆ ಸ್ಥಾಪನೆಗೆ ರಾಜ್ಯ ಸರಕಾರವು ಒಪ್ಪಿಗೆ ನೀಡಿದ್ದರೂ ಸಾರ್ವಜನಿಕರ ಭಾಗದಿಂದ ಪ್ರಬಲವಾದ ಒತ್ತಡಗಳು ಕಂಡುಬರುತ್ತಿಲ್ಲ ಎನ್ನಲಾಗಿದೆ. ಕುಂಬಳೆ ಮತ್ತು ಮಂಜೇಶ್ವರ ಠಾಣೆಗಳು ವಿಭಜನೆಗೊಂಡು ಹೊಸ ಠಾಣೆ ಅಸ್ತಿತ್ವಕ್ಕೆ ಬಂದರೆ ಪೈವಳಿಕೆ ಹಾಗೂ ಪರಿಸರ ಪ್ರದೇಶಗಳಲ್ಲಿ ನಡೆಯುತ್ತಿರುವ ಮಾದಕ ವಸ್ತು ದಂಧೆ ಸಹಿತ ಕ್ರಿಮಿನಲ್ ವ್ಯವಹಾರಗಳಿಗೆ ಕಡಿವಾಣ



ಬೀಳಬಹುದು.

ಮರಳು, ಮಾದಕ ಮಾಫಿಯಾ ಸಹಿತ ಅಕ್ರಮ

ಚಟುವಟಿಕೆಗಳಿಗೆ ಕೆಲವು ರಾಜಕೀಯದವರ ಬೆಂಬಲ ಇರುವುದರಿಂದ ಪೈವಳಿಕೆಯಲ್ಲಿ ನೂತನ ಠಾಣೆ ಸ್ಥಾಪನೆಗೆ ವಿಳಂಬವಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ ಎರಡು ಪೊಲೀಸ್ ಠಾಣೆಗಳಿವೆ. ಆದರೆ ವಿಶಾಲವಾದ ಪ್ರದೇಶದಲ್ಲಿ ಸೂಕ್ತ ನಿಯಂತ್ರಣಕ್ಕೆ ಕಷ್ಟವಾಗುತ್ತಿದೆ. ಆದ್ದರಿಂದ ಪೈವಳಿಕೆಯಲ್ಲಿ ನೂತನ ಠಾಣೆ ನಿರ್ಮಿಸಬೇಕೆಂಬುದು ದಶಕಗಳ ಬೇಡಿಕೆಯಾಗಿದೆ. ಕೇರಳ ಡಿಜಿಪಿಯಾಗಿದ್ದ ದರ್ವೇಶ್ ಸಾಹೀಬ್ ಅವರು 2023ನೇ ಜುಲೈ 28ರಂದು ಕಾಸರಗೋಡಿಗೆ ಭೇಟಿ ನೀಡಿದ್ದ ಸಂದರ್ಭ ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪೊಲೀಸ್ ವ್ಯವಸ್ಥೆಯನ್ನು ಪರಿಶೀಲಿಸಿದ್ದರು. ಆ ವೇಳೆ ಜಿಲ್ಲಾ ಪೊಲೀಸ್ ಮುಖ್ಯಸ್ಥರು ಕುಂಬಳೆ ಮತ್ತು ಮಂಜೇಶ್ವರ ಪೊಲೀಸ್ ಠಾಣೆ ವಿಭಜಿಸಿ ಪೈವಳಿಕೆಯಲ್ಲಿ ನೂತನ ಠಾಣೆ ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿದ್ದರು. ಅದನ್ನು ಅನುಮೋದಿಸಿದ್ದ ಡಿಜಿಪಿಯವರು ರಾಜ್ಯ ಗೃಹ ಇಲಾಖೆಗೆ ಶಿಫಾರಸು ಮಾಡಿದ್ದರು. ಅದನ್ನು ಸರ್ಕಾರವು ಅಂಗೀಕರಿಸಿತ್ತು. ಆದರೆ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಯಾವುದೇ ಪ್ರಕ್ರಿಯೆ ಇನ್ನೂ ಆರಂಭಗೊಳ್ಳದಿರುವುದು ವಿಪರ್ಯಾಸವಾಗಿದೆ.

ಅಪರಾಧಿಗಳು ತಪ್ಪಿಸಲು ಸುಲಭ ದಾರಿ

ಮಂಜೇಶ್ವರ ವಿಧಾನಸಭಾ ಕ್ಷೇತ್ರವು ಬಹುತೇಕವಾಗಿ ಕರ್ನಾಟಕದ ಜೊತೆ ಗಡಿ ಹಂಚಿಕೊಂಡಿದೆ. ಈ ವಿಧಾನಸಭಾ ಕ್ಷೇತ್ರವು 48 ಗ್ರಾಮಗಳನ್ನು ಒಳಗೊಂಡಿದೆ. ಈ ಪ್ರದೇಶಕ್ಕೆ ಅಂತಾರಾಜ್ಯ ಸಂಬಂಧದ ಪ್ರಧಾನ ಒಳರಸ್ತೆಯೇ ಬಾಯಾರು ಆಗಿದೆ. ಅಲ್ಲದೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಮೂಲಕ ಅಂತಾರಾಜ್ಯ ಸಂಪರ್ಕದ 16 ಒಳದಾರಿಗಳಿವೆ. ಆದಕಾರಣ ಈ ಭಾಗದಲ್ಲಿ ಅಪರಾಧ ಪ್ರಕರಣಗಳಲ್ಲಿ ತೊಡಗಿಸಿಕೊಂಡವರು ಕೃತ್ಯದ ಬಳಿಕ ಅತ್ಯಂತ ಸುಲಭ ಮತ್ತು ಸುರಕ್ಷಿತವಾಗಿ ಕರ್ನಾಟಕಕ್ಕೆ ಪಲಾಯನ ಮಾಡುತ್ತಾರೆ. ಇದರಿಂದಾಗಿ ತನಿಖೆ ಕಷ್ಟವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಪೈವಳಿಕೆಯಲ್ಲಿ ನೂತನ ಪೊಲೀಸ್ ಠಾಣೆ ಸ್ಥಾಪನೆಯಾಗಬೇಕೆಂಬುದು ನಾಗರಿಕರ ಆಗ್ರಹವಾಗಿದೆ.

ಏರಿಕೆಯಾಗುತ್ತಿದೆ ಅಪರಾಧ ಕೃತ್ಯಗಳು

ಇತ್ತೀಚೆಗಿನ ವರ್ಷಗಳಲ್ಲಿ ಉಪ್ಪಳ ಹಾಗೂ ಪರಿಸರ ಪ್ರದೇಶಗಳು ಮಾದಕ ವಸ್ತು ದಂಧೆಗಳ ಕೇಂದ್ರವಾಗಿವೆ. ಮಂಜೇಶ್ವರ, ಉಪ್ಪಳ, ಶಿರಿಯ, ಕುಂಬಳೆ, ಮೊಗ್ರಾಲ್ ಮೊದಲಾದ ಭಾಗಗಳಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ. ಜೊತೆಗೆ ರಾತ್ರಿ ಹಗಲೆನ್ನದೆ ಅಪರಾಧ ಚಟುವಟಿಕೆಗಳು ನಡೆಯುತ್ತಿರುತ್ತವೆ. ಆದರೆ ಅವುಗಳನ್ನು ನಿಯಂತ್ರಿಸಲು ಕುಂಬಳೆ ಮತ್ತು ಮಂಜೇಶ್ವರ ಪೊಲೀಸ್ ಠಾಣೆಗಳ ಜೊತೆಗೆ ಪೈವಳಿಕೆಯಲ್ಲಿ ನೂತನ ಠಾಣೆ ಸ್ಥಾಪನೆಯಾಗಬೇಕಾಗಿದೆ.

ಬ್ರಹ್ಮಕಲಶದಲ್ಲಿ ಸೇವಾ ಭಾರತಿಗೆ ವೈದ್ಯಕೀಯ ಉಪಕರಣ ಹಸ್ತಾಂತರ



ಕಾಸರಗೋಡು: ಕಾಸರಗೋಡು ಶ್ರೀ ತೆರುವತ್ ಶ್ರೀ ಚೀರುಂಬಾ ಭಗವತಿ ಕ್ಷೇತ್ರದ ಬ್ರಹ್ಮಕಲಶ – ನಡಾವಳಿ ಮಹೋತ್ಸವದ ಸಲುವಾಗಿ ಶ್ರೀ ಕ್ಷೇತ್ರದ ಆಡಳಿತ ಸಮಿತಿಯು ಸೇವಾ ಭಾರತಿಗೆ ವೈದ್ಯಕೀಯ ಉಪಕರಣಗಳನ್ನು ಹಸ್ತಾಂತರಿಸಿತು.
ಇದರ ಅಂಗವಾಗಿ ಮಂಗಳವಾರ ಕ್ಷೇತ್ರದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರಿಂದ ರಾಷ್ಟ್ರೀಯ ಸೇವಾ ಭಾರತಿಯ ಕಾಸರಗೋಡು ಜಿಲ್ಲಾಧ್ಯಕ್ಷ ಎಂ.ಟಿ.ದಿನೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಗೀತ ವಿಜಯನ್ ಪಡೆದುಕೊಂಡರು.
ಸಮಾರಂಭದಲ್ಲಿ ಸೇವಾ ಭಾರತಿ ಜಿಲ್ಲಾ ಕೋಶಾಧಿಕಾರಿ ಶಿಜ ಮುರಳೀಧರನ್, ಕೆ.ಸುಜಿತ್‌ಕುಮಾರ್, ಉಮೇಶ್, ಬ್ರಹ್ಮಕಲಶೋತ್ಸವ – ನಡಾವಳಿ ಮಹೋತ್ಸವ ಸಮಿತಿ ಪ್ರಧಾನ ಸಂಚಾಲಕ ಕೆ.ಎನ್. ಕಮಲಾಕ್ಷನ್, ಅಧ್ಯಕ್ಷ ವಕೀಲ ನಾರಾಯಣ ವಡಕ್ಕೇವೀಡ್, ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ, ಕ್ಷೇತ್ರದ ಅಧ್ಯಕ್ಷ ಹರೀಶ್‌ಕುಮಾರ್ ಕೆ.ಎಂ. ಮೊದಲಾದವರು ಉಪಸ್ಥಿತರಿದ್ದರು.

ಮಾದರಿ ಕಾರ್ಯ

ಶ್ರೀ ಕ್ಷೇತ್ರವು ಸೇವಾ ಭಾರತಿಗೆ ಎರಡು ಗಾಲಿಕುರ್ಚಿ, ಮಡಚುವ ಮಂಚವನ್ನು ನಿಡಿತು. ಕ್ಷೇತ್ರಗಳ ಉತ್ಸವಕ್ಕೆ ಸಂಬಂಧಿಸಿ ಭಾರಿ ಮೊತ್ತ ವ್ಯಯಿಸುವಾಗ ಅದರಿಂದ ಒಂದು ಕಿರು ಮೊತ್ತವನ್ನು ಜೀವ ಕಾರುಣ್ಯ ಚಟುವಟಿಕೆಗಳಿಗೆ ನೀಡಲು ನಿರ್ಧರಿಸಿದ ಶ್ರೀ ಕ್ಷೇತ್ರ ಸಮಿತಿಯ ನಿರ್ಧಾರವು ಎಲ್ಲಾ ಹಿಂದೂ ಸಮುದಾಯ ಕ್ಷೇತ್ರಗಳಿಗೆ ಒಂದು ಮಾದರಿಯಾಗಲಿ ಎಂದು ಸೇವಾ ಭಾರತಿ ಕಾಸರಗೋಡು ಜಿಲ್ಲಾಧ್ಯಕ್ಷ ಎಂ.ಟಿ.ರಮೇಶ್ ಅಭಿಪ್ರಾಯಪಟ್ಟರು.

ಕಾಸರಗೋಡು: ಪರಿಸರ ಸಂರಕ್ಷಣೆ ಕೇಂದ್ರೀಕೃತ ಯೋಜನೆಗೆ ಚಾಲನೆ



ಕಾಸರಗೋಡು: 14ನೇ ಪಂಚವಾರ್ಷಿಕ ಯೋಜನೆಯ ಭಾಗವಾಗಿ 2026–27ನೇ ಸಾಲಿನ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸಲು ಕಾಞಂಗಾಡು ನಗರಸಭೆಯಲ್ಲಿ ನವ ಕೇರಳಕ್ಕಾಗಿ ಜನ ಯೋಜನೆ ಎಂಬ ಅಭಿವೃದ್ಧಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್ ಅಧ್ಯಕ್ಷತೆ ವಹಿಸಿದ್ದರು.
ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಚಟುವಟಿಕೆಗಳು ಸುಸ್ಥಿರ ಅಭಿವೃದ್ಧಿಯನ್ನು ಆಧರಿಸಿರಬೇಕು ಮತ್ತು ಮುಂದಿನ ಪೀಳಿಗೆಗೆ ಪ್ರಕೃತಿಯನ್ನು ಸಂರಕ್ಷಿಸಲು ನೀತಿ ನಿರೂಪಣೆಯಲ್ಲಿ ಕಠಿಣ ಕಾನೂನುಗಳನ್ನು ಸೇರಿಸಬೇಕು ಎಂದು ಸಂಸದರು ಹೇಳಿದರು. ಅರಣ್ಯ ನಾಶದಿಂದಾಗಿ ಕಾಡು ಪ್ರಾಣಿಗಳ ಆವಾಸಸ್ಥಾನವು ಹಾನಿಗೊಳಗಾಗುತ್ತಿದೆ. ಇದರಿಂದಾಗಿ ಪ್ರಾಣಿಗಳು ಆಹಾರಕ್ಕಾಗಿ ಗ್ರಾಮಾಂತರಕ್ಕೆ ವಲಸೆ ಹೋಗುವಂತೆ ಮಾಡುತ್ತಿವೆ ಮತ್ತು ಮಾನವ – ವನ್ಯಜೀವಿ ಸಂಘರ್ಷಗಳಿಗೆ ಕಾರಣವಾಗುತ್ತಿದೆ. ಭವಿಷ್ಯದಲ್ಲಿ ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು ಅತ್ಯಗತ್ಯ ಎಂದು ಅವರು ಹೇಳಿದರು.
ರಾಷ್ಟ್ರೀಯ ಸ್ವಚ್ಛತಾ ಸಮೀಕ್ಷೆಯ ಭಾಗವಾಗಿರುವ ಸ್ವಚ್ಛ ಸರ್ವೇಕ್ಷಣ ಲೋಗೋ ಬಿಡುಗಡೆ ಮಾಡಲಾಯಿತು. ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ಸ್ಥಾಯೀ ಸಮಿತಿ ಅಧ್ಯಕ್ಷರಾದ ಎಂ.ಸುಮತಿ, ಫೌಜಿಯಾ ಶರೀಫ್, ಮುಹಮ್ಮದ್ ಮುರಿಯನಾವಿ, ಎಂ.ವಿಜಯನ್, ಯೋಜನಾ ಸಮಿತಿ ಉಪಾಧ್ಯಕ್ಷ ಪಿ.ಕೆ.ನಿಶಾಂತ್, ನಗರಸಭಾ ಮಾಜಿ ಅಧ್ಯಕ್ಷೆ ಕೆ.ವಿ.ಸುಜಾತ ಮಾತನಾಡಿದರು. ನಗರಸಭೆಯ ಮುಂಬರುವ ಅಭಿವೃದ್ಧಿ ಯೋಜನೆಗಳು, ಆದ್ಯತೆಯ ಆದೇಶ ಮತ್ತು ಪ್ರಸ್ತುತ ಸವಾಲುಗಳಿಗೆ ಪರಿಹಾರಗಳನ್ನು ಒಳಗೊಂಡಿರುವ ಕರಡು ಯೋಜನಾ ದಾಖಲೆಯನ್ನು ವಿಚಾರ ಸಂಕಿರಣದಲ್ಲಿ ಮಂಡಿಸಲಾಯಿತು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಪಿ.ಜಾಫರ್ ಸ್ವಾಗತಿಸಿ, ಪ್ರಭಾರ ಕಾರ್ಯದರ್ಶಿ ಚಂದ್ರನ್ ಕಿರುಕ್ಕೆತ್ತಮಲು ವಂದಿಸಿದರು.

ಇಂದು ಉಪ್ಪಳ ಅಗ್ನಿಶಾಮಕ ಕಟ್ಟಡ ಉದ್ಘಾಟನೆ: ಸ್ವಾಗತ ಸಮಿತಿ ರಚನಾ ಸಭೆ



ಉಪ್ಪಳ: ಮಂಗಲ್ಪಾಡಿ ಪಂಚಾಯತ್‌ನ ಪ್ರತಾಪನಗರದಲ್ಲಿ ನಿರ್ಮಾಣಗೊಂಡ ಉಪ್ಪಳ ಅಗ್ನಿಶಾಮಕ ಕೇಂದ್ರದ ನೂತನ ಕಟ್ಟಡ ಉದ್ಘಾಟನಾ ಸಮಾರಂಭವು ಫೆ.26ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆನ್‌ಲೈನ್ ಮೂಲಕ ಉದ್ಘಾಟಿಸುವರು. ಕಾರ್ಯಕ್ರಮದ ಯಶಸ್ವಿಗೆ ಸ್ವಾಗತ ಸಮಿತಿ ರಚನಾ ಸಭೆ ಜರಗಿತು.
ಬ್ಲಾಕ್ ಪಂಚಾಯತ್ ಸದಸ್ಯೆ ಫಾತಿಮತ್ ಸುಹರ, ಮಂಗಲ್ಪಾಡಿ ಪಂ. ಸದಸ್ಯರಾದ ವಸಂತಕುಮಾರ್ ಮಯ್ಯ, ರವೀಂದ್ರ ಶೆಟ್ಟಿ ಬೇಕೂರು, ಮಾಜಿ ಸದಸ್ಯೆ ಸುಧಾ ಗಣೇಶ್, ಎನ್‌ಸಿಪಿ ನೇತಾರ ಮೆಹಮೂದ್ ಕೈಕಂಬ, ಉಪ್ಪಳ ಅಗ್ನಿಶಾಮಕ ದಳದ ಅಧಿಕಾರಿಗಳಾದ ರಾಜೇಶ್‌ಕುಮಾರ್ ಬಿ., ಶಿಜು ಕೆ. ಹಾಗೂ ವಿವಿಧ ಪಕ್ಷದ ನೇತಾರರು, ಗಣೇಶ ಭಜನಾ ಮಂದಿರ, ಸ್ಥಳೀಯ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಮಾತೆಯರ ಸಹಿತ ಹಲವಾರು ಮಂದಿ ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಶಾಸಕರು, ಸಂಸದರು, ಜನಪ್ರತಿನಿಧಿಗಳು, ವಿವಿಧ ರಾಜಕೀಯ ನೇತಾರರು, ಅಗ್ನಿಶಾಮಕ ದಳದ ಅಧಿಕಾರಿಗಳು ಉಪಸ್ಥಿತರಿರುವರು.

ಸಜೀಪ ಕೂಡೂರು: ಹಿರಿಯರಿಗೆ ಸನ್ಮಾನ



ಉಪ್ಪಳ: ವಯನಾಡು ಕುಲವನ್ ವಿಷ್ಣುಮೂರ್ತಿ ಹಾಗೂ ಪರಿವಾರ ದೈವಗಳ ಕ್ಷೇತ್ರ ಸಜಿಪ ಕುಡೂರು ತರವಾಡು ತೆನೆಕುಡಿಯ (ಸಾಲಿಯಾನ್) ಕುಟುಂಬಸ್ಥರು ಮಾರ್ಗದರ್ಶಕ ಶಿರಿಯ ಮಾವಿನಡಿ ಕೊಪ್ಪಳ ತರವಾಡು ಅಡ್ಕ ಶ್ರೀ ಭಗವತೀ ಕ್ಷೇತ್ರದ ಕೃಷ್ಣ ಕಾರ್ನವರ್‌ರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು. ಅಡ್ಕ ಶ್ರೀ ಭಗವತೀ ಕ್ಷೇತ್ರದ ಪುಲ್ಲೂರಾಳಿ ತಂಬುರಾಟಿ ಪಾತ್ರಿ ಮೋನಪ್ಪ ಬೆಳ್ಚಪ್ಪಾಡ, ತರವಾಡಿನ ಹಿರಿಯ ಮೂಪ ಕೊಗ್ಗು ಬೆಳ್ಚಾಡ ಅವರನ್ನು ಸನ್ಮಾನಿಸಲಾಯಿತು. ತರವಾಡಿನ ಅಧ್ಯಕ್ಷರು, ಸದಸ್ಯರು, ಪದಾಧಿಕಾರಿಗಳು, ಉಪ್ಪಳ ಶ್ರೀ ಭಗವತೀ ಕ್ಷೇತ್ರ, ಅಡ್ಕ ಕ್ಷೇತ್ರ, ಕುದ್ರೋಳಿ ಕ್ಷೇತ್ರ, ಬೊಳ್ನಾಡು ಕ್ಷೇತ್ರಗಳ ಆಚಾರ ಪಟ್ಟವರು, ಗುರಿಕ್ಕಾರರು ಇದ್ದರು.

ಮಾ.31ರಿಂದ ಏ.2ರವರೆಗೆ ಅಡ್ಕತ್ತಬೈಲು ಬ್ರಹ್ಮಬೈದರ್ಕಳ ಗರಡಿಯ ವಾರ್ಷಿಕೋತ್ಸವ



ಕಾಸರಗೋಡು: ನಗರದ ಅಡ್ಕತ್ತಬೈಲು ಶ್ರೀ ಬ್ರಹ್ಮ ಬೈದರ್ಕಳ ಗರಡಿ ಪುನರ್ ಪ್ರತಿಷ್ಠಾ ವಾರ್ಷಿಕೋತ್ಸವ, ಬ್ರಹ್ಮ ಬಲಿ ಮತ್ತು ಬೈದರ್ಕಳ ನೇಮೋತ್ಸವ ಮಾರ್ಚ್ 31ರಿಂದ ಏಪ್ರಿಲ್ 2ರ ವರೆಗೆ ಜರಗಲಿದೆ.
ನೇಮೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಹಾಗೂ ಉತ್ಸವ ಸಮಿತಿ ರಚನಾ ಸಭೆ ಅಡ್ಕತ್ತಬೈಲು ಗರಡಿ ವಠಾರದಲ್ಲಿ ಜರಗಿತು. ಕಾಸರಗೋಡು ನಗರಸಭಾ 4ನೇ ಸದಸ್ಯ ಗುರುಪ್ರಸಾದ್ ಪ್ರಭು ಅವರು 5ನೇ ವಾರ್ಡ್ ಸದಸ್ಯ ಹರೀಶ್ ಕೆ.ಆರ್. ಅವರಿಗೆ ಆಮಂತ್ರಣ ಪತ್ರಿಕೆ ನೀಡುವ ಮೂಲಕ ಆಮಂತ್ರಣಪತ್ರಿಕೆ ಬಿಡುಗಡೆಗೊಳಿಸಿದರು.
ಸಂದರ್ಭ ಉತ್ಸವ ಸಮಿತಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ರಕ್ಷಾಧಿಕಾರಿಯಾಗಿ ವಿಷ್ಣು ಪ್ರಕಾಶ್ ತಂತ್ರಿ ಅವರನ್ನು ಆಯ್ಕೆ ಮಾಡಲಾಯಿತು. ಗೌರವಧ್ಯಕ್ಷರಾಗಿ ಭಾಸ್ಕರ ಸುವರ್ಣ ಗರಡಿಮನೆ, ಅಧ್ಯಕ್ಷರಾಗಿ ಎ.ಪ್ರೇಮ್‌ಜಿತ್, ಉಪಾಧ್ಯಕ್ಷರಾಗಿ ಮೋಹನ್‌ದಾಸ್, ಚಂದ್ರಕಲಾ, ಪ್ರಧಾನ ಕಾರ್ಯದರ್ಶಿ ಹರಿಕಾಂತ್ ಕೆ., ಜೊತೆ ಕಾರ್ಯದರ್ಶಿಯಾಗಿ ಕಾರ್ತಿಕ್, ಕೋಶಾಧಿಕಾರಿಯಾಗಿ ದಯಾನಂದ ಪೂಜಾರಿ, ಸ್ವಾಗತ ಸಮಿತಿಯಲ್ಲಿ ರಘು ಮೀಪುಗುರಿ, ಗುರುಪ್ರಸಾದ್ ಪ್ರಭು, ಕಮಲಾಕ್ಷ ಸುವರ್ಣ, ಶಿವ ಕೆ., ಪ್ರಚಾರ ಸಮಿತಿಯಲ್ಲಿ ಪುರುಷೋತ್ತಮ್ ನಾಯ್ಕ್, ದೀಕ್ಷಿತ್, ಕಾರ್ತಿಕ್, ಉಪಸಮಿತಿಗಳಿಗೆ ಪದಾಧಿಕಾರಿಗಳ ಆಯ್ಕೆ ನಡೆಯಿತು. ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಆಡಳಿತ ಮೊಕ್ತೇಸರ ಅಚ್ಯುತ ಪೂಜಾರಿ, ನೂತನವಾಗಿ ಆಯ್ಕೆಯಾದ ನಗರಸಭಾ ಸದಸ್ಯರಾದ ಗುರುಪ್ರಸಾದ್ ಪ್ರಭು, ಹರೀಶ್ ಕೆ.ಆರ್. ಅವರನ್ನು ಅಭಿನಂದಿಸಲಾಯಿತು. ಮಹೇಶ್ ಎ., ಮಚ್ಚೇಂದ್ರ, ನವೀನ್ ಪೂಜಾರಿ, ಉಮೇಶ್, ವೇಣುಗೋಪಾಲ, ಹರಿಪ್ರಸಾದ್, ಕೆ.ವಿ.ಸತ್ಯನಾರಾಯಣ ರಾವ್, ಪ್ರವೀಣ್‌ಕುಮಾರ್, ಸುಜಯ ಶೆಟ್ಟಿ, ಪದ್ಮಾವತಿ, ಜಯಶ್ರೀ ಅಶೋಕ ಮತ್ತಿತರರಿದ್ದರು.

ಇಂದು, ನಾಳೆ ಕಲಾ ಆಧಾರಿತ ಮನೋ ಸಾಮಾಜಿಕ ಕಾರ್ಯಾಗಾರ



ಕಾಸರಗೋಡು: ಕಾಞಂಗಾಡು ರಾಜ್ ರೆಸಿಡೆನ್ಸಿಯಲ್ಲಿ ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಯುನಿಸೆಫ್ ಆಶ್ರಯದಲ್ಲಿ ಶಾಲಾ ಸಲಹೆಗಾರರು ಮತ್ತು ಕುಟುಂಬಶ್ರೀ ಸಲಹೆಗಾರರಿಗಾಗಿ ಫೆ.25, 26ರಂದು ಕಲಾ ಆಧಾರಿತ ಮನೋ ಸಾಮಾಜಿಕ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.
ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ (ಎಡಿಎಂ) ಪಿ. ಅಖಿಲ್ ಸಮಾರಂಭ ಬುಧವಾರ ಉದ್ಘಾಟಿಸಿದರು. ವಿಪತ್ತು ನಿರ್ವಹಣಾ ವಿಭಾಗದ ಜೂನಿಯರ್ ಸೂಪರಿಂಟೆಂಡೆಂಟ್ ಎನ್.ಎಸ್.ಸೈಮಾ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಸುಹೇಲ್ ಬಾಬು ಉದ್ದೇಶ ಮತ್ತು ಕಾರ್ಯ ವಿಧಾನಗಳನ್ನು ವಿವರಿಸಿದರು. ವಿಭಾಗದ ಗುಮಾಸ್ತ ಉದಯಪ್ರಕಾಶ್ ಮಾತನಾಡಿದರು. ಅಪಾಯ ವಿಶ್ಲೇಷಕಿ ಶಿಲ್ಪಾ ಸ್ವಾಗತಿಸಿ, ಯೋಜನಾ ಸಂಯೋಜಕ ಅಹಮ್ಮದ್ ಶಫೀಕ್ ವಂದಿಸಿದರು.
ಫೆ.26ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಎಂಡೋಸಲ್ಫಾನ್ ವಿಶೇಷ ಸೆಲ್‌ನ ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್ ಪ್ರಮಾಣಪತ್ರಗಳನ್ನು ವಿತರಿಸಲಿದ್ದಾರೆ. ಈ ಕಾರ್ಯಾಗಾರವು ದುರಂತದ ನಂತರದ ಸಂದರ್ಭಗಳಲ್ಲಿ ಮಕ್ಕಳು ಮತ್ತು ಸಮುದಾಯಗಳಿಗೆ ಮಾನಸಿಕ ಆರೋಗ್ಯ ಬೆಂಬಲವನ್ನು ಬಲಪಡಿಸುವಲ್ಲಿ ಮತ್ತು ಕಲೆ ಆಧಾರಿತ ಮನೋ ಸಾಮಾಜಿಕ ಸಲಹೆಗಳ ಪ್ರಾಯೋಗಿಕ ಅನುಷ್ಠಾನದಲ್ಲಿ ಸಹಾಯಕವಾಗಲಿದೆ.

ಕೊಡ್ಯಮೆ ಪ್ರೌಢ ಶಾಲೆ: ಸ್ವಾಸ್ಥ್ಯ ಸಂಕಲ್ಪ



ಮಂಜೇಶ್ವರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಮಂಜೇಶ್ವರ ತಾಲೂಕಿನ ಕುಂಬಳೆಯ ಕೊಡ್ಯಮ್ಮೆ ಪ್ರೌಢ ಶಾಲೆಯಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಆಶ್ರಯದಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವವನ್ನು ಜರಗಿತು. ಅಬಕಾರಿ ಅಧಿಕಾರಿ ಪೀತಾಂಬರನ್ ಮಾಹಿತಿ ನೀಡಿದರು. ವಲಯ ಜನಜಾಗೃತಿ ಅಧ್ಯಕ್ಷ ಮಹೇಶ್ ಪುಣಿಯೂರ್, ಮುಖ್ಯೋಪಾಧ್ಯಾಯ ಪ್ರದೀಪ್, ಮೇಲ್ವಿಚಾರಕ ಅಭಿಷೇಕ್, ಸೇವಾ ಪ್ರತಿನಿಧಿ ಸರಿತಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇಗುಲ ಪುನರ್ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶದಲ್ಲಿ ದಾಮೋದರ ಶರ್ಮ ಆಶಯ

ಅನ್ನದಾನ ಮಾಡುವುದರಿಂದ ಅನ್ನ ಸೇವಿಸಿದವರ ಸಂತೃಪ್ತಿ ಭಾಗ್ಯ ನಮ್ಮದಾಗಲಿದೆ

ಮುಳ್ಳೇರಿಯ: ಪುಣ್ಯ ಸಂಚಯಕ್ಕಿರುವ ಪುಣ್ಯ ಭೂಮಿ ಭಾರತ. ದೇವಭಕ್ತಿ ದೇಶಭಕ್ತಿ ನಮ್ಮಲ್ಲಿರಬೇಕು ಎಂದು ಉಡುಪಿ ನವಾಕ್ಷರಿ ಬಾರ್ಕೂರಿನ ಎನ್.ಆರ್ .ದಾಮೋದರ ಶರ್ಮ ಹೇಳಿದ್ದಾರೆ.
ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಾಲಯದ ಪುನರ್ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಮಂಗಳವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಧಾರ್ಮಿಕ ಉಪನ್ಯಾಸ ನೀಡಿ ಮಾತನಾಡಿದರು. ಸವಾಲು ಎದುರಿಸಿ ಸಮುದ್ರದಂತೆ ಬೆಳೆಯಬೇಕು. ಅದಕ್ಕೆ ಮಹಾದೇವನ ಅನುಗ್ರಹ ಬೇಕು. ಅಪ್ಪ ಅಮ್ಮನನ್ನು ಗೌರವಿಸಬೇಕು ದೇವರನ್ನು ನಂಬಬೇಕು. ದೇಗುಲದಲ್ಲಿ ತಾರತಮ್ಯ ಬೇಡ. ಮಕ್ಕಳಿಗೆ ಸಂಸ್ಕಾರ ಬೋಧಿಸಬೇಕು. ಅನ್ನದಾನ ಮಾಡಿದರೆ ಅನ್ನ ಸೇವಿಸಿದವರ



ಸಂತೃಪ್ತಿಯ ಭಾಗ್ಯ ನಮ್ಮದಾಗುತ್ತದೆ ಎಂದರು.
ಉಪ್ಪಳ ಕೊಂಡೆಯೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾಶ್ರಮದ ಸರಸ್ವತೀ ಸ್ವಾಮೀಜಿ ಅವರು ಆಶೀರ್ವಚನ ನೀಡಿದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ದಾಮೋದರ ಎಂ. ಅಧ್ಯಕ್ಷತೆ ವಹಿಸಿದ್ದರು.
ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಮಾತನಾಡಿ. ಮಾತೃ ಹೃದಯವನ್ನು ನಾವು ತಿಳಿದುಕೊಂಡು ಜೀವಿಸಬೇಕು. ಭಾರತೀಯ ಸಂಸ್ಕೃತಿಯನ್ನು ಬೋಧಿಸಿದರೂ ಅವರನ್ನು ಪ್ರಶ್ನಿಸುವವರಿದ್ದಾರೆ. ಕ್ಷೇತ್ರಗಳನ್ನು ನಾವು ಸಂರಕ್ಷಿಸಬೇಕು. ಲೋಕ ರಕ್ಷಕ ಶಕ್ತಿಯಾದ ಶಿವ ನಮ್ಮನ್ನು ರಕ್ಷಿಸುತ್ತಾನೆ ಎಂದು ಹೇಳಿದರು.
ವಕೀಲ ಎಂ.ನಾರಾಯಣ ಭಟ್ ಕಾಸರಗೋಡು, ಕರ್ನೂರು ಮಠದ ರಾಜ ಭುವನೇಶ್ ಕಲ್ಲೂರಾಯ, ಬೆಳ್ಳೂರು ದೇಗುಲ ಸೇವಾ ಸಮಿತಿ ಅಧ್ಯಕ್ಷ ಎ.ಬಿ.ಗಂಗಾಧರ ಬಲ್ಲಾಳ್, ಬೆಳ್ಳೂರು ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಸುಬ್ರಹ್ಮಣ್ಯ ಕಡಂಬಳಿತ್ತಾಯ, ಪದಿಕಾಲಡ್ಕ ದೈವಸ್ಥಾನದ ಅಧ್ಯಕ್ಷ ಹರಿಣಾಕ್ಷನ್ ಜೋಗಿಮೂಲೆ, ಕಲ್ಲೇರಿಮೂಲೆ ದೇಗುಲ ಆಡಳಿತ ಮೊಕ್ತೇಸರ ಸೂರ್ಯನಾರಾಯಣ ಕಡಂಬಳಿತ್ತಾಯ, ಆದೂರು ದೇಗುಲ ಸೇವಾ ಸಮಿತಿ ಅಧ್ಯಕ್ಷ ರಾಘವೇಂದ್ರ ಕೆ., ಬೆಳ್ಳಾರೆ ದೇಗುಲ ಆಡಳಿತ ಮೊಕ್ತೇಸರ ಚಂದ್ರಹಾಸ ಮಣಿಯಾಣಿ, ಮನು ಸ್ಥಾನದಮನೆ ಮಿಂಚಿಪದವು, ಕೋಳಿಕ್ಕಾಲು ದೇಗುಲ ಸೇವಾ ಸಮಿತಿ ಕಾರ್ಯದರ್ಶಿ ಕೇಶವ ಕೋಳಿಕ್ಕಾಲು ಉಪಸ್ಥಿತರಿದ್ದರು. ರವೀಂದ್ರ ರೈ ಮಲ್ಲಾವರ ಸ್ವಾಗತಿಸಿ, ಸುಮತಿ ಕಾನದಮನೆ ವಂದಿಸಿದರು. ಸುಂದರರಾಜ್ ರೈ ನಿರೂಪಿಸಿದರು. ಪ್ರಸೀದ, ಆರ್ಯ, ಶ್ರೀವಿದ್ಯಾ, ಧನ್ಯಾ ಪ್ರಾರ್ಥನೆ ಹಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಧೀಶಕ್ತಿ ಮಹಿಳಾ ಯಕ್ಷಬಳಗ ತೆಂಕಿಲ ಇವರಿಂದ ಯಕ್ಷಗಾನ ತಾಳಮದ್ದಳೆ, ಪಟ್ಟಾಭಿರಾಮ ಸುಳ್ಯ ಇವರಿಂದ ಮಿಮಿಕ್ರಿ, ಪ್ರಸನ್ನಕುಮಾರ್ ಕೈತ್ತೋಡು ಮತ್ತು ಬಳಗದವರಿಂದ ಭಕ್ತಿ ರಸಮಂಜರಿ, ರಶ್ಮಿ ಚಿದಾನಂದ ನೃತ್ಯಭಾರತಿ ಕದ್ರಿ ಇವರಿಂದ ಭರತನಾಟ್ಯ, ಮಾಣಿಲ ಮಹಾಲಕ್ಷ್ಮೀ ಕೃಪಾಪೋಷಿತ ಯಕ್ಷಗಾನ ಕಲಾಮಂಡಳಿ ಮಾಣಿಲ ಇವರಿಂದ ಧರ್ಮದೈವ ವಿಷ್ಣುಮೂರ್ತಿ ಎಂಬ ಯಕ್ಷಗಾನ ಬಯಲಾಟ ಜರಗಿತು.

ಶ್ರೀ ಕಾವೇರಿಯಮ್ಮ – ಮಹಾಲಿಂಗೇಶ್ವರ ಕ್ಷೇತ್ರ ಮಿಂಚಿಪದವು

ಅಂಚೆ : ಕುಂಟಾರು, ದಾರಿ ಮುಳ್ಳೇರಿಯ, ಕಾಸರಗೋಡು





2026 ಫೆ. 22 ರಿಂದ ಫೆ. 27ರ ವರೆಗೆ

ನಾಳೆ

ಫೆ.27ರಂದು ಬೆಳಗ್ಗೆ 11.55ರ ವೃಷಭ ಲಗ್ನ ಸುಮುಹೂರ್ತದಲ್ಲಿ

ಶ್ರೀ ಮಹಾಲಿಂಗೇಶ್ವರ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ ಹಾಗೂ ಶ್ರೀ ಕಾವೇರಿಯಮ್ಮನ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ



ಕಾಸರಗೋಡು – ಜಾಲ್ಸೂರು – ಸುಳ್ಯ ರಾಜ್ಯ ಹೆದ್ದಾರಿಯಲ್ಲಿ ಸಿಗುವ 'ಗಾಳಿಮುಖ'' ಎಂಬಲ್ಲಿಂದ ಉತ್ತರಕ್ಕೆ ಸುಮಾರು 2 ಕಿಲೋಮೀಟರ್ ಸಾಗಿದಾಗ ಉನ್ನತ ಶಿಖರದ ಮೇಲೆ ಕಂಡು ಬರುವ ನೈಸರ್ಗಿಕ ಸೌಂದರ್ಯದ ವಿಶಾಲವಾದ ಸಮತಟ್ಟಾದ ರಮಣೀಯ ಬಯಲು ಪ್ರದೇಶವೇ ಮಿಂಚಿಪದವು. ಎತ್ತರ ಪ್ರದೇಶದಲ್ಲಿದ್ದು ಮಿಂಚಿನಂತೆ ಹೊಳೆಯುತ್ತಿರುವ ಶಿವ ಸಾನ್ನಿಧ್ಯವೇ ಮಿಂಚಿಪದವು ಶ್ರೀ ಮಹಾಲಿಂಗೇಶ್ವರ ಕ್ಷೇತ್ರ.

ಕುಂಬಳೆ ಸೀಮೆಯ ಚತುರ್ಭುಜಗಳೆಂದು ಪರಿಗಣಿಸಲ್ಪಡುವ ಅಡೂರು, ಮಧೂರು, ಕಾವು, ಕಣಿಪುರ ಎಂಬ ನಾಲ್ಕು ಪುಣ್ಯ ಕ್ಷೇತ್ರಗಳ ಮಧ್ಯದಲ್ಲಿರುವ ಮಿಂಚಿಪದವು ಶ್ರೀ ಮಹಾಲಿಂಗೇಶ್ವರ ಕ್ಷೇತ್ರವು ಪರಶಿವನ ಪರಮ ಭಕ್ತನಾದ ಖರಾಸುರನೆಂಬ ದೈತ್ಯನಿಂದ ಪ್ರತಿಷ್ಠಾಪಿಸಲ್ಪಟ್ಟ ಕೆಲವೇ ಕೆಲವು ಶಿವಲಿಂಗಗಳಲ್ಲಿ ಒಂದಾಗಿದೆ. ಈ ಶಿವಲಿಂಗದ ಗಾತ್ರ, ಎತ್ತರ ಮತ್ತು ಇದರ ಪ್ರಾಚೀನ ಐತಿಹ್ಯವನ್ನು ಗಮನಿಸಿದಾಗ ಸಾಮಾನ್ಯ ಮಾನವರಿಂದ ಇದನ್ನು ಪ್ರತಿಷ್ಠಾಪಿಸಲು ಅಸಾಧ್ಯ ಎಂಬುದು ಮನವರಿಕೆಯಾಗಲು ಸಾಧ್ಯ. ಶಿವನ ಮೇಲಿದ್ದ ಅಪಾರ ಭಕ್ತಿಯಿಂದಾಗಿ ಖರಾಸುರನು ಕಟ್ಟಕಡೆಗೆ ತನ್ನಲ್ಲಿದ್ದ ಅಸುರ ಮನೋಭಾವವನ್ನು ತ್ಯಜಿಸಿ ಶಿವನಲ್ಲಿ ಐಕ್ಯ ಹೊಂದಿದನೆಂಬುದು ಪುರಾಣೋಲ್ಲೇಖಿತ ಸತ್ಯ.

ಮಿಂಚಿಪದವು ಎಂಬ ಪ್ರದೇಶವನ್ನು 'ನೆಂಜಪರಂಬ' ಎಂದು ಕರೆಯುತ್ತಾರೆ. ಮಲೆಯಾಳಂ ಭಾಷೆಯಲ್ಲಿ 'ನೆಂಜ್'' ಎಂದರೆ 'ಎದೆ', 'ಪರಂಬ' ಎಂದರೆ 'ಬಯಲು' ಎಂದರ್ಥ. ಅಂದರೆ ಸಮುದ್ರ ಮಟ್ಟದಿಂದ ಸಾಕಷ್ಟು ಎತ್ತರದಲ್ಲಿ ಎಂದರೆ ಎದೆಯ ಮಟ್ಟಕ್ಕೆ ನಿಂತಿರುವ ಬಯಲು ಪ್ರದೇಶವಾದುದರಿಂದ 'ನೆಂಬಪರಂಬ' ಎಂಬ ಹೆಸರು ಬಂದಿರಬಹುದು. ಮುಚುಕುಂದ ಎಂಬ ಮಹಾಮುನಿಯು ತಪಸ್ಸುಗೈದ ಪವಿತ್ರ ಸ್ಥಳವೆಂದೂ ಕಾಲಾಂತರದಲ್ಲಿ ಮುಚುಕುಂದ ಎಂಬ ನಾಮವು ಮಿಂಚಿಪದವು ಎಂಬುದಾಗಿ ಮಾರ್ಪಾಡಾಗಿರಬಹುದು ಎಂಬುದು ಪ್ರತೀತಿ.

■ ಶ್ರೀ ಕಾವೇರಿಯಮ್ಮ ಕ್ಷೇತ್ರ

ಶ್ರೀ ಕ್ಷೇತ್ರದ ಪೂರ್ವದಿಕ್ಕಿನಲ್ಲಿರುವ ಗುಹೆಯ ಮೂಲಕ ನಿರಂತರವಾಗಿ ಪ್ರವಹಿಸುವ ಮಾತೃ ಸ್ವರೂಪಿಣಿಯಾದ ತೀರ್ಥ ಮಾತೆಯ ಸನ್ನಿಧಾನವೇ ಕಾವೇರಿಯಮ್ಮನ ಪುಷ್ಕರಿಣಿ. ಕೊಡಗು ಜಿಲ್ಲೆಯ ಭಾಗಮಂಡಲದ 'ಬ್ರಹ್ಮಗಿರಿ'ಯಲ್ಲಿರುವ ಕಾವೇರಿ ತೀರ್ಥಕ್ಕೂ ಇದಕ್ಕೂ ಅವಿನಾಭಾವ ಸಂಬಂಧ ಹಾಗೂ ಸಾದೃಶ್ಯವಿದೆ. ಈ ಕಾವೇರಿ ತೀರ್ಥವನ್ನು ಮಹರ್ಷಿ ಪರಶುರಾಮನು ನಿರ್ಮಿಸಿದನೆಂದು ಐತಿಹ್ಯವಿರುವ ಈ ಕ್ಷೇತ್ರವು ಕುಂಬಳೆ ಸೀಮೆಯ 'ಕಾವೇರಿ'ಎಂದೇ ಪ್ರಸಿದ್ಧವಾಗಿದೆ. ತುಲಾ ಸಂಕ್ರಮಣ ದಿನದಂದು ಮತ್ತು ತುಲಾ ಮಾಸದ ಒಂದು ತಿಂಗಳ ಕಾಲ ಈ ತಟಾಕದಲ್ಲಿ ಕಾವೇರಿ ತೀರ್ಥೋದ್ಭವವಾಗಿ, ಭಕ್ತಾದಿಗಳು ಶ್ರದ್ಧಾ ಭಕ್ತಿಯಿಂದ ಈ ಪುಣ್ಯಜಲದಲ್ಲಿ ತೀರ್ಥಸ್ನಾನ ಮಾಡಿ ಶ್ರೀ ದೇವರ ದರ್ಶನಗೈದು ಪುನೀತರಾಗುತ್ತಾರೆ. ಇಲ್ಲಿಯ ಕಾವೇರಿ ಕುಂಕುಮ ಪ್ರಿಯಳಾಗಿದ್ದು, ಕುಂಕುಮಾರ್ಚನೆಯು ಇಲ್ಲಿನ ಪ್ರಮುಖ ಸೇವೆಯಾಗಿದೆ. ಶ್ರೀ ಕ್ಷೇತ್ರವಾಸಿಯಾದ ಜಗದೀಶನಿಗೆ ಕಾವೇರಿ ತೀರ್ಥದ ಅಭಿಷೇಕ ಮತ್ತು ಪೂಜೆಗೈದು ಆ ಪುಣ್ಯತೀರ್ಥದಿಂದಲೇ ನೈವೇದ್ಯವನ್ನೂ ಮಾಡಿ ದೇವರಿಗೆ ಸಮರ್ಪಿಸಲಾಗುತ್ತದೆ. ಈ ಮಹಾತಾಯಿಯು ಎಷ್ಟು ಪ್ರಸಿದ್ಧಳೆಂದರೆ, ಕಾಲಾಂತರಗಳಿಂದ ಭಕ್ತಾದಿಗಳು ಆಗಮಿಸಿ ಶ್ರೀ ದೇವಿಯ ತೀರ್ಥಸ್ನಾನ ಮಾಡಿ ಅವಳ ದರ್ಶನ ಪಡೆದು ತಮ್ಮ ಮನೋಭಿಲಾಷೆಯನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಎಂದಿಗೂ ಆರದ ಜಲಕುಂಭವಿರುವ ಈ ಕೊಳವು ಎಲ್ಲಾ ಭಕ್ತರ, ಪ್ರಾಣಿ ಪಕ್ಷಿಗಳ ಆಶ್ರಯ ತಾಣವಾಗಿ ಇಲ್ಲಿ ನೆಲೆಗೊಂಡಿರುತ್ತದೆ.

ಶ್ರೀ ಕ್ಷೇತ್ರದಲ್ಲಿ ನಿತ್ಯ ಪೂಜೆಯು, ಮಹಾ ಶಿವರಾತ್ರಿ, ಗಣೇಶ ಚತುರ್ಥಿ, ಶ್ರೀಕೃಷ್ಣ ಜನ್ಮಾಷ್ಟಮಿ, ಸೌರಮಾನ ಯುಗಾದಿ (ವಿಷು) ಮೊದಲಾದ ವಿಶೇಷ ದಿನಗಳಲ್ಲಿ ವಿಶೇಷ ಪೂಜೆಯೊಂದಿಗೆ ಅನ್ನ ಸಂತರ್ಪಣೆಯು ನಡೆಯುತ್ತವೆ.

ಮಾನವನ ಬದುಕಿನಲ್ಲಿ ಉಂಟಾಗುವ ಭೌತಿಕವೂ, ಮಾನಸಿಕವೂ ಆದ ತುಮುಲಗಳನ್ನು ಹೋಗಲಾಡಿಸಿ ಆಂತರಿಕ ವಿಕಾಸ ಹೊಂದುವುದಕ್ಕಾಗಿ ಮತ್ತು ಎಲ್ಲರ ಶ್ರೇಯಸ್ಸಿಗಾಗಿ ಇಂತಹ ಕ್ಷೇತ್ರಗಳ ಅವಶ್ಯಕತೆ ಇದೆ ಎಂಬುದು ಸರ್ವವೇದ್ಯ. ಅದೇ ಪ್ರಕಾರ ಕಾಲದ ಪ್ರವಾಹದಿಂದ ಜೀರ್ಣಾವಸ್ಥೆಯಲ್ಲಿದ್ದ ಈ ಪವಿತ್ರ ಕ್ಷೇತ್ರವನ್ನು ನವೀಕರಣಗೊಳಿಸಲು ಮತ್ತು ಗತ ಇತಿಹಾಸಕ್ಕೆ ಗೌರವ ನೀಡಲು ಹಾಗೂ ಈ ಆಲಯವನ್ನು ಶ್ರೇಷ್ಠ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಪರಿವರ್ತಿಸಲು ಊರ-ಪರವೂರ ಭಗವದ್ಭಕ್ತರ, ಕೊಡುಗೈದಾನಿಗಳ ಕೂಡುವಿಕೆಯಿಂದ ಜೀರ್ಣೋದ್ಧಾರ ಸಮಿತಿಯೊಂದನ್ನು ರೂಪೀಕರಿಸಿ ಪ್ರಶ್ನಚಿಂತನೆಯಲ್ಲಿ ಕಂಡು ಬಂದ ಪ್ರಕಾರ ದೇವಸ್ಥಾನದ ಗರ್ಭಗುಡಿ, ನಂದಿ ಮಂಟಪಗಳ ಜೀರ್ಣೋದ್ಧಾರ, ಸುತ್ತು ಆವರಣಗೋಡೆ ನಿರ್ಮಾಣ, ಪಾಕಶಾಲೆ, ಭೋಜನ ಶಾಲೆಯ ನಿರ್ಮಾಣ, ಶ್ರೀ ಕಾವೇರಿಯಮ್ಮನ ಪುಷ್ಕರಿಣಿಯ ಅಭಿವೃದ್ಧಿ, ಜೊತೆಗೆ ಕಾವೇರಿಯಮ್ಮನ ಗುಡಿಗೋಪುರ, ಸಭಾಭವನ, ಅಶ್ವತ್ಥ ಕಟ್ಟೆ ಬಿಲ್ವಪತ್ರೆ ಕಟ್ಟೆ, ಗೋಶಾಲೆ ಮೊದಲಾದ ಕಾಮಗಾರಿ ನಡೆಸಲಾಯಿತು. ಈಗಾಗಲೇ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಫೆ.27ರ ಶುಭ ಕಾಲದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಜರಗಲಿದೆ. ಈ ಮಹತ್ತಾದ ಶುಭ ಕಾರ್ಯಗಳಿಗೆ ಭಗವದ್ಭಕ್ತರಾದ ತಾವೆಲ್ಲರೂ ಆಗಮಿಸಿ, ಶ್ರೀ ಜಗದೀಶ್ವರನ ಮತ್ತು ಜಗನ್ಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.



ಚಿತ್ರ: Fox 24 Live, Badiyadka

ಓಂ

ಭಗವದ್ಭಕ್ತ ಬಂಧುಗಳೇ,

ಶ್ರೀ ಶಾಲಿವಾಹನ ಶಕ ೧೯೪೭ ಸ್ವಸ್ತಿ । ಶ್ರೀ ವಿಶ್ವಾವಸು ನಾಮ ಸಂವತ್ಸರದ ಕುಂಭ ಮಾಸ ೧೦ ರಿಂದ ೧೫ ರವರೆಗೆ

ಸಲುವ ತಾರೀಕು 22-02-2026 ಭಾನುವಾರದಿಂದ 27-02-2026 ಶುಕ್ರವಾರದವರೆಗೆ

ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀಮದ್ ಎಡನೀರು ಮಠಾಧೀಶರಾದ

ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಶುಭಾಶೀರ್ವಾದದೊಂದಿಗೆ,

ಶ್ರೀ ಕ್ಷೇತ್ರದ ತಂತ್ರಿವರ್ಯರಾದ

ಬ್ರಹ್ಮಶ್ರೀ ವೇದಮೂರ್ತಿ ಶ್ರೀ ವಾಸುದೇವ ತಂತ್ರಿ ಕುಂಟಾರು ಮತ್ತು ಬ್ರಹ್ಮಶ್ರೀ ವೇದಮೂರ್ತಿ ಶ್ರೀ ರವೀಶ ತಂತ್ರಿ ಕುಂಟಾರು

ಇವರ ಆಚಾರ್ಯತ್ವದಲ್ಲಿ

ಶ್ರೀ ಕ್ಷೇತ್ರದ ಸಾನ್ನಿಧ್ಯ ವೃದ್ಧಿ ಮತ್ತು ಲೋಕಕಲ್ಯಾಣಾರ್ಥವಾಗಿ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ

ಜಗದೀಶ್ವರನಾದ ಶ್ರೀ ಮಹಾಲಿಂಗೇಶ್ವರನಿಗೆ ಮತ್ತು ಜಗನ್ಮಾತೆ ಶ್ರೀ ಕಾವೇರಿಯಮ್ಮನಿಗೆ

ಅಷ್ಟಬಂಧ ಬ್ರಹ್ಮಕಲಶಾಭಿಷೇಕವು

ಊರ ಹಾಗೂ ಪರವೂರ ಸಮಸ್ತ ಭಕ್ತಮಹಾಜನರ ಸಹಾಯ, ಸಹಕಾರ ಹಾಗೂ ಸಹಭಾಗಿತ್ವದಲ್ಲಿ ವಿಜೃಂಭಣೆಯಿಂದ ನಡೆಯಲಿರುವುದು. ಆ ಪ್ರಯುಕ್ತ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಭಾಗಿಗಳಾಗಿ ತನು-ಮನ-ಧನಗಳಿಂದ ಸಹಕರಿಸಿ ಜಗದೀಶ್ವರನಾದ ಶ್ರೀಮಹಾಲಿಂಗೇಶ್ವರ ಮತ್ತು ಜಗನ್ಮಾತೆ ಶ್ರೀ ಕಾವೇರಿಯಮ್ಮ ಹಾಗೂ ಪರಿವಾರ ದೇವರುಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಈ ಮೂಲಕ ಅಪೇಕ್ಷಿಸುವ,

ಬ್ರಹ್ಮಕಲಶೋತ್ಸವ ಸಮಿತಿ, ಸೇವಾ ಸಮಿತಿ, ಮಹಿಳಾ ಸಮಿತಿ, ಶ್ರೀಕ್ಷೇತ್ರ ಮಿಂಚಿಪದವು ಹಾಗೂ ಊರ ಹತ್ತು ಸಮಸ್ತರು.

ಕಾರ್ಯಕ್ರಮಗಳು

26-02-26ನೇ ಗುರುವಾರ

ವೈದಿಕ ಕಾರ್ಯಕ್ರಮ– ಬೆಳಗ್ಗೆ 6ರಿಂದ : ಗಣಪತಿ ಹೋಮ, ಸಂಹಾರ ತತ್ವ ಹೋಮ, ತತ್ವಕಲಶಪೂಜೆ, ಕುಂಭೇಶ ಕರ್ಕರಿ ಪೂಜೆ, ಶಯ್ಯಾ ಪೂಜೆ, ಅಧಿವಾಸ ಹೋಮದ ಅಗ್ನಿ ಜನನ. ತತ್ವಕಲಶಾಭಿಷೇಕ, ಜೀವಕಲಶ ಪೂಜೆ,ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ.

9.30ಕ್ಕೆ : ಪರಮಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪೇಜಾವರ ಅಧೋಕ್ಷಣ ಮಠ, ಉಡುಪಿ ಅವರ ಆಗಮನ ಪೂರ್ಣಕುಂಭ ಸ್ವಾಗತ. ಪರಮಪೂಜ್ಯ ಶ್ರೀ ಕೃಷ್ಣ ಗುರೂಜಿ ಶ್ರೀ ಆಂಜನೇಯ – ಕಾಳಿಕಾಂಬ ದೇವಸ್ಥಾನ ಕುಕ್ಕಾಜೆ, ಮಾಣಿ ಇವರ ಆಗಮನ ಪೂರ್ಣಕುಂಭ ಸ್ವಾಗತ

ಶ್ರೀ ಕೃಷ್ಣ ಭಜನಾಮಂಟಪದಲ್ಲಿ ಭಜನಾಮೃತ ಬೆಳಗ್ಗೆ 7ರಿಂದ 4ಗಂಟೆಯಿಂದ: ಕುಣಿತ ಭಜನೆ. ಶಿವಕಾವೇರಿ ಕಲಾವೇದಿಕೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ಬೆಳಗ್ಗೆ10 ಗಂಟೆಯಿಂದ

ವೈದಿಕ ಕಾರ್ಯಕ್ರಮ– ಮಧ್ಯಾಹ್ನ 12.00 ರಿಂದ : ಅಂಕುರಪೂಜೆ, ಮಹಾಪೂಜೆ, ಪ್ರಸಾದ ವಿತರಣೆ. ಮಹಾ ಅನ್ನಸಂತರ್ಪಣೆ : ಪ್ರಾಯೋಜಕರು: ಶ್ರೀಮತಿ ಮತ್ತು ಶ್ರೀ ನಿತ್ಯಾನಂದ ಮಣಿಯಾಣಿ ಬಿಜಿ. ನೆಟ್ಟಣಿಗೆ

ಶಿವಕಾವೇರಿ ಕಲಾವೇದಿಕೆಯಲ್ಲಿ – ಸಾಂಸ್ಕೃತಿಕ ಕಾರ್ಯಕ್ರಮ ಅಪರಾಹ್ನ 3.00 ರಿಂದ: ಭಗವದ್ಗೀತೆ ಪಾರಾಯಣ – ಮಹಿಳಾ ಮಂಡಳಿ ಕಾಟುಕುಕ್ಕೆ ಇವರಿಂದ 4 ಗಂಟೆಗೆ: ಭಕ್ತಿ ರಸ ಮಂಜರಿ ಆ್ಯಂಡ್ ಮ್ಯೂಸಿಕ್ ಬೆಳ್ಳಾರೆ ಇವರಿಂದ ಪ್ರಾಯೋಜಕರು : ಶ್ರೀಮತಿ ಸುಮತಿ ಕಾನದಮನೆ, ಮಿಂಚಿಪದವು : ದಾಸ ಸಂಕೀರ್ತನೆ – ರಾಮಕೃಷ್ಣ ಕಾಟುಕುಕ್ಕೆ ಇವರಿಂದ. ರಾತ್ರಿ 7.30 ರಿಂದ: ಭಕ್ತಿಗಾನ ಮೇಳ ವಿದ್ಯಾಶ್ರೀ ಶಿಕ್ಷಣ ಕೇಂದ್ರ ಮುಳ್ಳೇರಿಯ – ಇಲ್ಲಿನ ವಿದ್ಯಾರ್ಥಿಗಳಿಂದ 8.30ರಿಂದ ಮೆಗಾ ತಿರುವಾದಿರ – ಊರಿನ ಮಹಿಳೆಯರು ಮತ್ತು ಮಕ್ಕಳಿಂದ. 9 ಗಂಟೆಗೆ: ಕೈಕೊಟ್ಟಿಕಳಿ– ಕಿರಿಯ ಮಕ್ಕಳಿಂದ ಕೈಕೊಟ್ಟಿಕಳಿ– ಮಕ್ಕಳಿಂದ ಚಿಣ್ಣರ ಚಿಲ್ಲಾಟ– ಅಂಗನವಾಡಿ ಮಕ್ಕಳು ಮೈರೋಜ್ ಚಿಣ್ಣರ ಕುಣಿತ ಅಂಗನವಾಡಿ ಮಕ್ಕಳು, ಮಿಂಚಿಪದವು ನೃತ್ಯ ರೂಪಕ ಕು.ಶೋಭಿತ,ಮಿಂಚಿಪದವು. ಭರತನಾಟ್ಯ ಕು.ವೈಗಾ ಗಿರೀಶ್ ಮಿಂಚಿಪದವು, ಮಿತ್ತೂರು. ಭರತನಾಟ್ಯ ಕು.ಅವಂತಿಕಾ ಚಂದ್ರನ್ ತಚ್ಚಂಗಾಡ್

ಸಂಘ ನೃತ್ಯ – ಕು.ದೇವನಂದ ಮತ್ತು ಕು.ದೇವನ್ಯ ಮಿಂಚಿಪದವು, ನೃತ್ಯ – ಮಾ. ಅನ್ವಿನ್ ಮಿಂಚಿಪದವು, ಕು.ಪ್ರತೀಕ್ಷ ಮಿಂಚಿಪದವು. ಕು.ಶ್ರೀಯಾ, ಕೂಚುಪುಡಿ– ದಿಲ್ವಾ ದಿಲೀಪ್, ಕುಂಟಾರು

ವೈದಿಕ ಕಾರ್ಯಕ್ರಮ– ರಾತ್ರಿ 7.00 ರಿಂದ

ಧ್ಯಾನಾವಾಸ, ಅಧಿವಾಸ ಹೋಮ, ಶಿರಸ್ತತ್ವ ಹೋಮ, ಪ್ರತಿಷ್ಠಾ ಹೋಮ, ಪುಣ್ಯಾಹವಾಚನ, ಪ್ರಾಸಾದ ಶುದ್ಧಿ ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ವಾಸ್ತು ಪುಣ್ಯಾಹಂತ, ಬ್ರಹ್ಮಕಲಶ ಪೂಜೆ

27-02-26ನೇ ಶುಕ್ರವಾರ

ವೈದಿಕ ಕಾರ್ಯಕ್ರಮ – ಬೆಳಗ್ಗೆ ಗಂಟೆ 6ರಿಂದ : 108 ತೆಂಗಿನಕಾಯಿ ಗಣಪತಿ ಹೋಮ. ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ

ಮಹಾ ಅನ್ನಸಂತರ್ಪಣೆ : ಪ್ರಾಯೋಜಕರು: ಎ.ಜಿ.ಗಣೇಶ್ ಶೆಟ್ಟಿ ಮಲ್ಲಾವರ, ಆದೂರು ಉದ್ಯಮಿ, ಮುಂಬಯಿ

ಸಂಜೆ 4 ಗಂಟೆಗೆ : ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀಮದ್ ಎಡನೀರುಮಠ ಇವರ ಆಗಮನ ಪೂರ್ಣಕುಂಭ ಸ್ವಾಗತ. ಪೂರ್ವಾಹ್ನ ಗಂಟೆ 11.55ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ ಹಾಗೂ ಶ್ರೀ ಕಾವೇರಿಯಮ್ಮನ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾ ಬಲಿ, ಮಹಾಪೂಜೆ, ನಿತ್ಯ ನೈಮಿತ್ಯಾದಿಗಳ ನಿರ್ಣಯ ಮಹಾಮಂತ್ರಾಕ್ಷತೆ, ಪ್ರಸಾದ ವಿತರಣೆ

ಶಿವಕಾವೇರಿ ಕಲಾವೇದಿಕೆಯಲ್ಲಿ– ಧಾರ್ಮಿಕ ಸಭಾ ಕಾರ್ಯಕ್ರಮ ಸಂಜೆ 4ರಿಂದ, 7.00: ರಂಗಪೂಜೆ ಅನ್ನಸಂತರ್ಪಣೆ. ಶಿವಕಾವೇರಿ ಕಲಾವೇದಿಕೆಯಲ್ಲಿ– ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ 6 ಗಂಟೆಗೆ : ಶ್ರೀ ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಕಲಾ ಮಂಡಳಿ ಹನುಮಗಿರಿ ಇವರಿಂದ ಯಕ್ಷಗಾನ ಬಯಲಾಟ ಪ್ರಸಂಗ: ವರ್ಣಪಲ್ಲಟ.

ಶ್ರೀ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕಕ್ಕೆ ಶುಭಕೋರುವ



ಬ್ರಹ್ಮಶ್ರೀ ವೇದಮೂರ್ತಿ ಶ್ರೀ ರವೀಶ್ ತಂತ್ರಿ ಕುಂಟಾರು
ತಂತ್ರಿವರ್ಯರು, ಕ್ಷೇತ್ರ ಮಿಂಚಿ ಪದವು



ಶ್ರೀ ಮಧುಸೂದನ್ ಅಯರ್
ಉದ್ಯಮಿ, ಮಂಗಳೂರು,
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ ಮಿಂಚಿಪದವು



ಶ್ರೀ ದಾಮೋದರ ಎಮ್.
ವಕೀಲರು, ಮಂಗಳೂರು,
ಕಾರ್ಯಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ ಮಿಂಚಿಪದವು
ಶ್ರೀಮತಿ ಗೀತಾ
ಗೌರವಾಧ್ಯಕ್ಷೆ ಮಹಿಳಾ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ ಮಿಂಚಿಪದವು



M. VAMANA
Rtd. Sr. Development Officer
LIC of India, Bangalore.



ಶ್ರೀ ಸದಾನಂದ ಅಡ್ಕಂ
ಅಧ್ಯಕ್ಷರು ಸೇವಾ ಸಮಿತಿ ಮಿಂಚಿಪದವು
ಶ್ರೀನಿಧಿ ಟ್ರೇಡರ್ಸ್ ಮುಳ್ಳೇರಿಯ
ಅಡೂರು ಗಣೇಶ್ ಭಟ್



ಶ್ರೀ ಜಯಕರ ಎಮ್.
ಕಾರ್ಯದರ್ಶಿ
ಬ್ರಹ್ಮಕಲಶೋತ್ಸವ ಸಮಿತಿ ಮಿಂಚಿಪದವು



BALAKRISHNA POOJARY
Kadamagadde
Vice President, Brahmakalasa Samithi, Minchipadavu
Contact No 9846639683



ಶ್ರೀಮತಿ ಸುಮತಿ ಎಂ. ಕಾನದಮನೆ
ಬ್ರಹ್ಮಕಲಶೋತ್ಸವ ಸಮಿತಿ
ಮಹಿಳಾ ಸಮಿತಿ ಸದಸ್ಯರು ಮಿಂಚಿಪದವು
ಅಧ್ಯಕ್ಷರು, ಭಜನಾ ಸಮಿತಿ, ಮಿಂಚಿಪದವು



ಶ್ರೀ ಗೋಕುಲ್ ಎಮ್ ಅಡ್ಕಂ
ಬ್ರಹ್ಮಕಲಶೋತ್ಸವ ಸಮಿತಿ
ಆಹಾರ ಸಮಿತಿಯ ಅಧ್ಯಕ್ಷರು
ಮಿಂಚಿಪದವು



ಶ್ರೀ ಭಾಸ್ಕರ್ ಕೆಳಗಿನ ಮರಕ್ಕಡ
ಬ್ರಹ್ಮಕಲಶೋತ್ಸವ ಸಮಿತಿ
ಚಪ್ಪರ ಸಮಿತಿ ಸಹಸಂಚಾಲಕರು
ಮಿಂಚಿಪದವು



ಎನ್. ರಾಮಚಂದ್ರ ಮಣಿಯಾಣಿ
ಉಪಾಧ್ಯಕ್ಷರು
ಸೇವಾ ಸಮಿತಿ ಮಿಂಚಿಪದವು



SMT. SOWMYA
SRI JAYACHANDRA
BALADKA PAIKA



HARISH
MINCHIPADAVU

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು
ಶಿವಕಾವೇರಿ ಆರ್ಟ್ಸ್ & ಸ್ಪೋರ್ಟ್ಸ್ ಕ್ಲಬ್
ಮಿಂಚಿಪದವು

Fox 24 Live News Channel
ವೀಡಿಯೋಗ್ರಾಫಿಗಳಿಗೆ ಸಂಪರ್ಕಿಸಿ
Contact No.: 9809871377



ಪ್ರಚಾರ ಮಾಧ್ಯಮ ಮತ್ತು ಕಾರ್ಯಕ್ರಮ ಸಂಯೋಜನೆ ಸಮಿತಿ

● ಮನೋಜ್ ಕುಮಾರ್ M.C (ಅಧ್ಯಕ್ಷರು) ● ವೇಣು ಲಿಯೋ (ಸಂಚಾಲಕ್) ● ಯತೀಶ್ ಕುಮಾರ್ ರೈ (ಅಧ್ಯಕ್ಷರು) ● ರಾಧಾಕೃಷ್ಣ ಮಾಸ್ಟರ್ (ಸಂಚಾಲಕ)
● ಸದಾನಂದ ಹೊಸಮನೆ ● ರವೀಂದ್ರ ರೈ ಮಲ್ಲಾವರ ● ಯೋಗೇಶ್ ● ಪ್ರಜ್ವಲ್ ಯಾದವ್ ● ಸುಂದರರಾಜ್ ರೈ